₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಮಂಗಳವಾರ 06.08.2024 ಸಂಪುಟ: 67 ಸಂಚಿಕೆ: 90 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಸೇನೆ ತೆಕ್ಕೆಗೆ ಬಾಂಗ್ಲಾ

ಸಮಾಚಾರ ಸಣ್ಣದಲ್ಲ

ಭಾವಗೀತೆಗಳ ಗಾಯನ ಕಾರ್ಯಕ್ರಮ 8 ರಂದು

ಬೆಳಗಾವಿ: ನಗರದ ಹಾಸ್ಯಕೂಟ ಮತ್ತು ಕನ್ನಡ ಸಾಹಿತ್ಯ ಭವನ ವಿಶ್ವಸ್ತ ಮಂಡಳಿ ಸಂಯುಕ್ತಾಶ್ರಯದಲ್ಲಿ ಆ. 8 ಗುರುವಾರ ಸಾಯಂಕಾಲ 4-30 ಕ್ಕೆ ಚೆನ್ನಮ್ಮ ವೃತ್ತದ ಬಳಿಯಿರುವ ಕನ್ನಡ ಸಾಹಿತ್ಯ ಭವನದಲ್ಲಿ ರಂಗಕರ್ಮಿ ಡಾ.ಅರವಿಂದ ಕುಲಕರ್ಣಿ 70 ನೇ ಜನ್ಮದಿನ ಸಂಭ್ರಮದಲ್ಲಿ ಬೇಂದ್ರೆ ದರ್ಶನ ಮತ್ತು ಬೇಂದ್ರೆ ಭಾವಗೀತೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಅಧ್ಯಕ್ಷತೆಯನ್ನು ಹಿರಿಯ ಪತ್ರ ಕರ್ತ ಎಲ್. ಎಸ್. ಶಾಸ್ತ್ರಿಯವರು ವಹಿಸಲಿದ್ದು ಅತಿಥಿಗಳಾಗಿ ಹಿರಿಯ ಕವಿ ಪ್ರೊ. ಎಮ್. ಎಸ್. ಇಂಚಲ ಅವರು ಆಗಮಿಸಲಿದ್ದಾರೆ. ಕಿರುತೆರೆ ನಟ ಧಾರವಾಡದ ಅನಂತ ದೇಶಪಾಂಡೆ ಅವರು ಕವಿ ಬೇಂದ್ರೆ ಪಾತ್ರದಲ್ಲಿ ಬೇಂದ್ರೆಯವರ ರಸ ಪ್ರಸಂ ಗಗಳೊಂದಿಗೆ ಕವಿಯ ಜೀವನವನ್ನು ಪರಿಚಯಿ ಸಲಿದ್ದಾರೆ. ಕು. ಸ್ನೇಹಾ ಕುಲಕರ್ಣಿ ಮತ್ತು ಕು. ಪೂರ್ವಿ ರಾಜಪುರೋಹಿತ ಬೇಂದ್ರೆಯವರ ಭಾವಗೀ ತೆಗಳನ್ನು ಹಾಡಲಿದ್ದು ನಿರಂಜನಮೂರ್ತಿ ಹಾಗೂ ನಾರಾಯಣ ಗಣಾಚಾರಿ ಸಾಥ್ ನೀಡಲಿದ್ದಾರೆ. ಗುಂಡೇನಟ್ಟಿ ಮಧುಕರ, ರಾಮಚಂದ್ರ ಕಟ್ಟಿ ಉಪಸ್ಥಿತರಿರುತ್ತಾರೆ.

ರೋಟರಿ ಸಂಸ್ಥೆಯಿಂದ ವನ ಮಹೋತ್ಸವ

ಅಥಣಿ: ಪರಿಸರ ಸಂರಕ್ಷ ಣೆಯ ದೃಷ್ಟಿಯಿಂದ ನೆಡಲಾಗುವ ಸಸಿಗಳನ್ನು ಮಕ್ಕಳನ್ನು ಸಾಕಿ ಸಲುಹಿ ದೊಡ್ಡವರನ್ನಾಗಿ ಮಾಡುವಂತೆ ಕಾಳಜಿಯಿಂದ ನೋಡಿಕೊಳ್ಳಬೇಕು ಎಂದು ಚಿಕ್ಕಮಕ್ಕಳ ತಜ್ಞ ಡಾ. ಪಿ ಪಿ ಮಿರಜ ಹೇಳಿದರು. ಪಟ್ಟಣದ ಲಕ್ಷ್ಮೀನಾರಾಯಣ ನಗರದಲ್ಲಿರುವ ಉದ್ಯಾನವನದಲ್ಲಿ ಅಥಣಿ ರೋಟರಿ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವನಮಹೋತ್ಸವದಲ್ಲಿ ಸಸಿಗೆ ನೀರೇರುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ವನಮಹೋತ್ಸವದಂದು ಸಸಿಗಳನ್ನು ನೆಟ್ಟರೆ ಸಾಲದು, ಅವು ಬೆಳೆದು ದೊಡ್ಡದಾಗುವವರೆಗೂ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ದೇಶದಲ್ಲಿ ರೈತರು ಕ್ರಿಮಿನಾಶಕಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿರುವುದರಿಂದ ಮಣ್ಣಿನ ಫಲವತ್ತತೆ ಹಾಳಾಗುತ್ತಿದೆ. ಅದರ ಬದಲು ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದರು.

ರಾಮದುರ್ಗ ಇಲ್ಲಿನ ನಿಂಗಾಪೂರ ಪೇಟೆಯ ಪುರಾತನ ಈಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ಮೊದಲ ಸೋಮವಾರದ ದಿವಸ ಈಶ್ವರ ದೇವರಿಗೆ ಬುತ್ತಿ ಪೂಜೆ ಅಲಂಕಾರ ಸೇವೆ ಅರ್ಚಕ ಉಮೇಶಸ್ವಾಮಿ ದೇವಾಂಗಮಠ ಅವರ ನೇತೃತ್ವದಲ್ಲಿ ಜರುಗಿತು.

ಅಧ್ಯಾತ್ಮಿಕ ಪ್ರವಚನ ಕಾರ್ಯಕ್ರಮಕ್ಕೆ ಚಾಲನೆ

ರಾಮದುರ್ಗ: ಶ್ರಾವಣ ಮಾಸದ ಪ್ರಯುಕ್ತ ಪಟ್ಟಣದ ನಾರಾಯಣ ಪೇಟೆಯ ಇಂಚಗೇರಿ ಶ್ರೀ ಮಠದಲ್ಲಿ ಒಂದು ತಿಂಗಳ ವರೆಗೆ ನಡೆಯಲಿರುವ ಅಧ್ಯಾತ್ಮಿಕ ಪ್ರವಚನ ಕಾರ್ಯಕ್ರಮಕ್ಕೆ ಶ್ರೀಅಮರೇಶ್ವರ ಮಹಾರಾಜರು ಸೋಮವಾರ ಚಾಲನೆ ನೀಡಿದರು. ಪ್ರತಿದಿನ ಸಾಯಂಕಾಲ 6:30 ರಿಂದ 7:30 ರ ವರೆಗೆ ನಡೆಯಲಿರುವ ಪ್ರವಚನ ಕಾರ್ಯಕ್ರಮದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ತೇಜಪ್ಪ ಬರಡೂರ, ಸುರೇಶ ಬರಡೂರ, ಪ್ರಕಾಶ ಸೂಳಿಭಾವಿ, ನಾರಾಯಣ ಗಂಗೂರಿ, ತುಕಾರಾಮ ಬರಡೂರ ಮುಂತಾದವರು ಉಪಸ್ಥಿತರಿದ್ದರು.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ಬಾಲಚಂದ್ರ ಜಾರಕಿಹೊಳಿ} ಶಾಸಕ

ಯಾರು ಏಷ್ಟೇ ವದಂತಿಗಳನ್ನು ಹಬ್ಬಿಸುತ್ತಿದ್ದರೂ ಸಮಾಜಕ್ಕೆ ಸಿಗಬೇಕಿರುವ ಮೀಸಲಾತಿ ಹೋರಾಟದಲ್ಲಿ ಪ್ರಾಮಾಣಿಕವಾಗಿ ನಮ್ಮ ಕುಟುಂಬವು ಸ್ಪಂದಿಸಲಿದ್ದು, ರಾಜ್ಯ ಸರಕಾರದ ಮೂಲಕ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿ ಭಗೀರಥ ಉಪ್ಪಾರ ಸಮಾಜಕ್ಕೆ ಮೀಸಲಾತಿ ಕಲ್ಪಿಸಲು ಅತ್ಯಂತ ಉತ್ಸಾಹ ಹಾಗೂ ಪ್ರಾಮಾಣಿ ಕತೆಯಿಂದ ಕರ್ತವ್ಯ ನಿರ್ವಹಿಸುತ್ತೇನೆಂದು ಸಮಾಜ ಬಾಂಧವರಿಗೆ ವಾಗ್ದಾನ ನೀಡಿದರು.

ನೂತನ ಭಗೀರಥ ಮೂರ್ತಿ ಅನಾವರಣ | ಉಪ್ಪಾರ ಸಮಾಜಕ್ಕೆ ಶಾಸಕ ಜಾರಕಿಹೊಳಿ ಆಸರೆ

ಮೀಸಲು ಸಿಗುವವರೆಗೂ ನಿರಂತರ ಹೋರಾಟ

ಮೂಡಲಗಿ: ಕಳೆದ ಹಲವಾರು ವರ್ಷಗಳಿಂದ ಭಗೀರಥ ಉಪ್ಪಾರ ಸಮಾಜವು ಮೀಸಲಾತಿಗಾಗಿ ಹೋರಾಟ ಮಾಡುತ್ತಿದ್ದು, ಈ ಸಮಾಜಕ್ಕೆ ಸಿಗಬೇಕಿರುವ ಸರಕಾರದ ಮೀಸಲಾತಿಯನ್ನು ದೊರಕಿಸಿಕೊಡುವ ಸಂಬಂಧ ರಾಜ್ಯ ಸರಕಾರವು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದರೇ ನಾವು ಕೂಡಾ ಕೇಂದ್ರ ಮಟ್ಟದಲ್ಲಿ ಒತ್ತಡ ಹಾಕುವ ಪ್ರಾಮಾಣ ಕವಾದ ಪ್ರಯತ್ನ ಮಾಡುವುದಾಗಿ ಶಾಸಕ ಹಾಗೂ ಬೆಮ್ಯುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಸೋಮವಾರ ಪಟ್ಟಣದ ಹೊರವಲಯದಲ್ಲಿರುವ ಮೂಡಲಗಿ ಕ್ರಾಸ್‌ನಲ್ಲಿ ನೂತನವಾಗಿ ನಿರ್ಮಿಸಿದ ಮಹರ್ಷಿ ಭಗೀರಥ ಮೂರ್ತಿಯನ್ನು ಅನಾವರಣ ಹಾಗೂ ಮಹರ್ಷಿ ಉಪ್ಪಾರ ಸಮಾಜದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಗೀರಥ ಉಪ್ಪಾರ ಸಮಾಜದ ಬೇಡಿಕೆಗಳಿಗೆ ನಾವು ಸದಾ ಬದ್ಧರಿದ್ದು, ಈ ನಿಟ್ಟಿನಲ್ಲಿ ಕೆಲಸ ಮಾಡುವುದಾಗಿ ಅವರು ತಿಳಿಸಿದರು.

ಅನೇಕ ವರ್ಷಗಳಿಂದ ಈ ಸಮಾಜವು ಉದ್ಯೋಗ ಮತ್ತು ಶಿಕ್ಷಣಕ್ಕಾಗಿ ಮೀಸಲಾತಿಯ ಹೋರಾಟ

ಮಹರ್ಷಿ ಉಪ್ಪಾರ ಸಮಾಜದ ಕಾರ್ಯಕ್ರಮವನ್ನು ಶಾಸಕ ಹಾಗೂ ಬೆಮ್ಯುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಉದ್ಘಾಟಿಸಿ ಮಾತನಾಡಿದರು.

ಮಾಡುತ್ತಿದೆ. ಈ ಹೋರಾಟದಲ್ಲಿಯೂ ನಾವು ಸಕ್ರಿಯರಾಗಿ ತೊಡಗಿಕೊಂಡು ಭಗೀರಥ ಸಮಾಜಕ್ಕೆ ಎಲ್ಲ ರೀತಿಯ ಸಹಕಾರ ನೀಡಿದ್ದೇವೆ. ಮುಂದಿನ ದಿನಗಳಲ್ಲಿಯೂ ಸಹ ಈ ಸಮಾಜಕ್ಕೆ ಸಿಗಬೇಕಿರುವ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಸರಕಾರದ ಮೇಲೆ ಒತ್ತಡ ಹೇರುತ್ತೇವೆ.

ಹೊಸದುರ್ಗ ಭಗೀರಥ ಪೀಠದ ಜಗದ್ಗುರು ಪುರುಷೋತ್ತಮಾನಂದಪುರಿ ಮಹಾಸ್ವಾಮಿಜಿ ಮಾತನಾಡಿ. ಮೀಸಲಾತಿಗಾಗಿ ಕುಲಶಾಸ್ತ್ರದ ಅಧ್ಯಯನ ವರದಿ ಸರಕಾರಕ್ಕೆ ಸಲ್ಲಿಸಿದ್ದು, ಕೇಂದ್ರ ಸರಕಾರಕ್ಕೆ ವರದಿ ಶಿಫಾರಸ್ಸುಗೊಳ್ಳಬೇಕಿದೆ. ಈ ದಿಸೆಯಲ್ಲಿ ಜಾರಕಿಹೊಳಿ ಕುಟುಂಬವು ನಮ್ಮ ಸಮಾಜಕ್ಕೆ ಬೆನ್ನೆಲಬಾಗಿ ನಿಂತಿದೆ. ಅದರಲ್ಲೂ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ನಮಗೆ ದೊಡ್ಡ ಆಸರೆಯಾಗಿ ನಿಂತಿದ್ದಾರೆ. ನಮಗಷ್ಟೇ ಅಲ್ಲ. ಎಲ್ಲ ಸಮಾಜಗಳಿಗೂ ಬಾಲಚಂದ್ರ ಜಾರಕಿಹೊಳಿ ಅವರು ಶಕ್ತಿಯಾಗಿದ್ದಾರೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಚಾಮರಾಜನಗರ ಶಾಸಕ ಹಾಗೂ ಭಗೀರಥ ಉಪ್ಪಾರ ಸಮಾಜದ ನಾಯಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಸಿದ್ದರಾಮಯ್ಯನವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸರ್ಕಾರದಿಂದ ಭಗೀರಥ ಜಯಂತಿ ಆಚರಿಸುವ ಸುತ್ತೋಲೆ ಹೊರಡಿಸಿದ್ದರು. ಸರ್ಕಾರ ವಿವಿಧ ಸಮಾಜಗಳ ಅಭಿವೃದ್ಧಿಗಾಗಿ ನಿಗಮ ಮಂಡಳಿಗಳನ್ನು ರಚಿಸಿದ್ದು, ಈಗ ನೀಡುತ್ತಿರುವ ಅನುದಾನ ಯಾವುದಕ್ಕೂ ಸಾಲುತ್ತಿಲ್ಲ. ಪ್ರತಿ ಸಮಾಜಗಳ ನಿಗಮಗಳಿಗೆ 50 ಕೋಟಿ ರೂಗಳ ಅನುದಾನ ನೀಡಬೇಕು ಎಂದರು. ಶಿವಬೋಧರಂಗ ಮಠದ ದತ್ತಾತ್ರೇಯ ಬೋಧ ಮಹಾಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು. ಸುಣಧೋಳಿಯ ಶಿವಾನಂದ ಮಹಾಸ್ವಾಮಿಗಳು, ಭಾಗೋಜಿಕೊಪ್ಪದ ಡಾ. ಶಿವಲಿಂಗ ಮುರುಘ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು, ಕಟಕಭಾವಿಯ ಧರೇಶ್ವರ ಮಹಾಸ್ವಾಮಿಗಳು, ಉಪ್ಪಾರಹಟ್ಟಿಯ ನಾಗೇಶ್ವರ ಮಹಾಸ್ವಾಮಿಗಳು, ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಯುವ ಮುಖಂಡರಾದ ರಾಹುಲ ಜಾರಕಿಹೊಳಿ, ಸರ್ವೋತ್ತಮ ಜಾರಕಿಹೊಳಿ, ಮಾಜಿ ಸಚಿವ ಆರ್.ಎಮ್.ಪಾಟೀಲ, ಹಿರಿಯ ಸಹಕಾರಿ ಬಿ.ಆರ್.ಪಾಟೀಲ, ಸೇರಿದಂತೆ ಭಗೀರಥ ಉಪ್ಪಾರ ಸಮಾಜದ ಗೋಕಾಕ ಮತ್ತು ಮೂಡಲಗಿ ತಾಲೂಕುಗಳ ಹಲವಾರು ಮುಖಂಡರು, ವಿವಿಧ ಸಮಾಜದ ಮುಖಂಡರಗಳು ಉಪಸ್ಥಿತರಿದ್ದರು.

> ಯಾರು ಏಷ್ಟೇ ವದಂತಿಗಳನ್ನು ಹಬ್ಬಿಸುತ್ತಿದ್ದರೂ ಸಮಾಜಕ್ಕೆ ಸಿಗಬೇಕಿರುವ ಮೀಸಲಾತಿ ಹೋರಾಟದಲ್ಲಿ ಪ್ರಾಮಾಣಿಕವಾಗಿ ನಮ್ಮ ಕುಟುಂಬವು ಸ್ಪಂದಿಸಲಿದ್ದು, ರಾಜ್ಯ ಸರಕಾರದ ಮೂಲಕ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿ ಭಗೀರಥ ಉಪ್ಪಾರ ಸಮಾಜಕ್ಕೆ ಮೀಸಲಾತಿ ಕಲ್ಪಿಸಲು ಅತ್ಯಂತ ಉತ್ಸಾಹ ಹಾಗೂ ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುತ್ತೇನೆಂದು ಅವರು ಸಮಾಜ ಬಾಂಧವರಿಗೆ ವಾಗ್ದಾನ ನೀಡಿದರು.
> -ಬಾಲಚಂದ್ರ ಜಾರಕಿಹೊಳಿ, ಶಾಸಕ

ಶಿಕ್ಷಕರಿಗೆ ಸಮರ್ಪಣಾ ಭಾವವಿರಲಿ

ಅಥಣಿ: ಸುಭದ್ರ ದೇಶವನ್ನು ಕಟ್ಟುವಲ್ಲಿ ಶಿಕ್ಷಕ, ಸೈನಿಕ ಮತ್ತು ಕೃಷಿಕ ಎಂಬ ತ್ರಿಮೂರ್ತಿಗಳ ಪಾತ್ರ ಅಪಾರ. ಪ್ರತಿಯೊಬ್ಬರ ಬದುಕಿನಲ್ಲಿ ಗುರುವಿನ ಮಾರ್ಗದರ್ಶನ ಬಹಳ ಮುಖ್ಯ. ಗುರು ಎನಿಸಿಕೊಳ್ಳುವ ಶಿಕ್ಷಕ ಅಥವಾ ಶಿಕ್ಷಕಿ ಎಂಬ ಸ್ಥಾನ ಸಮಾಜದಲ್ಲಿ ಅತ್ಯಂತ ಗೌರವಯುತ ಹುದ್ದೆಯಾಗಿದೆ ಎಂದು ಬಳವಾಡ ಸರಕಾರಿ ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಅಪ್ಪುಗೌಡ ನೇಮಗೌಡ ಹೇಳಿದರು.

ತಾಲೂಕಿನ ಬಳವಾಡ ಸರಕಾರಿ ಪ್ರೌಢಶಾಲೆಯ ಕನ್ನಡ ಶಿಕ್ಷಕಿ ಶಕುಂತಲಾ ಅಣ್ಣಾಸಾಹೇಬ ಗಸ್ತಿ ಅವರ ಬೀಳ್ಕೊಡುಗೆಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಳೆದ 39 ವರ್ಷಗಳಿಂದ ಗ್ರಾಮೀಣ ಭಾಗದ ಮಕ್ಕಳಿಗೆ ಉತ್ತಮ ರೀತಿಯಲ್ಲಿ ಮಾರ್ಗದರ್ಶನ ಮತ್ತು ಕನ್ನಡ ವಿಷಯವನ್ನು ಬೋಧನೆ ಮಾಡಿದ ಹಿರಿಯ ಶಿಕ್ಷಕಿ ಶಕುಂತಲಾ ಗಸ್ತಿ ವಯೋನಿವೃತ್ತಿ ಹೊಂದುತ್ತಿದ್ದು, ಅವರ ನಿವೃತ್ತಿಯ ಜೀವನ ಸುಖಕರವಾಗಿರಲೆಂದು ಶುಭ ಹಾರೈಸುತ್ತೇವೆ. ಗ್ರಾಮೀಣ ಭಾಗದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಮತ್ತು ಸಂಸ್ಕಾರ ನೀಡುವ ಮೂಲಕ ಅವರ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಕಿ ಶಕುಂತಲಾ ಗಸ್ತಿ ಅವರು ಮಾಡಿರುವ ಸೇವೆ ಅನನ್ಯಎಂದು ಹೇಳಿದರು.

ಶಾಲೆಯ ಶಿಕ್ಷಕ ಡಿ.ಜಿ.ಯಾದಗಿರಿ ಮಾತನಾಡಿ, ಶಿಕ್ಷಕರು ತ್ಯಾಗ ಮತ್ತು ಸಮರ್ಪಣಾ ಮನೋಭಾವದಿಂದ ಮಕ್ಕಳಿಗೆ ತಮ್ಮ ಜ್ಞಾನವನ್ನು ನೀಡುತ್ತಾರೆ. ಶ್ರೇಷ್ಠ ವ್ಯಕ್ತಿಗಳನ್ನ ಮತ್ತು ಉತ್ತಮ ನಾಗರಿಕರನ್ನ ರೂಪಿಸುವಲ್ಲಿ ಒಬ್ಬ ಶಿಕ್ಷಕ ಅಥವಾ ಶಿಕ್ಷಕಿಯ ಪಾತ್ರ ಬಹಳ ಮುಖ್ಯವಾಗಿರುತ್ತದೆ. ನಮ್ಮ ಶಾಲೆಯಲ್ಲಿ ಕನ್ನಡ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ಇಂದು ನಿವೃತ್ತಿ ಹೊಂದುತ್ತಿರುವ ಶಕುಂತಲಾ ಗಸ್ತಿ ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಶುಭ ಹಾರೈಸಿದರು.

ಜೀವ ಅಂಗೈಲಿ ಹಿಡಿದು ಟ್ಯೂಬ್ ತೆಪ್ಪದ ಮೇಲೆ ಸಂಚಾರ

ಶೇಖರ ಕಲ್ಲೂರ ಚನ್ನಮ್ಮನ ಕಿತ್ತೂರು

ಕಿತ್ತೂರು ತಾಲೂಕಿನ ನಿಂಗಾಪುರ ಗ್ರಾಮದ ಜಮೀನಿನಲ್ಲಿ ವಾಸವಿರುವ ವಿದ್ಯಾರ್ಥಿಗಳು ಕೆರೆಯಲ್ಲಿ ಟ್ಯೂಬ್ ತೆಪ್ಪದ ಮೇಲೆ ಶಾಲೆಗೆ ಬರುವುದು.

ಎರಡು ಲಾರಿ ಟ್ಯೂಬ್‌ಗಳಿಗೆ ಗಾಳಿ ತುಂಬಿಸಲಾಗಿದೆ. ಅದನ್ನು ನೀರಿನ ಮೇಲಿಟ್ಟು ಹಲಗೆ ಹಾಕಲಾಗಿದೆ. ಇದರ ಒಂದು ಬದಿಗೆ ಚಿಕ್ಕ ಗಾತ್ರದ ಹಗ್ಗ ಕಟ್ಟಿ, ಎರಡೂ ದಂಡೆ ಆಚೆಗೆ ಸುಮಾರು ಒಂದೂವರೆ ಅಡಿಯ ಕಟ್ಟಿಗೆ (ಗೂಟ)ಯನ್ನು ನೆಡಲಾಗಿದೆ. ಕೆರೆಯ ಹಿನ್ನೀರಿನಲ್ಲಿ ಟ್ಯೂಬ್ ತೆಪ್ಪದ ಮೇಲೆ ಕುಳಿತು ಒಂದು ದಂಡೆಯಿಂದ ಮತ್ತೊಂದು ದಂಡೆಗೆ ಮಕ್ಕಳು, ಮಹಿಳೆಯರು ಸಾಗಬೇಕು..

ಯಾವುದೇ ವಾಟರ್ ಪಾರ್ಕ್‌ನಲ್ಲಿಯ ಮೋಜು, ಮಸ್ತಿ ಎಂದು ಭಾವಿಸಿದ್ದರೆ ಅದು ತಪ್ಪು. ಚನ್ನಮ್ಮನ ಕಿತ್ತೂರು ತಾಲೂಕಿನ ಕುಲವಳ್ಳಿ ಗ್ರಾಮ ಪಂಚಾಯತ್‌ಗೆ ಸೇರಿದ ನಿಂಗಾಪುರ ಗ್ರಾಮದ ಸಾರ್ವಜನಿಕರು ಮಳೆಗಾಲದಲ್ಲಿ ತಾವೇ ಮಾಡಿಕೊಂಡ ಅಪಾಯಕಾರಿಯಾದ ಸಂಚಾರ ವ್ಯವಸ್ಥೆಯಿದು. ಮಕ್ಕಳು ಶಾಲೆಗೆ, ಮಹಿಳೆಯರು ಮತ್ತು ರೈತರು ಜಮೀನುಗಳಿಗೆ, ಪರ ಸ್ಥಳಗಳಿಗೆ ಹೋಗಬೇಕೆಂದರೆ ಅಂಗೈಲಿ ಜೀವ ಹಿಡಿದುಕೊಂಡು ಇದೇ ಟ್ಯೂಬ್ ತೆಪ್ಪದಲ್ಲಿ ಪ್ರಯಾಣಿಸಬೇಕಾಗಿದೆ.

ಹೊಳೆ-ಹಳ್ಳದ ಸ್ವರೂಪ ಪಡೆದುಕೊಂಡು ನಿಂತಿರುವ ಧಾರವಾಡ ತಾಲೂಕಿನ ಹುಲಿಕೆರೆಯ ಹಿನ್ನೀರು, ಚನ್ನಮ್ಮನ ಕಿತ್ತೂರು ತಾಲೂಕಿನ ನಿಂಗಾಪುರ ಬಳಿ ಬಂದು ಸಂಗ್ರಹಗೊಳ್ಳುತ್ತದೆ. ಪಶ್ಚಿಮ ದಿಕ್ಕಿನೆಡೆಗೆ ನಿಂಗಾಪುರಕ್ಕೆ ಸೇರಿದ ಹಲವರ ಜಮೀನುಗಳಿವೆ. ಕೃಷಿ ಜಮೀನಿನಲ್ಲಿ ಮನೆಕಟ್ಟಿಕೊಂಡು ಸುಮಾರು 20 ಕುಟುಂಬಗಳು ಅಲ್ಲಲ್ಲಿ ವಾಸವಾಗಿವೆ. ರೈತರು ನಿಂಗಾಪುರದಿಂದ ಹೊಲಕ್ಕೆ ತೆರಳಬೇಕಾದರೆ. ದನಗಳು ಕೆರೆ ನೀರಿನಲ್ಲಿ ಈಜಿ ಆಚೆಗಿನ ದಡ ಸೇರಿದರೆ ರೈತರಿಗೆ, ಕುಟುಂಬದಲ್ಲಿರುವ ಮಹಿಳೆಯರಿಗೆ, ಪೂರ್ವದಿಕ್ಕಿನಲ್ಲಿರುವ ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ಟ್ಯೂಬ್ ತೆಪ್ಪವೇ ಗತಿಯಾಗಿದೆ ಎಂದು ಗ್ರಾಮಸ್ಥರು ತಿಳಿಸಿದರು.

ಪ್ರತಿ ಮಳೆಗಾಲದಲ್ಲಿ ಈ ಸಮಸ್ಯೆ ತಪ್ಪಿದ್ದಲ್ಲ. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಗಮನಕ್ಕೆ ಸಮಸ್ಯೆ ತಂದರೂ ಯಾರೂ ಇತ್ತ ಕಡೆಗೆ ಗಮನ ಹರಿಸಿಲ್ಲ ಎಂದು ಗ್ರಾಮಸ್ಥರು ದೂರಿದರು.

> ಸುಮಾರು 22 ವರ್ಷದಿಂದ ಮಹಿಳೆಯರು, ವಿದ್ಯಾರ್ಥಿಗಳು, ರೈತರು ಸುಮಾರು 30 ಅಡಿ ತೆಗ್ಗವಿರುವ ಕೆರೆಯಲ್ಲಿ ಟ್ಯೂಬ್ ತೆಪ್ಪ ಮೂಲಕ ನಿಂಗಾಪುರ ಗ್ರಾಮಕ್ಕೆ ತೆರಳಬೇಕು. ಜನರಿಗೆ ಈ ಕೆರೆ ದಾಟಲು ಸೇತುವೆ ಅವಶ್ಯವಾಗಿದೆ.
> -ಈರಯ್ಯ ನಿಂಗಾಪುರಮಠ, ಸ್ಥಳೀಯರು

> ಮಳೆಗಾಲದಲ್ಲಿ ಪ್ರತಿದಿನ ಈ ಕೆರೆಯಲ್ಲಿ 10 ಜನ ವಿದ್ಯಾರ್ಥಿಗಳು ಟ್ಯೂಬ್ ತೆಪ್ಪದ ಮೇಲೆ ಕುಳಿತು ಶಾಲೆಗಳಿಗೆ ಬರುತ್ತೇವೆ. ಟ್ಯೂಬ್ ತೆಪ್ಪದ ಮೇಲೆ ಕುಳಿತು ಶಾಲೆಗೆ ಬರುವಾಗ ಭಯವಾಗುತ್ತದೆ. ಸಂಚಾರಕ್ಕೆ ಅಧಿಕಾರಿಗಳು ಸೇತುವೆ ನಿರ್ಮಿಸಿಕೊಡಬೇಕು.
> -ರಾಯಣ್ಣ ಸನದಿ, ವಿದ್ಯಾರ್ಥಿನಿ

> ಸುಮಾರು 25 ಜನರು ಪ್ರತಿದಿನ ಕೆರೆಯ ದಾಟಿ ಬರುತ್ತಾರೆ. ಕಿತ್ತೂರು ತಹಶೀಲ್ದಾರ ಅವರಿಗೆ ನಿಂಗಾಪುರ ಗ್ರಾಮ ಎಲ್ಲಿ ಇದೆ ಅಂತಾ ಗೊತ್ತಿಲ್ಲ. ಸಾಕಷ್ಟು ಸಲ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಮನವಿ ಮಾಡಿಕೊಂಡರು ಯಾವುದೇ ಪ್ರಯೋಜನವಾಗಿಲ್ಲ.
> -ದಶರಥ ಮಡಿವಾಳರ, ಗ್ರಾ. ಪಂ. ಸದಸ್ಯ

ನೆರೆ ತಡೆಗೆ ಶಾಶ್ವತ ಪರಿಹಾರ ಭರವಸೆ ನೀಡಿದ ಸಿಎಂ

ಸೇತುವೆ ನಿರ್ಮಾಣಕ್ಕೆ ಶಾಸಕ ಬಾಲಚಂದ್ರ ಜಾರಕಿಹೊಳಿ ಮನವಿ

ಬೆಳಗಾವಿ: ಪ್ರತಿ ವರ್ಷ ಮಳೆಯಿಂದಾಗಿ ಜುಗುಳ ಹಾಗೂ ಮಂಗಾವತಿ ಗ್ರಾಮಗಳು ಪ್ರವಾಹಕ್ಕೆ ತುತ್ತಾಗಿರುವ ಹಿನ್ನೆಲೆಯಲ್ಲಿ ಈ ಗ್ರಾಮಗಳ ಖಾಯಂ ಸ್ಥಳಾಂತರಕ್ಕೆ ಈ ಭಾಗದ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ ಸೂಕ್ತವಾದ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ತಿಳಿಸಿದರು.

ಸೋಮವಾರ ಕೃಷ್ಣಾ ಹಾಗೂ ಘಟಪ್ರಭಾ ನದಿ ಪ್ರವಾಹಕ್ಕೆ ಒಳಗಾದ ಗೋಕಾಕ್ ಹಾಗೂ ಚಿಕ್ಕೋಡಿ ಉಪ ವಿಭಾಗದ ಪ್ರದೇಶಗಳಿಗೆ ಸಿಎಂ ಸಿದ್ದರಾಮಯ್ಯ ಭೇಟಿ ನೀಡಿ ಮಾತನಾಡಿದ ಅವರು. ಬೆಳಗಾವಿ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಮನೆ ಮತ್ತು ಬೆಳೆ ಹಾನಿಗೀಡಾದವರಿಗೆ ತಕ್ಷಣ ಪರಿಹಾರ ಒದಗಿಸಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಮಳೆ ಜಾಸ್ತಿಯಾಗಿ ಪ್ರವಾಹ ಬಂದಾಗ ಇಂತಹ ಪರಿಸ್ಥಿತಿಗಳು ಉದ್ಭವವಾಗುತ್ತವೆ ಈ ಕುರಿತು ಶೀಘ್ರ ತೀರ್ಮಾನ ಕೈಗೊಳ್ಳಲಾಗುವುದು. ಕಷ್ಟದಲ್ಲಿರುವವರಿಗೆ ನಮ್ಮ ಸರಕಾರದಿಂದ ಕೂಡಲೇ ಪರಿಹಾರ ನೀಡುವ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಯಾರೂ ಕೂಡ ಆತಂಕ ಪಡಬಾರದು ಎಂದು ಹೇಳುವ ಮೂಲಕ ಸಾರ್ವಜನಿಕರಲ್ಲಿ ಆತ್ಮಸ್ಥೈರ್ಯ ತುಂಬಿದರು.

ಬೆಳೆಹಾನಿ ಕುರಿತಂತೆ ಸಮೀಕ್ಷೆ ಜರುಗಿಸಿ ವಿಪತ್ತು ನಿರ್ವಹಣಾ ಮಾರ್ಗಸೂಚಿ ಅನ್ವಯ ಪರಿಹಾರ ವಿತರಿಸಲು ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಮಹಿಳಾ ಮತ್ತು ಮಕ್ಕಳ

ಘಟಪ್ರಭಾ ನದಿ ಪ್ರವಾಹಕ್ಕೆ ಒಳಗಾದ ಗೋಕಾಕ್ ಪಟ್ಟಣದ ಹೊರವಲಯ ಲೋಳಸೂರ ಸೇತುವೆ ವೀಕ್ಷಣೆ ಮಾಡುತ್ತಿರುವ ಸಿಎಂ ಸಿದ್ದರಾಮಯ್ಯ

ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್, ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಶಾಸಕ ಲಕ್ಷ್ಮಣ ಸವದಿ, ಮಹಾಂತೇಶ ಕೌಜಲಗಿ, ಬುಡಾ ಅಧ್ಯಕ್ಷ ಲಕ್ಷ್ಮಣ ಚಿಂಗಲೆ, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಸೇರಿದಂತೆ ವಿವಿಧ ಇಲಾಖೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಗೋಕಾಕ್ ಪಟ್ಟಣದ ಸಮೀಪ ಅತಿವೃಷ್ಟಿಯಿಂದ ತುಂಬಿ ಹರಿಯುತ್ತಿದ್ದ ಘಟಪ್ರಭಾ ನದಿಯಿಂದ ಮುಳುಗಡೆಯಾಗಿದ್ದ ಲೋಳಸೂರ ಸೇತುವೆ ವೀಕ್ಷಿಸಿದ ಸಿಎಂ ಸಿದ್ದರಾಮಯ್ಯ ಪರಿಸ್ಥಿತಿ ಅವಲೋಕಿಸಿದರು. ಈ ಸಂದರ್ಭದಲ್ಲಿ ಶಾಸಕ ಬಾಲಚಂದ್ರ ಜಾರಕಿಹೊಳಿ ಹೊಸ ಸೇತುವೆ ನಿರ್ಮಾಣಕ್ಕೆ ಮನವಿ ಮಾಡಿದರು.

ಸೇತುವೆ ನಿರ್ಮಾಣಕ್ಕೆ ಶಾಸಕ ಬಾಲಚಂದ್ರ ಮನವಿ

ಘಟಪ್ರಭಾ ಪ್ರವಾಹ ಪೀಡಿತ ಪ್ರದೇಶಕ್ಕೆ ಸಿಎಂ ಸಿದ್ದರಾಮಯ್ಯ ಸೋಮವಾರ ಭೇಟಿ ನೀಡಿದ ಸಂದರ್ಭದಲ್ಲಿ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಹೊಸ ಲೋಳಸೂರ ಸೇತುವೆ ನಿರ್ಮಾಣಕ್ಕೆ ಮನವಿ ಮಾಡಿದರು.

ಏವಿಯೇಷನ್ ಕಲ್ಚರಲ್ ವೀಕ್ ಉದ್ಘಾಟನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಏವಿಯೇಷನ್ ಕಲ್ಚರಲ್ ವೀಕ್ ಉದ್ಘಾಟಿಸಿದರು.

ಪ್ರಯಾಣಿಕರ ಹಾಗೂ ವಿಮಾನ ನಿಲ್ದಾಣದ ಸಿಬ್ಬಂದಿ ಹಿತ ದೃಷ್ಟಿಯಿಂದ ವಿಮಾನ ನಿಲ್ದಾಣದಲ್ಲಿನ ಸುರಕ್ಷತಾ ನಿಯಮಗಳನ್ನು ಪಾಲಿಸುವ ನಿಟ್ಟಿನಲ್ಲಿ ಏವಿಯೇಷನ್ ಕಲ್ಚರಲ್ ವೀಕ್ ಕಾರ್ಯಕ್ರಮ ಉದ್ಘಾಟನೆಗೊಂಡಿದೆ. ಈ ವೇಳೆ ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಇಲಾಖೆಯ ಸಚಿವರಾದ ಸತೀಶ ಜಾರಕಿಹೊಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಜಿಲ್ಲೆಯ ಶಾಸಕರು, ವಿಮಾನ ನಿಲ್ದಾಣದ ಅಧಿಕಾರಿಗಳು ಉಪಸ್ಥಿತರಿದ್ದರು.

5 ಲಕ್ಷ ರು.ಪರಿಹಾರ ವಿತರಣೆ

2 ದಿನಗಳ ಹಿಂದೆ ನೀರಿನಲ್ಲಿ ಕೊಚ್ಚಿಹೋದ ಅಲತಗಾದ ಯುವಕ ಓಂಕಾರ ಅರುಣ ಪಾಟೀಲ ಅವರ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ 5 ಲಕ್ಷ ರು. ಪರಿಹಾರದ ಆದೇಶ ಪತ್ರ ನೀಡಿದರು.ಬೆಳಗಾವಿ ಜಿಲ್ಲೆಯ ಪ್ರವಾಹ ವೀಕ್ಷಣೆ ನಡೆಸಿ ಮರಳುವ ಸಂದರ್ಭದಲ್ಲಿ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿಗಳು ಮೃತ ಓಂಕಾರನ ತಾಯಿಗೆ ಆದೇಶ ಪತ್ರ ನೀಡಿದರು.

ವಾರ್ಷಿಕ ಸ್ನೇಹ ಸಮ್ಮೇಳನ ಸಮಾರಂಭ

ಬೈಲಹೊಂಗಲ: ಯುವ ಕಾನೂನು ವಿದ್ಯಾರ್ಥಿಗಳು ಕಾನೂನು ಮತ್ತು ನೈತಿಕತೆ ಬಗ್ಗೆ ಸರಿಯಾಗಿ ಅರ್ಥೈಸಿಕೊಂಡು ಪ್ರಾಮಾಣಿಕವಾಗಿ ನ್ಯಾಯ ಕೊಡಿಸಲು ಪ್ರಯತ್ನಿಸಬೇಕೆಂದು ಹಿರಿಯ ನ್ಯಾಯವಾದಿ ಝುಡ್. ಎ.ಗೋಕಾಕ ಹೇಳಿದರು.

ಪಟ್ಟಣದ ಕೆ.ಆರ್.ಸಿ.ಇ.ಎಸ್.ಎಚ್.ವಿ. ಕೌಜಲಗಿ ಕಾನೂನು ಮಹಾವಿದ್ಯಾಲಯದಲ್ಲಿ ನಡೆದ ಪ್ರಸಕ್ತ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಾನೂನು ಶಿಕ್ಷಣ ಅಧ್ಯಯನ ಪಡೆದ ನಂತರದಲ್ಲಿ ತಾವೆಲ್ಲರೂ ಮುಂದೆ ನ್ಯಾಯಾಲಯದಲ್ಲಿ ಪಕ್ಷಗಾರರಿಗೆ ನ್ಯಾಯ ಕೊಡಿಸುವ ಸಂದರ್ಭದಲ್ಲಿ ನಿಷ್ಪಕ್ಷಪಾತದಿಂದ ಕಾರ್ಯನಿರ್ವಹಣೆ ಮಾಡಬೇಕು.ಸಾಮಾನ್ಯರಿಗೂ ನ್ಯಾಯ ದೊರೆಕಿಸಲು ನಿರಂತರ ಅಧ್ಯಯನದಲ್ಲಿ ತೊಡಗಿಕೊಳ್ಳಬೇಕು, ನಿಮ್ಮದೆ ರೀತಿಯಲ್ಲಿ ಪ್ರಕರಣದ ಅರ್ಜಿ ರೂಪಿಸಲು ರೂಢಿಸಿಕೊಳ್ಳಬೇಕು ಎಂದರು. ಝಿ ಟಿವಿ ಹಾಸ್ಯ ಕಲಾವಿದ ಸಂಜು ಬಸಯ್ಯ ದಂಪತಿಗಳು ಮಾತನಾಡಿ, ಇವತ್ತು ಕಾನೂನು ಶಿಕ್ಷಣ ಅಧ್ಯಯನವನ್ನು ಗ್ರಾಮೀಣ ವಿದ್ಯಾರ್ಥಿಗಳು ಪಡೆಯುತ್ತಿರುವುದು ನಿಜಕ್ಕೂ ತಾವೇ ಭಾಗ್ಯವಂತರು. ಈ ಕಲೆಗೆ ಸಮಾಜ ನೀಡಿದ ಪ್ರೋತ್ಸಾಹವೇ ಇವತ್ತು ತಮ್ಮ ಮುಂದೆ ಹಾಸ್ಯ ಕಲಾವಿದನ ಸ್ಥಾನಮಾನದಲ್ಲಿ ಗುರುತಿಸಿಕೊಂಡಿದ್ದೇನೆ, ಹಾಗಾಗಿ ತಾವು ಕಾನೂನು ಶಿಕ್ಷಣವನ್ನು ಆಸಕ್ತಿಯಿಂದ ಪಡೆದುಕೊಂಡು ಸಮಾಜದಲ್ಲಿ ಗುರುತಿಸಿಕೊಳ್ಳಬೇಕೆಂದು ತಿಳಿಸಿದರು. ಸಂಸ್ಥೆ ಚೇರಮನ್ ಶಿರೀಶ ತುಡವೇಕರ ಮಾತನಾಡಿ, ವಕೀಲ ವೃತ್ತಿಯನ್ನು ಪ್ರವೇಶಿಸುವ ತಾವೆಲ್ಲರೂ ಸಮಾಜದಲ್ಲಿ ನ್ಯಾಯಯುತವಾಗಿ, ಪ್ರಾಮಾಣಿಕವಾಗಿ ನಿಮ್ಮ ಕರ್ತವ್ಯದಲ್ಲಿ ತೊಡಗಿಕೊಂಡು ಉತ್ತಮ ವ್ಯಕ್ತಿತ್ವ ಬೆಳೆಸಿಕೊಂಡು ಉತ್ತಮವಾದ ಜೀವನ ಸಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ನಾಳೆ ಶಿಕ್ಷಕರ ಸಂಘ ಬೇಡಿಕೆಗಾಗಿ ಹೋರಾಟ

ಮೂಡಲಗಿ: ಪ್ರಾಥಮಿಕ ಶಾಲಾ ಶಿಕ್ಷಕರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಆ.7 ರಂದು ಜಿಲ್ಲಾ ಮಟ್ಟದಲ್ಲಿ ಹಾಗೂ ಅ.12 ರಂದು ರಾಜ್ಯ ಮಟ್ಟದ ಹೊರಾಟವನ್ನು ಬೆಂಗಳೂರ ಫ್ರೀಡಂಪಾರ್ಕನಲ್ಲಿ ಹಮ್ಮಿಕೊಂಡಿರುವ ಬೃಹತ್ ಪ್ರಭಟನೆಯಲ್ಲಿ ಸಮಸ್ತ ಶಿಕ್ಷಕರು ಭಾಗವಹಿಸಬೇಕೆಂದು ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಎಸ್.ಎಮ್.ಲೋಕನವರ ಹೇಳಿದರು. ಸೊಮವಾರದಂದು ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮೂಡಲಗಿ ತಾಲೂಕಾ ಘಟಕದಿಂದ ಅ.12 ರಂದು ಬೆಂಗಳೂರದಲ್ಲಿ ಹಮ್ಮಿಕೊಂಡಿರುವ ಹೋರಾಟದ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ತಹಸೀಲ್ದಾರಿಗೆ ಶಿಕ್ಷಕರ ರಾಜ್ಯ ಮಟ್ಟದ ಹೋರಾಟದ ಕುರಿತು ಹಾಗೂ ಶಿಕ್ಷಕರಿಗೆ ಆಗಿರುವ ಅನ್ಯಾಯದ ಕುರಿತು ಚಳುವಳಿಯ ಪತ್ರ ನೀಡಿ ಹೋರಾಟಕ್ಕೆ ಬೆಂಬಲಿಸಲು ಕೋರಿ ಮನವಿ ಸಲ್ಲಿಸಿ ಮಾತನಾಡಿ, ಶಿಕ್ಷಕರ ಸಮಸ್ಯೆಗಳ ಬಗ್ಗೆ ಸರಕಾರಕ್ಕೆ ಸಾಕಷ್ಟು ಬಾರಿ ಮನವರಿಕೆ ಮಾಡಿದರು ಕೂಡಾ ಸ್ಪಂದಿಸಿಲ್ಲ ಎಂದರು. ಶಿಕ್ಷಕರ ಸಂಘದ ಮೂಡಲಗಿ ತಾಲೂಕಾ ಘಟಕದ ಅಧ್ಯಕ್ಷ ಎಮ್.ಜಿ,ಮಾವಿನಗಿಡದ ಮತ್ತು ಪ್ರದಾನ ಕಾರ್ಯದರ್ಶಿ ಮಾತನಾಡಿ, 2017 ರವರಿಗೆ ನೇಮಕವಾದ ಶಿಕ್ಷಕರನ್ನು 1 ರಿಂದ 7ಕ್ಕೆ ನೇಮಕವಾದ ಶಿಕ್ಷಕರೆಂದು ಪರಿಗಣಿಸಿ, ಹೊಸ ವೃಂದ ಮತ್ತು ನೇಮಕಾತಿ ನಿಯಮಗಳು, 2017ರ ನಂತರ ನೇಮಕವಾದ ಶಿಕ್ಷಕರಿಗೆ ಅನ್ವಯಿಸಬೇಕು ಯಾವುದೇ ಕಾರಣಕ್ಕೂ 2016ಕ್ಕಿಂತ ಮೊದಲು ನೇಮಕಾತಿಯಾದವರಿಗೆ ಪೂರ್ವಾನ್ವಯಗೋಳಿಸಬಾರದು.

ಮಕ್ಕಳ ಬೆಳವಣಿಗೆಗೆ ಪೌಷ್ಟಿಕ ಆಹಾರ ಮುಖ್ಯ

ರಾಯಬಾಗ: ಮಕ್ಕಳ ಬೆಳವಣಿಗಗೆ ಮುಖ್ಯವಾಗಿ ಆಹಾರದ ಅವಶ್ಯಕತೆಯಿದೆ. ಮನೆಯ ಆಹಾರಕ್ಕೆ ಪೂರಕವಾಗಿ ಶಾಲೆಗಳಲ್ಲಿ ಕೊಡುವ ಆಹಾರವು ಪೌಷ್ಟಿಕಾಂಶಯುಕ್ತವಾಗಿದ್ದರೆ ಮಕ್ಕಳ ಸರ್ವತೋಮುಖ ಬೆಳವಣಿಗೆಯಾಗುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಬಸವರಾಜಪ್ಪ ಹೇಳಿದರು.

ತಾಲೂಕಿನ ಸವದತ್ತಿಯ ಆದರ್ಶ ಶಿಕ್ಷಣ ಸಂಸ್ಥೆಯ ಬಾಜಿರಾವ್ ಮಗದುಮ್ಮ ಅನುದಾನಿತ ಪ್ರೌಢ ಶಾಲೆಯಲ್ಲಿ ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಮಕ್ಕಳಿಗೆ ಇಡ್ಲಿ ಸಾಂಬಾರ ನೀಡಿ ಮಾತನಾಡಿದ ಅವರು, ಈ ಶಾಲೆಯಲ್ಲಿ ಅಡುಗೆ ಮಾಡುವಾಗ ತಾಜಾ ತರಕಾರಿ ಬಳಸಿ ವಾರದ 6 ದಿನವೂ ವಿವಿಧ ಬಗೆಯ ಪೌಷ್ಠಿಕಾಂಶಯುಳ್ಳ ಅಡುಗೆ ತಯಾರಿಸಿ ಮಕ್ಕಳಿಗೆ ಉಣಬಡಿಸುತ್ತಿರುವುದು ವಿಶೇಷವಾಗಿದೆ. ಇದರಿಂದ ಮಕ್ಕಳಿಗೆ ಒಳ್ಳೆಯ ಪೌಷ್ಠಿಕಯುಕ್ತ ಆಹಾರ ದೊರಕುತ್ತದೆ.

ಈ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಈರಗೌಡಾ ಪಾಟೀಲ, ಉಪಾಧ್ಯಕ್ಷ ಕೆ.ಎಮ್,ಮಗದುಮ್, ಕಾರ್ಯದರ್ಶಿ ಎ.ಟಿ.ಕೂಗೆ, ದೂಳಗೌಡಾ ಪಾಟೀಲ, ಎ.ಜೆ.ಕಾಮಗೌಡ, ಕೆ,ಜೆ.ಕಾಮಗೌಡ, ಬಿ.ಜೆ.ಬನಾಜ, ಎ.ಡಿ.ಕಾಮಗೌಡ, ಅರುಣ ಸಲಗರೆ. ಆರ್.ಬಿ.ಪಾಟೀಲ, ಗಣ್ಯರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ತಾಲೂಕಿನ ಸವದತ್ತಿಯ ಆದರ್ಶ ಶಿಕ್ಷಣ ಸಂಸ್ಥೆಯ ಬಾಜಿರಾವ್ ಮಗದುಮ್ಮ ಅನುದಾನಿತ ಪ್ರೌಢ ಶಾಲೆಯಲ್ಲಿ ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳಿಗೆ ಬಿಇಓ ಆರ್.ಬಸರಾಜಪ್ಪ ಇಡ್ಲಿ ಸಾಂಬಾರ ಉಣಬಡಿಸಿದರು.

> ಮಕ್ಕಳು ಪ್ರತಿದಿನ ಒಂದೇ ತರದ ಆಹಾರ ಸೇವಿಸುವುದರಿಂದ ದೇಹದ ಬೆಳವಣಿಗೆಗೆ ಬೇಕಾಗುವ ಪೋಷಕಾಂಶಗಳು ದೊರಕದೇ ಬೆಳವಣಿಗೆ ಕುಂಠಿತವಾಗಿ ಆಟಪಾಠಗಳಲ್ಲಿ ಆಸಕ್ತಿ ಕಳೆದುಕೊಳ್ಳುವುದರಿಂದ ವಿದ್ಯಾಭ್ಯಾಸದಲ್ಲಿಯೂ ಹಿಂದುಳಿಯುತ್ತಾರೆ ಎಂದ ಅವರು ಆದರ್ಶ ಶಿಕಣ್ಷ ಸಂಸ್ಥೆಯ ಕಾರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಪ್ರತಿ ಶಾಲೆಯಲ್ಲಿಯೂ ಇದೇ ರೀತಿಯಾಗಿ ಮಧ್ಯಾಹ್ನದ ಬಿಸಿಯೂಟ ತಯಾರಿಸಿ ಕೊಡಲು ಆದೇಶಿಸಿದೆ
> -ಕೆ.ಬಸವರಾಜಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ

ಪ್ರಕೃತಿ ಹಾಳಾದರೆ ದುರಂತ ತಪ್ಪಿದ್ದಲ್ಲ

ಬೈಲಹೊಂಗಲ: ನಿಸರ್ಗ ಜೀವಿಗಳು ಬದುಕಲು ಭೂಮಿ, ಉಸಿರಾಟಕ್ಕೆ ಗಾಳಿ, ಕುಡಿಯಲಿಕ್ಕೆ ಜಲ ಬೆಚ್ಚಗಿರಲು ಅಗ್ನಿ, ಬೆಳಕು ಸೇರಿದಂತೆ ಸರ್ವಸ್ವ ನೀಡಿದ ನಿಸರ್ಗಕ್ಕೆ ವಿಚಾರವಂತರಾಗಿರುವ ಮಾನವರಾದ ನಾವು ಕೃತಜ್ಞತೆ ಸಲ್ಲಿಸಬೇಕು. ಪ್ರಕೃತಿ ಹಾಳು ಮಾಡಿದರೆ ದುರಂತ ತಪ್ಪಿದ್ದಲ್ಲ ಎಂದು ಜಾಲಿಕೊಪ್ಪ ತಪೋಭೂಮಿಯ ಪೂಜ್ಯ ಶಿವಾನಂದ ಗೂರೂಜಿ ಹೇಳಿದರು. ತಾಲೂಕಿನ ನಯಾನಗರ ಸೇತುವೆಯಲ್ಲಿ ಮಲಪ್ರಭಾ ನದಿಗೆ ಬಾಗಿನ ಅರ್ಪಿಸಿ ನಡೆದ ಸಭೆಯ ಸಾನಿಧ್ಯವಹಿಸಿ ಆರ್ಶಿವಾದ ನೀಡಿದ ಅವರು, ಮನುಷ್ಯನ ಜೀವನಕ್ಕೆ ಬೇಕಾದ ಅನ್ನ, ನೀರು, ಗಾಳಿ, ವಸತಿ ಎಲ್ಲವನ್ನು ಅನುಭವಿಸಿ ಮಾನವ ತನ್ನ ದುರಾಸೆಗೆ ಅನ್ನ ನೀಡುವ ಭೂಮಿಗೆ ವಿಷ ಹಾಕಿ ತನ್ನ ಆರೋಗ್ಯವನ್ನು ತಾನೆ ಹಾಳು ಮಾಡಿಕೊಳ್ಳುತಿದ್ದಾನೆ. ಕುಡಿಯವ ನೀರು, ಕೃಷಿ ಭೂಮಿಯ ನೀರಾವರಿಗಾಗಿ ತಾಯಿ ಮಲಪ್ರಭೆಯನ್ನು ಕೋಟ್ಯಾಂತರ ಜನ ಅವಲಂಬಿಸಿದ್ದಾರೆ. ಅವರೆಲ್ಲರೂ ಮಲಪ್ರಭಾ ನದಿ ಮೈದುಂಬಿಕೊಂಡಾಗಲು ಜನ ಮೈಮರೆಯುವುದು ದುರದೃಷ್ಟಕರ. ಎಪಿಎಂಸಿ ಮಾಜಿ ಅಧ್ಯಕ್ಷ ಎಫ್.ಎಸ್.ಸಿದ್ದನಗೌಡರ, ರೈತ ಮುಖಂಡ ಮಹಾಂತೇಶ ಕಾಮತ ಮತ್ತು ಧರ್ಮರಾಜ ಗೌಡಾ ಮಾತನಾಡಿ, 1974ರಲ್ಲಿ ನಿರ್ಮಾಣವಾದ ರೇಣುಕಾ ಸಾಗರ ಜಲಾಶಯ ಕೇವಲ ಹತ್ತು ಬಾರಿ ತುಂಬಿದೆ. ಈ ವರ್ಷ ಜಲಾಶಯ ತುಂಬಿರುವುದರಿಂದ ನದಿ ಪಾತ್ರದ ಹಾಗೂ ಹುಬ್ಬಳ್ಳಿ-ಧಾರವಾಡ, ಗದಗ ಹಾಗೂ ಬಾಗಲಕೋಟ ಜನತೆಗೆ ಕುಡಿಯುವ ನೀರಿಗೆ ನಿಟ್ಟುಸಿರು ಬಿಟ್ಟಂತಾಗಿದೆ ಎಂದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಒಲಿಂಪಿಕ್ಸ್ ಸಮಾರೋಪ ಸಮಾರಂಭಕ್ಕೆ ಮನು ಭಾಕರ್ ತ್ರಿವರ್ಣ ಧ್ವಜಧಾರಿ

ಪುಟ ತೆರೆದಂತೆ...

ಪಾದಯಾತ್ರೆ ಹಿಂದಿರುವ ಅಸ್ತಿತ್ವದ ಹೋರಾಟ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ಬದುಕಿನ ಮೌಲ್ಯ ಬಿಟ್ಟುಕೊಡದ ಯುರೋಪು
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ | 7

ಮಾತಂದ್ರೆ ಮಾತು

ವಿಜಯೇಂದ್ರ ಹೇಳುತ್ತಾನೆ ಭ್ರಷ್ಟಾಚಾರದ ಪಿತಾಮಹಾ ನಾನು ಎಂದು. ನೀನು ಮೊದಲು ಹೇಳಪ್ಪ, ನೀನು ನಿಮ್ಮ ಅಪ್ಪನನ್ನು ಯಾಕೆ ಜೈಲಿಗೆ ಕಳುಹಿಸಿದೆ? ರಾಜೀನಾಮೆ ಕೊಡಿಸಿದೆ? ಏನಾಯಿತು, ಎಲ್ಲಿ ಬಂತು? ಏಕೆ ಇದೆಲ್ಲಾ ಆಯಿತು? ಇದರ ಲೆಕ್ಕಾಚಾರ ಮೊದಲು ನೀಡು. ಮೊದಲು ನಿಮ್ಮ ಪಕ್ಷದ ಯತ್ನಾಳ್, ಗೂಳಿಹಟ್ಟಿ ಶೇಖರ್‌ಗೆ ಉತ್ತರ ಕೊಡಿ, ಆನಂತರ ನನಗೆ ಕೊಡುವಿರಂತೆ.

- ಡಿ.ಕೆ.ಶಿವಕುಮಾರ್
ಡಿಸಿಎಂ

ದಾರಿದೀಪೋಕ್ತಿ

ಸಿಟ್ಟು ಅಂದ್ರೆ, ಉರಿಯುವ ಕೆಂಡವನ್ನು ಕೈಯಲ್ಲಿ ಹಿಡಿದುಕೊಂಡು, ನೀವು ಯಾರ ವಿರುದ್ಧ ಕೋಪ ಮಾಡಿಕೊಂಡಿದ್ದೀರೋ, ಆತ ಸುಟ್ಟು ಹೋಗಲಿ ಎಂದು ನಿರೀಕ್ಷಿಸಿದಂತೆ. ಸಿಟ್ಟು ಯಾವತ್ತೂ ನಮ್ಮನ್ನು ಸುಡುತ್ತದೆ, ನಂತರ ಬೇರೆಯವರನ್ನು. ಸಿಟ್ಟಿನ ಮೇಲೆ ಸದಾ ನಿಗಾ ಇರಲಿ.

ವಕ್ರತುಂಡೋಕ್ತಿ

ಹೃದಯಕ್ಕಿಂತ ಹೊಟ್ಟೆಯಿಂದ ಪ್ರೀತಿಸುವುದು ಮುಖ್ಯ. ಕಾರಣ ಅದಕ್ಕಿಂತ ಇದು ದೊಡ್ಡದಿರುತ್ತದೆ.

ಕ್ಷಿಪ್ರ ಕ್ರಾಂತಿಯಲ್ಲಿ ಪ್ರಧಾನಿ ಶೇಖ್ ಹಸೀನಾ ಪದಚ್ಯುತಿ | ಮತ್ತೆ ಭುಗಿಲೆದ್ದ ಮೀಸಲು ವಿರೋಧಿ ಪ್ರತಿಭಟನೆ ಪ್ರಧಾನಿ ನಿವಾಸಕ್ಕೆ ನುಗ್ಗಿ ಲೂಟಿ | ಭಾರತಕ್ಕೆ ಓಡಿ ಬಂದ ಹಸೀನಾ | ಗಡಿಯಲ್ಲಿ ಕಟ್ಟೆಚ್ಚರ | ಸೇನಾ ಮುಖ್ಯಸ್ಥನ ನೇತೃತ್ವದಲ್ಲಿ ಮಧ್ಯಂತರ ಸರಕಾರ ರಚನೆ | ಮುಜಿಬುರ್ ಪ್ರತಿಮೆ ಭಗ್ನ | ಅಲ್ಪಸಂಖ್ಯಾತರ ಮನೆ ಮೇಲೆ ದಾಳಿ

ಸೇನೆ ತೆಕ್ಕೆಗೆ ಬಾಂಗ್ಲಾ

ಢಾಕಾ: ಬಾಂಗ್ಲಾದೇಶದಲ್ಲಿ ಸಂಭವಿಸಿದ ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ದೇಶದ ಆಡಳಿತ ಚುಕ್ಕಾಣಿಯನ್ನು ಸೇನೆ ವಶಕ್ಕೆ ತೆಗೆದುಕೊಂಡಿದೆ. ಪ್ರಧಾನಿ ಶೇಖ್ ಹಸೀನಾ (76) ಭಾರತಕ್ಕೆ ಓಡಿ ಬಂದು ಆಶ್ರಯ ಪಡೆದಿದ್ದಾರೆ.

ವಿದ್ಯಾರ್ಥಿಗಳ ಮೀಸಲು ಹೋರಾಟದಿಂದ ದೇಶದಲ್ಲಿ ಪ್ರಕ್ಷುಬ್ಧ ಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಸೇನೆಯು ಮಧ್ಯೆ ಪ್ರವೇಶಿಸಿ ಹಸೀನಾ ಅವರನ್ನು ಪದಚ್ಯುತಿಗೊಳಿಸಿದೆ. ಈ ಮೂಲಕ ಹಸೀನಾ ಅವರ 3 ದಶಕಗಳ ಆಡಳಿತಕ್ಕೆ ತೆರೆ ಬಿದ್ದಿದೆ. ಸೇನಾ ಮುಖ್ಯಸ್ಥ ವಾಖರ್ ಉಸ್ ಝುಮಾನ್ ಮಧ್ಯಂತರ ಸರಕಾರ ರಚನೆಯನ್ನು ಘೋಷಿಸಿದ್ದಾರೆ.

- ಬಾಂಗ್ಲಾದೇಶದ ರಾಷ್ಟ್ರಪಿತ, ಮಾಜಿ ಅಧ್ಯಕ್ಷ ಮುಜಿಬುರ್ ರಹಮಾನ್ ಪ್ರತಿಮೆ ಭಗ್ನ
- ಶೇಖ್ ಹಸೀನಾ ರಾಜೀನಾಮೆ ಘೋಷಣೆಯಾಗುತ್ತಿದ್ದಂತೆ ಪ್ರತಿಭಟನಾಕಾರರ ಸಂಭ್ರಮ
- ಈ ಬೆಳವಣಿಗೆಯಲ್ಲಿ ಪಾಕ್ ಕೈವಾಡ, ಅಲ್ಪಸಂಖ್ಯಾತ ಹಿಂದೂಗಳ ಮೇಲೆ ಹಲ್ಲೆ
- ಸೇನೆಯ ಹೆಲಿಕಾಪ್ಟರ್‌ನಲ್ಲಿ ಭಾರತಕ್ಕೆ ಬಂದಿಳಿದ ಶೇಖ್ ಹಸೀನಾ

ಪ್ರಧಾನಿ ಸ್ಥಾನಕ್ಕೆ ಹಸೀನಾ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಬಾಂಗ್ಲಾದೇಶದಲ್ಲಿ ಮೂರು ದಿನಗಳಿಂದ ನಡೆದ ಪ್ರತಿಭಟನೆಯಲ್ಲಿ ಪ್ರಧಾನಿ ಹಸೀನಾ ಬೆಂಬಲಿಗರು ಮತ್ತು ಪ್ರತಿಭಟನಾಕಾರರ ನಡುವೆ ಘರ್ಷಣೆ ನಡೆದಿದ್ದರಿಂದ 300ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಘರ್ಷಣೆ ತಾರಕ್ಕೇರಿದ್ದರಿಂದ ಸೇನೆಯ ಅಧಿಕಾರಿಗಳ ಜತೆ ಶೇಖ್ ಹಸೀನಾ ಅವರು ಸೋಮವಾರ ಬೆಳಗ್ಗೆ ಸಭೆ ನಡೆಸಿದ್ದರು. ಬಳಿಕ ದೇಶ ತೊರೆಯಲು ಅವರಿಗೆ ಸೂಚಿಸಲಾಗಿತ್ತು. ಮಧ್ಯಾಹ್ನ 2.30ರಲ್ಲಿ ಪ್ರಧಾನಿ ಅಧಿಕೃತ ನಿವಾಸ ತೊರೆದ ಹಸೀನಾ ಅವರು, ಸಹೋದರಿ ಶೇಖ್ ರೆಹಾನಾ ಜತೆ ತ್ರಿಪುರಾದ ಅಗರ್ತಲಾ ವಾಯುನೆಲೆಗೆ ಬಂದಿಳಿದರು. ಅಲ್ಲಿಂದ ಭಾರತೀಯ ವಾಯುಪಡೆಯ ವಿಶೇಷ ವಿಮಾನದಲ್ಲಿ ದೆಹಲಿಗೆ ಬಂದಿಳಿದರು. ವಾಯುಪಡೆ ಅಧಿಕಾರಿಗಳು ಶೇಖ್ ಹಸೀನಾ ಅವರನ್ನು ಸ್ವಾಗತಿಸಿದರು.

ಸೇನಾ ಆಡಳಿತ ಶುರು: ಶೇಖ್ ಹಸೀನಾ ಅವರ ರಾಜೀನಾಮೆಯನ್ನು ಪ್ರಕಟಿಸಿದ ಸೇನಾ ಮುಖ್ಯಸ್ಥ ವಾಕರ್-ಉಜ್-ಜಮಾನ್, ಬಳಿಕ ಹಂಗಾಮಿ ಸರಕಾರದ ಸದಸ್ಯರ ಪಟ್ಟಿಯನ್ನು ಪ್ರಕಟಿಸಿದರು. ಮಿಲಿಟರಿಯು ದೇಶದ ಆಡಳಿತ ವಹಿಸಿಕೊಳ್ಳಲಿದೆ. ಸಾರ್ವಜನಿಕರು ಗಲಭೆಯಿಂದ ದೂರವಿರಬೇಕು ಎಂದು ವಾಕರ್ ತಿಳಿಸಿದ್ದಾರೆ. ಅಲ್ಲದೆ, ಯಾವುದೇ ಪ್ರತಿಭಟನಾಕಾರರ ವಿರುದ್ಧ ದಾಳಿ ನಡೆಸುವಂತಿಲ್ಲ ಎಂದು ಸೇನೆ ಹಾಗೂ ಪೊಲೀಸ್ ಸಿಬ್ಬಂದಿಗೆ ಸೂಚಿಸಿದ್ದಾರೆ.

ಢಾಕಾದಲ್ಲಿರುವ ಬಾಂಗ್ಲಾ ವಿಮೋಚನಾ ಚಳವಳಿ ಹುತಾತ್ಮರ ಪ್ರತಿಮೆ ಮೇಲೆ ಕುಳಿತು ಪ್ರತಿಭಟನಾಕಾರರು ಸಂಭ್ರಮಾಚರಣೆ ಮಾಡಿದರು.

ಯಾಕೆ ಈ ಗಲಭೆ?

1971ರ ಬಾಂಗ್ಲಾದೇಶ ವಿಮೋಚನಾ ಚಳವಳಿಯಲ್ಲಿ ಹೋರಾಡಿದವರ ಕುಟುಂಬದವರಿಗೆ ಸರಕಾರಿ ಉದ್ಯೋಗಗಳಲ್ಲಿ ಶೇ.30ರಷ್ಟು ಮೀಸಲು ಕಲ್ಪಿಸುವ ಕಾನೂನು ವಿರೋಧಿಸಿ ಯುವಕರು ಜುಲೈನಲ್ಲಿ ಬೀದಿಗಿಳಿದಿದ್ದರು. ಸದ್ಯ ಇರುವ ಮೀಸಲು ಪದ್ಧತಿಯು ಪ್ರಧಾನಿ ಶೇಖ್ ಹಸೀನಾ ಅವರ ನೇತೃತ್ವದ ಅವಾಮಿ ಲೀಗ್ ಪಕ್ಷದ ಬೆಂಬಲಿಗರಿಗೆ ಹೆಚ್ಚು ಅನುಕೂಲವಾಗುವಂತಿದೆ ಎಂಬುದು ವಿದ್ಯಾರ್ಥಿಗಳ ಆರೋಪವಾಗಿತ್ತು. ಈ ಒಂದು ಆರೋಪದಿಂದ ಆರಂಭವಾದ ವಿದ್ಯಾರ್ಥಿಗಳ ಚಳವಳಿಯಲ್ಲಿ ಶೇಖ್ ಹಸೀನಾ ಸರಕಾರ ಅರಾಜಕತೆ ಸೃಷ್ಟಿಸುವ ಹಾಗೂ ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುವ ಕೆಲಸ ಮಾಡಲಾಗುತ್ತಿದೆ ಎಂಬ ಆರೋಪಗಳೂ ಕೇಳಿಬಂದವು. ಪ್ರತಿಭಟನೆ ತೀವ್ರಗೊಳ್ಳುತ್ತಲೇ ಶಾಲೆ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳನ್ನು ಮುಚ್ಚಲಾಯಿತು. ಸುಪ್ರೀಂಕೋರ್ಟ್ ಮೀಸಲು ಪ್ರಮಾಣವನ್ನು ಶೇ.5ಕ್ಕೆ ಇಳಿಸಿದ ಬಳಿಕವೂ ಪ್ರತಿಭಟನೆ ಮುಂದುವರಿದು 300 ಮಂದಿ ಸಾವನ್ನಪ್ಪಿದರು. ಹೋರಾಟದ ವಿಸ್ತಾರಗೊಂಡು ದೇಶವನ್ನೇ ವ್ಯಾಪಿಸಿತು.

ನಿವಾಸಕ್ಕೆ ಬೆಂಕಿ

ದಂಗೆಯೆದ್ದ ಜನರು ಗುಂಪು ಹಸೀನಾ ಅವರ ಅಧಿಕೃತ ನಿವಾಸಕ್ಕೆ ನುಗ್ಗಿ ಬೆಂಕಿ ಹಚ್ಚಿದ್ದಾರೆ. ನಾಲ್ಕು ಲಕ್ಷಕ್ಕೂ ಅಧಿಕ ಪ್ರತಿಭಟನಾಕಾರರು ಬೀದಿಗಿಳಿದಿದ್ದರು. ಶೇಖ್ ಹಸೀನಾ ಅವರ ಕಚೇರಿಗೆ ತೆರಳುವ ಮಾರ್ಗದಲ್ಲಿ ಬ್ಯಾರಿಕೇಡ್‌ಗಳು, ತಂತಿ ಬೇಲಿಗಳನ್ನು ನಿರ್ಮಿಸಿ ಪೊಲೀಸರು ಹಾಗೂ ಸೈನಿಕರು ಶಸ್ತ್ರಸಜ್ಜಿತರಾಗಿ ನಿಂತಿದ್ದರು. ಆದರೆ ಜನಪ್ರವಾಹವನ್ನು ನಿಯಂತ್ರಿಸುವುದು ಅವರಿಂದ ಸಾಧ್ಯವಾಗಲಿಲ್ಲ. ಹಸೀನಾ ಅಧಿಕೃತ ನಿವಾಸಕ್ಕೆ ನುಗ್ಗಿದ ಪ್ರತಿಭಟನಾಕಾರರು ಕೈಗೆ ಸಿಕ್ಕ ವಸ್ತುಗಳನ್ನು ದೋಚಿ ಪರಾರಿಯಾದರು.

ಗಡಿಯಲ್ಲಿ ಕಟ್ಟೆಚ್ಚರ

ಬಾಂಗ್ಲಾದೇಶದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಹಿನ್ನೆಲೆಯಲ್ಲಿ ಭಾರತ-ಬಾಂಗ್ಲಾ ಗಡಿಯುದ್ದಕ್ಕೂ ಹೈ ಅಲರ್ಟ್ ಘೋಷಿಸಲಾಗಿದೆ. ಬಿಎಸ್‌ಎಫ್ ಡೈರೆಕ್ಟರ್ ಜನರಲ್ ಕೋಲ್ಕತ್ತಾಗೆ ಆಗಮಿಸಿದ್ದಾರೆ ಎಂದು ಬಿಎಸ್‌ಎಫ್ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. 4,096 ಕಿ.ಮೀಟರ್ ಉದ್ದದ ಗಡಿ ರೇಖೆಯಲ್ಲಿ ಸೇನೆ ನಿಯೋಜನೆಗೊಂಡಿದೆ. ಗಡಿಯಲ್ಲಿನ ಎಲ್ಲ ಚಟುವಟಿಕೆ ಬಗ್ಗೆ ನಿಗಾ ವಹಿಸುವಂತೆ ಸೂಚನೆ ನೀಡಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಭಾರತದಿಂದ ಬಾಂಗ್ಲಾದೇಶಕ್ಕೆ ಸಾಗುವ ಎಲ್ಲ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಗಿದೆ.

ಮಹರ್ಷಿ ವಾಲ್ಮೀಕಿ ನಿಗಮ ಹಗರಣ: ಚಾರ್ಜ್‌ಶೀಟ್

ನಾಗೇಂದ್ರ, ದದ್ದಲ್ ಹೆಸರೇ ನಾಪತ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣದ ಕುರಿತು ತನಿಖೆ ನಡೆಸಿದ್ದ ವಿಶೇಷ ತನಿಖಾ ತಂಡವು ಬೆಂಗಳೂರಿನ ಬೆಂಗಳೂರಿನ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಸುಮಾರು ಮೂರು ಸಾವಿರ ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಒಟ್ಟು 12 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದ್ದು, ಇದೇ ಪ್ರಕರಣದಲ್ಲಿ ಇ.ಡಿ ಬಂಧನಕ್ಕೊಳಗಾಗಿರುವ ಕಾಂಗ್ರೆಸ್ ಶಾಸಕ ನಾಗೇಂದ್ರ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ, ಬಸನಗೌಡ ದದ್ದಲ್ ಅವರ ಹೆಸರು ಸಹ ಉಲ್ಲೇಖವಾಗದಿರುವುದು ಇದೀಗ ವಿವಾದಕ್ಕೆ ಕಾರಣವಾಗಿದೆ.

- ಬೆಂಗಳೂರಿನ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಮೂರು ಸಾವಿರ ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ
- ಹಣ, ಚಿನ್ನ, ಕಾರು ಸೇರಿ 50 ಕೋಟಿ ರುಪಾಯಿ ಜಪ್ತಿ ಮಾಡಿರುವುದಾಗಿ ಎಸ್‌ಐಟಿ ಉಲ್ಲೇಖ
- ಈ ಪ್ರಕರಣದಲ್ಲಿ ಮೊದಲು ಬಂಧನವಾಗಿರುವ 12 ಆರೋಪಿಗಳ ವಿರುದ್ಧ ಮಾತ್ರ ದೋಷಾರೋಪ

ಚಾರ್ಜ್‌ಶೀಟ್‌ನಲ್ಲಿ ಏನಿದೆ?: ಒಟ್ಟು ಮೂರು ಸಾವಿರದ ಪುಟಗಳ ದೋಷಾರೋಪ ಪಟ್ಟಿಯಲ್ಲಿ ಹಣ, ಚಿನ್ನ, ಕಾರು ಸೇರಿ 50 ಕೋಟಿ ರು. ಜಪ್ತಿ ಮಾಡಿರುವುದಾಗಿ ಉಲ್ಲೇಖಿಸಲಾಗಿದೆ. 16.83 ಕೋಟಿ ರು. ನಗದು, 11 ಕೋಟಿ 70 ಲಕ್ಷ ಮೌಲ್ಯದ 16.252 ಕೆ.ಜಿ ಚಿನ್ನ, 4.51 ಕೋಟಿ ಮೌಲ್ಯದ ಲ್ಯಾಂಬರ್ಗಿನಿ ಉರುಸ್ ಹಾಗೈ, ಮರ್ಸಿಡೀಸ್ ಬೆಂಜ್ ಕಾರು, ತನಿಖಾಧಿಕಾರಿ ಬ್ಯಾಂಕ್ ಖಾತೆ ಯಿಂದ 3.19 ಕೋಟಿ ರು. ಹಣ, 13.72 ಕೋಟಿ ರು. ಹಣ ಫ್ರೀಜ್ ಸೇರಿದಂತೆ ಒಟ್ಟು 49.96 ಕೋಟಿ ವಶಪಡಿಸಿಕೊಂಡ ವಸ್ತುಗಳ ಬಗ್ಗೆ ಉಲ್ಲೇಖಿಸಲಾಗಿದೆ. ಈ ಪ್ರಕರಣದಲ್ಲಿ ಮೊದಲು ಬಂಧನವಾಗಿರುವ ಆರೋಪಿಗಳ ವಿರುದ್ಧ ಮಾತ್ರ ದೋಷಾ ರೋಪಪಟ್ಟಿ ಸಲ್ಲಿಸಲಾಗಿದೆ. ಸತ್ಯನಾರಾಯಣ ವರ್ಮಾ(ಹೈದರಾಬಾದ್), ಪದ್ಮನಾಭ (ವ್ಯವಸ್ಥಾಪಕ), ಪರುಶುರಾಮ್ (ಲೆಕ್ಕಾಧಿಕಾರಿ), ನೆಕ್ಕುಂಟಿ ನಾಗರಾಜ್ (ನಾಗೇಂದ್ರ ಆಪ್ತ), ನಾಗೇಶ್ವರ್ ರಾವ್(ನೆಕ್ಕುಂಟಿ ನಾಗರಾಜ್ ಸಂಬಂಧಿ), ಸತ್ಯ ನಾರಾಯಣ ಇಟ್ಕಾರಿ ತೇಜಾ (ಫಸ್ಟ್ ಫೈನಾನ್ಸ್ ಅಧ್ಯಕ್ಷ), ಜಗದೀಶ್ (ಉಡುಪಿ), ತೇಜಾ ತಮ್ಮಯ್ಯ(ಬೆಂಗಳೂರು), ಪಿಟ್ಟಲ ಶ್ರೀನಿ ವಾಸ್ ಗಚ್ಚಿಬೌಲಿ(ಆಂಧ್ರ ಪ್ರದೇಶ), ಸಾಯಿತೇಜ (ಹೈದರಾಬಾದ್) ಸೇರಿ ಒಟ್ಟು 12 ಆರೋಪಿಗಳ ಹೆಸರು ಉಲ್ಲೇಖವಾಗಿದೆ. ಆದರೆ, ಈ ದೋಷಾರೋಪಪಟ್ಟಿಯಲ್ಲಿ ನಾಗೇಂದ್ರ, ಬಸನಗೌಡ ದದ್ದಲ್‌ರ ಹೆಸರಿಲ್ಲದಿರುವುದೇ ಸಂಚಲನ ಮೂಡಿಸಿದೆ.

ಮತ್ತೆ 7.5 ಕೋಟಿ ಹಣ ಜಪ್ತಿ

ವಾಲ್ಮೀಕಿ ನಿಗಮದ ಬಹುಕೋಟಿ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾರ್ಜ್‌ಶೀಟ್ ಸಲ್ಲಿಸಿರುವ ವಿಶೇಷ ತನಿಖಾ ತಂಡ ತನ್ನ ಭೇಟೆಯನ್ನು ಮುಂದುವರಿಸಿದೆ. ಸೋಮವಾರ (ಆ.5) ಮತ್ತೆ 7.5 ಕೋಟಿ ರು.ಗಳನ್ನು ಜಪ್ತಿ ಮಾಡಿದೆ. ಫಸ್ಟ್ ಫಿನಾನ್ಸ್ ಬ್ಯಾಂಕ್‌ನ ಅಧ್ಯಕ್ಷ ಸತ್ಯನಾರಾಯಣ ಇಟ್ಕಾರಿ ಬಳಿ ಹಣವನ್ನು ವಶಕ್ಕೆ ಪಡೆದಿದ್ದಾರೆ. ಆರ್‌ಬಿಎಲ್ ಬ್ಯಾಂಕ್‌ನಲ್ಲಿದ್ದ ಇಟ್ಕಾರಿ ಖಾತೆಯಿಂದಲೇ ಹಣವನ್ನು ಜಪ್ತಿ ಮಾಡಿದ್ದಾರೆ. ಈ ಮೂಲಕ ಈವರೆಗೆ ಎಸ್‌ಐಟಿ ಒಟ್ಟು 57 ಕೋಟಿ ರು. ಜಪ್ತಿ ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಪಶ್ಚಿಮಘಟ್ಟದಲ್ಲಿ 69 ಎಕರೆ ತೆರವು

ಬೆಂಗಳೂರು: ಪಶ್ಚಿಮಘಟ್ಟ ಮತ್ತು ಇತರ ಘಟ್ಟ ಪ್ರದೇಶಗಳಲ್ಲಿನ ಒತ್ತುವರಿ ತೆರವು ಮಾಡುವಂತೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚಿಸಿದ 24 ಗಂಟೆಯೊಳಗೆ ಕಾರ್ಯಪ್ರವೃತ್ತರಾದ ನೂತನ ಕಾರ್ಯ ಪಡೆ 31 ಎಕರೆ ತೆರವು ಕಾರ್ಯಾಚರಣೆ ಪ್ರಾರಂಭಿಸಿದೆ. ಚಿಕ್ಕಮಗಳೂರು ಜಿಲ್ಲೆ ಕೊಪ್ಪ ಹೋಬಳಿಯ ಮಾಗುಂಡಿ ಸರ್ವೇ ನಂ.29ರಲ್ಲಿ 17 ಎಕರೆ 17 ಗುಂಟೆ, ಹಲಸೂರು ಸರ್ವೇ ನಂ.55ರಲ್ಲಿ 13 ಎಕರೆ 38 ಗುಂಟೆ ಹಾಗೂ ತನುಡಿ ಸರ್ವೇ ನಂ. 9, 21, 22,23, 72ಮತ್ತು 97ರಲ್ಲಿ ಒಟ್ಟು 36 ಎಕರೆ ಸೇರಿ ಒಟ್ಟು 69 ಎಕರೆ ಅರಣ್ಯ ಭೂಮಿ ಒತ್ತುವರಿಯನ್ನು ತೆರವು ಮಾಡಿಸಲಾಗುತ್ತಿದೆ.

ಸಿಸಿಬಿ ಇನ್ಸ್‌ಪೆಕ್ಟರ್ ತಿಮ್ಮೇಗೌಡ ಆತ್ಮಹತ್ಯೆ

ಬೆಂಗಳೂರು: ಸಿಸಿಬಿಯ ಆರ್ಥಿಕ ಅಪರಾಧ ಪತ್ತೆದಳ ವಿಭಾಗ ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ದ ತಿಮ್ಮೇಗೌಡ ಅವರು ರಾಮನಗರ ಜಿಲ್ಲೆ ಬಿಡದಿಯ ನಿರ್ಜನ ಪ್ರದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನೇಣು ಬಿಗಿದ ಸ್ಥಿತಿಯಲ್ಲಿ ಅವರ ಶವ ದೊರೆತಿದೆ. ಗ್ರಾಮೀಣ ಕೃಪಾಂಕದಲ್ಲಿ ಆಯ್ಕೆ ಯಾಗಿದ್ದ ತಿಮ್ಮೇಗೌಡ ಚುನಾವಣೆ ಸಂದರ್ಭದಲ್ಲಿ ಬಿಡದಿಯಿಂದ ಅತ್ತಿಬೆಲೆಗೆ ವರ್ಗಾವಣೆಯಾಗಿದ್ದರು.

3ನೇ ದಿನಕ್ಕೆ ಕಾಲಿಟ್ಟ ಪಾದಯಾತ್ರೆ ರಾಜಕೀಯ

ಮುಂದುವರಿದ ಯಾತ್ರಾ ಸಮರ

ಬೆಂಗಳೂರು: ರಾಜ್ಯ ಸರಕಾರದ ವಿರುದ್ಧ ಸಮರ ಸಾರಿರುವ ದೋಸ್ತಿಗಳ ಪಾದಯಾತ್ರೆ ಹಾಗೂ ದೋಸ್ತಿಗಳ ವಿರುದ್ಧ ಕಾಂಗ್ರೆಸ್ ಜನಾಂದೋಲನ ಯಾತ್ರೆ ದಿನದಿಂದ ದಿನಕ್ಕೆ ಕಾವು ಪಡೆಯುತ್ತಿದ್ದು, ಆರೋಪ-ಪ್ರತ್ಯಾರೋಪಗಳು ಮುಂದುವರಿದಿದೆ. ದೋಸ್ತಿಗಳ ಪಾದಯಾತ್ರೆ ಮೂರನೇ ದಿನಕ್ಕೆ ಕಾಲಿಟ್ಟಿದ್ದು, ಕೆಂಗಲ್‌ನಲ್ಲಿ ಕೆಂಗಲ್ ಹನುಮಂತಯ್ಯ ಅವರ ಸಮಾಧಿಗೆ ಪುಷ್ಪನಮನ ಸಲ್ಲಿಸಿ ಆರಂಭಿಸಲಾಯಿತು. ಮೂರನೇ ದಿನದಾಂತ್ಯಕ್ಕೆ ಪಾದಯಾತ್ರೆ ನಿಡಘಟ್ಟಕ್ಕೆ ತಲುಪಿದೆ. ಇನ್ನೊಂದೆಡೆ ಮದ್ದೂರಿನಲ್ಲಿ ಕಾಂಗ್ರೆಸ್‌ನ ಜನಾಂದೋಲನ ಸಭೆ ನಡೆದಿದ್ದು, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಕುಮಾರಸ್ವಾಮಿ ಹಾಗೂ ಯಡಿಯೂರಪ್ಪ ಕುಟುಂಬದ ವಿರುದ್ಧ ಹರಿಹಾಯ್ದಿದ್ದಾರೆ.

ಡಿ.ಕೆ.ಶಿವಕುಮಾರ್ ಮಾತನಾಡಿ, ವಿಜಯೇಂದ್ರ, ಅಶೋಕ ಅವರೇ.., ಸುಮ್ಮನೆ ಪಾದಯಾತ್ರೆ ಮಾಡುವುದಲ್ಲ. ನಮ್ಮ ಪ್ರಶ್ನೆಗಳಿಗೆ ಉತ್ತರಕೊಟ್ಟು ಹೆಜ್ಜೆ ಹಾಕಿ. ಯಾವುದೇ ಕಾರಣಕ್ಕೂ ಸಿದ್ದರಾಮಯ್ಯರನ್ನು ಮುಟ್ಟುವುದು ನಿಮ್ಮ ಹಣೆಯಲ್ಲೇ ಬರೆದಿಲ್ಲ. → 4

- ಬಿಎಸ್‌ವೈ, ಎಚ್‌ಡಿಕೆ ಭಾಗಿ. ಪುತ್ರ ರತ್ನರ ಮುಂದಾಳತ್ವ, ಡಿಕೆ ವಿರುದ್ಧ ವಾಗ್ದಾಳಿ
- ಪಾದಯಾತ್ರೆ ವೇಳೆ ಹೃದಯಾಘಾತದಿಂದ ಬಿಜೆಪಿ ಕಾರ್ಯಕರ್ತೆ ಗೌರಮ್ಮ ಸಾವು

ಕನಕಪುರದ ಎಷ್ಟು ದಲಿತ ಕುಟುಂಬಗಳನ್ನು ಹಾಳು ಮಾಡಿದ್ದೀರಿ ನೀವು. ಆ ಜನ ಕಣ್ಣಲ್ಲಿ ನೀರು ಹಾಕಿದ್ದನ್ನು ನಾನು ನೋಡಿದ್ದೇನೆ. ಕುಮಾರಸ್ವಾಮಿ ರೈತನ ಮಗ ಅಲ್ಲ ಎಂದಿದ್ದಾರೆ. ಬಿಡದಿಗೆ ಬಂದು ನೋಡಿ. 20 ಟನ್ ಕೊಬ್ಬರಿ ಬೆಳೆದಿದ್ದೇನೆ. ತೆಂಗು, ಬಾಳೆ, ಅಡಕೆಯಲ್ಲಿ 50 ಲಕ್ಷ ರು. ರೈತನಾಗಿ ಸಂಪಾದನೆ ಮಾಡಿದ್ದೇನೆ. ನಿಮ್ಮಿಂದ ಇದು ಸಾಧ್ಯವೇ?
- ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ಶಿವಕುಮಾರ್ ಅಪ್ಪ ಅಮ್ಮನಿಗೆ ಹುಟ್ಟಿಲ್ಲ ಎಂದು ಹೇಳಿದ್ದ ಕುಮಾರಸ್ವಾಮಿ ಸಾತನೂರಿಗೆ ಬಂದು ಕ್ಷಮೆ ಕೇಳಿದ್ದ. ಅಂದೇ ಯಾರಿಗೂ ಹೆದರದ ದೊಡ್ಡ ಆಲಹಳ್ಳಿ ಕೆಂಪೇಗೌಡರ ಮಗನಾದ ನಾನು ಇಂದು ಹೆದರುತ್ತೇನೆಯೆ? ನಿಮ್ಮ ಪಾದಯಾತ್ರೆಗಳಿಗೆಲ್ಲ ಹೆದರುವ ಮಗ ನಾನಲ್ಲ.
- ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ದೆಹಲಿ ಭೇಟಿ ವೇಳೆ ವಿಜಯೇಂದ್ರ ಪ್ರಸ್ತಾಪ

ಯತ್ನಾಳ್ ವಿರುದ್ಧ ಕ್ರಮ?

ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ವಿರುದ್ಧ ನಿತ್ಯ ಕಿಡಿಕಾರುವ ಬಿಜೆಪಿಯ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಶಿಸ್ತು ಕ್ರಮ ವಹಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.



ಯಡಿಯೂರಪ್ಪ ಅವರು ಸಿಎಂಯಾಗಿದ್ದಾಗಿನಿಂದಲೂ ನಿರಂತರವಾಗಿ ವಾಗ್ದಾಳಿ ನಡೆಸುತ್ತಿರುವ ಯತ್ನಾಳ್ ಹೇಳಿಕೆ ಇದೀಗ ಬಿಜೆಪಿಗೆ ತಿರುಗುಬಾಣವಾಗುತ್ತಿದೆ. ಕಾಂಗ್ರೆಸ್‌ನ ಹಲವು ನಾಯಕರು, ಯತ್ನಾಳ್ ನೀಡಿರುವ ಹೇಳಿಕೆಗಳನ್ನೇ ಮುಂದಿಟ್ಟುಕೊಂಡು ಬಿಜೆಪಿ ವಿರುದ್ಧ ಟೀಕಾಪ್ರಹಾರ ನಡೆಸುತ್ತಿದ್ದಾರೆ. ಪಕ್ಷಕ್ಕಾಗುತ್ತಿರುವ ಮುಜುಗರವನ್ನು ತಪ್ಪಿಸಲು ಪಕ್ಷದ ವರಿಷ್ಠರು ಶಿಸ್ತು ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ. ಈಗಾಗಲೇ ಲೋಕಸಭಾ ಚುನಾವಣೆ ಮುಕ್ತಾಯವಾಗಿದ್ದು, ಸದ್ಯ ಯಾವುದೇ ಚುನಾವಣೆಗಳಿಲ್ಲ. → 4

ಹೈಕೋರ್ಟ್‌ಗೆ ರಾಜ್ಯ ಸರಕಾರ ಮಾಹಿತಿ

ಶಿರೂರು: 11 ಮಂದಿ ಕಾಣೆ

ಬೆಂಗಳೂರು: ಶಿರೂರು ಗುಡ್ಡ ಕುಸಿತ ಘಟನೆ ಯಲ್ಲಿ 11 ಮಂದಿ ಕಣ್ಮರೆಯಾಗಿದ್ದು, ಅವರಲ್ಲಿ 8 ಜನರ ಮೃತದೇಹಗಳು ಪತ್ತೆಯಾಗಿವೆ. ಇನ್ನುಳಿದ ಮೂವರ ಪತ್ತೆ ಹಚ್ಚುವ ಕಾರ್ಯ ಮುಂದುವರಿದಿದೆ ಎಂದು ಸರಕಾರ ಹೈಕೋರ್ಟ್‌ಗೆ ತಿಳಿಸಿದೆ. ಭೂ ಕುಸಿತದಿಂದ ಮಣ್ಣಿನಡಿ ಸಿಲುಕಿರುವ ಜನರ ರಕ್ಷಣೆ ಹಾಗೂ ಪತ್ತೆ, ಹೆದ್ದಾರಿಯಲ್ಲಿ ಬಿದ್ದಿರುವ ಕಲ್ಲು-ಮಣ್ಣು ತೆರವು ಗೊಳಿಸಲು 24 ಗಂಟೆಗಳ ನಿರಂತರವಾಗಿ ಸಾಧ್ಯವಿರುವ ಎಲ್ಲ ಕ್ರಮ ಜರುಗಿಸಬೇಕು. ಸೇನಾಪಡೆಗಳನ್ನು ನಿಯೋಜಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಕ್ಕೆ ನಿರ್ದೇಶಿಸಬೇಕೆಂದು ಕೋರಿ ವಕೀಲ ಸಿ.ಜಿ.ಮಲ್ಯೆಯಿಲ್ ಮತ್ತು ಕೆ.ಎಸ್. ಸುಭಾಷ್ ಚಂದ್ರ ಪಿಐಎಲ್ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಮುಖ್ಯ ನ್ಯಾ.ಎನ್.ವಿ.ಅಂಜಾರಿಯಾ, ನ್ಯಾ.ಕೆ.ವಿ.ಅರವಿಂದ್ ವಿಭಾಗೀಯ ಪೀಠಕ್ಕೆ ಅಡ್ವೋಕೇಟ್ ಜನರಲ್ ಶಶಿಕಿರಣ್ ಮಾಹಿತಿ ನೀಡಿದರು.

ಪ್ರವಾಹಪೀಡಿತ ಪ್ರದೇಶಗಳಿಗೆ ಸಿಎಂ ಸಿದ್ದರಾಮಯ್ಯ ಭೇಟಿ ನೀಡಿ ಬೆಳೆಹಾನಿ ಪ್ರದೇಶಗಳು ಹಾಗೂ ಊರೊಳಗೆ ನೀರು ನುಗ್ಗಿರುವ ಪ್ರದೇಶಗಳನ್ನು ಪರಿಶೀಲಿಸಿ ಪರಿಹಾರ ಕಾರ್ಯಗಳಿಗೆ ಸೂಚಿಸಿದರು.

ಬೆಳಗಾವಿ: ನೆರೆಪೀಡಿತ ಪ್ರದೇಶಗಳಿಗೆ ಸಿಎಂ ಭೇಟಿ

ಸಂತ್ರಸ್ತರಿಗೆ 1.2 ಲಕ್ಷ, ಮನೆ

ಬೆಳಗಾವಿ: ಮಳೆಯಿಂದ ಸಂಪೂರ್ಣ ಮನೆ ಹಾನಿ ಸಂಭವಿಸಿದ ಸಂತ್ರಸ್ತರಿಗೆ ತಲಾ ₹1.2 ಲಕ್ಷ, ಭಾಗಶಃ ಹಾನಿಯಾಗಿದ್ದರೆ ₹50 ಸಾವಿರ ಪರಿಹಾರ ನೀಡಲಾಗುವುದು. ಇದಲ್ಲದೇ ಸಂತ್ರಸ್ತರಿಗೆ ವಸತಿ ಯೋಜನೆಗಳಡಿ ಮನೆ ಕೂಡ ನಿರ್ಮಾಣ ಮಾಡಿ ಕೊಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪ್ರವಾಹ ಪೀಡಿತ ಸ್ಥಳಗಳಿಗೆ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಪದೇ ಪದೆ ನೆರೆಗೆ ಸಿಲುಕುವ ಸಂತ್ರಸ್ತರು ಸ್ಥಳಾಂತರಕ್ಕೆ ಒಪ್ಪಿದರೆ ಬೇರೆ ಕಡೆ ಮನೆ ಕಟ್ಟಿಸಿಕೊಡುತ್ತೇವೆ. ಇಲ್ಲವಾದರೆ ಹಳೆ ಮನೆ ಬಿದ್ದ ಜಾಗದಲ್ಲೇ ಕಟ್ಟಿ ಕೊಡುತ್ತೇವೆ. ವಸತಿ ಯೋಜನೆ ಅಡಿ ಅರ್ಜಿ ಹಾಕುವುದು ಕಡ್ಡಾಯ ಎಂದರು.

ಕಾನೂನು ತಜ್ಞರ ಸಲಹೆ ಪಡೆದಿರುವ ಗೆಹ್ಲೋಟ್

ಪರಿಶೀಲನೆಗೆ ಮುಂದಾದ ರಾಜ್ಯಪಾಲ

ಬೆಂಗಳೂರು: ದೆಹಲಿ ಪ್ರವಾಸ ಮುಗಿಸಿಕೊಂಡು ವಾಪಸಾಗಿರುವ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಸಂಪುಟದ ನಿರ್ಣಯ ತಲುಪಿದ್ದು, ಯಾವುದೇ ತೀರ್ಮಾನ ಕೈಗೊಳ್ಳುವ ಮೊದಲು ಮತ್ತೊಮ್ಮೆ ಪರಿಶೀಲಿಸಲು ಮುಂದಾಗಿದ್ದಾರೆ.

ಸಿಎಂಗೆ ನೀಡಿರುವ ನೋಟಿಸ್ ಹಿಂಪಡೆಯುವುದರೊಂದಿಗೆ ಟಿ.ಜೆ. ಅಬ್ರಹಾಂ ಸಲ್ಲಿಸಿರುವ ದೂರನ್ನು ತಿರಸ್ಕರಿಸಬೇಕು ಎನ್ನುವ ವರದಿಯನ್ನು ಸಚಿವ ಸಂಪುಟ ಸಭೆ ರವಾನಿಸಿದೆ. ಈ ನಿರ್ಣಯದಂತೆ ನೋಟಿಸ್ ಹಿಂಪಡೆಯು ವರೋ ಅಥವಾ ಈ ಹಿಂದೆ ರಾಜ್ಯಪಾಲ ಹಂಸರಾಜ ಭಾರದ್ವಾಜ್ ರೀತಿ ಅಭಿಯೋಜನೆಗೆ ಒಪ್ಪಿಗೆ ನೀಡುವರೇ ಎನ್ನುವ ಕುತೂಹಲವಿತ್ತು. ಸೋಮವಾರ ಈ ಬಗ್ಗೆ ಅಂತಿಮ ತೀರ್ಮಾನ ರಾಜ್ಯಪಾಲರು ಕೈಗೊಳ್ಳಲಿದ್ದಾರೆ ಎಂದು ಹೇಳಲಾಗಿತ್ತು. → 4

ಅಮೆರಿಕದಲ್ಲಿ ಆರ್ಥಿಕ ಹಿಂಜರಿತ | ಇರಾನ್-ಇಸ್ರೇಲ್ ಯುದ್ಧ ಭೀತಿಯಿಂದ ಕುಸಿದ ಸೆನ್ಸೆಕ್ಸ್

ಕರಡಿ ಕುಣಿತ; ಷೇರುಪೇಟೆ ಧೂಳೀಪಟ

ಮುಂಬೈ: ದೇಶದ ಪ್ರಮುಖ ಷೇರುಪೇಟೆ ಮುಂಬೈ ಷೇರು ವಿನಿಮಯ ಕೇಂದ್ರದಲ್ಲಿ (ಬಿಎಸ್‌ಇ) ಸೋಮವಾರ ಸೂಚ್ಯಂಕಗಳಲ್ಲಿ ಭಾರೀ ಕುಸಿತವಾಗಿದ್ದು, ಹೂಡಿಕೆದಾರರ ಸಂಪತ್ತು 17.03 ಲಕ್ಷ ಕೋಟಿ ರು.ಗಳಷ್ಟು ನಷ್ಟವಾಗಿದೆ. ಒಂದೇ ದಿನದಲ್ಲಾದ ಈ ಪರಿಯ ನಷ್ಟದಿಂದ ಷೇರುಗಳ ಮೇಲೆ ಹಣ ಹೂಡಿದ್ದವರು ಅಕ್ಷರಶಃ ತತ್ತರಿಸಿದ್ದಾರೆ.

ಅಮೆರಿಕ ಆರ್ಥಿಕತೆ ಹಿಂಜರಿತ ಕಾಣಬಹುದು, ಅಮೆರಿಕದ ಕಾರ್ಮಿಕ ಮಾರುಕಟ್ಟೆಯಲ್ಲಿ 2.49 ಲಕ್ಷ ಉದ್ಯೋಗ ನಷ್ಟವಾಗಬಹುದು ಎಂಬ ಆರ್ಥಿಕ ಸಮೀಕ್ಷೆಯ ಮಾಹಿತಿ ಹೊರಬಿದ್ದ ಪರಿಣಾಮ ಭಾರತ ಸೇರಿದಂತೆ ವಿಶ್ವದ ವಿವಿಧೆಡೆಯ ಷೇರುಪೇಟೆಗಳಲ್ಲಿ ಭಾರಿ ಪಲ್ಲಟವಾಗಿದೆ. ಮುಂಬೈ ಷೇರು ಪೇಟೆಯ ಸಂವೇದಿ ಸೂಚ್ಯಂಕ(ಸೆನ್ಸೆಕ್ಸ್) ಮತ್ತು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದ(ಎನ್‌ಎಸ್‌ಸಿ) ಸೂಚ್ಯಂಕ (ನಿಫ್ಟಿ) ಸೋಮವಾರದ ವಹಿವಾಟಿನಲ್ಲಿ 2 ಸಲ ಭಾರೀ ಕುಸಿತ ಕಂಡವು. ಸೆನ್ಸೆಕ್ಸ್ 2,037 ಅಂಕ ನಷ್ಟ ಅನುಭವಿಸಿ 78,944 ಅಂಶಗಳಿಗೂ, ನಿಫ್ಟಿ 661 ಅಂಕ ಕಳೆದುಕೊಂಡು 24,056 ಅಂಶಗಳಿಗೂ ಕುಸಿದಿವೆ. ಪರಿಣಾಮ, 457.16 ಲಕ್ಷ ಕೋಟಿ ರು.ಗಳಷ್ಟಿದ್ದ ಮುಂಬೈ ಷೇರುಪೇಟೆಯ ಮಾರುಕಟ್ಟೆ ಮೌಲ್ಯ 440.13 ಲಕ್ಷ ಕೋಟಿ ರು.ಗೆ ಕುಸಿದಿದೆ. ಏಷ್ಯಾ, ಯುರೋಪ್ ಷೇರುಪೇಟೆಯಲ್ಲೂ ಕುಸಿತವಾಗಿದೆ. ಅಮೆರಿಕದ ಷೇರುಪೇಟೆಯಲ್ಲಿನ ದುರ್ಬಲ ವಹಿವಾಟು ಏಷ್ಯಾ ಮತ್ತು ಯುರೋಪ್‌ನ ಮಾರುಕಟ್ಟೆಗಳ ಮೇಲೂ ನಕಾರಾತ್ಮಕ ಪರಿಣಾಮ ಬೀರಿದೆ.

ಇಳಿಕೆಗೆ ಕಾರಣವೇನು?

- ಅಮೆರಿಕದಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಳ
- ಅಮೆರಿಕ ಆರ್ಥಿಕ ಹಿಂಜರಿತದ ಊಹಾಪೋಹ ಸೃಷ್ಟಿ
- ಬ್ಯಾಂಕ್ ಆಫ್ ಜಪಾನ್‌ನ ಬಡ್ಡಿ ದರ ಏರಿಕೆ
- ಜಪಾನ್ನ ಷೇರು ಸೂಚ್ಯಂಕ ಕುಸಿತ
- ಎಫ್‌ಐಐಗಳು ಭಾರತದ ಷೇರು ಮಾರಾಟ ಮಾಡಿದ್ದು
- ದೇಶದ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದು

ಯಾವ್ಯಾವ ಷೇರು ಕುಸಿತ

ಟಾಟಾ ಮೋಟಾರ್ಸ್, ಅದಾನಿ ಪೋರ್ಟ್ಸ್, ಮಹೀಂದ್ರಾ ಮಹೀಂದ್ರಾ, ಎಸ್‌ಬಿಐ, ಜೆಎಸ್‌ಡಬ್ಲ್ಯು ಸ್ಟೀಲ್ ಮತ್ತು ಟೈಟಾನ್ ಮೊದಲಾದ ಪ್ರಮುಖ ಷೇರುಗಳ ಸೂಚ್ಯಂಕ ಶೇ.5.04ರವರೆಗೂ ಕುಸಿದಿವೆ. ಸಂವೇದಿ ಸೂಚ್ಯಂಕದ 30 ಪ್ರಮುಖ ಷೇರುಗಳಲ್ಲಿ 28 ಷೇರು ನಷ್ಟದಲ್ಲಿ ವಹಿವಾಟು ನಡೆಸಿವೆ. 'ಎನ್‌ಎಸ್‌ಇ'ಯಲ್ಲಿಯೂ ನಿಫ್ಟಿಯ 46 ಪ್ರಮುಖ ಷೇರುಗಳು ಕುಸಿತ ಕಂಡು ನಷ್ಟದಲ್ಲಿ ವಹಿವಾಟಾಗಿವೆ. ನಿಫ್ಟಿಯಲ್ಲಿ ಟಾಟಾ ಮೋಟಾರ್ಸ್, ಹಿಂಡಾಲ್ಕೊ, ಒಎನ್‌ಜಿಸಿ, ಶ್ರೀರಾಮ್ ಫೈನಾನ್ಸ್ ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್ ಗರಿಷ್ಠ ನಷ್ಟ ಅನುಭವಿಸಿವೆ. ಆರಂಭಿಕ ವ್ಯವಹಾರದಲ್ಲೇ ಶೇ.4.37ರಷ್ಟು ಕುಸಿತ ಕಂಡವು.

ಜಮ್ಮು-ಕಾಶ್ಮೀರ ಹೈಅಲರ್ಟ್ | ಅಮರನಾಥ ಯಾತ್ರೆಗೆ ತಡೆ

370 ವಿಧಿ ರದ್ದಾಗಿ 5 ವರ್ಷ

ಶ್ರೀನಗರ: ಭೂಮಿಯ ಮೇಲಿನ ಸ್ವರ್ಗ ಎಂದೇ ಕರೆಸಿಕೊಳ್ಳುತ್ತಿದ್ದ 'ಜಮ್ಮು ಮತ್ತು ಕಾಶ್ಮೀರ' ದಶಕಗಳ ಕಾಲ ಅಭಿವೃದ್ಧಿಯಿಂದ ದೂರವಿರಲು ಕಾರಣವಾಗಿದ್ದ 'ವಿಧಿ 370 ಮತ್ತು ವಿಧಿ 35ಎ' ಎರಡೂ ರದ್ದುಗೊಂಡು ಇದೇ ಆ.5ಕ್ಕೆ 5 ವರ್ಷ ಸಂದಿವೆ.

ಈ ಸಂದರ್ಭವನ್ನು ಬಿಜೆಪಿಯ ಜಮ್ಮು-ಕಾಶ್ಮೀರ ಘಟಕ ಸಂಭ್ರಮಿಸಿದೆ. 'ಏಕಾತ್ಮ ಮಹೋತ್ಸವ್' ರ್‍ಯಾಲಿ ನಡೆಸಿದೆ. ಆದರೆ, ಕಾಂಗ್ರೆಸ್ ಪಕ್ಷ 'ಇತಿಹಾಸದ ಕಪ್ಪುದಿನ' ಎಂದು ಕರೆದು ಸಂಭ್ರಮಾಚರಣೆಯನ್ನು ಖಂಡಿಸಿದೆ.

ಕಣಿವೆ ರಾಜ್ಯದಲ್ಲಿನ ಸಂಭ್ರಮಕ್ಕೆ ಅಡ್ಡಿಯಾಗಲು ಪಾಕ್ ಬೆಂಬಲಿತ ಭಯೋತ್ಪಾದಕರ ಚಟುವಟಿಕೆ ಹೆಚ್ಚುವ ಸಾಧ್ಯತೆ ಇರುವುದರಿಂದ ಜಮ್ಮು-ಕಾಶ್ಮೀರಕ್ಕೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ. 2019ರ ಆಗಸ್ಟ್ 5ರಂದು ಮೋದಿ ನೇತೃತ್ವದ ಕೇಂದ್ರ ಸರಕಾರವು ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದಿತ್ತು.

ಐತಿಹಾಸಿಕ ಕ್ಷಣ: ಮೋದಿ

ಸಂವಿಧಾನದ 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದಿದ್ದು, ದೇಶದ ಐತಿಹಾಸಿಕ ಕ್ಷಣ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಜಮ್ಮು ಮತ್ತು ಕಾಶ್ಮೀರ, ಲಡಾಖ್‌ನ ಜನರಿಗಾಗಿ ನಮ್ಮ ಸರಕಾರವು ಕೆಲಸ ಮಾಡುತ್ತದೆ. ಮುಂಬರುವ ದಿನಗಳಲ್ಲಿ ಅವರ ಆಕಾಂಕ್ಷೆಗಳನ್ನು ಪೂರೈಸುವ ನಿಟ್ಟಿನಲ್ಲಿ ಕ್ರಮವಹಿಸುತ್ತೇವೆ ಎಂದು ಭರವಸೆ ನೀಡಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ದೂರ ಸರಿಯುತ್ತಿರುವ ಚಂದ್ರ, ಇನ್ಮುಂದೆ ದಿನಕ್ಕೆ 24 ಗಂಟೆ ಅಲ್ಲ, 25 ಗಂಟೆ! ಸುದ್ದಿ

ಸಮಾಚಾರ ಸಣ್ಣದಲ್ಲ

ಆನೆ ದಾಳಿ: ಗಾಯಾಳು ವೃದ್ಧೆಯ ಸಾವು

ಕೋಲಾರ: ಕಾಡಾನೆ ದಾಳಿಯಿಂದ ಗಾಯ ಗೊಂಡಿದ್ದ ವೃದ್ಧೆ ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ್ದಾರೆ. ಭಾನುವಾರ ಸಂಜೆ ಬಂಗಾರಪೇಟೆ ತಾಲ್ಲೂಕಿನ

ಚತ್ತಗುಟ್ಟಹಳ್ಳಿ ಗ್ರಾಮದ ಬಳಿ ಒಂಟಿ ಸಲಗ ದಾಳಿ ನಡೆಸಿತ್ತು. ಕುರಿ ಮೇಯಿಸುತ್ತಿದ್ದ 80 ವರ್ಷದ ರಾಧಾಬಾಯಿ ಅವರ ಕೈ ಹಾಗೂ ತಲೆಗೆ ಗಂಭೀರ ಗಾಯಗಳಾಗಿತ್ತು. ಅರಣ್ಯ ಇಲಾಖೆ ಸಿಬ್ಬಂದಿ ರಾಧಾಬಾಯಿ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಕೋಲಾ ರದ ಜಾಲಪ್ಪ ಆಸ್ಪತ್ರೆಗೆ ದಾಖಲಿಸಿದ್ದರು. ಡಿಎಫ್‌ಒ ಏಡುಕೊಂಡಲು ಭೇಟಿ ನೀಡಿ, ಮೃತ ವೃದ್ಧೆಯ ಕುಟುಂಬಕ್ಕೆ ಇಲಾಖೆಯಿಂದ ನೀಡಬಹುದಾದ ಪರಿಹಾರದ ಭರವಸೆ ನೀಡಿದ್ದಾರೆ. ಕಾಮಸಮುದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿವೈಡರ್‌ಗೆ ಬೈಕ್ ಡಿಕ್ಕಿ ಇಬ್ಬರು ಸಾವು

ಮಡಿಕೇರಿ: ಮಡಿಕೇರಿ-ಮಾಣಿ ರಾ.ಹೆದ್ದಾರಿ 275ರ ಕೊಯನಾಡಿನ ಅರಣ್ಯ ಇಲಾಖೆಯ ಪ್ರವಾಸಿ ಮಂದಿರ ಬಳಿ ಬೈಕ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಮೈಸೂರಿನ ಇಬ್ಬರು ಯುವಕರು ದಾರುಣವಾಗಿ ಮೃತಪಟ್ಟ ಘಟನೆ ಭಾನುವಾರ ತಡ ರಾತ್ರಿ ನಡೆದಿದೆ. ಸೋಮವಾರ ಬೆಳಗಿನ ವೇಳೆ ಈ ದುರ್ಘಟನೆ ಸ್ಥಳೀಯರ ಗಮನಕ್ಕೆ ಬಂದಿದ್ದು, ರಾಯಲ್ ಎನ್‌ಫೀಲ್ಡ್ ಬೈಕ್ ಜತೆ ಇಬ್ಬರು ಯುವಕರ ಮೃತದೇಹ ಚರಂಡಿಯಲ್ಲಿ ಪತ್ತೆಯಾಗಿದೆ. ಮೈಸೂರು ಮೂಲದ ಪವನ್ ಮತ್ತು ಮನೋಜ್ ಮೃತ ದುರ್ದೈವಿಗಳು. ಇವರು ಧರ್ಮಸ್ಥಳ ಕಡೆಗೆ ಪ್ರಯಾಣ ಬೆಳೆಸಿದ್ದು, ಕೊಯನಾಡಿನ ಫಾರೆಸ್ಟ್ ಐ.ಬಿ ಮುಂಭಾಗದ ಹೆದ್ದಾರಿಯಲ್ಲಿ ಹೋಗುತ್ತಿದ್ದಾಗ ಬದಿಯಲ್ಲಿದ್ದ ಡಿವೈಡರ್‌ಗೆ ಬೈಕ್ ಡಿಕ್ಕಿ ಹೊಡೆದಿದ್ದು, ಸ್ಥಳದಲೇ ಮೃತಪಟ್ಟಿದ್ದಾರೆ. ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ಮಡಿಕೇರಿ ಗ್ರಾಮಾಂತರ ಪೊಲೀಸರು ಸ್ಥಳ ಮಹಜರು ನಡೆಸಿದರು. ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಂಗಲ್‌ನಿಂದ ಹೊರಟ ಬಿಜೆಪಿ-ಜೆಡಿಎಸ್ 3ನೇ ದಿನದ ಪಾದಯಾತ್ರೆ

ಪಾದಯಾತ್ರೆ: ಮುಂದುವರಿದ ವಾಕ್ಸಮರ

ಪಾದಯಾತ್ರೆಯಲ್ಲಿ ಪಾಲ್ಗೊಂಡ ಜೆಡಿಎಸ್-ಬಿಜೆಪಿ ನಾಯಕರ ದಂಡು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಹಗರಣವನ್ನು ಮುಂದಿಟ್ಟುಕೊಂಡು ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ -ಜೆಡಿಎಸ್‌ನ ಮೂರನೇ ದಿನದ ಮೈಸೂರು ಚಲೋ ಪಾದಯಾತ್ರೆ ಕೆಂಗಲ್‌ನಿಂದ ನಿಡಘಟ್ಟಕ್ಕೆ ಬಂದು ತಲುಪಿದೆ.

ಕೇಂದ್ರ ಸಚಿವ ಕುಮಾರಸ್ವಾಮಿ ಸುಮಾರು ಮೂರು ಕಿಮೀಗೂ ಹೆಚ್ಚು ದೂರ ಪಾದಯಾತ್ರೆಯಲ್ಲಿ ಪಾಲ್ಗೊಂಡು ನಂತರ ಚನ್ನಪಟ್ಟಣದ ಬಹಿರಂಗ ಸಭೆಯಲ್ಲಿ ಭಾಗವಹಿಸಿದ್ದರು. ಬಳಿಕ ಚನ್ನಪಟ್ಟಣದಲ್ಲಿ ಬಹಿರಂಗ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ಮುಂದುವರಿಸಿದ ಕುಮಾರಸ್ವಾಮಿ, ಸದಾಶಿವನಗರದಲ್ಲಿ ಐವರು ವಿಧವಾ ತಾಯಂದಿರಿಗೆ ಸಂಪೂರ್ಣ ಹಣ ನೀಡದೆ ಸೇಲ್ ಅಗ್ರಿಮೆಂಟ್ ಮಾಡಿಕೊಂಡು, ಸಚಿವರಾದ ನಂತರ ರಾತ್ರೋರಾತ್ರಿ ಕರೆಸಿ ಹೆದರಿಸಿ, ಬೆದರಿಸಿ ಸೇಲ್ ಅಗ್ರಿಮೆಂಟಿಗೆ ರುಜು ಹಾಕಿಸಿಕೊಂಡಿದ್ದಂತಹ ವ್ಯಕ್ತಿ ದೇವೇಗೌಡರ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ಮಾಡಿರುವ ಅನಾಚಾರ, ಅಕ್ರಮಗಳ ಬಗ್ಗೆ ನೊಣವಿನಕೆರೆ ಅಜ್ಜಯ್ಯನ ಮುಂದೆ ಆಗಲಿ. ನಾಡದೇವತೆ ತಾಯಿ ಚಾಮುಂಡೇಶ್ವರಿ ಅಮ್ಮನ ಮುಂದೆ ಆಗಲಿ ಪ್ರಮಾಣ ಮಾಡೋಣ. ನೀವೇ ವಿಧಾನಸೌಧಕ್ಕೆ ಬನ್ನಿ ಎಂದು ಕರೆದಿದ್ದಿರಲ್ಲ. ಅಲ್ಲಿಗೂ ಬರಲು ನಾನು ತಯಾರಿದ್ದೇನೆ. ಬನ್ನಿ ಚರ್ಚೆ ಮಾಡೋಣ ಎಂದು ಸವಾಲು ಹಾಕಿದರು.

ರೈತನಾಗಿ 50 ಲಕ್ಷ ಸಂಪಾದನೆ: ಕನಕಪುರದ ಎಷ್ಟು ದಲಿತ ಕುಟುಂಬಗಳ ಹಾಳು ಮಾಡಿದ್ದೀರಿ ನೀವು. ಆ ಜನ ಕಣ್ಣಲ್ಲಿ ನೀರು ಹಾಕಿದ್ದನ್ನು ನಾನು ನೋಡಿದ್ದೇನೆ. ಕುಮಾರಸ್ವಾಮಿ ರೈತನ ಮಗ ಅಲ್ಲ ಎಂದಿದ್ದಾರೆ ಅವರು. ಫ್ಯಾಂಟ್ ತೆಗೆದು ಪಂಚೆ ಹಾಕಿದ್ರೆ ರೈತ ಅಲ್ಲ ಎಂದು ಹೇಳಿದ್ದಾರೆ. ಬನ್ನಿ, ಬಿಡದಿಗೆ ಬಂದು ನೋಡಿ. 20 ಟನ್ ಕೊಬ್ಬರಿ ಬೆಳೆದಿದ್ದೇನೆ. ತೆಂಗು, ಬಾಳೆ, ಅಡಕೆಯಲ್ಲಿ 50 ಲಕ್ಷ ರುಪಾಯಿ ರೈತನಾಗಿ ಸಂಪಾದನೆ ಮಾಡಿದ್ದೇನೆ. ನಿಮ್ಮಿಂದ ಇದು ಸಾಧ್ಯವೇ? ಎಂದು ಟಾಂಗ್ ನೀಡಿದ್ದಾರೆ.

ಅಭಿವೃದ್ಧಿ ಶೂನ್ಯ, ಲೂಟಿ ಹೊಡೆಯುವ ಸರಕಾರ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ವಯನಾಡಿನಲ್ಲಿ ನೂರಾರು ಜನರು ಪ್ರಾಣ ಕಳೆದುಕೊಂಡಿದ್ದು, ಈ ಸಂಬಂಧ ಮುಖ್ಯಮಂತ್ರಿಗಳು 100 ಮನೆಗಳನ್ನು ಘೋಷಿಸಿದ್ದಾರೆ. ಇದು ತಪ್ಪೇನಲ್ಲ, ಒಳ್ಳೆಯ ಕ್ರಮವೇ ಆದರೆ, ಮುಖ್ಯಮಂತ್ರಿಗಳಿಗೆ ಶಕ್ತಿ ನೀಡಿದ ಮೈಸೂರು ಜಿಲ್ಲೆಯಲ್ಲಿ ಲಕ್ಷಾಂತರ ಬಡವರು, ನಿರ್ಗತಿಕರು ಸಲ್ಲಿಸಿದ ನಿವೇಶನಕ್ಕೆ ಸಂಬಂಧಿಸಿದ ಅರ್ಜಿಗಳು ಹಾಗೇ ಬಿದ್ದಿವೆ. ಇದರ ಬಗ್ಗೆ ಮುಖ್ಯಮಂತ್ರಿಗಳು ತಲೆ ಕೆಡಿಸಿಕೊಳ್ಳುತ್ತಿಲ್ಲ. ಜನರು ಈ ಸರಕಾರ ಮತ್ತು ಸಿದ್ದರಾಮಯ್ಯ ಅವರಿಗೆ ಶಾಪ ಹಾಕುತ್ತಿದ್ದಾರೆ ಎಂದು ತಿಳಿಸಿದರು.

ಜಮೀರ್‌ನನ್ನು ಮೆಕ್ಕಾದ ದೇವರು ನೋಡಿಕೊಳ್ಳುತ್ತಾನೆ

ನನ್ನ ಪ್ಯಾಂಟ್ ಒಳಗೆ ಖಾಕಿ ಚಡ್ಡಿಯಿದೆ ಎಂದಿರುವ ಜಮೀರ್ ನನ್ನ ಜತೆ ಇದ್ದಾಗ ಅವರ ತಾಯಿ ಹೆಸರಿನಲ್ಲಿ ಯಾವ ರೀತಿ ಪ್ರಮಾಣ ಮಾಡಿದ್ದಾರೆ ಎಂಬುದು ಗೊತ್ತಿದೆ. ಮೆಕ್ಕಾದಲ್ಲಿರುವ ದೇವರೇ ಅವರನ್ನು ನೋಡಿಕೊಳ್ಳಲಿದೆ ಎಂದು ನಂಬಿದ್ದೇನೆ. ನನ್ನ ಆಸ್ತಿ ಬಗ್ಗೆ ಮಾತನಾಡುತ್ತಿದ್ದು, ಇವರ ಆಸ್ತಿ ಎಷ್ಟು ಎನ್ನುವುದು ಗೊತ್ತಾ? ಈ ವ್ಯಕ್ತಿಯ ಆಸ್ತಿ ಎರಡು ಸಾವಿರ ಪಟ್ಟು ಹೆಚ್ಚಾಗಿದೆ. ಕೇಂದ್ರ ತನಿಖಾ ಸಂಸ್ಥೆ ಅದಕ್ಕೆ ನೋಟಿಸ್ ಕೊಟ್ಟಿದೆ. ಅವರಿಗೆ ಕೊಟ್ಟಂತೆಯೇ ನನಗೆ ಯಾರೂ ನೋಟಿಸ್ ಕೊಟ್ಟಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟಾಂಗ್ ನೀಡಿದ್ದಾರೆ.

ಚನ್ನಪಟ್ಟಣವನ್ನು ಉದ್ಧಾರ ಮಾಡಿರೋದು ಇಲ್ಲಿನ ಜನರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಇಲ್ಲಿನ ಮತ್ತಿಕೆರೆ ಬಳಿ ಕಲ್ಲು ಗೋಡೌನ್ ಇದೆ. ಅಲ್ಲಿ ಹೋಗಿ ನೋಡಿ, ಎಷ್ಟು ಕಲ್ಲುಗಳನ್ನು ತಂದು ಇಲ್ಲಿ ಗುಡ್ಡೆ ಹಾಕ್ತಿದ್ದೀರಿ? ಎಲ್ಲೆಲ್ಲಿಗೆ ಕಳಿಸುತ್ತಿದ್ದೀರಿ? ನನಗೆ ಗೊತ್ತಿಲ್ಲದ ವಿಷಯವೇ? ಎಂದು ಕಲ್ಲು ಗೋದಾಮುಗಳ ಫೋಟೋಗಳನ್ನು ತೋರಿಸಿ, ಇದಕ್ಕೆ ಉತ್ತರ ಕೊಡಪ್ಪಾ?

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಕಾಂಗ್ರೆಸ್ಸಿಗೆ ಬೆದರಿಕೆ ಹಾಕಲು ನಾವ್ಯಾರು? 136 ಶಾಸಕರಿದ್ದಾರೆ. ಸರಕಾರದ ಅಸ್ಥಿರತೆ ಕುರಿತು ಮುಖ್ಯಮಂತ್ರಿಗಳಿಗೆ ಅನಿಸಿದ್ದರೆ ಎಲ್ಲೋ ಒಂದೆಡೆ ಅವರು ಸೋಲನ್ನು ಒಪ್ಪಿಕೊಂಡಿದ್ದಾರೆ. ಹಗರಣಗಳಲ್ಲಿ ಸರಕಾರ ಮುಳುಗಿದೆ. ತಾವೇನು ಮಾಡಬೇಕೆಂದು ತೋಚುತ್ತಿಲ್ಲ ಎಂದು ಸಿಎಂ ಅವರಿಗೆ ಮನವರಿಕೆ ಆಗಿದೆ. ನಾವು ಅವರನ್ನು ಬೆದರಿಸುವ ತಂತ್ರ ಮಾಡುತ್ತಿಲ್ಲ; ಒಂದು ಜವಾಬ್ದಾರಿಯುತ ವಿಪಕ್ಷವಾಗಿ ಈ ನಾಡಿನ ಜನತೆಗೆ ನ್ಯಾಯ ಕೊಡಿಸಲು ನಾವು ಮುಂದಾಗಿದ್ದೇವೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ ಡಿ.ಕೆ.ಶಿವಕುಮಾರ್ ಕಿಡಿ

ಏಕವಚನಕ್ಕೆ ಇಳಿದ ಮಾತಿನ ಸಮರ

ಮದ್ದೂರು: ನನ್ನ ಅಜ್ಜಯ್ಯನ ಸುದ್ದಿಗೆ ಬರಬೇಡ. ಅಜ್ಜಯ್ಯನ ಶಕ್ತಿ ಏನು ಎಂಬುದು ನಿನಗೇನು ಗೊತ್ತು? ಏತಕ್ಕೆ ಯಡಿಯೂರಪ್ಪ ಅವರನ್ನು ಜೈಲಿಗೆ ಕಳುಹಿಸಿದೆ? ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು.

ಜನಾಂದೋಲನ ಸಮಾವೇಶದಲ್ಲಿ ಮಾತನಾಡಿದ ಅವರು, ಶಿವಕುಮಾರ್ ಅಪ್ಪ ಅಮ್ಮನಿಗೆ ಹುಟ್ಟಿಲ್ಲ ಎಂದು ಹೇಳಿದ್ದ ಕುಮಾರಸ್ವಾಮಿ ಸಾತನೂರಿಗೆ ಬಂದು ಕ್ಷಮೆ ಕೇಳಿದ್ದ. ಅಂದೇ ಯಾರಿಗೂ ಹೆದರದ ದೊಡ್ಡ ಆಲಹಳ್ಳಿ ಕೆಂಪೇಗೌಡರ ಮಗನಾದ ನಾನು ಇಂದು ಹೆದರುತ್ತೇನೆಯೆ? ನಿಮ್ಮ ಪಾದಯಾತ್ರೆಗಳಿಗೆಲ್ಲ ಹೆದರುವ ಮಗ ನಾನಲ್ಲ ಎಂದು ತಿರುಗೇಟು ನೀಡಿದರು.

ಸುಮ್ಮನೆ ಪಾದಯಾತ್ರೆ ಮಾಡುವುದಲ್ಲ. ನಮ್ಮ ಪ್ರಶ್ನೆಗಳಿಗೆ ಉತ್ತರಕೊಟ್ಟು ಹೆಜ್ಜೆ ಹಾಕಿ. ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ಅವರನ್ನು ಮುಟ್ಟುವುದು ನಿಮ್ಮ ಹಣೆಯಲ್ಲೇ ಬರೆದಿಲ್ಲ. ಹಿಂದುಳಿದ ವರ್ಗದ ನಾಯಕ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾರೆ. ಇದು ನಿಮಗೆ ಸಹಿಸಲು ಆಗುತ್ತಿಲ್ಲ. ಬಡವರಿಗೆ ಕೆಲಸ ಮಾಡುವ ಅವಕಾಶ ಬಿಜೆಪಿ, ಜೆಡಿಎಸ್ ಅವರಿಗೆ ಸಿಗದ ಕಾರಣಕ್ಕೆ ಕೈ, ಕೈ ಹೊಸಕಿಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು.

ಪಾದಯಾತ್ರೆಯಲ್ಲಿ ಎರಡು ಹೆಜ್ಜೆ ಹಾಕಿ ಹೇಳಿಕೆ ನೀಡಿ ಏಕೆ ಓಡಿ ಹೋಗುತ್ತಿದ್ದೀರಾ? ಯಾರೋ ಪ್ರೀತಂ ಗೌಡ ನನ್ನ ಕುಟುಂಬದ ಮರ್ಯಾದೆ ತೆಗೆದಿದ್ದಾನೆ ಎಂದು ಹೇಳಿದೆ. ಆದರೆ ಇದಕ್ಕೂ ಮೊದಲು ರೇವಣ್ಣನದ್ದೇ ಬೇರೆ ಕುಟುಂಬ ನನ್ನದೇ ಬೇರೆ ಕುಟುಂಬ, ನಾವು ಭಾಗವಾಗಿದ್ದೇವೆ ಎಂದು ಹೇಳಿದ್ದೆ. ಈಗ ಎಲ್ಲಿಂದ ಬಂತು ಕುಟುಂಬ? ನಾವು ನಿನ್ನ ಕುಟುಂಬದ ವಿಚಾರಕ್ಕೆ ಕೈ ಹಾಕುವುದಿಲ್ಲ. ಪ್ರಜ್ವಲ್ ರೇವಣ್ಣ ಅವರಿಗೆ ಟಿಕೆಟ್ ನೀಡಬೇಡಿ ಎಂದು ಬಿಜೆಪಿಯ ದೇವರಾಜೇಗೌಡನಿಂದ ಪತ್ರ ಬರೆಸಿದವನು ನೀನೆ ಅಲ್ಲವೇ ಎಂದು ಪ್ರಶ್ನಿಸಿದರು.

ಕಬ್ಬಿಣದ ಮಂತ್ರಿ ಕುಮಾರಣ್ಣ: ಕಬ್ಬಿಣದ ಮಂತ್ರಿ ಕುಮಾರಣ್ಣ, ನೀವು ಮತ್ತು ಬಿಜೆಪಿಯವರು ಕತ್ತರಿ ತಯಾರು ಮಾಡುವವರು. ನಾವು ಸೂಜಿ ತಯಾರು ಮಾಡುತ್ತೇವೆ. ನೀವು ಸಮಾಜವನ್ನು ಕತ್ತರಿಸುವವರು, ನಾವು ಸಮಾಜವನ್ನು ಹೊಲಿಯುವವರು. ಜಾತಿ, ಧರ್ಮ, ಕುಟುಂಬ ಎಂದು ಕತ್ತರಿಸುತ್ತೀರಿ. ಆದರೆ ನಾವು ಎಲ್ಲರನ್ನು ಒಂದುಗೂಡಿಸುತ್ತೇವೆ. ಇದೇ ನಮಗೂ ನಿಮಗೂ ಇರುವ ವ್ಯತ್ಯಾಸ. ಕುಮಾರಣ್ಣ ಈ ಹಿಂದೆ ಏನೇನು ಮಾತನಾಡಿದ್ದೆ. ಯಾರ ಗುಣಗಾನ ಮಾಡಿದ್ದೆ ಎಲ್ಲವನ್ನು ಮೈಸೂರು ಮತ್ತು ಮಂಡ್ಯದಲ್ಲಿ ತೋರಿಸುತ್ತೇವೆ. ನಿನ್ನ ಮಾತು, ಗುಣಗಾನ, ಬಿಜೆಪಿ ಗುಣಗಾನ, ನಿಮ್ಮದು ಅವರದ್ದು ವಾಕ್ಸಮರ ಎಲ್ಲವನ್ನೂ ತೋರಿಸುತ್ತೇನೆ ಎಂದು ಸವಾಲು ಹಾಕಿದರು.

ಯಡಿಯೂರಪ್ಪ, ಬೊಮ್ಮಾಯಿ ಕಾಲದಲ್ಲಿ ಎಪಿಎಂಸಿಯಿಂದ 47 ಕೋಟಿ ಲೂಟಿ. ಬೋವಿ ಅಭಿವೃದ್ಧಿ ನಿಗಮದಲ್ಲಿ 87 ಕೋಟಿ, ದೇವರಾಜು ಅರಸು ಟ್ರಕ್ ಟರ್ಮಿನಲ್ 50 ಕೋಟಿ, ಗಂಗಾ ಕಲ್ಯಾಣ ಯೋಜನೆಯಲ್ಲಿ 430 ಕೋಟಿ, ಕರೋನಾ ಸಮಯದಲ್ಲಿ ಹೆಣದ ಮೇಲೆ ಹಣ ಮಾಡಿದರು. ಪಿಎಸ್‌ಐ ಹಗರಣ, ಪರಶುರಾಮ ಪ್ರತಿಮೆ ಹಗರಣ, ಯಡಿಯೂರಪ್ಪ ಅವರ ಆಪ್ತ ಉಮೇಶ್ ಮನೆಯಲ್ಲಿ 700 ಕೋಟಿಗೂ ಹೆಚ್ಚು ಅಕ್ರಮ ಹಣದ ದಾಖಲೆಗಳು ದೊರೆಯಿತು. ಅಂಗನವಾಡಿಯ ಮಕ್ಕಳ ಮೊಟ್ಟೆ ಹಗರಣ. ಕುಮಾರಸ್ವಾಮಿ ಅವರ ಗಣಿ ಹಗರಣದ ಬಗ್ಗೆ ಆನಂತರ ಮಾತನಾಡುತ್ತೇನೆ ಎಂದರು.

ಬ್ರಿಟಿಷರಿಂದಲೇ ಪಕ್ಷವನ್ನು ಅಲ್ಲಾಡಿಸಲು ಆಗಲಿಲ್ಲ

10 ತಿಂಗಳಲ್ಲಿ ಕಾಂಗ್ರೆಸ್ ಸರಕಾರವನ್ನು ತೆಗೆಯುತ್ತೇವೆ ಎಂದು ಮಿಸ್ಟರ್ ಕುಮಾರಸ್ವಾಮಿ ಹೇಳುತ್ತಿದ್ದಾರೆ. ಬ್ರಿಟಿಷರ ಕೈಯಲ್ಲೇ ಕಾಂಗ್ರೆಸ್ ಪಕ್ಷವನ್ನು ಅಲ್ಲಾಡಿಸಲು ಆಗಲಿಲ್ಲ. ಸರಕಾರ ಒಡೆದುಹಾಕಲು ಇದು ಮಡಕೆಯೇ? ಕಾಂಗ್ರೆಸ್ ಹೋರಾಟಕ್ಕೆ ನಿನ್ನ ಕ್ಷೇತ್ರದ ಹೆಬ್ಬಾಗಿನಲ್ಲೇ ಇರುವ ಶಿವಪುರ ಸತ್ಯಾಗ್ರಹ ಸೌಧವೇ ಸಾಕ್ಷಿ. ಜನರ ಕಲ್ಯಾಣಕ್ಕಾಗಿ ಕಾಂಗ್ರೆಸ್ ಸರಕಾರ ನುಡಿದಂತೆ ನಡೆದಿದೆ. ಐದು ಗ್ಯಾರಂಟಿಗಳನ್ನು ನೀಡಿ ಕೊಟ್ಟ ಮಾತನ್ನು ಉಳಿಸಿಕೊಂಡಿದೆ. ಇವುಗಳನ್ನು ನಿಲ್ಲಿಸಬೇಕು ಎನ್ನುವ ಹುನ್ನಾರ ಮಾಡಿಕೊಂಡು ಬಿಜೆಪಿ, ಜೆಡಿಎಸ್ ಪಾದಯಾತ್ರೆ ನಡೆಸುತ್ತಿವೆ. ಕುಮಾರಸ್ವಾಮಿ, ವಿಜಯೇಂದ್ರ, ಯಡಿಯೂರಪ್ಪ, ಆರ್.ಅಶೋಕ್, ಎಲ್ಲಾ ಸೇರಿ ಗ್ಯಾರಂಟಿ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆ ಎಂದು ಆರೋಪಿಸಿದರು.

ನನ್ನ, ನಿನ್ನ ಆಸ್ತಿಯ ಪಟ್ಟಿಯಿದೆ. ನಿನ್ನ ಬೇನಾಮಿಯಾದ ಸಹೋದರನ ಆಸ್ತಿಯ ಪಟ್ಟಿ ಕೊಡಪ್ಪಾ. ನೀನು ಅಧಿಕಾರದಲ್ಲಿ ಇದ್ದಾಗ ಕನಕಪುರ ಸೇರಿದಂತೆ ಇತರೆಡೆ ಮಾಡಿರುವ ಪಟ್ಟಿ ಹೇಳಿದ್ದೇನೆ. ನೀನು ಒಂದು ಪಟ್ಟಿ ಕೊಡು ಹಾಗೂ ಮೊದಲು ಪಾದಯಾತ್ರೆ ಏಕೆ ಬೇಡ ಎಂದು ಹೇಳಿದೆ ನಂತರ ಏಕೆ ಒಪ್ಪಿಕೊಂಡೆ ಇದಕ್ಕೆ ಮೊದಲು ಉತ್ತರಿಸು.

- ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಜನಾಂದೋಲನ ಸಮಾವೇಶಕ್ಕೂ ಮುನ್ನ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾರ್ಯಕರ್ತನೊಂದಿಗೆ ಬೈಕ್ ಸವಾರಿ ನಡೆಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು-560070.
ಸಂ: ಕಾಅ/ಪಂರಾಇಂವಿ/ಬೆಂನ/ಎಇ-1/ಟೆಂಡರ್/15/2024-25 ದಿನಾಂಕ: 05.08.2024
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 15/2024-25
(ದ್ವಿ ಲಕೋಟೆ ಪದ್ಧತಿ) (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Deposit Contribution Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ-ಲಕೋಟೆಯಲ್ಲಿ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 21.08.2024ರ ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ https://kppp.karnataka.gov.inನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/-
ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ, ಬೆಂಗಳೂರು
DIPR/CP/1296/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಘ.ಬ.ದಂ.ಕಾ.ನಿ. ವಿಭಾಗ-4, ಚಿಕ್ಕೋಡಿ
ಫೋನ ನಂ:08338-272485 ಇ-ಮೇಲ್ ಐಡಿ:ee_knnlgrbc4ckd@rediffmail.com
ಟೆಂಡರ ಅವಧಿ ವಿಸ್ತರಣೆ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ಉಲ್ಲೇಖ : 1)This office tender Notification No: KNNL/GRBCC-4/PB-2/Karagaon LIS/ 2024-25/ 04 date: 04-07-2024.
Indent No: KNNL/2024-25/LI/WORK_INDENT1213
2)ಈ ಕಚೇರಿ ಟೆಂಡರ ಅವಧಿ ವಿಸ್ತರಣೆ ಪತ್ರ ಸಂ: 791 ದಿನಾಂಕ:05-8-2024
ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ (http://kpp.karnataka.gov.in) 4701 ಅಡಿಯಲ್ಲಿನ "Survey, Investigation, Design, Supply, Installation, Testing and Commissioning of Lift Irrigation System (Head Works consisting of construction of Intake Canal, Jack well cum pump house, Vertical Turbine pumps coupled to HT Motors, Pump house Electrical works, Necessary valves, Delivery Pipe, Manifold system, Power supply including terminal bay, 110 KV Electrical Sub Station, Transmission line, Raising Main and Delivery Chamber) for providing irrigation facility to 8390 Ha of command area in Chikkodi taluk, Belagavi District by lifting water from Krishna River near Kallol Village during Kharif season including Operation and Maintenance for a period of 5 years after successful completion of work KARAGAON LIFT IRRIGATION SCHEME on Turn-Key Basis PHASE 1 work" ಮೇಲ್ಕಾಣಿಸಿದ ಪ್ರಕಟಣೆಯಲ್ಲಿ ಅರ್ಹ ಗುತ್ತಿಗೆದಾರರಿಗೆ Turn Key basis ಟೆಂಡರನ್ನು ಉಲ್ಲೇಖಿತ ಪತ್ರದಡಿಯಲ್ಲಿ ಕರೆಯಲಾಗಿರುತ್ತದೆ. (ಉಲ್ಲೇಖ-1)
ಅದರಂತೆ ಈಗ ಸದರಿ ಕಾಮಗಾರಿಯ ಟೆಂಡರ ಅವಧಿ ವಿಸ್ತರಣೆ ಅಧಿಸೂಚನೆಯನ್ವಯ ಪರಿಷ್ಕೃತ ವೇಳಾ ಪಟ್ಟಿ ಈ ಕೆಳಗಿನಂತಿವೆ. (ಉಲ್ಲೇಖ-2)
No:d:Calendar of Events:ಭರ್ತಿ ಮಾಡಿದ ಟೆಂಡರಗಳನ್ನು ಇ-ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ, Date & Time:20-08-2024 upto 16:00 hour, No:e:Calendar of Events :ತಾಂತ್ರಿಕ ಬಿಡ್‌ನ್ನು (ಲಕೋಟೆ-1) ತೆರೆಯುವ ದಿನಾಂಕ, Date & Time:22-08-2024 at 11.30 hour onwards, No:f:Calendar of Events:ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ-1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ-2) ತೆರೆಯುವ ದಿನಾಂಕ, Date & Time:26-08-2024 at 11.30 hour onwards.
ಇನ್ನುಳಿದಂತೆ, ಟೆಂಡರಿನ ನಿಯಮ ಹಾಗೂ ಮಾಹಿತಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ಟೆಂಡರ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ವಿವರಗಳಿಗೆ http://www.kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/- ಕಾರ್ಯನಿರ್ವಾಹಕ ಅಭಿಯಂತರು,
ಕನೀನಿನಿ, ಘಬದಂಕಾನಿ ವಿಭಾಗ-4, ಚಿಕ್ಕೋಡಿ
DIPR/BGM/RO-NO-540/KSMCA/2024-25

ಯತ್ನಾಳ್ ವಿರುದ್ಧ ಕ್ರಮ?

← ಮೊದಲಪುಟದಿಂದ

ವಿಧಾನಸಭಾ ಚುನಾವಣೆಗೆ ಇನ್ನೂ ಮೂರುವರೆ ವರ್ಷ ಇರುವುದರಿಂದ ಈಗ ಕ್ರಮ ವಹಿಸುವುದು ಸೂಕ್ತ ಎನ್ನುವ ಮಾತುಗಳು ಕೇಳಿಬರುತ್ತಿವೆ. ಶಿಸ್ತು ಕ್ರಮವಹಿಸುವ ಮೊದಲು, ಮತ್ತೊಂದು ಬಾರಿ ಯತ್ನಾಳ್‌ಗೆ ಎಚ್ಚರಿಕೆ ನೀಡುವ ಸಾಧ್ಯತೆಯಿದ್ದು, ಒಂದು ವೇಳೆ ಈ ಎಚ್ಚರಿಕೆಯನ್ನು ಮೀರಿ ಹೇಳಿಕೆ ನೀಡಿದರೆ ಕ್ರಮ ವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಯತ್ನಾಳ್ ಅವರು ಕಟ್ಟರ್ ಹಿಂದುತ್ವವಾದಿ, ಪಕ್ಷದ ಸಿದ್ಧಾಂತವನ್ನು ಸಮರ್ಥವಾಗಿ ವಾದಿಸುತ್ತಾರೆ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಪಕ್ಷಕ್ಕೆ ಈ ರೀತಿಯ ಖಡಕ್ ನಾಯಕರ ಅಗತ್ಯವಿದೆ. ಹಾಗೆಂದ ಮಾತ್ರಕ್ಕೆ, ಪಕ್ಷದ ವಿರುದ್ಧ ಸರಣಿ ಟೀಕೆ ಮಾಡಿದರೂ ಸುಮ್ಮನೆ ಇರಲು ಸಾಧ್ಯವಿಲ್ಲ. ಕೇವಲ ಅವರೊಬ್ಬರು ಮಾತ್ರವಲ್ಲದೇ ಅವರೊಂದಿಗೆ ಇನ್ನೂ ಕೆಲ ಅಸಮಾಧಾನಿತರನ್ನು ಮುಂದಿಟ್ಟುಕೊಂಡು ಹೇಳಿಕೆ ನೀಡುತ್ತಿರುವುದು ಪಕ್ಷಕ್ಕೆ ಮುಜುಗರವಾಗಿದೆ ಎನ್ನುವುದು ಪಕ್ಷದ ವರಿಷ್ಠರ ಅಭಿಪ್ರಾಯವಾಗಿದೆ.

ಪಾದಯಾತ್ರೆಯಲ್ಲಿಯೂ ಕಾಣಿಸಿಕೊಳ್ಳದ ಯತ್ನಾಳ್: ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಜಂಟಿಯಾಗಿ ಮೈಸೂರು ಚಲೋ ಪಾದಯಾತ್ರೆ ನಡೆಸುತ್ತಿರುವ ಸಂದರ್ಭದಲ್ಲೇ ಯತ್ನಾಳ್ ಮಾಜಿ ಸಿಎಂ ಯಡಿಯೂರಪ್ಪ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಬಹಿರಂಗವಾಗಿಯೇ ಟೀಕೆ ಮಾಡುತ್ತಿರುವುದು ಕಾರ್ಯಕರ್ತರಿಗೆ ಸಾಕಷ್ಟು ಇರುಸು ಮುರಿಸು ಉಂಟು ಮಾಡಿದೆ. ಆದ್ದರಿಂದ ಯತ್ನಾಳ್ ಹೇಳಿಕೆಗಳನ್ನು ಗಂಭೀರವಾಗಿ ತೆಗೆದುಕೊಂಡಿರುವ ದೆಹಲಿ ಬಿಜೆಪಿ ನಾಯಕರು ಅವರ ಮೇಲೆ ಶಿಸ್ತು ಕ್ರಮ ಇಲ್ಲವೇ ಪಕ್ಷದಿಂದಲೇ ಉಚ್ಚಾಟನೆ ಮಾಡುವ ಬಗ್ಗೆಯೂ ಚಿಂತನೆ ನಡೆಸಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ವರದಿ ಪಡೆದ ವರಿಷ್ಠರು: ವಿಜಯೇಂದ್ರ ವಿರುದ್ಧ ಸರಣಿ ಟೀಕೆ ಮಾಡಿರುವ ಯತ್ನಾಳ್ ಅವರ ವಿಷಯಕ್ಕೆ ಸಂಬಂಧಿಸಿದಂತೆ ವಿಜಯೇಂದ್ರ ಅವರಿಂದ ವರಿಷ್ಠರು ಮಾಹಿತಿ ಪಡೆದಿದ್ದಾರೆ. ವಿಜಯೇಂದ್ರ ಹಾಗೂ ಯಡಿಯೂರಪ್ಪ ಅವರನ್ನು ಟೀಕಿಸುವ ಭರದಲ್ಲಿ ಇಡೀ ಪಕ್ಷವನ್ನೇ ಟೀಕಿಸುತ್ತಿರುವುದು ಸರಿಯಲ್ಲ. ಈ ರೀತಿ ಮಾಡುವುದರಿಂದ ಪಕ್ಷದ ಕಾರ್ಯಕರ್ತರ ಮೇಲೆ ಪರಿಣಾಮ ಬೀರಲಿದೆ ಎನ್ನುವ ಮಾತನ್ನು ವಿಜಯೇಂದ್ರ ಅವರು ವರಿಷ್ಠರ ಮುಂದೆ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತುಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕೊಪ್ಪಳ.
ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2024-25/2437 ದಿ: 01.08.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ರಾಯಚೂರು ಜಿಲ್ಲೆಯ 02 ಟೆಂಡರ ಕಾಮಗಾರಿಗಳಿಗಾಗಿ ವಿವಿದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ದ್ವಿಲಕೋಟೆ ಪದ್ದತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ 1. ರೂ. 99.37 ಲಕ್ಷಗಳು, 2. ರೂ. 33.00 ಲಕ್ಷಗಳು ಟೆಂಡರಗಳನ್ನು ದಿನಾಂಕ: 06-08-2024 ರಿಂದ ದಿನಾಂಕ:14-08-2024 ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ :09-08-2024 ರಂದು ಬೆಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ:16-08-2024ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: 17-08-2024 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು"ಇ-ಪ್ರಕ್ಯೂರ್‌ಮೆಂಟ್" ವೆಬ್‌ಸೈಟ್http:// eproc. karntaka. gov.in/ e-portal/index.seamನಲ್ಲಿ ಪಡೆಯಬಹುದು.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ.ಕೊಪ್ಪಳ.
ಡಿಐಪಿಆರ್/ಕೊಪ್ಪಳ/222/ಕೆಎಸ್‌ಎಂಸಿಎ/2024-25

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1.ಇ.ಟೆಂಡರ್:14:2024-25 ದಿನಾಂಕ: 03-08-2024
ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)
2024-25 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ನಿಧಿ - 38 ಕಾಮಗಾರಿ, ಸ2022-23 ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ - 01 ಕಾಮಗಾರಿ, 2023-24 ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ - 01 ಕಾಮಗಾರಿ, 2024-25 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಎಸ್.ಸಿ.ಎಸ್.ಪಿ. - 04 ಕಾಮಗಾರಿ, 2024-25 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಟಿ.ಎಸ್.ಪಿ. - 03 ಕಾಮಗಾರಿ, 2024-25 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಶೇಕಡ 7.25 - 01 ಕಾಮಗಾರಿ, 2024-25 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಶೇಕಡ 5.00 - 01 ಕಾಮಗಾರಿ, 2024-25 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ - 10 ಕಾಮಗಾರಿ, 2023-24ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನ - 05 ಕಾಮಗಾರಿ, 2023-24ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ - 02 ಕಾಮಗಾರಿ, 2023-24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ) - 01 ಕಾಮಗಾರಿ, 2023-24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (3ನೇ ಕರೆ) - 01 ಕಾಮಗಾರಿ, ಯುಐಡಿಎಸ್‌ಎಸ್‌ಎಂಟಿ (ಉಳಿಕೆ)/2023-24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ - 01 ಕಾಮಗಾರಿ ಒಟ್ಟು 69 ಕಾಮಗಾರಿಗಳಿಗೆ ಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91-8046010000 +91-8068948777 ರಿಂದ ಮಾಹಿತಿ ಪಡೆಯಬಹುದು.
ಕ್ರಮ ಸಂ.01 ರಿಂದ 38, 41 ರಿಂದ 47, 50 ರಿಂದ 59, 65 ರಿಂದ 68 ರವರೆಗಿನ ಅಲ್ಪಾವಧಿ ಕಾಮಗಾರಿಗಳಿಗೆ : ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 06-08-2024 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 14-08-2024 ಸಮಯ:16.30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 14-08-2024 ಸಮಯ : 17.00 ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ : 16-08-2024 ಸಮಯ : 11.00
ಕ್ರಮ ಸಂ.39, 40, 48, 49, 60 ರಿಂದ 64, 69 ರ ಕಾಮಗಾರಿಗೆ : ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 06-08-2024 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 20-08-2024 ಸಮಯ : 16.30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 20-08-2024 ಸಮಯ : 17.00 ಟೆಂಡರ್ ತೆರೆಯುವ ದಿನಾಂಕ : 22-08-2024 ಸಮಯ : 11.00
ವಾಸಾಇ/ದಾವಣಗೆರೆ/211/ ಕೆಎಸ್‌ಎಂಸಿಎ/2024-25
ಸಹಿ/-ಕಾರ್ಯಪಾಲಕ ಅಭಿಯಂತರರು
ಮಹಾನಗರ ಪಾಲಿಕೆ, ದಾವಣಗೆರೆ

ಪರಿಶೀಲನೆಗೆ ಮುಂದಾದ ರಾಜ್ಯಪಾಲ

← ಮೊದಲಪುಟದಿಂದ

ಆದರೆ ಈ ವಿಷಯದಲ್ಲಿ ಇನ್ನಷ್ಟು ಸಮಯ ತಗೆದು ಕೊಳ್ಳಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ. ದೆಹಲಿಯಲ್ಲಿ ಕಾನೂನು ತಜ್ಞರೊಂದಿಗೆ ಸಭೆ ನಡೆಸಿರುವ ಗೆಹ್ಲೋಟ್ ಅವರು ಯಾವ ರೀತಿ ಮುಂದುವರಿಯಬೇಕು ಎನ್ನುವ ಬಗ್ಗೆ ಚರ್ಚಿಸಿದ್ದಾರೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವ ಸಂಪುಟ, ಕಾಂಗ್ರೆಸ್ ಹೈಕಮಾಂಡ್ ಸಿಎಂ ಬೆನ್ನಿಗೆ ನಿಂತಿರುವುದರಿಂದ ತೀರ್ಮಾನ ಕೈಗೊಳ್ಳುವ ಮೊದಲು ಎಚ್ಚರಿಕೆಯ ಹೆಜ್ಜೆಯಿಡಲು ರಾಜ್ಯಪಾಲರು ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

ರಾಜ್ಯಪಾಲರು ಸಚಿವ ಸಂಪುಟದ ಸಲಹೆಯನ್ನು ಒಪ್ಪುತ್ತಾರೆ ಎಂಬ ವಿಶ್ವಾಸವಿದೆ. ಅವರು ರಾಜ್ಯ ಸರಕಾರಕ್ಕೆ ಕೊಟ್ಟಿರುವ ನೋಟಿಸ್ ವಾಪಸ್ ಪಡೆಯುತ್ತಾರೆ. ರಾಜ್ಯಪಾಲರಿಗೆ ಅವರದೇ ಆದ ಅಧಿಕಾರ ಇರಬಹುದು. ಆದರೆ ಸಂಪುಟ ಸಭೆಯ ಸಲಹೆಯನ್ನು ಅವರು ಸುಲಭವಾಗಿ ತಿರಸ್ಕಾರ ಮಾಡುವುದಿಲ್ಲ. ಒಂದು ವೇಳೆ ಎಲ್ಲವನ್ನೂ ಮೀರಿ ರಾಜ್ಯಪಾಲರು ಅನುಮತಿ ನೀಡಿದರೆ ನಾವು ಕೂಡ ಕಾನೂನು ಹೋರಾಟ ಮಾಡುತ್ತೇವೆ.

- ಡಾ.ಜಿ.ಪರಮೇಶ್ವರ್ ಗೃಹ ಸಚಿವ

ಮುಡಾ ಪ್ರಕರಣ ಕಾನೂನಿನ ಮೂಲಕ ಎದುರಿಸುತ್ತೇವೆ

ಮುಡಾ ಪ್ರಕರಣದ ವಿಚಾರಣೆಗೆ ರಾಜ್ಯಪಾಲರು ಅನುಮತಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಬೆಳಗಾವಿಯಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಮುಡಾ ಪ್ರಕರಣವನ್ನು ಕಾನೂನಾತ್ಮಕವಾಗಿ ಹಾಗೂ ರಾಜಕೀಯವಾಗಿ ಸಮರ್ಥವಾಗಿ ಎದುರಿಸುತ್ತೇವೆ. ರಾಜ್ಯಪಾಲರು ನೀಡಿರುವ ಶೋಕಾಸ್ ನೋಟಿಸ್ ಹಿಂತೆಗೆದುಕೊಳ್ಳಬೇಕು. ಅದೇ ರೀತಿ ರಾಜ್ಯಪಾಲರಿಗೆ ಟಿ.ಜೆ.ಅಬ್ರಹಾಂ ನೀಡಿರುವ ದೂರನ್ನು ತಿರಸ್ಕರಿಸಬೇಕು ಎಂದು ಮನವಿ ಮಾಡಿದ್ದೇವೆ. ಈ ಕುರಿತಾಗಿ ರಾಜ್ಯಪಾಲರು ಯಾವ ತೀರ್ಮಾನ ಕೈಗೊಳ್ಳುತ್ತಾರೆ ಎಂಬುದನ್ನು ಕಾದು ನೋಡೋಣ ಎಂದರು.

ನಾಗೇಂದ್ರ, ದದ್ದಲ್ ಹೆಸರು ನಾಪತ್ತೆ

← ಮೊದಲಪುಟದಿಂದ

ನಾಗೇಂದ್ರ ನ್ಯಾಯಾಂಗ ಬಂಧನ ವಿಸ್ತರಣೆ: ವಾಲ್ಮೀಕಿ ನಿಗಮದ ಬಹುಕೋಟಿ ಹಗರಣ ಕೇಸ್‌ನಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೆ ಒಳಗಾಗಿರುವ ಮಾಜಿ ಸಚಿವ ಬಿ.ಎನ್. ನಾಗೇಂದ್ರ ಅವರ ನ್ಯಾಯಾಂಗ ಬಂಧನ ವಿಸ್ತರಣೆ ಆಗಿದೆ. ಸೋಮವಾರ (ಆ.5) ನ್ಯಾಯಾಂಗ ಬಂಧನ ಅಂತ್ಯವಾದ ಹಿನ್ನೆಲೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ನಾಗೇಂದ್ರ ಅವರನ್ನು ಹಾಜರುಪಡಿಸಲಾಗಿತ್ತು. ನಾಗೇಂದ್ರ ಅವರು ಜಾಮೀನಿಗೆ ಅರ್ಜಿ ಹಾಕದೇ ಇರುವ ಕಾರಣ ನ್ಯಾಯಾಂಗ ಬಂಧನ ವಿಸ್ತರಣೆ ಮಾಡಲಾಯಿತು. ಆ.14ರ ವರೆಗೂ ಇಬ್ಬರ ನ್ಯಾಯಾಂಗ ಬಂಧನ ವಿಸ್ತರಣೆ ಆಗಿದೆ.

ಮುಂದುವರಿದ ಯಾತ್ರಾ ಸಮರ

← ಮೊದಲಪುಟದಿಂದ

ಹಿಂದುಳಿದ ವರ್ಗದ ನಾಯಕ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾರೆ. ಇದು ನಿಮಗೆ ಸಹಿಸಲು ಆಗುತ್ತಿಲ್ಲ. ಬಡವರಿಗೆ ಕೆಲಸ ಮಾಡುವ ಅವಕಾಶ ಬಿಜೆಪಿ, ಜೆಡಿಎಸ್ ಅವರಿಗೆ ಸಿಗದ ಕಾರಣಕ್ಕೆ ಕೈ ಕೈ ಹೊಸಕಿಕೊಳ್ಳುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಪಾದಯಾತ್ರೆಯ ಬಿಸಿ ಮುಟ್ಟಿದೆ: ವಿಜಯೇಂದ್ರ

ನಮ್ಮ ಹೋರಾಟದ ಬಿಸಿ ಕಾಂಗ್ರೆಸ್ಸಿಗೆ, ರಾಜ್ಯ ಸರಕಾರಕ್ಕೆ ಮುಟ್ಟಿದೆ. ಇದರ ಪರಿಣಾಮವಾಗಿ ಕಾಂಗ್ರೆಸ್ ಸರಕಾರವು ಒಂಟಿಗಾಲಿನಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಂಗ್ರೆಸ್ ಹೈಕಮಾಂಡ್ ಕಳುಹಿಸಿದ ವೇಣುಗೋಪಾಲ್, ಸುರ್ಜೇವಾಲಾ ಅವರು ಬಂದು ಶಾಸಕರಿಗೆ ಪಾಠ ಹೇಳಿಕೊಟ್ಟಿದ್ದಾರೆ. ಮುಖ್ಯಮಂತ್ರಿಗಳನ್ನು ರಕ್ಷಿಸಲು ಸೂಚಿಸಿದ್ದಾರೆ. ಹಗರಣದಲ್ಲಿ ಮುಳುಗಿದ ಸರಕಾರ ಮತ್ತು ಮುಖ್ಯಮಂತ್ರಿಗಳನ್ನು ಬಲವಾಗಿ ಸಮರ್ಥನೆ ಮಾಡುವಂತೆ ದೆಹಲಿ ಗಾಂಧಿ ಕುಟುಂಬದಿಂದ ಸಂದೇಶ ನೀಡಿದ್ದಾರೆ ಎಂದು ಟೀಕಿಸಿದರು.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
ಡಾ ಟಿ. ಬಿ. ಅಳ್ಳೊಳ್ಳಿ, ಪಿ.ಹೆಚ್‌ಡಿ (ತೋಟಗಾರಿಕೆ) ಕುಲಸಚಿವರು
ಮೊಬೈಲ್ ಸಂ. 94806 96389
ದೂರವಾಣಿ ಸಂ. 08354-230276/278/286/280
ಕುಲಸಚಿವರ ಕಾರ್ಯಾಲಯ ಉದ್ಯಾನಗಿರಿ, ನವನಗರ ಬಾಗಲಕೋಟ-587104, ಕರ್ನಾಟಕ
ವೆಬ್‌ಸೈಟ್: https://uhsbagalkot.karnataka.gov.in ಮಿಂಚಂಚೆ: registrar@uhsbagalkot.edu.in
ಸಂಖ್ಯೆ: ಕುಸ:ಶೈಕ್ಷಣಿಕ/NRI/ 536/2024-25 ದಿನಾಂಕ: 05.08.2024
ಅಧಿಸೂಚನೆ
2024-25 ನೇ ಶೈಕ್ಷಣಿಕ ವರ್ಷಕ್ಕಾಗಿ ಅನಿವಾಸಿ ಭಾರತೀಯರು / ಅವರ ಮಕ್ಕಳು ಹಾಗೂ ಅವರಿಂದ ಪ್ರಾಯೋಜಿತ ಅಭ್ಯರ್ಥಿಗಳಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ "ಬಿ.ಎಸ್ಸಿ. (ಹಾನರ್ಸ್) ತೋಟಗಾರಿಕೆ/ಬಿ.ಟೆಕ್ (ಆಹಾರ ತಂತ್ರಜ್ಞಾನ)" ಪದವಿ ಕಾರ್ಯಕ್ರಮಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಪ್ರವೇಶ ಕುರಿತು ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ https://uhsbagalkot.karnataka.gov.in. ನಿಂದ ಪಡೆಯಬಹುದು.
ಆದೇಶದ ಮೇರೆಗೆ,
ಸಹಿ/- ಕುಲಸಚಿವರು
ವಾ.ಸಾ.ಇ/ಬಾಗಲಕೋಟೆ/162/ದೇಶಪಾಂಡೆಪಬ್ಲಿಸಿಟಿ/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.
ಸಂ: ಬೆಂಅಪ್ರಾ/ನಯೋಸ/CLU-16/969/2024-25 ದಿನಾಂಕ: 03.08.2024
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಮೆ: ವಿಶ್ವಜಿತ್ ಎಸ್ಟೇಟ್ಸ್ ಪ್ರೈ ಲಿ.,	ಪೂರ್ವ	ವರ್ತೂರು	ವರ್ತೂರು	121/2	1-05	ವ್ಯವಸಾಯ	ವಸತಿ
2					121/3	1-05		
3					121/4	1-00		
					ಒಟ್ಟು	3-10		

ಷರಾ: ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಟ್ವೀಟೂ-ಖಾರಾ

ರಾಹುಲ್ ಗಾಂಧಿ
ಪ್ರತಿಪಕ್ಷ ನಾಯಕ

ದೇಶದ ರಾಜಧಾನಿಯಲ್ಲಿ ಸಾಂಪ್ರದಾಯಿಕ ಕಲೆಗಳನ್ನು ಹೊಂದಿರುವ ಅನೇಕ ಕುಟುಂಬಗಳಿವೆ. ತಮ್ಮ ಕೈಗಳಿಂದಲೇ ಪಾದರಕ್ಷೆ ತಯಾರಿಸಿ ನನಗೆ ಕಳುಹಿಸಿದ ರಾಮಚೇತ್ ಅವರನ್ನು ಭೇಟಿಮಾಡಿದೆ. ದೇಶದ ಮೂಲೆಮೂಲೆಗಳಲ್ಲಿ ಇಂತಹ ಕೋಟ್ಯಂತರ ಪ್ರತಿಭೆಗಳಿವೆ. ಅವರಿಗೆ ಎಲ್ಲ ನೆರವು ಕೊಟ್ಟರೆ , ಅವರ ಜೀವನವಷ್ಟೇ ಬದಲಾಯಿಸುವುದಿಲ್ಲ, ಬದಲಾಗಿ ಇಡೀ ದೇಶವನ್ನೇ ಬದಲಿಸುತ್ತಾರೆ.



ಬಲಿಯಾನ್
ವಿಶ್ಲೇಷಕ

ಬರೀ ರೀಲ್‌ಗಳನ್ನು ಮಾಡಿಕೊಂಡು ಹೋದರೆ ಬಡತನ ತೊಲಗುವುದಿಲ್ಲ. ಮೋದಿ ಸರಕಾರ ಕೆಲಸ ಮಾಡುತ್ತಿರುವಂತೆ ಯಾರಾದರೂ ಕಾರ್ಯೋನ್ಮುಖರಾಗಬೇಕು.

ನೆರೆ:ಗ್ರಾಮಗಳಿಗೆ ಶಾಶ್ವತ ಪರಿಹಾರ

ಬೆಳಗಾವಿಯ ನೆರೆಪೀಡಿತ ಪ್ರದೇಶಗಳಿಗೆ ಸಿಎಂ ಭೇಟಿ | ಕಾಳಜಿ ಕೇಂದ್ರದಲ್ಲಿ ಸಂತ್ರಸ್ತರ ಅಹವಾಲು ಆಲಿಕೆ

ಬೆಳಗಾವಿ: ರಾಜ್ಯದ ಹಲವೆಡೆ ಮಳೆಯಿಂದ ಹಾನಿಯಾದ ಎಲ್ಲಾ ಪ್ರದೇಶಗಳಲ್ಲಿ ಪರಿಹಾರ ಕೆಲಸಗಳನ್ನು ಪ್ರಾರಂಭಿಸಲಾಗಿದೆ. ಪ್ರತಿವರ್ಷವೂ ಪ್ರವಾಹಕ್ಕೆ ಒಳಗಾಗುವ ಗ್ರಾಮಗಳಿಗೆ ಶಾಶ್ವತ ಪರಿಹಾರ ಒದಗಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಘಟಪ್ರಭಾ ಹಾಗೂ ಕೃಷ್ಣಾ ನದಿ ಪ್ರವಾಹ ಪೀಡಿತ ಗೋಕಾಕ್ ಹಾಗೂ ಚಿಕ್ಕೋಡಿ ಉಪ ವಿಭಾಗದ ವಿವಿಧ ಪ್ರದೇಶಗಳಿಗೆ ಸೋಮವಾರ ಸಿಎಂ ಸಿದ್ದರಾಮಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಧ್ಯಾಹ್ನ ಗೋಕಾಕ್‌ಗೆ ಆಗಮಿಸಿದ ಸಿಎಂ ಘಟಪ್ರಭಾ ನದಿಯಿಂದ ಉಂಟಾದ ಪ್ರವಾಹದಿಂದ ಮುಳುಗಡೆಯಾಗಿದ್ದ ಲೋಳಸೂರ ಸೇತುವೆ ವೀಕ್ಷಿಸಿದರು. ನಂತರ ನಗರದ ಹಳೇ ದನದ ಪೇಟೆ, ಕುಂಬಾರಗಲ್ಲಿ, ಉಪ್ಪಾರಗಲ್ಲಿ ಸೇರಿ ಹಾನಿಗೀಡಾದ ಪ್ರದೇಶವನ್ನು ವೀಕ್ಷಿಸಿದರು.

ಸೇತುವೆ ಎತ್ತರಿಸಬೇಕು: ಈ ಸಂದರ್ಭದಲ್ಲಿ ಪ್ರವಾಹ ಪರಿಸ್ಥಿತಿ ಹಾಗೂ ಪರಿಹಾರ ಕಾರ್ಯಗಳ ಕುರಿತು ಬೆಳಗಾವಿ ಜಿಲ್ಲಾಧಿಕಾರಿ ಮುಖ್ಯಮಂತ್ರಿಗೆ ಮಾಹಿತಿ ನೀಡಿದರು. ಮಳೆಗಾಲದಲ್ಲಿ ನೀರಿನ ಪ್ರಮಾಣ ಹೆಚ್ಚಾದರೆ ಲೋಳಸೂರ ಸೇತುವೆ ಮುಳುಗಡೆಯಾಗುತ್ತಿದ್ದು, ಅದರ ಎತ್ತರ ಹೆಚ್ಚಿಸಬೇಕೆಂದು ಮುಖ್ಯಮಂತ್ರಿಯವರಿಗೆ ಡಿಸಿ ಮನವರಿಕೆ ಮಾಡಿಕೊಟ್ಟರು.

ಮನೆಗಳಿಗೆ ನೀರು ನುಗ್ಗುವ ಮೊದಲೇ ನಮ್ಮನ್ನು ರಕ್ಷಿಸಲಾಗಿದೆ ಎಂದು ಸಿಎಂ ಬಳಿ ಸಂತ್ರಸ್ತರು ಅಧಿಕಾರಿಗಳ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಸಂತ್ರಸ್ತರ ಊಟೋಪಚಾರ ಹಾಗೂ ಸೂಕ್ತ ವೈದ್ಯಕೀಯ ಸೌಲಭ್ಯ ಒದಗಿಸುವಂತೆ ಸಿಎಂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜುಗುಳ ಗ್ರಾಮಕ್ಕೆ ಭೇಟಿ ನಿಡಿದ ಸಿಎಂ ಸಿದ್ದರಾಮಯ್ಯ ಪ್ರವಾಹ ಪರಿಸ್ಥಿತಿ ಅವಲೋಕಿಸಿದರು. ಮಹಾರಾಷ್ಟ್ರದ ಗಡಿಗ್ರಾಮ ಕಿರಗಾಪುರ ನಡುವೆ ನಿರ್ಮಿಸಲಾದ ಸೇತುವೆ ಹಾಗೂ ಕೃಷ್ಣಾ ನದಿ ಪ್ರವಾಹ ಮಟ್ಟ ವೀಕ್ಷಿಸಿದ ಸಿಎಂ, ಶಾಸಕ ರಾಜು ಕಾಗೆ ಹಾಗೂ ಪರಿಷತ್ ಸದಸ್ಯ ಪ್ರಕಾಶ್ ಹುಕ್ಕೇರಿ ಅವರಿಂದ ಮಾಹಿತಿ ಪಡೆದುಕೊಂಡರು.

ಏನಮ್ಮ ಊಟದ ವ್ಯವಸ್ಥೆ ಚೆನ್ನಾಗಿದೆಯಾ?

ಅತಿವೃಷ್ಟಿ ಹಾಗೂ ಪ್ರವಾಹದಿಂದ ಬಾಧಿತಗೊಂಡಿರುವ ಗೋಕಾಕ್‌ನ ವಿವಿಧ ಪ್ರದೇಶಗಳು ಮತ್ತು ಕಾಳಜಿ ಕೇಂದ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು. ಸಂತ್ರಸ್ತ ಮಹಿಳೆಯರಿಗೆ ಊಟದ ವ್ಯವಸ್ಥೆ ಹೇಗಿದೆ ಎಂದು ಕೇಳಿದರು. ಪ್ರತಿಕ್ರಿಯಿಸಿದ ಮಹಿಳೆಯರು, ಜಿಲ್ಲಾಡಳಿತದಿಂದ ಉತ್ತಮ ಊಟ ಹಾಗೂ ವಸತಿ ಸೌಲಭ್ಯ ನೀಡುತ್ತಿದ್ದು ಯಾವುದೇ ಸಮಸ್ಯೆ ಆಗಿಲ್ಲ. ಪ್ರತಿ ವರ್ಷವೂ ಪ್ರವಾಹದಿಂದ ತೊಂದರೆಯಾಗುತ್ತಿದ್ದು ಶಾಶ್ವತ ಪರಿಹಾರ ಒದಗಿಸುವಂತೆ ಮನವಿ ಮಾಡಿದರು. ಸಂತ್ರಸ್ತರ ಸಮಸ್ಯೆ ಆಲಿಸಿದ ಸಿಎಂ ಸಿದ್ದರಾಮಯ್ಯ ಶಾಶ್ವತ ಪರಿಹಾರಕ್ಕೆ ಸರಕಾರ ಚಿಂತನೆ ನಡೆಸಿದ್ದು ಶೀಘ್ರದಲ್ಲೇ ಪರಿಹಾರ ಒದಗಿಸುವ ಭರವಸೆ ನೀಡಿದರು.

ಗೋಕಾಕ್‌ನ ಮುನ್ಸಿಪಲ್ ಕಾಲೇಜಿನ ಕಾಳಜಿ ಕೇಂದ್ರದಲ್ಲಿ ನಿರಾಶ್ರಿತ ಮಹಿಳೆಯರ ಸಮಸ್ಯೆ ಆಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ.

ಹೊಸ ಸೇತುವೆ ನಿರ್ಮಾಣಕ್ಕೆ ಮನವಿ

ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಲೋಳಸೂರ ಹೊಸ ಸೇತುವೆ ನಿರ್ಮಾಣಕ್ಕೆ ಮುಖ್ಯಮಂತ್ರಿಗೆ ಮನವಿ ಮಾಡಿರು. ನಂತರ ಗೋಕಾಕ್‌ನ ಪದವಿಪೂರ್ವ ಮಹಾವಿದ್ಯಾಲಯದ ಕಾಳಜಿ ಕೇಂದ್ರಕ್ಕೆ ಭೇಟಿನೀಡಿದ ಸಿದ್ದರಾಮಯ್ಯ, ಸಂತ್ರಸ್ತರನ್ನು ಸಂತೈಸಿದರು.

ಶಹಾಪುರ ಹಾಗೂ ಮಂಗಾವತಿ ಪ್ರವಾಹ ಪೀಡಿತವಾಗುವ ಗ್ರಾಮಗಳಾಗಿದ್ದು ಈ ಮೂರು ಗ್ರಾಮಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಮನೆಗಳಿವೆ. ಕೃಷ್ಣಾ ನದಿ ಪ್ರವಾಹ ಬಂದಾಗ ಅನಾಹುತಗಳಾಗುತ್ತವೆ. ಹೀಗಾಗಿ ಈ ಗ್ರಾಮಗಳನ್ನು ಶಾಶ್ವತವಾಗಿ ಸ್ಥಳಾಂತರಿಸಲು ಈ ಭಾಗದ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು.

-ಸಿದ್ದರಾಮಯ್ಯ ಮುಖ್ಯಮಂತ್ರಿ

ಸಿಎಂ ನೋಡಲು ಮನೆ ಮೇಲೆ ಏರಿದ್ದ ಯುವಕನಿಗೆ ಕರೆಂಟ್ ಶಾಕ್

ಅಥಣಿ: ಕೃಷ್ಣಾ ನದಿ ತೀರದ ಕಾಗವಾಡ ತಾಲೂಕಿನ ಜುಗಳ ಗ್ರಾಮಕ್ಕೆ ಸಿಎಂ ಸಿದ್ದರಾಮಯ್ಯ ಭೇಟಿ ನೀಡಿದ್ದ ವೇಳೆ ಅವರನ್ನು ನೋಡಲು ಮನೆ ಏರಿದ್ದ ಯುವಕನಿಗೆ ವಿದ್ಯುತ್ ತಂತಿ ತಗುಲಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಮಹೇಶ್ ಹುನ್ನರಗಿ (22) ಎಂಬ ಯುವಕನಿಗೆ ವಿದ್ಯುತ್ ತಂತಿ ತಗುಲಿದ್ದು ನಂತರ ಸಿಎಂ ಬೆಂಗಾವಲು ವಾಹನದ ಆಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ದಾಖಲಿಸಿದ್ದಾರೆ.ಯುವಕನ ಮುಖ ಮತ್ತು ಕೈಗೆ ಗಂಭೀರ ಗಾಯವಾಗಿದೆ.

ಪರಶುರಾಮ್ ಪ್ರಕರಣ ಸಿಐಡಿ ತನಿಖೆ ಆರಂಭ

ಎಸ್‌ಐ ಫೋನ್, ಪೆನ್‌ಡ್ರೈವ್ ಸೇರಿ ಮಹತ್ವದ ದಾಖಲೆ ವಶಕ್ಕೆ

ಯಾದಗಿರಿ: ಪಿಎಸ್‌ಐ ಪರಶುರಾಮ್ ಅನುಮಾನಾಸ್ಪದ ಸಾವಿನ ಕುರಿತು ಸಿಐಡಿ ತಂಡ ತನಿಖೆ ಆರಂಭಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ದಾಖಲೆಗಳನ್ನು ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ.

ಸೋಮವಾರ ಕೇಸಿನ ಕಡತಗಳನ್ನು ಮುಂದಿನ ತನಿಖೆಗಾಗಿ ಯಾದಗಿರಿ ಪೊಲೀಸರು ಸಿಐಡಿ ಅಧಿಕಾರಿಗಳಿಗೆ ಹಸ್ತಾಂತರಿಸಿದ್ದಾರೆ. ನಂತರ ಸಿಐಡಿ ಪೊಲೀಸ್ ಡಿವೈಎಸ್‌ಪಿ ಪುನೀತ್ ನೇತೃತ್ವದ ಅಧಿಕಾರಿಗಳ ತಂಡ ಹೆಚ್ಚುವರಿ ಎಸ್ಪಿ ಧರಣೇಶ, ಡಿವೈಎಸ್‌ಪಿ ಬಸವೇಶ್ವರ ಹಾಗೂ ಸಿಪಿಐ ಸುನೀಲ್ ಮೂಲಿಮನಿ, ಪಿಎಸ್‌ಐ ಹಣಮಂತ ಬಂಕಲಗಿ ಅವರನ್ನು ವಿಚಾರಣೆ ನಡೆಸಿ ಪ್ರಕರಣದ ಕುರಿತು ಮಾಹಿತಿ ಕಲೆ ಹಾಕಿದ್ದಾರೆ ಎನ್ನಲಾಗಿದೆ.

ಪಿಎಸ್‌ಐ ಮೊಬೈಲ್ ಕರೆಗಳ ಪರಿಶೀಲನೆ

ಮೊಬೈಲ್ ಸೇರಿ ಹಲವು ಮಹತ್ವದ ದಾಖಲೆ ವಶಕ್ಕೆ ಪ್ರಕರಣದ ಕುರಿತಾದ ದಾಖಲೆಗಳು, ಪೆನ್‌ಡ್ರೈವ್ ಜತೆಗೆ ಮೊಬೈಲ್ ಫೋನ್ ಮೂಲಕ ನಡೆದ ಮಾತುಕತೆ ಸೇರಿ ಹೀಗೆ ಮಹತ್ವದ ದಾಖಲೆಗಳ ಮೂಲಕ ಸಿಐಡಿ ತಂಡ ತೆಗೆದುಕೊಂಡು ತನಿಖೆ ಚುರುಕುಗೊಳಿಸಿದ್ದು, ಪ್ರಕರಣದಲ್ಲಿ ಫೋನ್ ಸಂಭಾಷಣೆಯಲ್ಲಿ ನಡೆದ ವರ್ಗಾವಣೆಯ ಕುರಿತು ಫೋನ್ ಕಾಲ್ ಪರಿಶೀಲನೆ, ಪತ್ನಿ ಹಾಗೂ ಸಹಚರರ ಹೇಳಿಕೆ ಸೇರಿ ಎಲ್ಲಾ ಆಯಾಮಗಳಲ್ಲಿ ಪ್ರಕರಣದ ಹೂರಣ ಹೊರತೆಗೆಯುವ ನಿಟ್ಟಿನಲ್ಲಿ ಸಿಐಡಿ ತಂಡ ತನಿಖೆ ನಡೆಸುತ್ತಿರುವ ಬಗ್ಗೆ ಪೊಲೀಸ್ ಮೂಲಗಳು ತಿಳಿಸಿವೆ.

ಎಫ್‌ಐಆರ್ ಆದ ಬಳಿಕ ಅವರಿಬ್ಬರು ದೆಹಲಿಗೆ ಹೇಗೆ ಹೋದರು? ಸರಕಾರವೇ ಶಾಸಕ ಹಾಗೂ ಅವರ ಪುತ್ರನನ್ನು ರಕ್ಷಣೆ ಮಾಡುತ್ತಿದೆ. ನನಗೆ ನ್ಯಾಯ ಸಿಗಬೇಕು. ಶಾಸಕರು ರಾಜೀನಾಮೆ ನೀಡಿ ಮಾಧ್ಯಮಗಳ ಮುಂದೆ ಬಂದು ತಮ್ಮ ತಪ್ಪು ಒಪ್ಪಿಕೊಳ್ಳಬೇಕು. ಜತೆಗೆ ಇನ್ನಾದರೂ ಪಿಎಸ್‌ಐಗಳಿಗೆ 2-3 ವರ್ಷಗಳ ಕಾಲ ಒಂದೆಡೆ ಸೇವೆ ಸಲ್ಲಿಸಲು ಅವಕಾಶ ನೀಡಬೇಕು.

ಶ್ವೇತಾ ಮೃತ ಪರಶುರಾಮ್ ಪತ್ನಿ

ಇದು ಸತ್ಯಕ್ಕೆ ದೂರವಾದದ್ದು, ಈ ಕುರಿತು ನನ್ನ ಮತ್ತು ಪುತ್ರನ ವಿರುದ್ಧ ದೊಡ್ಡ ಷಡ್ಯಂತ್ರ ರೂಪಿಸಿದ್ದಾರೆ. ಸರಕಾರ ಈಗಾಗಲೇ ಸಿಐಡಿ ತನಿಖೆಗೆ ವಹಿಸಿದೆ. ಸತ್ಯಾಸತ್ಯತೆ ಹೊರಬೀಳಲಿದೆ ಅಲ್ಲಿಯವರೆಗೂ ಕಾಯಬೇಕು. ಸಿಐಡಿ ಅಧಿಕಾರಿಗಳು ಎಲ್ಲಿಗೂ ಕರೆದರು ಹೋಗಿ ತನಿಖೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ಸಿಎಂ ಅವರನ್ನು ಭೇಟಿ ಮಾಡಿ ಎಲ್ಲವನ್ನೂ ತಿಳಿಸಿರುವೆ. ಅವರು ಸಹ ಎದೆಗುಂದದಂತೆ ಧೈರ್ಯ ನೀಡಿದ್ದಾರೆ.

-ಚನ್ನಾರಡ್ಡಿ ಪಾಟೀಲ ತುನ್ನೂರು ಶಾಸಕ

ಸಮಾಚಾರ ಸಣ್ಣದಲ್ಲ

ಸಿಎಂ ಸಿದ್ದರಾಮಯ್ಯ ಸರಕಾರ ಸುಭದ್ರ

ಬೆಳಗಾವಿ: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಸುಭದ್ರವಾಗಿದೆ. ಮುಂದಿನ ಚುನಾವಣೆ ಅವರ ನೇತೃತ್ವದಲ್ಲೇ ನಡೆಯಲಿದೆ. ಸರಕಾರಕ್ಕೆ ನಮ್ಮ ಸಂಪೂರ್ಣ ಬೆಂಬಲವಿ ದೆ ಎಂದು ವಿಧಾನ ಪರಿಷತ್ ಸದಸ್ಯ ಲಖನ್ ಜಾರಕಿಹೊಳಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ನಾಯಕತ್ವದಲ್ಲೇ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಮುಂದಿನ ಹತ್ತು ವರ್ಷ ಸಿದ್ದರಾಮಯ್ಯನವರೇ ಸಿಎಂ, ಅವರ ಬದಲಾವಣೆ ಇಲ್ಲ . ಸತೀಶ್ ಜಾರಕಿಹೊಳಿ ಸದ್ಯ ಸಿಎಂ ಆಗುತ್ತೇನೆ ಎಂದು ಹೇಳಿಲ್ಲ. ಇನ್ನೂ 10 ವರ್ಷ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರಕಾರ ಇರಲಿದೆ. ಸತೀಶ್ ಜಾರಕಿಹೊಳಿ ಅವರಿಗೆ ಡಿಸಿಎಂ ಹುದ್ದೆ ಸಿಕ್ಕರೆ ಸಿಗಬಹುದು ಎಂದು ಸಹೋದರ ಲಖನ್ ಜಾರಕಿಹೊಳಿ ಅಭಿಪ್ರಾಯಪಟ್ಟರು. ರಾಜ್ಯದಲ್ಲಿ 136 ಸದಸ್ಯ ಬಲದ ಕಾಂಗ್ರೆಸ್ ಸರಕಾರ ಸುಭದ್ರ ಆಡಳಿತ ನೀಡುತ್ತಿದೆ. ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನ ಆಗಿದ್ದು ಸಿದ್ದರಾಮಯ್ಯ ಉತ್ತಮ ಆಡಳಿತ ನೀಡುತ್ತಿದ್ದಾರೆ ಎಂದು ಲಖನ್ ಜಾರಕಿಹೊಳಿ ಹೇಳಿದರು.

ದೋಣಿ ಬೆಂಕಿಗಾಹುತಿ: 10 ಮೀನುಗಾರರ ರಕ್ಷಣೆ

ಮಂಗಳೂರು: ಅರಬ್ಬಿ ಸಮುದ್ರಕ್ಕೆ ಮೀನುಗಾರಿಕೆಗೆ ತೆರಳಿದ್ದ ಸಫಾವಿ ಎಂಬ ಟ್ರಾಲ್ ಬೋಟ್ಗೆ ಸೋಮವಾರ ನಸುಕಿನಲ್ಲಿ ಬೆಂಕಿ ಹೊತ್ತಿಕೊಂಡಿದೆ. ದೋಣಿ ಯಲ್ಲಿದ್ದ 10 ಮೀನುಗಾರರನ್ನು ಇನ್ನೊಂದು ದೋಣಿಯ ಮೀನುಗಾರರು ರಕ್ಷಿಸಿದ್ದಾರೆ. ಹೊಸಬೆಟ್ಟುವಿನ ರಶೀದಾ ಅವರಿಗೆ ಸೇರಿದ ಮೀನುಗಾರಿಕಾ ದೋಣಿ ಇದಾಗಿದೆ. ಮೀನುಗಾರಿಕಾ ರಜೆ ಮುಗಿದು ಆ.1 ರಿಂದ ಭಾನುವಾರ ಮೀನುಗಾರಿಕಾ ಋತು ಆರಂಭವಾಗಿತ್ತು. ದೋಣಿಯು ಭಾನುವಾರ ಮೀನುಗಾರಿಕೆಗೆ ತೆರಳಿತ್ತು.

ಚುಡಾಯಿಸಿದವನಿಗೆ ಮಹಿಳೆ ಚಪ್ಪಲಿ ಏಟು

ವಿಜಯಪುರ: ಕಣ್ಣು ಹೊಡೆದು ತನ್ನನ್ನು ಚುಡಾಯಿಸಿದ ಯುವಕನಿಗೆ ಮಹಿಳೆಯೊಬ್ಬರು ಚಪ್ಪಲಿ ಏಟು ನೀಡಿದ್ದಾರೆ. ವಿಜಯಪುರ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಘಟನೆ ನಡೆದಿದೆ. ಬಸ್‌ಗಾಗಿ ಕಾದು ನಿಂತಿದ್ದ ಮಹಿಳೆಗೆ ಕಣ್ಣು ಹೊಡೆದು ಸನ್ನೆ ಮಾಡಿದ್ದಾನೆ. ಮೊದಮೊದಲು ಮಹಿಳೆ ನಿರ್ಲಕ್ಷಿಸಿ ದ್ದಾರೆ. ಆದರೆ ಯಾವಾಗ ಅಸಭ್ಯ ವರ್ತನೆ ಶುರು ಮಾಡಿದನ್ನೋ ಸಿಟ್ಟಿಗೆದ್ದ ಮಹಿಳೆ ಕ ಚಪ್ಪಲಿ ಹಿಡಿದು, ಯುವಕನಿಗೆ ಹೊಡೆದಿದ್ದಾರೆ. ಬಸ್ ನಿಲ್ದಾಣದಲ್ಲಿದ್ದ ಸಹ ಪ್ರಯಾಣಿಕರು ಇದಕ್ಕೆ ಸಾಥ್ ನೀಡಿದ್ದಾರೆ. ಚಪ್ಪಲಿ ಏಟು ತಿಂದ ಕಾಮುಕ ಬಳಿಕ ಸ್ಥಳದಿಂದ ಕಾಲ್ಕಿತ್ತಿದ್ದಾನೆ. ಮಹಿಳೆ ಹಾಗೂ ಯುವಕನ ಹೆಸರು ತಿಳಿದುಬಂದಿಲ್ಲ. ಸದ್ಯ ಈ ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ. ಗಾಂಧಿಚೌಕ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

{ ಎಚ್. ವಿಶ್ವನಾಥ್ } ವಿಧಾನಪರಿಷತ್ ಸದಸ್ಯ

ಸದ್ಯ ರಾಜ್ಯದಲ್ಲಿ ಎರಡು ಯಾತ್ರೆಗಳು ನಡೆಯುತ್ತಿವೆ.ಒಂದು ಕಾಂಗ್ರೆಸ್‌ನ ಜನಾಂದೋಲನ ಯಾತ್ರೆ, ಮತ್ತೊಂದು ಬಿಜೆಪಿ-ಜೆಡಿಎಸ್ ಪಾದಯಾತ್ರೆ. ಇದನ್ನೆಲ್ಲ ಯಾವ ಪುರುಷಾರ್ಥಕ್ಕೆ ಮಾಡುತ್ತಿದ್ದಾರೋ ಗೊತ್ತಿಲ್ಲ. ಪರಸ್ಪರ ಏಕವಚನದಲ್ಲಿ ಕಿತ್ತಾಟ, ಮಾತಿನ ಪ್ರಯೋಗಗಳು ಅಸಹ್ಯ ಹುಟ್ಟಿಸುತ್ತಿವೆ.



ವಕ್ಫ್ ಬೋರ್ಡ್ ಒಂದು ಕರಾಳ ಶಾಸನ: ಯತ್ನಾಳ

ಪ್ರಧಾನಿ ಕ್ರಮಕ್ಕೆ ಬಿಜೆಪಿ ಶಾಸಕನ ಪ್ರಶಂಸೆ

ವಿಜಯಪುರ: ವಕ್ಫ್ ಬೋರ್ಡ್ ಒಂದು ಕರಾಳ ಶಾಸನ. ಇದನ್ನು ತೆಗೆಯಲು ಪ್ರಧಾನಿ ಮೋದಿ ಅವರು ಮುಂದಾಗಿದ್ದು ಒಳ್ಳೆಯದು. ಅದನ್ನು ಸ್ವಾಗತಿಸುತ್ತೇನೆ. ಕಾಶ್ಮೀರದಲ್ಲಿ 370 ವಿಧಿ ತೆಗೆದಂತೆ ದೇಶದಲ್ಲಿ ವಕ್ಫ್ ಕಾಯ್ದೆ ತೆಗೆಯಬೇಕು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ವಕ್ಫ್ ಮಂಡಳಿ ಹೆಸರಿನಲ್ಲಿ ದೇಶಾದ್ಯಂತ ಲಕ್ಷಾಂತರ ಆಸ್ತಿ ಇದೆ. ಈ ಕರಾಳ ಶಾಸನ ತೆಗೆಯುವುದರಿಂದ ದಲಿತರಿಗೆ, ಹಿಂದುಳಿದವರಿಗೆ ಒಳ್ಳೆಯದಾಗಲಿದೆ. ಓವೈಸಿಯಷ್ಟೇ ಅಲ್ಲ, ರಾಹುಲ್ ಗಾಂಧಿ, ಅಖಿಲೇಶ ಯಾದವ್ ಕೂಡ ವಿರೋಧ ಮಾಡುತ್ತಾರೆ. ಅದರಿಂದ ಏನು ಆಗಲ್ಲ. ವಕ್ಫ್ ಹೆಸರಿನಲ್ಲಿರುವ 12 ಲಕ್ಷ ಎಕರೆಯಷ್ಟು ಜಮೀನು ವಾಪಸ್ ಬಂದರೆ ಎಲ್ಲರಿಗೂ ಅನುಕೂಲ ಆಗಲಿದೆ. ಪ್ರಧಾನಿ ವಕ್ಫ್ ಕಾಯ್ದೆ ಬದಲಾವಣೆ ಮಾಡುತ್ತಿರುವುದು ಸಂತಸದ ವಿಚಾರ ಎಂದರು.

ನಾಳೆ ಬಿಜೆಪಿ ನನ್ನ ಕೈಗೆ ಬಂದರೆ ನನ್ನ ಕಡೆ ಬರ್ತಾರೆ

ಮೈಸೂರು ಮುಡಾ ಹಗರಣ ಖಂಡಿಸಿ ಬಿಜೆಪಿ ಪಾದಯಾತ್ರೆ ವಿಚಾರ, ಭ್ರಷ್ಟರೇ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವಂತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧದ ತಮ್ಮ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿದ ಕೆಲ ಬಿಜೆಪಿ ಶಾಸಕರ ಬಗ್ಗೆ ಪ್ರತಿಕ್ರಿಯಿಸಿದ ಯತ್ನಾಳ್, ಅವರೆಲ್ಲ ಚೇಲಾಗಳು. ಅವರು ಏನೇನು ಕೊಟ್ಟು ಏನೇನು ಆಗಿದ್ದಾರೆ ಗೊತ್ತಿದೆ. ಅವರಿಗೆ ನೈತಿಕತೆ ಇಲ್ಲ. ನಾಳೇನೇ ವಿಜಯೇಂದ್ರರ ತೆಗೆಯಲಿ.ನನ್ನ ಕಡೆ ಬರ್ತಾರೆ, ನನ್ನ ಮನೆ ಮುಂದೆ ನಿಲ್ಲುತ್ತಾರೆ .ಆಗ ನಾನೇ ವಿಜಯೇಂದ ವಿರುದ್ಧ ಅವರ ಕೈಲಿ ಮಾತನಾಡಿಸುತ್ತೇನೆ. ನಾನೇ ಮಗ್ಗಲು ನಿಂತು ವಿಜಯೇಂದ್ರಗೆ ಬಾಯಿಗೆ ಬಂದಂತೆ ಮಾತನಾಡಿಸುತ್ತೇನೆ ಎಂದು ಮಾರ್ಮಿಕವಾಗಿ ನುಡಿದರು.

ಸರಕಾರ ಬೀಳಿಸುವುದು ಸಾಧನೆಯೇ: ಸಚಿವ

ಬಿಜೆಪಿ-ಜೆಡಿಎಸ್‌ಗೆ ಕೃಷ್ಣಬೈರೇಗೌಡ ತರಾಟೆ

ಚಿಕ್ಕಮಗಳೂರು: ಬಿಜೆಪಿ ಮತ್ತು ಜೆಡಿಎಸ್‌ನವರು ಏನಾದರೂ ಮಾಡಿ ನಮ್ಮ ಸರಕಾರ ಬೀಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ದ್ವೇಷ ರಾಜಕಾರಣ ಮಾಡುತ್ತಿದ್ದಾರೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಟೀಕಿಸಿದ್ದಾರೆ.

ಜಿಲ್ಲೆಯ ಮಳೆ ಹಾನಿ ಪ್ರದೇಶಕ್ಕೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿದ ನಂತರ ಸುದ್ದಿಗಾರರ ಜತೆ ಮಾತನಾಡಿ, ಕೇಂದ್ರದಲ್ಲಿ ಎನ್‌ಡಿಎ ಸರಕಾರ ಇದೆ. ಕುಮಾರಸ್ವಾಮಿ ಮಂತ್ರಿಯಾಗಿದ್ದಾರೆ. ರಾಜ್ಯಕ್ಕೆ ಅವರ ಕೊಡುಗೆ ಏನು ಎಂದು ಪ್ರಶ್ನಿಸಿದರು.

ರಾಜ್ಯದ ಜನತೆ ನಿಮಗೆ ಅಧಿಕಾರ ನೀಡಿದ್ದು ದ್ವೇಷ ರಾಜಕಾರಣ ಮಾಡಲೋ ಅಥವಾ ರಾಜ್ಯಕ್ಕೆ ಉಪಕಾರ ಮಾಡುವುದಕ್ಕೋ ಎಂದು ತೀಕ್ಷ್ಣವಾಗಿ ನುಡಿದ ಅವರು, ಸರಕಾರ ಬೀಳಿಸುವುದು ಎತ್ತುವುದು ಜನ ಮಾಡುತ್ತಾರೆ. ಸರಕಾರ ಬೀಳಿಸುವುದೇ ನಿಮ್ಮ ಸಾಧನೆಯೇ, ನಿಮ್ಮ ಸಾಧನೆ ಕೊಡುಗೆ ಬಗ್ಗೆ ಹೇಳಿ ಸವಾಲೆಸೆದರು. ಕೇಂದ್ರದಿಂದ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ ಮುಚ್ಚಿಹಾಕಲು ನಾಟಕ ಮಾಡುತ್ತಿದ್ದಾರೆ. ಮೇಕೆದಾಟು, ಭದ್ರಾ, ಮೇಲ್ದಂಡೆ ಯೋಜನೆಗಳಿಗೆ ಬರಬೇಕಾದ ಅನುದಾನ ಕೊಡಿಸುವ ಕೆಲಸ ಮಾಡಿ ಎಂದು ಸಚಿವ ಕೃಷ್ಣ ಬೈರೇಗೌಡ ತಾಕೀತು ಮಾಡಿದರು.

ಕೇಂದ್ರ ಸರಕಾರದಿಂದ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಿ, ಆಗ ಕಾಂಗ್ರೆಸ್ಸಿಗನಾಗಿ ನಾನೇ ನಿಮಗೆ ಕೈಮುಗಿದು ಧನ್ಯವಾದ ಹೇಳುತ್ತೇನೆ. ಭದ್ರಾ ಮೇಲ್ದಂಡೆ, ಕಳಸ ಬಂಡೂರಿ ಯೋಜನೆಯನ್ನ ಕೇಂದ್ರ ಸರಕಾರ ಕೆಳಗೆ ಹಾಕಿಕೊಂಡು ಕೂತಿದೆ. ಮೇಕೆದಾಟು ಯೋಜನೆಗೆ ಕೇಂದ್ರದಿಂದ ಅನುಮತಿ ಕೊಡಿಸಿ. ಆವಾಗ ನಾನು ಕಾಂಗ್ರೆಸ್ಸಿಗನಾಗಿ ನಿಮಗೆ ಕೈಮುಗಿದು ಧನ್ಯವಾದ ತಿಳಿಸು ತ್ತೇನೆ. ಇದನ್ನು ಮಾಡಿದರೆ ನೀವು ಕೇಂದ್ರದಲ್ಲಿ ಮಂತ್ರಿಯಾಗಿದ್ದಕ್ಕೆ ಸಾರ್ಥಕವಾಗುತ್ತದೆ.

-ಕೃಷ್ಣ ಬೈರೇಗೌಡ, ಸಚಿವ

ಚಿಕ್ಕಮಗಳೂರು ಜಿಲ್ಲೆಯ ಮಳೆಹಾನಿ ಪ್ರದೇಶದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಪರಿಶೀಲನೆ ನಡೆಸಿದರು.

ವಿಶ್ವವಿದ್ಯಾಲಯ ಎಂದಿಗೂ ಜಾತಿ ತಾರತಮ್ಯ ಮಾಡಿಲ್ಲ

ಸಿಯುಕೆ ಕುಲಪತಿ ವಿರುದ್ಧ ಸುಳ್ಳು ಪ್ರಕರಣ

ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ ಮಾಜಿ ವಿದ್ಯಾರ್ಥಿ ನಂದಕುಮಾರ್, ಉಪ ಕುಲಪತಿ, ಕುಲಸಚಿವ ಮತ್ತು ಭದ್ರತಾ ಅಧಿಕಾರಿ ವಿರುದ್ಧ ನರೋಣಾ ಪೊಲೀಸ್ ಠಾಣೆಯಲ್ಲಿ ಆ.1 ರಂದು ಸುಳ್ಳು ದೌರ್ಜನ್ಯ ಪ್ರಕರಣವನ್ನು ದಾಖಲಿಸಿದ್ದು, ವಿಶ್ವವಿದ್ಯಾಲಯ ಎಂದಿಗೂ ಜಾತಿ ಆಧಾರದ ಮೇಲೆ ಆತನೊಂದಿಗೆ ತಾರತಮ್ಯ ಮಾಡಿಲ್ಲ ಎಂದು ಸಿಯುಕೆ ಕುಲಸಚಿವ ಹಾಗೂ ಆರ್ಥಿಕ ತಜ್ಞ ಪ್ರೊ.ಆರ್.ಆರ್.ಬಿರಾದಾರ್ ಸ್ಪಷ್ಟನೆ ನೀಡಿದ್ದಾರೆ.

ಭದ್ರತಾ ಸಿಬ್ಬಂದಿಯೊಂದಿಗೆ ನಂದಕುಮಾರ್ ಅನುಚಿತವಾಗಿ ವರ್ತಿಸಿ, ಮುಖ್ಯದ್ವಾರ ಮುಚ್ಚಿ ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಗೆ ತೊಂದರೆಯುಂಟು ಮಾಡಿದ್ದಾನೆ. ಆ.1ರಂದು ವಿಶ್ವವಿದ್ಯಾಲಯದ ಆವರಣ ಪ್ರವೇಶಿಸಲು ಪ್ರಯತ್ನಿಸಿದ್ದಾನೆ ಎಂದು ಬಿರಾದಾರ್ ದೂರಿದ್ದಾರೆ.

ಭದ್ರತಾ ಸಿಬ್ಬಂದಿ ಜತೆ ಅನುಚಿತ ವರ್ತನೆ: ನಿಯಮದಂತೆ ಪ್ರಕಾರ, ಭದ್ರತಾ ಸಿಬ್ಬಂದಿ ವಿಶ್ವವಿದ್ಯಾಲಯದ ಆವರಣವನ್ನು ಪ್ರವೇಶಿಸಲು ಗುರುತಿನ ಚೀಟಿಯನ್ನು ತೋರಿಸಲು ಕೇಳಿದ್ದಾರೆ. ಆಗ ಮಾಜಿ ವಿದ್ಯಾರ್ಥಿ ಗುರುತಿನಚೀಟಿ ತೋರಿಸಲು ನಿರಾಕರಿಸಿದ್ದಾನೆ. ಆಗ ಭದ್ರತಾ ಸಿಬ್ಬಂದಿ ಮೊಬೈಲ್‌ನಲ್ಲಿ ಗುರುತಿನ ಚೀಟಿಯ ಪ್ರತಿಯನ್ನಾದರೂ ತೋರಿಸುವಂತೆ ಕೇಳಿದಾಗ ಅದಕ್ಕೂ ನಿರಾಕರಿಸಿದ್ದಾನೆ. ನಂತರ ಮುಖ್ಯಗೇಟ್‌ನ ಭದ್ರತಾ ಕೇಂದ್ರದಲ್ಲಿ ಇರಿಸಲಾದ ರಿಜಿಸ್ಟರ್‌ನಲ್ಲಿ ಕನಿಷ್ಠ ಸಹಿಯೊಂದಿಗೆ ಹೆಸರನ್ನು ಬರೆಯಲೂ ನಿರಾಕರಿಸಿ, ನಾನೇಕೆ ಸಹಿ ಮಾಡಲಿ ಎಂದು ಭದ್ರತಾ ಸಿಬ್ಬಂದಿಯನ್ನು ಪ್ರಶ್ನಿಸಿ, ಅನುಚಿತವಾಗಿ ವರ್ತಿಸಿದ್ದಾನೆ ಎಂದು ಕುಲಸಚಿವರು ವಿವರಿಸಿದ್ದಾರೆ. ದೈಹಿಕವಾಗಿ ಭದ್ರತಾ ಸಿಬ್ಬಂದಿ ಅವರನ್ನು ತಳ್ಳಿ ಹೊಡೆಯಲು ಪ್ರಯತ್ನಿಸಿದ್ದಾನೆ. ಗೇಟನ್ನು ಹೊರಗಿನಿಂದ ಬೀಗಹಾಕಿ ದ್ವಿಚಕ್ರ ವಾಹನವನ್ನು ಮುಖ್ಯ ಗೇಟ್‌ನ ಮುಂದೆ ನಿಲ್ಲಿಸಿ ಅಸಭ್ಯವಾಗಿ ವರ್ತಿಸಿದ್ದಾನೆ. 2ಗಂಟೆಗಳ ಕಾಲ ಯಾರೂ ಒಳಗೆ ಬರದಂತೆ ಅಥವಾ ಹೊರಗೆ ಹೋಗದಂತೆ ದ್ವಾರ ಮುಚ್ಚಿದ್ದಾನೆ. ನಂತರ ಕುಲಪತಿ, ಕುಲಸಚಿವ ಮತ್ತು ಭದ್ರತಾ ಅಧಿಕಾರಿ ವಿರುದ್ಧ ಸುಳ್ಳು ದೌರ್ಜನ್ಯ ಪ್ರಕರಣ ದಾಖಲಿಸಿದ್ದಾನೆ ಎಂದು ಹೇಳಿಕೆ ನೀಡಿದ್ದಾರೆ.

ಬಡ್ತಿ ನಿರಾಕರಿಸಿದ 250ಕ್ಕೂ ಹೆಚ್ಚು ಪೊಲೀಸರು

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 250ಕ್ಕೂ ಹೆಚ್ಚು ಮಂದಿ ಕಾನ್‌ಸ್ಟೇಬಲ್ ಹಾಗೂ ಹೆಡ್ ಕಾನ್ಸ್ ಸ್ಟೇಬಲ್‌ಗಳು ವೈಯಕ್ತಿಕ ಕಾರಣ ನೀಡಿ ಬಡ್ತಿ ನಿರಾಕರಿಸಿದ್ದಾರೆ.

ಕಳೆದೊಂದು ವರ್ಷದಿಂದ ಕಾನ್‌ಸ್ಟೇಬಲ್‌ನಿಂದ ಎಎಸ್‌ಐವರೆಗೂ 1,400ಕ್ಕಿಂತ ಹೆಚ್ಚು ಸಿಬ್ಬಂದಿಗೆ ಪೊಲೀಸ್ ಇಲಾಖೆ ಮುಂಬಡ್ತಿ ನೀಡಿತ್ತು. ಈ ಪೈಕಿ 250ಕ್ಕಿಂತ ಹೆಚ್ಚು ಮಂದಿ ಪೊಲೀಸರು ಮುಂಬಡ್ತಿಯನ್ನು ಇನ್ನೊಂದು ವರ್ಷದವರೆಗೆ ಬೇಡವೆಂದು ತಿರಸ್ಕರಿಸಿದ್ದಾರೆ. ವೈಯಕ್ತಿಕ ಕಾರಣಗಳೊಂದಿಗೆ ಬಡ್ತಿ ಪಡೆದರೆ ಬೇರೆ ಜಿಲ್ಲೆಗಳಿಗೆ ವರ್ಗಾವಣೆಗೊಂಡ ನಂತರ ಗೊಂದಲ ಉಂಟಾಗಬಹುದಾದ ಆತಂಕವೂ ಇದಕ್ಕೊಂದು ಕಾರಣ ಎನ್ನಲಾಗುತ್ತಿದೆ.

ಅಂತರ ಜಿಲ್ಲಾ ವರ್ಗಾವಣೆ ಪಡೆಯಲು ನಗರದಲ್ಲಿ ಕಡ್ಡಾಯವಾಗಿ ಏಳು ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿರಬೇಕು. ಅದೇ ಸೂತ್ರದಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಿದವರ ಪೈಕಿ ಪೇದೆಗಳಿಗೆ ನಿಯಮಾನುಸಾರ ಮುಂಬಡ್ತಿ ನೀಡಿದರೂ ಅಂತರ ಜಿಲ್ಲಾ ವರ್ಗಾವಣೆಗಾಗಿ ಇನ್ನೊಂದು ವರ್ಷದವರೆಗೆ ಪ್ರಮೋಷನ್ ಪಡೆಯು ವುದಿಲ್ಲ ಎಂದು ಷರಾ ಬರೆದುಕೊಟ್ಟಿದ್ದಾರೆ.

ಉತ್ತರ ಕರ್ನಾಟಕ ಸೇರಿ ರಾಜ್ಯದ ವಿವಿಧ ಜಿಲ್ಲೆಗಳ ಸಾವಿರಾರು ಕಾನ್‌ಸ್ಟೇಬಲ್ ಹಾಗೂ ಹೆಡ್ ಕಾನ್‌ಸ್ಟೇಬಲ್‌ಗಳು ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿ ದ್ದಾರೆ. ನಗರದ ವ್ಯಾಪ್ತಿಯಲ್ಲಿ ವರ್ಗಾವಣೆಯಾಗಬೇಕಾದರೆ ಐದು ವರ್ಷ ಹಾಗೂ ಅಂತರ ಜಿಲ್ಲಾ ವರ್ಗಾವಣೆಗೆ ಏಳು ವರ್ಷಗಳು ಕಡ್ಡಾಯವಾಗಿ ಕೆಲಸ ಮಾಡಬೇಕೆಂಬ ನಿಯಮವಿದೆ. ಸತಿ - ಪತಿ ಪೊಲೀಸ್ ದಂಪತಿಗಳ ಜಿಲ್ಲಾವಾರು ವರ್ಗಾವಣೆ ಕೋರಿದರೆ ಆದ್ಯತೆ ಮೇರೆಗೆ ವರ್ಗಾವಣೆ ಮಾಡುವಂತೆ ಸರಕಾರ ಸೂಚಿಸಿತ್ತು. ಸೇವಾ ಜೇಷ್ಠತೆ ಬಿಟ್ಟುಕೊಡುವ ವರ್ಗಾವಣೆ ಮಾಡು ವಂತೆ ಸೂಚಿಸಿದ್ದ ಹಿನ್ನೆಲೆಯಲ್ಲಿ ಈ ವರ್ಷ 81 ಮಂದಿ ಪೊಲೀಸ್ ಪತಿ-ಪತ್ನಿಯರನ್ನು ಸರಕಾರವು ವರ್ಗಾವಣೆ ಮಾಡಿದೆ.

ಮುಡಾ ಹಗರಣ ಸಾಬೀತಾದರೆ ಬೊಮ್ಮಾಯಿ ಜೈಲಿಗೆ

ಸಿಎಂ ವಿರುದ್ಧ ಆರೋಪಕ್ಕೆ ಸಚಿವ ಚಲುವರಾಯಸ್ವಾಮಿ ತಿರುಗೇಟು

ಮಂಡ್ಯ: ಮುಡಾ ಹಗರಣಕ್ಕೂ ಸಿದ್ದರಾಮಯ್ಯನವರಿಗೂ ಸಂಬಂಧವೇ ಇಲ್ಲ. ಹಗರಣ ನಡೆದಿರುವುದು ಸಾಬೀತಾದರೆ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಅಂದಿನ ಮುಡಾ ಅಧ್ಯಕ್ಷ ಮೊದಲು ಜೈಲಿಗೆ ಹೋಗಬೇಕಾಗುತ್ತದೆ ಎಂದು ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, 135 ಸ್ಥಾನಗಳನ್ನು ಗೆದ್ದು, ಜನರಿಂದ ಆಯ್ಕೆಯಾಗಿ ಬಂದಿರುವ ಕಾಂಗ್ರೆಸ್ ಸರಕಾರವನ್ನು ತೆಗೆಯುತ್ತೇವೆ ಎಂದು ಬಿಜೆಪಿ-ಜೆಡಿಎಸ್ ನಾಯಕರು ಹೇಳಿಕೆ ಕೊಡುತ್ತಿದ್ದಾರೆ. ಹೀಗೆ ಹೇಳುವುದೇ ಕ್ರಿಮಿನಲ್ ಅಪರಾಧ. ಈ ಆರೋಪದಡಿ ಇವರನ್ನು ಜೈಲಿಗೆ ಹಾಕಬಹುದು ಎಂದು ಕಿಡಿಕಾರಿದರು.

ಎಚ್‌ಡಿಕೆ ಲೆಕ್ಕ ತೋರಿಸಲಿ: ಡಿ.ಕೆ.ಶಿವಕುಮಾರ್ ಅವರು ರಾಜಕಾರಣಕ್ಕೂ ಬರುವ ಮುಂಚೆಯೇ ವ್ಯಾಪಾರ ಮಾಡುತ್ತಿದ್ದರು. ಅವರು ಗಳಿಸಿರುವ ಆಸ್ತಿಗೆ 'ಕಾನೂನುಬದ್ಧ ದಾಖಲೆಗಳಿವೆ. ಆದರೆ, ಎಚ್.ಡಿ.ಕುಮಾರಸ್ವಾಮಿ ಯಾವುದೇ ವ್ಯಾಪಾರವಿಲ್ಲದೆ ಏರ್‌ಪೋರ್ಟ್ ರಸ್ತೆ, ನೆಲಮಂಗಲ ರಸ್ತೆ, ಕೆಂಗೇರಿ ರಸ್ತೆಗಳಲ್ಲಿ ಅಪಾರ ಆಸ್ತಿ ಮಾಡಿದ್ದಾರೆ. ಸಿನಿಮಾ ರಂಗದಿಂದ ಇಷ್ಟೊಂದು ಆಸ್ತಿ ಮಾಡಲು ಸಾಧ್ಯವೇ? ಕುಮಾರಸ್ವಾಮಿ ಸಿನಿಮಾ ರಂಗದಲ್ಲಿ ದುಡ್ಡು ಮಾಡಿದ್ದರೆ ಲೆಕ್ಕ ತೋರಿಸಲಿ ಎಂದು ಸವಾಲು ಹಾಕಿದರು.

ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾಗಿರುವುದರಿಂದ ಜುಲೈ 10ರಿಂದ ನಾಲೆಗಳಿಗೆ ನಿರಂತರವಾಗಿ ನೀರು ಹರಿಸುತ್ತಿದ್ದೇವೆ. ಭತ್ತದ ನಾಟಿ ಕಾರ್ಯಕ್ಕೆ ತೊಂದರೆಯಾಗದಂತೆ ನೀರು ಬಿಡುತ್ತೇವೆ. ರೈತರು ಆತಂಕಪಡುವ ಅಗತ್ಯವಿಲ್ಲ. ನೀರು ಹರಿಸುವುದರಿಂದ ಕೃಷಿ ಚಟುವಟಿಕೆಗೆ ತೊಂದರೆಯಾಗುವುದಿಲ್ಲ.

ಚಲುವರಾಯ ಸ್ವಾಮಿ ಸಚಿವ

ಸರಕಾರ ಕೆಡಹುವ ದುಸ್ಸಾಹಸ ಇಲ್ಲ

ಹುಬ್ಬಳ್ಳಿ: ಯಾವುದೇ ಸರಕಾರವನ್ನು ಕೆಡುವುವ ದುಸ್ಸಾಹಸಕ್ಕೆ ನಾವಾಗಲೀ, ಹೈಕಮಾಂಡ್ ಆಗಲೀ ಕೈ ಹಾಕಲ್ಲ. ಸರ್ಕಾರ ತಾನಾಗಿಯೇ ಬಿದ್ದರೆ, ನಾವು ಸನ್ಯಾಸಿಗಳಲ್ಲ ಎಂದು ಶಾಸಕ ಮಹೇಶ್ ಟೆಂಗಿನಕಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಸರಕಾರವನ್ನು ಕಿತ್ತೊಗೆಯುವ ಕೆಲಸ ಮಾಡಲ್ಲ. ಕಾಂಗ್ರೆಸ್‌ಗೆ ಜನರು ಜನಾಭಿಪ್ರಾಯ ಕೊಟ್ಟು ಒಳ್ಳೆಯ ಅಧಿಕಾರ ಕೊಟ್ಟಿದ್ದಾರೆ. ಆದರೆ ಭ್ರಷ್ಟಾಚಾರ ಮಾಡಲಿ ಹಾಗೂ ಪೊಲೀಸ್ ಹತ್ಯೆ ಮಾಡಲಿ ಎಂದು ಹೇಳಿಲ್ಲ ಎಂದರು. ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಮಾಡಲು ವಿಜಯೇಂದ್ರ ಪಾದಯಾತ್ರೆ ಮಾಡುತ್ತಿದ್ದಾರೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ, ನಾನೊಬ್ಬ ಜನಪ್ರತಿನಿಧಿ. ಪಕ್ಷದ ಹಿರಿಯರು ಗಮನಿಸುತ್ತಾರೆ. ಪಕ್ಷದ ಪ್ರಮುಖರು ಕರೆದು ಮಾತನಾಡಲಿದ್ದು, ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಂದು ಸ್ಪಷ್ಟಪಡಿಸಿದರು.

ಸಿಎಂ, ಡಿಸಿಎಂ ನಿಮ್ಮ ಕಾಲದಲ್ಲಿ ಹಗರಣವಾಗಿತ್ತು ಎನ್ನುತ್ತಿದ್ದಾರೆ. ನಾವು ಹಗರಣ ಮಾಡಿದ್ದೇವೋ, ಬಿಟ್ಟಿದ್ದೇವೋ ಗೊತ್ತಿಲ್ಲ. ಈಗ ನಿಮ್ಮದೇ ಸರಕಾರ ಇದೆ. ನಿಮಗೆ ಮಾಹಿತಿಯಿದ್ದರೆ ತನಿಖೆ ನಡೆಸಿ, ಇಲ್ಲವೇ ಸಿಬಿಐ ತನಿಖೆಗೆ ವಹಿಸಲಿ. ರಾಜ್ಯದ ಜನತೆಗೆ ಸತ್ಯಾಸತ್ಯತೆ ಗೊತ್ತಾಗಲಿ ಎಂದು ಸವಾಲು ಹಾಕಿದರು.

ದೋಸ್ತಿ ನಾಯಕರ ಉದ್ದೇಶ ಈಡೇರಲ್ಲ

ಬಿಜೆಪಿ-ಜೆಡಿಎಸ್‌ನಿಂದ ಆಧಾರಹಿತ ಆರೋಪ | ಬಿಜೆಪಿಯಿಂದ ರಾಜ್ಯದ ಲೂಟಿ: ಪಾಟೀಲ್

ಬೆಂಗಳೂರು: ಬಹುಮತ ಹೊಂದಿರುವ ರಾಜ್ಯ ಸರಕಾರವನ್ನು ಅಸ್ಥಿರಗೊಳಿಸುವ ಬಿಜೆಪಿ-ಜೆಡಿಎಸ್ ನಾಯಕರ ಉದ್ದೇಶ ಯಾವುದೇ ಕಾರಣಕ್ಕೂ ಈಡೇರುವುದಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ್ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಶಿವಾಜಿನಗರದ ಅಟಲ್ ಬಿಹಾರಿ ವಾಜಪೇಯಿ ಮೆಡಿಕಲ್ ಕಾಲೇಜು ಮತ್ತು ಬೌರಿಂಗ್ ಹಾಗೂ ಚರಕ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ 136 ಸ್ಥಾನ ನೀಡಿದ್ದ ಜನಕ್ಕೆ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಸರಕಾರ ಅಸ್ಥಿರಗೊಳ್ಳಲಿದೆ ಎಂಬ ಭಾವನೆ ಮೂಡಿಸುವ ಪ್ರಯತ್ನ ಈಡೇರುವುದಿಲ್ಲ ಎಂದು ತಿಳಿಸಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಗರಣ ನಡೆದಿದೆ ಎಂದು ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಅಷ್ಟಕ್ಕೂ ಮೂಡಾದಲ್ಲಿ ಹಗರಣ ಏನಾಗಿದೆ? ಈ ಹಗರಣ ಮಾಡಿದವರು ಯಾರು? ಇದು ಬಿಜೆಪಿ ಸರಕಾರದ ಅವಧಿಯಲ್ಲಿ ಆಗಿರುವ ಹಗರಣವಲ್ಲವೇ? ಪ್ರಶ್ನಿಸಿದರು.

ಮೂಡಾದಲ್ಲಿ ನಡೆದಿರುವ ಹಗರಣ ಏನೆಂಬುದನ್ನು ಪಾದಯಾತ್ರೆ ನಡೆಸುತ್ತಿರುವ ಎರಡು ಪಕ್ಷಗಳ ನಾಯಕರು ಹೇಳಬೇಕು. ಹಿಂದೆ ನಾಲ್ಕು ವರ್ಷ ಆಡಳಿತ ನಡೆಸಿದ ಬಿಜೆಪಿ ಲೂಟಿ ಹೊಡೆದಿದ್ದು, ಪ್ರತಿಯೊಂದು ಇಲಾಖೆಯಲ್ಲೂ ನೂರಾರು ಕೋಟಿ ಹಗರಣ ನಡೆಸಿ ಈಗ ಯಾವ ಮುಖ ಇಟ್ಟುಕೊಂಡು ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದ್ದಾರೆ.

ರಾಜ್ಯದ ಜನತೆ ಬಿಜೆಪಿ ಬಗ್ಗೆ ಸಂಪೂರ್ಣ ನಂಬಿಕೆ ಕಳೆದುಕೊಂಡಿದ್ದು, ಸದ್ಯಕ್ಕೆ ಬಿಜೆಪಿ ಸ್ಥಿತಿ ನೀರಿನಿಂದ ತಗೆದ ಮೀನಿನ ಹಾಗಾಗಿದೆ. ಅಸ್ತಿತ್ವ ಉಳಿಸಿಕೊಳ್ಳಲು ಪಾದಯಾತ್ರೆ ನಾಟಕ ಮಾಡುತ್ತಿದ್ದು, ಕನ್ನಡಿಗರು ಮೂರ್ಖರಲ್ಲ. ನೀವು ಎಷ್ಟೇ ಪಾದಯಾತ್ರೆ ಮಾಡಿದರೂ ಜನತೆ ನಂಬುವ ಸ್ಥಿತಿಯಲ್ಲಿ ಇಲ್ಲ. ಮುಂಬರುವ ಚುನಾವಣೆಗಳಲ್ಲಿ ಎರಡೂ ಪಕ್ಷಗಳಿಗೆ ಜನ ತಕ್ಕ ಪಾಠ ಕಲಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಜೆಡಿಎಸ್ ನಾಯಕರಿಗೆ ನಾಚಿಕೆ ಮಾನ ಮರ್ಯಾದೆ ಇದೆಯಾ? ಸರಕಾರ ಕೆಡವಿದವರೊಂದಿಗೆ ಜೆಡಿಎಸ್ ಹೋಗಿದ್ದು, ಬರುವ ದಿನಗಳಲ್ಲಿ ಜೆಡಿಎಸ್ ರಾಜ್ಯದಲ್ಲಿ ಸಂಪೂರ್ಣವಾಗಿ ನೆಲ ಕಚ್ಚಲಿದೆ. ನಾವು ಹಿಂದೆ ಆ ಪಕ್ಷಕ್ಕೆ ಆಶ್ರಯ ಕೊಟ್ಟಿದ್ದೆವು. ವಾಸ್ತವವಾಗಿ ಜೆಡಿಎಸ್ ನಮಗೆ ಬೆಂಬಲ ನೀಡಬೇಕಿತ್ತು.

ಶರಣ್ ಪ್ರಕಾಶ್ ಪಾಟೀಲ ವೈದ್ಯಕೀಯ ಶಿಕ್ಷಣ ಸಚಿವ

ಸಿಎಂ ಸಿದ್ದು ವಿರುದ್ಧ ದ್ವೇಷದ ರಾಜಕಾರಣ

ಬಾಗಲಕೋಟೆ: ಸಿಎಂ ಸಿದ್ದರಾಮಯ್ಯ ಅವರ ವ್ಯಕ್ತಿತ್ವಕ್ಕೆ ಕಳಂಕ ತರುವ ಉದ್ದೇಶದಿಂದ ಕೇಂದ್ರ ಸರಕಾರ ದ್ವೇಷದ ರಾಜಕಾರಣ ಮಾಡುತ್ತಿರುವುದನ್ನು ಖಂಡಿಸಿ ಕಾಂಗ್ರೆಸ್ ವತಿಯಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ಜರುಗಿತು. ಇಲ್ಲಿನ ಅಂಬೇಡ್ಕರ್ ವೃತ್ತದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ, ಕೃಷ್ಣಾ ಟಾಕೀಜ್, ವಲ್ಲಭ ಭಾಯ್ ಚೌಕ್, ಎಂ.ಜಿ ರಸ್ತೆ ಮೂಲಕ ಬಸವೇಶ್ವರ ವೃತ್ತ ತಲುಪಿತು. ಬಿಜೆಪಿ ಹಾಗೂ ಜೆಡಿಎಸ್ ಮುಖಂಡರುಗಳ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಕಾರ್ಯಕರ್ತರು ಆಕ್ರೋಶ ಹೊರಹಾಕಿದರು.

ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿ, 40 ವರ್ಷದ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದ ಸಿಎಂ ಸಿದ್ದರಾಮಯ್ಯ ಅವರನ್ನು ತೇಜೋವಧೆ ಮಾಡುವ ಉದ್ದೇಶದಿಂದಲೇ ಬಿಜೆಪಿ ಹಾಗೂ ಜೆಡಿಎಸ್‌ನ ಭ್ರಷ್ಟರು ಪಾದಯಾತ್ರೆ ಮಾಡುತ್ತಿದ್ದಾರೆ. ಬಿಜೆಪಿ ಅಧಿಕಾರದಲ್ಲಿದ್ದಾಗ ಅನೇಕ ಹಗರಣಗಳು ಕೇಳಿ ಬಂದರೂ ಅವುಗಳ ವಿರುದ್ಧ ಕ್ರಮ ತೆಗೆದುಕೊಳ್ಳದ ನಾಯಕರುಗಳು ಇಂದು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ. ನಮ್ಮ ಕಾಂಗ್ರೆಸ್ ಸರಕಾರ ಯಶಸ್ವಿಯಾಗಿ ಜಾರಿಗೆ ತಂದಿರುವ ಪಂಚ ಗ್ಯಾರಂಟಿಗಳನ್ನು ಸಹಿಸಿಕೊಳ್ಳಲಾಗದವರು ಸುಖಾ ಸುಮ್ಮನೆ ಸಿದ್ದರಾಮಯ್ಯ ಕುಟುಂಬ ದವರ ಮೇಲೆ ಆರೋಪ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಶ್ವವಾಣಿ

ಸಂಪಾದಕೀಯ

ಬಾಂಗ್ಲಾ ಬೆಳವಣಿಗೆ ಆತಂಕದ ವಿಷಯ

ಬಾಂಗ್ಲಾದೇಶದಲ್ಲಿ ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ಅಲ್ಲಿನ ಸೇನೆ ದೇಶದ ಆಡಳಿತ ಚುಕ್ಕಾಣಿ ವಹಿಸಿಕೊಂಡಿದೆ. ದೇಶದಲ್ಲಿನ ಹಿಂಸಾಚಾರ ಮತ್ತು ಪ್ರಕ್ಷುಬ್ಧತೆಗೆ ಬೆದರಿದ ಶೇಕ್ ಹಸೀನಾ ಜೀವ ಭಯದಿಂದ ಮಿತ್ರರಾಷ್ಟ್ರ ಭಾರತಕ್ಕೆ ಓಡಿ ಬಂದಿದ್ದಾರೆ. ಹಸೀನಾ ದೇಶ ಬಿಟ್ಟ ತಕ್ಷಣವೇ ಅಲ್ಲಿನ ಸೇನಾ ಮುಖ್ಯಸ್ಥ ವಾಕರ್-ಉಜ್-ಝಮಾನ್ ಮಧ್ಯಂತರ ಸರಕಾರ ರಚನೆಯನ್ನು ಘೋಷಿಸಿದ್ದಾರೆ. ಪ್ರತಿಭಟನಾಕಾರರು ಪ್ರಧಾನಿ ನಿವಾಸಕ್ಕೆ ನುಗ್ಗಿ ಕೈಗೆ ಸಿಕ್ಕ ವಸ್ತುಗಳನ್ನು ದೋಚಿದ್ದಾರೆ. ನೆರೆ ರಾಷ್ಟ್ರದ ಈ ಬೆಳವಣಿಗೆ ಭಾರತದ ಪಾಲಿಗೆ ಆತಂಕದ ವಿಚಾರ. ನಮ್ಮ ಸುತ್ತಮುತ್ತ ಈಗ ಇರುವ ರಾಷ್ಟ್ರಗಳ ಪೈಕಿ ಭೂತಾನ್ ಮತ್ತು ಬಾಂಗ್ಲಾದೇಶ ಮಾತ್ರ ನಿಕಟ ಮಿತ್ರರ ಸ್ಥಾನದಲ್ಲಿವೆ. ಎರಡು ತಿಂಗಳ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಭಾಗಿಯಾಗಿದ್ದ ಶೇಖ್ ಹಸೀನಾ, ಬಳಿಕ ಎರಡನೇ ಬಾರಿ ಅಧಿಕೃತ ಭೇಟಿಯ ಭಾಗವಾಗಿ ದೆಹಲಿಗೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ಬಾಂಗ್ಲಾದೇಶದ ಪ್ರಮುಖ ಬಂದರಿನ ಅಭಿವೃದ್ಧಿ ಸೇರಿದಂತೆ ರಕ್ಷಣಾ ಕ್ಷೇತ್ರದಲ್ಲಿನ ಸಹಕಾರ ಸಂಬಂಧ ಒಪ್ಪಂದಗಳಿಗೆ ಸಹಿ ಹಾಕಲಾಗಿತ್ತು. ಆಯಕಟ್ಟಿನಲ್ಲಿರುವ ಈ ಬಂದರನ್ನು ತನ್ನ ತೆಕ್ಕೆಗೆ ಪಡೆದುಕೊಳ್ಳಲು ಚೀನಾ ಪ್ರಯತ್ನಿಸಿತ್ತು. ಬಾಂಗ್ಲಾ ವಿಮೋಚನಾ ಚಳವಳಿಯ ರೂವಾರಿ ಶೇಖ್ ಮುಜಿಬುರ್ ರೆಹಮಾನ್ ಪುತ್ರಿ ಶೇಖ್ ಹಸೀನಾ ಅವರು ಭಾರತದೊಂದಿಗೆ ಹೊಂದಿರುವ ದೀರ್ಘ ಒಡನಾಟದ ಕಾರಣದಿಂದಲೇ ಈ ಒಪ್ಪಂದ ಸಾಧ್ಯವಾಗಿತ್ತು. ಪ್ರತಿಪಕ್ಷ ಸ್ಥಾನದಲ್ಲಿರುವ ಖಲೀದಾ ಜಿಯಾ ನೇತೃತ್ವದ ಬಾಂಗ್ಲಾದೇಶ ರಾಷ್ಟ್ರೀಯ ಪಕ್ಷ (ಬಿಎನ್‌ಪಿ) ಮತ್ತು ಜಮಾತೇ ಇಸ್ಲಾಮಿ ಪಕ್ಷಗಳು ಪಾಕಿಸ್ತಾನ ಬೆಂಬಲಿತ ಪಕ್ಷಗಳಾಗಿದ್ದು ಹಿಂದಿನಿಂದಲೂ ಭಾರತವನ್ನು ವಿರೋಧಿಸುತ್ತಾ ಬಂದಿವೆ. ಈ ಎರಡೂ ಪಕ್ಷಗಳು ಇಸ್ಲಾಮಿಕ್ ನೀತಿಗೆ ಹತ್ತಿರವಾಗಿದ್ದು, ಧಾರ್ಮಿಕ ಅಲ್ಪಸಂಖ್ಯಾತರಾಗಿರುವ ಅಲ್ಲಿನ ಹಿಂದೂಗಳ ಬಗ್ಗೆ ಸಹಿಷ್ಣುತೆ ಹೊಂದಿಲ್ಲ. ಹಸೀನಾ ಪರಾರಿಯಾದ ಬೆನ್ನಿಗೇ ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಮನೆ ಮೇಲೆ ದಾಳಿ ಆರಂಭವಾಗಿದೆ. ಈಗಾಗಲೇ ಬಾಂಗ್ಲಾ ವಲಸಿಗರ ಸಮಸ್ಯೆ ಎದುರಿಸುತ್ತಿರುವ ಭಾರತಕ್ಕೆ ಇನ್ನಷ್ಟು ವಲಸಿಗರು ಗುಳೆ ಬರುವ ನಿರೀಕ್ಷೆ ಇದೆ. ಭಾರತ ತನ್ನ ಗಡಿಯಲ್ಲಿ ಕಟ್ಟೆಚ್ಚರ ವಹಿಸಿದ್ದರೂ, ನೂರಾರು ಕಿ.ಮೀ ಉದ್ದದ ನೆಲ, ಜಲ ಗಡಿ ಹೊಂದಿರುವ ಭೌಗೋಳಿಕ ಸನ್ನಿವೇಶದಿಂದ ವಲಸೆಯನ್ನು ತಡೆಗಟ್ಟುವುದು ಕಷ್ಟದ ಕೆಲಸ. ಒಟ್ಟಾರೆ ಬಾಂಗ್ಲಾದ ಬೆಳವಣಿಗೆ ಆ ದೇಶಕ್ಕೆ ಮಾತ್ರವಲ್ಲ ನಮ್ಮ ದೇಶಕ್ಕೂ ಸವಾಲಿನ ವಿಷಯ.

ಸೊಂಪಾದಕೀಯ

ಈ ಕಾರಣಕ್ಕೂ ರದ್ದಾಗಬಹುದು!

ವಿಮಾನಗಳು ಹಾರಾಡುತ್ತಿದ್ದರೆ ಕಂಪನಿಗಳಿಗೆ ಲಾಭ ಎನ್ನುವ ಮಾತೊಂದಿದೆ. ಅದರಲ್ಲಿಯೂ ಅಂತಾರಾಷ್ಟ್ರೀಯ ವಿಮಾನಗಳು ವಾರದಲ್ಲಿ ಮೂರು ದಿನಕ್ಕಿಂತ ಹೆಚ್ಚು ದಿನ ನೆಲದಲ್ಲಿದ್ದರೆ ಕಂಪನಿಗಳಿಗೆ 'ಲಾಸ್' ಎನ್ನುವ ಮಾತಿದೆ. ಇಷ್ಟೆಲ್ಲ ಇದ್ದರೂ, ಅನೇಕ ಬಾರಿ ವಿಮಾನಗಳು ಕ್ಯಾನ್ಸಲ್ ಆಗುತ್ತವೆ. ಇನ್ನೂ ಕೆಲವೊಮ್ಮೆ ಟೇಕ್ ಆಫ್‌ಗೆ ಸಜ್ಜಾಗಿದ್ದಾಗಲೂ ರದ್ದಾಗಿರುವ ಅದೆಷ್ಟೋ ಉದಾಹರಣೆಗಳಿವೆ. ಹವಾಮಾನ ವೈಪರೀತ್ಯ, ತಾಂತ್ರಿಕ ಸಮಸ್ಯೆ, ಪ್ರಯಾಣಿಕರ ಆರೋಗ್ಯದಲ್ಲಿ ಏರುಪೇರು, ಹುಸಿ ಬಾಂಬ್ ಕರೆ ಸೇರಿದಂತೆ ಹತ್ತು ಹಲವು ಕಾರಣಗಳನ್ನು ಈ ವಿಷಯದಲ್ಲಿ ಕೇಳಿರುತ್ತೇವೆ. ಆದರೆ ಈ ಬಾರಿ ಈ ಎಲ್ಲವನ್ನೂ ಮೀರಿಸುವ ಕಾರಣಕ್ಕೆ ವಿಮಾನವೊಂದು ಕ್ಯಾನ್ಸಲ್ ಆಗಿರುವುದು ಸದ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಅಷ್ಟಕ್ಕೂ ಆ ಕಾರಣವೇನು ಎನ್ನುವ ಕುತೂಹಲಕ್ಕೆ ಉತ್ತರ- ಮಹಿಳಾ ಪ್ರಯಾಣಿಕರೊಬ್ಬರಿಗೆ ವಿಮಾನದಲ್ಲಿನ ಎ.ಸಿ. ಚಳಿ ಹಿಡಿಸಿದ್ದಂತೆ! ಈ ಚಳಿಯಿಂದ ರಕ್ಷಿಸಿಕೊಳ್ಳಲು ಆಕೆ ಗಗನಸಖಿಯ ಬಳಿ ಬ್ಲಾಂಕೆಟ್ ಕೇಳಿದ್ದಾಳೆ. ಹಾಗೆ ಕೇಳಿದ್ದಕ್ಕೆ ರೇಗಿದ ಗಗನಸಖಿ ಕ್ಯಾಪ್ಟನ್‌ಗೆ ದೂರು ನೀಡಲು ಮುಂದಾಗಿದ್ದಾಳೆ. ಗಗನಸಖಿ ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸಿದ ಕ್ಯಾಪ್ಟನ್, 'ಎಲ್ಲರೂ ಸುಮ್ಮನೆ ಕೂರಬೇಕು, ಇಲ್ಲದಿದ್ದರೆ ಪರಿಸ್ಥಿತಿ ನೆಟ್ಟಗಿರಲ್ಲ' ಎಂದು ಧಮಕಿ ಹಾಕಿದ್ದಾನೆ. ಈ ಗಲಾಟೆ ಇನ್ನಷ್ಟು ದೊಡ್ಡದಾಗುತ್ತಿರುವುದು ಖಾತ್ರಿಯಾಗುತ್ತಿದ್ದಂತೆ ವಿಮಾನವನ್ನು ಸಮೀಪದ ನಿಲ್ದಾಣದಲ್ಲಿ ಇಳಿಸಿ, ಪ್ರಯಾಣಿಕರನ್ನು ಮತ್ತೊಂದು ವಿಮಾನದಲ್ಲಿ ನಿಗದಿತ ಸ್ಥಳಕ್ಕೆ ಕಳುಹಿಸಿದ್ದಾರಂತೆ. ಅಷ್ಟಕ್ಕೂ ಇಷ್ಟೆಲ್ಲ ಆಗಿದ್ದು ಏರ್‌ಕೆನಡಾ ಸಂಸ್ಥೆಯ ವಿಮಾನದಲ್ಲಿ. ಈ ವಿಮಾನ ಮೊರಾಕ್ಕೊದಿಂದ ಮಾಂಟ್ರಿಯಲ್‌ಗೆ ಹೋಗುತ್ತಿತ್ತು. ಈ ಘಟನೆಯ ಬಳಿಕ ಏರ್‌ಕೆನಡಾದಲ್ಲಿ ಪ್ರಯಾಣಿಸುವವರು, ಗಗನಸಖಿಯನ್ನು ತಲೆಯೆತ್ತಿ ನೋಡಲೂ ಹೆದರುತ್ತಿದ್ದಾರಂತೆ. ಬಸ್ಸಿನಲ್ಲೋ, ಕಾರಿನಲ್ಲೋ ಜಗಳವಾಡಿ ಡ್ರೈವರ್ ಗಾಡಿಯನ್ನು ಯಾವುದೋ ಗೋಡೆಗೆ ಗುದ್ದಿದರೆ ಪರವಾಗಿಲ್ಲ. ಆದರೆ ವಿಮಾನದಲ್ಲಿ ಹೋಗೋವಾಗ ಕ್ಯಾಪ್ಟನ್ ತಲೆಕೆಟ್ಟು ವಿಮಾನವನ್ನು ಇನ್ನೆಲ್ಲೋ ಗುದ್ದಿದರೆ ಗತಿಯೇನು ಎನ್ನುವುದು ಹಲವರ ಆತಂಕವಂತೆ. ಅದಕ್ಕೇ ಮಳೆಯೋ, ಬಿಸಿಲೋ, ಚಳಿಯೋ ಹೇಗೋ ನಮ್ಮೂರು ಸೇರಿದ್ರೆ ಸಾಕು ಎಂದುಕೊಂಡು ಪ್ರಯಾಣಿಕರು ಗಪ್-ಚುಪ್!

ಸಂಪಾದಕರ ಸದ್ಯಶೋಧನೆ

ವಿದೇಶಗಳಿಂದ ಏನು ತರಬೇಕು?

ವಿದೇಶಗಳಿಗೆ ಹೋದಾಗ, ಸಾಮಾನ್ಯವಾಗಿ ಎಲ್ಲರೂ ಶಾಪಿಂಗ್ ಮಾಡುವುದನ್ನು ಇಷ್ಟಪಡುತ್ತಾರೆ. ಪ್ರವಾಸಿಗರನ್ನು ಕರೆದುಕೊಂಡು ಹೋಗುವ ಟ್ರಾವೆಲ್ ಏಜೆನ್ಸಿಗಳು ಯಾವ ದೇಶಕ್ಕೆ ಹೋದರೂ ಶಾಪಿಂಗ್‌ಗಾಗಿ ಅರ್ಧ ದಿನ ಅಥವಾ ಅದಕ್ಕಿಂತ ಹೆಚ್ಚಿನ ಸಮಯವನ್ನು ಮೀಸಲಿಡುತ್ತವೆ. ನೋಡಬೇಕಾದ ಪ್ರೇಕ್ಷಣೀಯ ತಾಣಗಳನ್ನು ನೋಡಿ, ಶಾಪಿಂಗ್ ಮಾಡದೇ ಬಂದರೆ, ವಿದೇಶ ಪ್ರಯಾಣ ಅಪೂರ್ಣ ಎಂದು ಭಾವಿಸುವವರಿದ್ದಾರೆ. ಇನ್ನು ಕೆಲವರು ಪ್ರೇಕ್ಷಣೀಯ ತಾಣಗಳನ್ನು ನೋಡದಿದ್ದರೂ ಪರವಾಗಿಲ್ಲ, ಆದರೆ ಯಾವ ಕಾರಣಕ್ಕೂ ಶಾಪಿಂಗ್ ತಪ್ಪಿಸುವಂತಿಲ್ಲ ಎಂದು ತಾಕೀತು ಹಾಕುತ್ತಾರೆ. ಅದೇನೇ ಇರಲಿ, ಯಾವ ದೇಶಕ್ಕೆ ಹೋದರೂ, ಶಾಪಿಂಗ್ ಮಾಡದೇ ಮರಳುವಂತಿಲ್ಲ ಎಂದು ಅನೇಕರು ಭಾವಿಸುತ್ತಾರೆ. ಶಾಪಿಂಗ್ ನಿಜಕ್ಕೂ ಉತ್ತಮವಾದ ಕ್ರಿಯೆ. ಒಂದು ದೇಶವನ್ನು ಅಲ್ಲಿನ ಆಹಾರಗಳ ಮೂಲಕ ತಿಳಿದುಕೊಂಡಂತೆ, ಶಾಪಿಂಗ್ ಮೂಲಕವೂ ತಿಳಿದುಕೊಳ್ಳಬಹುದಾಗಿದೆ. ಶಾಪಿಂಗ್ ಸಹ ವೈವಿಧ್ಯಮಯ ಅನುಭವಗಳನ್ನು ನೀಡಬಲ್ಲದು. ಆದರೆ ಅನೇಕರಿಗೆ ಎಲ್ಲಿ ಶಾಪ್ ಮಾಡಬೇಕು ಮತ್ತು ಏನನ್ನು ಖರೀದಿಸಬೇಕು ಎಂಬುದು ಗೊತ್ತಿರುವುದಿಲ್ಲ. ಬಹಳ ಮಂದಿ ತಮ್ಮೂರಿನಲ್ಲಿ ಸಿಗುವಂಥ ಬಟ್ಟೆ, ಶೂ, ಕನ್ನಡಕ, ಇಲೆಕ್ಟ್ರಾನಿಕ್ ಐಟಮ್ಸ್ ಮುಂತಾದ ವಸ್ತುಗಳನ್ನು ಖರೀದಿಸುತ್ತಾರೆ. ವಿದೇಶಗಳಲ್ಲಿ ಸಿಗುವ ಬಹುತೇಕ ವಸ್ತುಗಳು ಇಂದು ನಮ್ಮ ದೇಶದ ನಗರಗಳಲ್ಲಿ ಸಿಗುತ್ತವೆ. ನೈಕಿ, ರೀಬಾಕ್, ಸ್ಕೆಚರ್ ಶೂಗಳನ್ನು ವಿದೇಶಗಳಲ್ಲಿ ಖರೀದಿಸುವುದರಲ್ಲಿ ಅರ್ಥವಿಲ್ಲ. ನಮ್ಮ ದೇಶದಲ್ಲಿ ಸಿಗುವ ವಸ್ತುಗಳ ಗುಣಮಟ್ಟ ಮತ್ತು ವೆರೈಟಿಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ವಿದೇಶದಲ್ಲಿ ಸಿಗುವ ಬಹುತೇಕ ಬ್ರಾಂಡೆಡ್ ವಸ್ತುಗಳು ನಮ್ಮ ಊರುಗಳಲ್ಲೂ ಲಭ್ಯ. ಕೆಲವು ಇಲೆಕ್ಟ್ರಾನಿಕ್ ವಸ್ತುಗಳು ನಮ್ಮ ದೇಶಕ್ಕಿಂತ ವಿದೇಶಿ ಮಾರುಕಟ್ಟೆಗಳಲ್ಲಿ ಬೇಗನೆ ಬರಬಹುದು. ಅಷ್ಟೇ ಅಲ್ಲ, ಸುಂಕ, ತೆರಿಗೆಯಿಂದ ನಮಗಿಂತ ಕಡಿಮೆ ಬೆಲೆಗೆ ದೊರಕಬಹುದು. ಅಂಥ ಕಡೆ ಆ ವಸ್ತುಗಳನ್ನು ಖರೀದಿಸಬಹುದು. ಕೆಲವು ದೇಶಗಳಲ್ಲಿ ಉತ್ತಮ ಗುಣಮಟ್ಟದ, ಕಡಿಮೆ ಬೆಲೆಯ ಬಟ್ಟೆಗಳು ಸಿಗುತ್ತವೆ. ಅಂಥ ಬಟ್ಟೆಗಳನ್ನು ಖರೀದಿಸಬಹುದು. ಕೆಲವು ಸಂದರ್ಭಗಳಲ್ಲಿ ಬೇರೆ ದೇಶಗಳಿಗೆ ಹೋಗಿ, Made In India ಬಟ್ಟೆಗಳನ್ನು ತರುವವರನ್ನು ನೋಡಿರಬಹುದು. ಇದರಲ್ಲಿ ಯಾವ ಹೆಚ್ಚುಗಾರಿಕೆಯೂ ಇಲ್ಲ. ನಮ್ಮೂರಲ್ಲಿ ಸಿಗದ, ಇಲ್ಲಿ ತನಕ ನೋಡಿರದ, ವಸ್ತುಗಳನ್ನು ತರುವುದು ಸವಾಲಿನ ಕೆಲಸ. ಯಾವುದೇ ಸಾಮಾನನ್ನು ಖರೀದಿಸುವ ಮುನ್ನ ಅದು ನಮ್ಮೂರಿನಲ್ಲಿ ಸಿಗುತ್ತದಾ, ಇಲ್ಲವಾ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಸಿಗದಿದ್ದರೆ ಮಾತ್ರ ಖರೀದಿಸಬೇಕು. ಯಾವುದಾದರೂ ವಸ್ತುವಿನ ಮೇಲೆ ಮೊಬೈಲ್ ಕೆಮರಾ ಇರಿಸಿದರೆ, ಅದರ ಮಾಹಿತಿಯೆಲ್ಲ ಥಟ್ಟನೆ ಸಿಗುತ್ತದೆ. ಇಲ್ಲಿ ಲಭ್ಯವಿರುವ ಸಾಮಾನುಗಳನ್ನು ಕಡಿಮೆ ಬೆಲೆಗೆ ಸಿಕ್ಕರೂ, ಅದನ್ನು ಹೊತ್ತುಕೊಂಡು ಬರುವ ಕೂಲಿ ನೀವೇ. ಬೆಲೆಯಲ್ಲಿ ಬಹಳ ವ್ಯತ್ಯಾಸವಿದ್ದರೆ ಮಾತ್ರ ಅಂಥ ದುಸ್ಸಾಹಸ ಮಾಡಬಹುದು. ಕೆಲವೊಂದು ವಸ್ತುಗಳು ಬೇರೆಲ್ಲೂ ಸಿಗುವುದಿಲ್ಲ, ಅವು ಆಯಾ ದೇಶದಲ್ಲಿ ಮಾತ್ರ ಸಿಗುತ್ತವೆ. ಅಂಥ ಸಾಮಾನುಗಳ ಪೈಕಿ ನಮಗೆ ಇಷ್ಟವಾದುದನ್ನು ಮಾತ್ರ ಖರೀದಿಸಬಹುದು. ಇನ್ನು ಪ್ರತಿ ದೇಶಕ್ಕೆ ಹೋದಾಗ, ಅಲ್ಲಿನ ನೆನಪಿಗಾಗಿ ಸ್ಮರಣಿಕೆಗಳನ್ನು ತಪ್ಪದೇ ತರಬೇಕು. ನೀವು ಹೋದ ದೇಶಗಳನ್ನು ನೆನಪಿಸಲು, ಫ್ರಿಜ್ ಮ್ಯಾಗ್ನೆಟ್, ಕ್ಯಾಪ್, ಟಿ-ಶರ್ಟ್‌ಗಳನ್ನು ತರಬಹುದು. ಪ್ರತಿ ವಸ್ತುವನ್ನು ಖರೀದಿಸುವ ಮುನ್ನ, ಆನ್‌ಲೈನ್‌ನಲ್ಲಿ ಆ ವಸ್ತು ಸಿಗುತ್ತದಾ, ಬೆಲೆ ಎಷ್ಟು, ಎಷ್ಟು ದಿನಗಳಲ್ಲಿ ಡೆಲಿವರಿ ಕೊಡ್ತಾರೆ ಎಂಬ ಮಾಹಿತಿಯನ್ನು ಪರಿಶೀಲಿಸುವುದು ಜಾಣತನ. ಇದು ಅಮೆರಿಕ ಮತ್ತು ಯುರೋಪಿನ ದೇಶಗಳಲ್ಲಿ ಪುಸ್ತಕಗಳನ್ನು ಖರೀದಿಸುವಾಗ ನೆರವಿಗೆ ಬರುತ್ತದೆ. ಅಲ್ಲಿಗಿಂತ ಕಡಿಮೆ ಬೆಲೆಯಲ್ಲಿ ನಮ್ಮ ದೇಶದಲ್ಲಿಯೇ ಸಿಗುತ್ತದೆ. ವಿದೇಶದಲ್ಲಿದ್ದಾಗ ಆರ್ಡರ್ ಮಾಡಿದರೆ, ನಾವು ಮನೆ ತಲುಪುವ ಮುನ್ನವೇ ಬಂದಿರುತ್ತದೆ. ಅಲ್ಲಿಂದ ಹೊತ್ತು ತರುವ ತಾಪತ್ರಯವಿಲ್ಲ.

ಪಾದಯಾತ್ರೆ ಹಿಂದಿರುವ ಅಸ್ತಿತ್ವದ ಹೋರಾಟ

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
vveditoped@gmail.com

ಕರ್ನಾಟಕದಲ್ಲಿ ಮತ್ತೆ ಪಾದಯಾತ್ರೆ ಪರ್ವ ಆರಂಭವಾಗಿದೆ. ಮುಡಾ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಗರಣ ಸೇರಿದಂತೆ ಸರಕಾರದ ವಿವಿಧ ವೈಫಲ್ಯಗಳನ್ನು ಮುಂದಿಟ್ಟುಕೊಂಡು ದೋಸ್ತಿಗಳು ಪಾದಯಾತ್ರೆ ಆರಂಭಿಸಿದ್ದಾರೆ. ಈ ಪಾದಯಾತ್ರೆಯ ಮೊದಲ ಹೆಜ್ಜೆ ಆರಂಭವಾಗುವ ಮೊದಲೇ, ಕಾಂಗ್ರೆಸಿಗರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಪಾದಯಾತ್ರೆ ಸಾಗುವ ಹಾದಿಯಲ್ಲಿ 'ಜನಾಂದೋಲನ' ಯಾತ್ರೆ ಆರಂಭಿಸಿದ್ದಾರೆ. ಬೆಂಗಳೂರು-ಮೈಸೂರು ರಸ್ತೆಯಲ್ಲಿ ನಡೆಯುತ್ತಿರುವ ಈ ಎರಡೂ ಸಮಾವೇಶವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಯಾವ ಉದ್ದೇಶದೊಂದಿಗೆ ಈ ಪಾದಯಾತ್ರೆ ಆರಂಭವಾಯಿತೋ, ಅದನ್ನು ಮೀರಿ ವೈಯಕ್ತಿಕ ಟೀಕೆ ವಾಗ್ದಾಳಿಗಳಿಗೆ, ಅಸ್ತಿತ್ವ ಉಳಿಸಿಕೊಳ್ಳುವ ಕಾರಣಕ್ಕಾಗಿ ಬಳಕೆಯಾಗುತ್ತಿದೆ ಎನ್ನುವುದು ಸ್ಪಷ್ಟವಾಗುತ್ತಿದೆ.

ಸಾಮಾನ್ಯವಾಗಿ ಆಡಳಿತ ಪಕ್ಷದ ಹುಳುಕನ್ನು ಜನರಿಗೆ ಮುಟ್ಟಿಸಲು ಅಥವಾ ಆಡಳಿತ ಪಕ್ಷದ ವಿರುದ್ಧ ಜನಾಂದೋಲನ ಮೂಡಿಸಲು ಪ್ರತಿಪಕ್ಷಗಳು ಪಾದಯಾತ್ರೆ ಮಾಡುತ್ತವೆ. ಈ ಹಿಂದೆ ಇದೇ ಕಾಂಗ್ರೆಸ್ ಪಕ್ಷ ಪ್ರತಿಪಕ್ಷ ಸ್ಥಾನದಲ್ಲಿದ್ದಾಗ, ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಬೆಂಗಳೂರು-ಬಳ್ಳಾರಿ ಪಾದಯಾತ್ರೆ ನಡೆಸಿದ್ದು, ಬಳಿಕ ಮೇಕೆದಾಟು ಜಲಾಶಯಕ್ಕೆ ಆಗ್ರಹಿಸಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಜೋಡೆತ್ತಿನ ರೀತಿ ಪಾದಯಾತ್ರೆ ನಡೆಸಿದ್ದು ನೆನಪಿರಬಹುದು. ಈ ಎಲ್ಲ ಸಮಯದಲ್ಲಿ ಪಾದಯಾತ್ರೆಗಳು ಕಾಂಗ್ರೆಸ್‌ಗೆ ಒಂದು ರೀತಿಯಲ್ಲಿ 'ಸಹಾಯಕ'ವಾಗಿದ್ದವು. ಆದರೆ ಈ ಬಾರಿ ವಿಚಿತ್ರ ಸನ್ನಿವೇಶದಲ್ಲಿ ಬಿಜೆಪಿ-ಜೆಡಿಎಸ್ ನಾಯಕರು ತಮ್ಮ ಪಾದಯಾತ್ರೆಯನ್ನು ಆರಂಭಿಸುವ ಮೊದಲೇ, ಕಾಂಗ್ರೆಸ್ ವತಿಯಿಂದ 'ಜನಾಂದೋಲನ' ಯಾತ್ರೆಯನ್ನು ಆರಂಭಿಸಲಾಗಿದೆ. ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಸ್ವತಃ ಈ ಜನಾಂದೋಲನ ಯಾತ್ರೆಯ ನೇತೃತ್ವವನ್ನು ವಹಿಸಿದ್ದು, ನಿತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಪ್ರತಿಪಕ್ಷದ ಪಾದಯಾತ್ರೆಗೆ ಪ್ರತಿಯಾಗಿ ಜನಾಂದೋಲನ ಯಾತ್ರೆಯೆಂದು ರ‍್ಯಾಲಿ ನಡೆಸುವ ಸಂಪ್ರದಾಯ ಹೊಸತು ಎನ್ನಬಹುದು. ಆದರೆ, ಈ ರೀತಿ ಟಕ್ಕರ್ ಕೊಡಲು ಮುಂದಾಗಿರುವುದು ಏಕೆ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿದಾಗ 'ಅಸ್ತಿತ್ವ' ಉಳಿಸಿಕೊಳ್ಳಲು ಇಂಥ ಪ್ರಯತ್ನ ನಡೆಸುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ಪಾದಯಾತ್ರೆ ಆರಂಭಿಸಿರುವ ಬಿಜೆಪಿ-ಜೆಡಿಎಸ್ ಆಗಿರಲಿ, ಪಾದಯಾತ್ರೆಗೆ ಪ್ರತಿಯಾಗಿ ಡಿಕೆಶಿ ನಡೆಸುತ್ತಿರುವ ಜನಾಂದೋಲನ ಯಾತ್ರೆ ಇರಲಿ ಮೂರೂ ಪಕ್ಷಗಳ ನಾಯಕರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಕಾರಣಕ್ಕೆ ಅವನ್ನು ನಡೆಸುತ್ತಿದ್ದಾರೆ ಎನ್ನುವುದು ಸ್ಪಷ್ಟ. ಹಾಗೆ ನೋಡಿದರೆ, ಪಾದಯಾತ್ರೆ ಆರಂಭಿಸಿರುವ ಬಿಜೆಪಿ-ಜೆಡಿಎಸ್‌ನಲ್ಲಿ ಸದ್ಯ ಕಾಂಗ್ರೆಸ್ ಅನ್ನು ಮಟ್ಟಹಾಕಬೇಕು ಎನ್ನುವುದಕ್ಕಿಂತ ಹೆಚ್ಚಾಗಿ ಪಕ್ಷಗಳಾಗಿ ತಮ್ಮ ತಮ್ಮ ಅಸ್ತಿತ್ವವನ್ನು ತೋರಿಸಬೇಕಾದ ಒತ್ತಡವಿದೆ. ಬಿಜೆಪಿಗೆ ಹಳೇ ಮೈಸೂರಲ್ಲಿ ಗಟ್ಟಿಯಾಗಿ ನಿಲ್ಲಬೇಕಾದ ಅನಿವಾರ್ಯತೆಯಿದ್ದರೆ, ಜೆಡಿಎಸ್‌ಗೆ ತನ್ನ ಮತಬ್ಯಾಂಕ್ ಚದುರಿ ಬಿಜೆಪಿಗೆ ಹೋಗದಂತೆ ತಡೆಯಬೇಕಿರುವ ಒತ್ತಡ. ಇನ್ನು ಈ ಇಬ್ಬರ ಸ್ಪರ್ಧೆಯಲ್ಲಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಾವೊಬ್ಬ 'ಟ್ರಬಲ್ ಶೂಟರ್' ಎನ್ನುವುದನ್ನು ಮತ್ತೊಮ್ಮೆ ತೋರಿಸುವ ಹಾಗೂ ಹಳೇ ಮೈಸೂರು ಭಾಗದಲ್ಲಿ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ಲೆಕ್ಕಾಚಾರದಲ್ಲಿದ್ದಾರೆ.

ಜನಾಂದೋಲನ ಹಾಗೂ ಪಾದಯಾತ್ರೆಯ ಲಾಭ-ನಷ್ಟದ ಬಗ್ಗೆ ಮಾತನಾಡುವ ಮೊದಲು, ಪಾದಯಾತ್ರೆಯ ಆರಂಭದಲ್ಲಿಯೇ ದೋಸ್ತಿಗಳಲ್ಲಿ ಕಾಣಿಸಿಕೊಂಡ ಭಿನ್ನ ಮಾತಿಗೆ ಕಾರಣವೇನು ಎನ್ನುವ ಬಗ್ಗೆ ಪ್ರಸ್ತಾಪಿಸಲೇಬೇಕು. ಮುಡಾ ವಿಷಯವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಲು ಬಿಜೆಪಿ-ಜೆಡಿಎಸ್ ನಾಯಕರು ಮುಂದಾಗುತ್ತಿದ್ದಂತೆ, ಚರ್ಚೆಗೆ ಅವಕಾಶ ನೀಡಲಿಲ್ಲ, ಬಳಿಕ ಇವರು ಬಾವಿಗಿಳಿದು ಪ್ರತಿಭಟಿಸಿ, ಬಳಿಕ ಅಹೋರಾತ್ರಿ ಧರಣಿಯನ್ನು ಆರಂಭಿಸಿದರು. ಈ ಪಾದಯಾತ್ರೆ ಎನ್ನುವ ಕಲ್ಪನೆ ಮೊಳಕೆಯೊಡೆದಿದ್ದೇ ಇಲ್ಲಿ. ಒಂದು ವೇಳೆ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ನೀಡಿದಂತೆ, ಮುಡಾ ಪ್ರಕರಣಕ್ಕೂ ಅವಕಾಶ ನೀಡಿ ಬಳಿಕ ಸರಕಾರ 'ನಾಮ್-ಕೆ-ವಾಸ್ತೆ' ಉತ್ತರ ನೀಡಿದ್ದರೂ, ಇಂದು ಇದು ಈ ಮಟ್ಟಿಗೆ ಬರುತ್ತಿರಲಿಲ್ಲ.

ಒಂದು ವೇಳೆ ಸದನದಲ್ಲಿ ಉತ್ತರ ನೀಡಿದ ಬಳಿಕವೂ ಬಿಜೆಪಿಗರು ಈ ರೀತಿ ಪಾದಯಾತ್ರೆ ಮಾಡಲು ಹೊರಟಿದ್ದರೆ ಸಾರ್ವಜನಿಕರ ಕಣ್ಣಿಗೆ ಇದೊಂದು 'ರಾಜಕೀಯ' ಎನಿಸುತ್ತಿತ್ತು. ಆದರೆ ಕಾಂಗ್ರೆಸ್ ಸರಕಾರ ಉತ್ತರ ನೀಡದೇ ಹೋಗಿದ್ದರಿಂದ ಬಿಜೆಪಿ-ಜೆಡಿಎಸ್ ನಾಯಕರಿಗೆ ಪಾದಯಾತ್ರೆ ಮಾಡುವ ಅವಕಾಶ ಒದಗಿದೆ. ಕಾಂಗ್ರೆಸಿಗರು ಉತ್ತರ ನೀಡದಿದ್ದರೂ, ಸದನದ ಹೊರಗೆ ಹೋರಾಟವನ್ನು ಬಿಜೆಪಿ ಕೈಗೆತ್ತಿಕೊಳ್ಳದಿದ್ದರೆ ಅದನ್ನು 'ಹೊಂದಾಣಿಕೆ ರಾಜಕೀಯ' ಎಂದೇ ಬಿಂಬಿಸಲಾಗುತ್ತಿತ್ತು. ಈ ಕಾರಣಕ್ಕಾಗಿಯೇ ಯಾವುದೇ ಚುನಾವಣೆಗಳಿಲ್ಲದಿದ್ದರೂ, ಬಿಜೆಪಿ-ಜೆಡಿಎಸ್‌ನವರು ಪಾದಯಾತ್ರೆಗೆ ತೀರ್ಮಾನಿಸಿದರು. ಆರಂಭದಲ್ಲಿ ಜೆಡಿಎಸ್ ನಾಯಕರು ಒಪ್ಪದಿದ್ದರೂ, ಬಳಿಕ ಕುಮಾರಸ್ವಾಮಿ ಅವರಿಂದ ಅಶೋಕ್ ಹಾಗೂ ವಿಜಯೇಂದ್ರ, 'ಒಪ್ಪಿಗೆ' ಪಡೆದ ಬಳಿಕವೇ ಪಾದಯಾತ್ರೆಯ ರೂಪುರೇಷೆ ಸಿದ್ಧವಾಗಿದ್ದು. ಅದಾದ ಬಳಿಕವೇ ಎರಡೂ ಪಕ್ಷದ ನಾಯಕರು 'ಸಮನ್ವಯ' ಸಾಧಿಸಲು ನಡೆಸಿದ ಸಭೆಯಲ್ಲಿಯೂ ಪಾದಯಾತ್ರೆಗೆ ಎಲ್ಲರ ಬೆಂಬಲ ಸಿಕ್ಕಿದೆ. ಈ ಎಲ್ಲ ಚರ್ಚೆಯ ಸಮಯದಲ್ಲಿ ಒಪ್ಪಿಗೆ ನೀಡಿದ್ದ ಕುಮಾರಸ್ವಾಮಿ ಅದಾದ ಬಳಿಕ ರಾತ್ರೋರಾತ್ರಿ ಇಡೀ ಪಾದಯಾತ್ರೆಯನ್ನೇ ವಿರೋಧಿಸಿದರು. ಇದಕ್ಕೆ ಕಾರಣವೂ ಹಳೇ ಮೈಸೂರು ಭಾಗದಲ್ಲಿರುವ ಪಕ್ಷದ 'ಅಸ್ತಿತ್ವ'ಕ್ಕೆ ಧಕ್ಕೆಬರಲಿದೆ ಎನ್ನುವ ಆತಂಕವಾಗಿತ್ತಂತೆ.

ಸೂಕ್ಷ್ಮವಾಗಿ ಗಮನಿಸಿದರೆ ಬಿಜೆಪಿಯವರದ್ದು ಇದೇ ಪ್ಲಾನ್ ಆಗಿತ್ತು. ಹಳೇ ಮೈಸೂರು ಭಾಗದಲ್ಲಿ ಬೆಂಗಳೂರು, ಮೈಸೂರು ನಗರ ಹೊರತುಪಡಿಸಿದರೆ ಬಹುತೇಕ ಭಾಗದಲ್ಲಿ ಈಗಲೂ ಬಿಜೆಪಿಯ ಮೂಲ ಗಟ್ಟಿಯಾಗಿಲ್ಲ. ಬೇರೆಪಕ್ಷದಿಂದ ಬಂದವರು ಗೆದ್ದಿದ್ದಾರೆಯೇ ಹೊರತು, ಮೂಲ ಬಿಜೆಪಿಗರಿಗೆ ಈಗಲೂ ಈ ಭಾಗದಲ್ಲಿ ಪೂರ್ಣ ಪ್ರಮಾಣದ ನೆರವಿಲ್ಲ. ಆ ಕಾರಣಕ್ಕಾಗಿಯೇ, ಮುಡಾ ವಿಷಯವನ್ನು ಮುಂದಿಟ್ಟುಕೊಂಡು ಬೆಂಗಳೂರು-ಮೈಸೂರು ಪಾದಯಾತ್ರೆ ಮಾಡಿದರೆ, ಈ ಭಾಗದಲ್ಲಿ ಪಕ್ಷಕ್ಕೆ ತನ್ನದೇ ಆದ ಕೊಂಚ ಪ್ರಮಾಣದ ಸಂಘಟನೆ ಸಿಗಬಹುದು, ಮುಂದಿನ ವಿಧಾನಸಭಾ ಚುನಾವಣೆ ವೇಳೆಗಾದರೂ ಈ ಭಾಗದಲ್ಲಿ 'ಸ್ವಂತ' ಅಸ್ತಿತ್ವವನ್ನು ಉಳಿಸಿಕೊಳ್ಳಬಹುದು ಎನ್ನುವ ಲೆಕ್ಕಾಚಾರವನ್ನು ಬಿಜೆಪಿ ಹಾಕಿಕೊಂಡಿತ್ತು. ಆರಂಭದಲ್ಲಿ ಈ ಸೂಕ್ಷ್ಮತೆಯನ್ನು ಅರಿಯದೇ, ತಮ್ಮ ಪುತ್ರನಿಗೆ ಮುಂದಿನ ಉಪಚುನಾವಣೆಯಲ್ಲಿ ಸಹಾಯವಾಗಲಿದೆ ಎನ್ನುವ ಕಾರಣಕ್ಕೆ ಪಾದಯಾತ್ರೆಗೆ ಒಪ್ಪಿಕೊಂಡಿದ್ದ ಕುಮಾರಸ್ವಾಮಿ ಅವರಿಗೆ, ಆನಂತರ ಇದರಿಂದ ಆಗಬಹುದಾದ ಹೊಡೆತದ ಅರಿವಾಗಿದೆ. ಆ ಕಾರಣಕ್ಕಾಗಿಯೇ ಪ್ರೀತಂಗೌಡ ಹೆಸರನ್ನು ಮುಂದಿಟ್ಟುಕೊಂಡು, ಪಾದಯಾತ್ರೆಗೆ ನೇರ ಹಾಗೂ ನೈತಿಕ ಬೆಂಬಲವಿಲ್ಲ ಎನ್ನುವ 'ಕಿಡಿ'ನುಡಿಯನ್ನು ಅವರು ಆಡಿದರು.

ಆದರೆ ಲೋಕಸಭಾ ಚುನಾವಣೆ ಮುಗಿದು, ಸರಕಾರ ರಚನೆಯಾಗಿ ಮೂರು ತಿಂಗಳು ಕಳೆಯುವ ಮೊದಲೇ ಬಿಜೆಪಿ-ಜೆಡಿಎಸ್‌ನಲ್ಲಿ ಕಾಣಿಸಿಕೊಂಡ ಈ ಭಿನ್ನಮತ ಹಾಗೇ ಮುಂದುವರಿದಿದ್ದರೆ ರಾಷ್ಟ್ರಮಟ್ಟದಲ್ಲಿ ಎನ್‌ಡಿಎ ಮೈತ್ರಿಕೂಟದ ವಿಷಯದಲ್ಲಿ ಕೆಟ್ಟ ಸಂದೇಶ ರವಾನೆಯಾಗುತ್ತದೆ. ಹಾಗೆಂದು, ಜೆಡಿಎಸ್ ಹೇಳಿದಂತೆ ಪಾದಯಾತ್ರೆಯನ್ನು ಕೈಬಿಟ್ಟಿದ್ದರೆ ರಾಜ್ಯ ಬಿಜೆಪಿಗೆ ಮತ್ತೊಂದು ಮುಖಭಂಗವಾಗುತ್ತಿತ್ತು. ಇದರೊಂದಿಗೆ ಎರಡು ಸೀಟು ಹೊಂದಿರುವ ಜೆಡಿಎಸ್ ಹೇಳಿದಂತೆ ಬಿಜೆಪಿ ಕೇಳುತ್ತದೆ ಎನ್ನುವ ಸಂದೇಶ ರವಾನೆಯಾಗುತ್ತಿತ್ತು. ಇದರಿಂದಾಗಿ, ಮುಂದಿನ ದಿನದಲ್ಲಿ ಎನ್‌ಡಿಎದ ಇತರ ಪಕ್ಷಗಳೂ ಇದೇ ರೀತಿ ಬೆದರಿಸುವ ಕಾರ್ಯಕ್ಕೆ ಮುಂದಾಗುವ ಸಾಧ್ಯತೆಯಿತ್ತು. ಆ ಕಾರಣಕ್ಕಾಗಿಯೇ, ಜೆಡಿಎಸ್ ವಿರೋಧದ ನಡುವೆಯೂ ಪಕ್ಷದ ವರಿಷ್ಠರು, ವಿಜಯೇಂದ್ರ ಅವರಿಗೆ ಪಾದಯಾತ್ರೆಯನ್ನು ಮುಂದುವರಿಸುವಂತೆ ಸೂಚನೆ ನೀಡಿದರು. ಇದರ ಜತೆಜತೆಯಲ್ಲಿ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್ವಾಲ್ ಮೂಲಕ ಕುಮಾರಸ್ವಾಮಿ ಅವರಿಗೆ 'ಕಠಿಣ ಸಂದೇಶ' ರವಾನಿಸುವ ಕೆಲಸವನ್ನು ಬಿಜೆಪಿ ಮಾಡಿತ್ತು. 'ನೀವು ಬಾರದಿದ್ದರೂ ನಮ್ಮ ಪಾದಯಾತ್ರೆ ಮುಂದುವರೆಯಲಿದೆ' ಎನ್ನುವ ಸಂದೇಶದಿಂದ ಇಕ್ಕಟ್ಟಿಗೆ ಸಿಲುಕಿದ ಜೆಡಿಎಸ್‌ನ ಕುಮಾರಸ್ವಾಮಿ, ಹೋದರೆ ನಮ್ಮ ಅಸ್ತಿತ್ವವಾದರೂ ಉಳಿಯುತ್ತದೆ. ಇಲ್ಲದಿದ್ದರೆ 'ಕ್ರೆಡಿಟ್' ಬಿಜೆಪಿ ಪಾಲಾಗಲಿದೆ ಎನ್ನುವ ಆತಂಕದಿಂದ ಹೆಜ್ಜೆ ಹಾಕಲು ಒಪ್ಪಿಕೊಂಡರು ಎನ್ನುವುದು ವಾಸ್ತವ.

ರಾಜಕೀಯ ಪಕ್ಷವಾಗಿ ಅಸ್ತಿತ್ವವನ್ನು ಉಳಿಸಿಕೊಳ್ಳುವ ಕಸರತ್ತಿನಲ್ಲಿ ತೊಡಗುವುದು ತಪ್ಪಲ್ಲ. ಆದರೆ ಕಳೆದ ಮೂರು ದಿನಗಳ ಭಾಷಣವನ್ನು ಗಮನಿಸಿದರೆ, ಕುಮಾರಸ್ವಾಮಿ ಅವರಿಗೆ ಸಿದ್ದರಾಮಯ್ಯ ಅವರ ರಾಜೀನಾಮೆ, ಹಗರಣದ ತನಿಖೆಗಿಂತ ಹೆಚ್ಚಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಟಾರ್ಗೆಟ್ ಮಾಡುವುದು ಮೂಲ ಉದ್ದೇಶವಾಗಿದೆ. ಇನ್ನು ಸರಕಾರಕ್ಕೆ ಬಿಜೆಪಿಯ ಆರೋಪಗಳಿಂದ ಆಗಬಹುದಾದ ಡ್ಯಾಮೇಜ್ ಕಂಟ್ರೋಲ್ ಮಾಡುವ ಉದ್ದೇಶದಿಂದ ಡಿ.ಕೆ.ಶಿವಕುಮಾರ್ ಆರಂಭಿಸಿರುವ ಜನಾಂದೋಲನ ಯಾತ್ರೆಯಲ್ಲಿ, ಮುಡಾ ಹಗರಣ, ಬಿಜೆಪಿ ಅವಧಿಯಲ್ಲಿನ ಹಗರಣಗಳ ಚರ್ಚೆಗಿಂತ ಹೆಚ್ಚಾಗಿ ಕುಮಾರಸ್ವಾಮಿ ಹಾಗೂ ದೇವೇಗೌಡರ ಕುಟುಂಬವನ್ನು ಟಾರ್ಗೆಟ್ ಮಾಡುವುದೇ ಮುಖ್ಯವಾಗಿದೆ ಎನ್ನುವುದು ಅವರ ಮಾತುಗಳಲ್ಲಿ ಸ್ಪಷ್ಟವಾಗುತ್ತಿದೆ.

ಈ ಪಾದಯಾತ್ರೆಯ ಮೂಲಕ ಹಳೇ ಮೈಸೂರು ಭಾಗದಲ್ಲಿ ಬಿಜೆಪಿಗೆ ಏನೇ ಸಿಕ್ಕರೂ ಬೋನಸ್. ಆದರೆ ಜೆಡಿಎಸ್-ಕಾಂಗ್ರೆಸ್‌ಗೆ ಹಳೇ ಮೈಸೂರು ಭಾಗ ಅನಿವಾರ್ಯವಾಗಿದೆ. ಬಿಜೆಪಿಗೆ ಉತ್ತರ ಕರ್ನಾಟಕ, ಕರಾವಳಿ ಸದಾ ಕೈಹಿಡಿಯುತ್ತದೆ. ಮಧ್ಯ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದಲ್ಲಿ ಕೊಂಚ ವರ್ಕ್‌ಔಟ್ ಮಾಡಿದರೆ ಅದು 'ಸೇಫ್' ಆಗಲಿದೆ. ಜೆಡಿಎಸ್‌ಗೆ ಇಂದಿನ ಪರಿಸ್ಥಿತಿಯಲ್ಲಿ ಹಳೇ ಮೈಸೂರು ಭಾಗವೊಂದೇ ಭದ್ರಕೋಟೆಯಾಗಿ ಉಳಿದಿದ್ದರೆ, ಕಾಂಗ್ರೆಸ್ ಉತ್ತರ ಕರ್ನಾಟಕ, ಕರಾವಳಿ ಭಾಗದಲ್ಲಾಗುವ ನಷ್ಟವನ್ನು ಹಳೇ ಮೈಸೂರು ಭಾಗದಲ್ಲಿ ಸರಿದೂಗಿಸಿಕೊಳ್ಳುತ್ತಿದೆ. ಆದ್ದರಿಂದ ಈ ಪಾದಯಾತ್ರೆಯನ್ನು ಆರಂಭಿಸಿದ್ದು ಬಿಜೆಪಿಯಾದರೂ, ಅಸ್ತಿತ್ವ ಉಳಿಸಿಕೊಳ್ಳಬೇಕಿರುವುದು ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಎಂದರೆ ತಪ್ಪಾಗುವುದಿಲ್ಲ.

ಅಸ್ತಿತ್ವ, ಭದ್ರಕೋಟೆ ಎಲ್ಲವನ್ನೂ ಮೀರಿ ಹಗರಣಗಳು ನಡೆದಿವೆ ಎನ್ನುವ ಕಾರಣಕ್ಕೆ ಪ್ರತಿಪಕ್ಷಗಳು ಪಾದಯಾತ್ರೆ ಮಾಡುತ್ತಿವೆ. ಇನ್ನೊಂದೆಡೆ ಬಿಜೆಪಿ-ಜೆಡಿಎಸ್ ಅವಧಿಯಲ್ಲಿಯೂ ಹಗರಣಗಳು ನಡೆದಿವೆ. ಅದನ್ನು ಜನರಿಗೆ ತಿಳಿಸಬೇಕು ಎನ್ನುವ ಕಾರಣಕ್ಕೆ ಕಾಂಗ್ರೆಸ್‌ನವರು ರ‍್ಯಾಲಿ ಆರಂಭಿಸಿದ್ದಾರೆ. ಇಡೀ ಪ್ರಸಂಗದಲ್ಲಿ ಬಿಜೆಪಿ-ಜೆಡಿಎಸ್‌ನವರು ಕಾಂಗ್ರೆಸ್ ಸರಕಾರ ಹಾಗೂ ನಾಯಕರ ಮೇಲೆ ಮಾಡುತ್ತಿರುವ ಆರೋಪಗಳಿರಲಿ, ಕಾಂಗ್ರೆಸ್‌ನವರು ಬಿಜೆಪಿ, ಜೆಡಿಎಸ್ ನಾಯಕರ ಮೇಲೆ ಹೊರಿಸುತ್ತಿರುವ ಅಕ್ರಮಗಳ ಆರೋಪಗಳ ಸುರಿಮಳೆ ನಷ್ಟ ಉಂಟುಮಾಡುತ್ತಿರುವುದು ರಾಜ್ಯದ ಬೊಕ್ಕಸಕ್ಕೆ ಎನ್ನುವುದು ಸ್ಪಷ್ಟ. ಆದ್ದರಿಂದ ಯಾವೆಲ್ಲ ಅಕ್ರಮಗಳ ಬಗ್ಗೆ ಈಗ ಆರೋಪ-ಪ್ರತ್ಯಾರೋಪ ಮಾಡಿಕೊಂಡು ನಾಯಕರು ಓಡಾಡಿದ್ದಾರೋ ಆ ಎಲ್ಲ ಅಕ್ರಮಗಳ ಬಗ್ಗೆ ತನಿಖೆಯಾಗಬೇಕಿದೆ. ಯಾವುದೇ ಅಕ್ರಮವಾದರೂ, ಅದು ರಾಜ್ಯದ ಜನ ದುಡಿದು ಕಟ್ಟಿರುವ ತೆರಿಗೆ ಕಾಸಿನಲ್ಲಿಯೇ ನಡೆದಿರುವುದಲ್ಲವೇ? ಆದ್ದರಿಂದ ಯಾರ ಸರಕಾರವಿದ್ದಾಗ, ಯಾರು ಎಷ್ಟು ಲೂಟಿ ಹೊಡೆದಿದ್ದಾರೆ ಎನ್ನುವುದನ್ನು ಈಗಲಾದರೂ ಬಹಿರಂಗಪಡಿಸುವ ಕೆಲಸವಾಗಲಿ. ವಿಧಾನಸಭೆಯಲ್ಲಿ ಬಿಜೆಪಿಯ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದಂತೆ, 'ನಮ್ಮ ಪಕ್ಷ-ನಿಮ್ಮ ಪಕ್ಷ ಎಲ್ಲರ ಹುಳುಕು ಹೊರಬರಲಿ. ಒಟ್ಟಲ್ಲಿ ರಾಜ್ಯ ಸ್ವಚ್ಛವಾಗಬೇಕು' ಎನ್ನುವುದೇ ರಾಜ್ಯದ ಜನರಿಗೂ ಬೇಕಿರುವ ವಿಷಯ. ಆದರೆ ಇದು ಹೇಳಿದಷ್ಟು ಸುಲಭವೇ? ಭ್ರಷ್ಟಾಚಾರ ಎನ್ನುವ ಚಕ್ರವ್ಯೂಹದಲ್ಲಿ ಸಿಲುಕಿರುವ ಇಡೀ ವ್ಯವಸ್ಥೆಯನ್ನು ಹೊರತರಲು ಸಾಧ್ಯವೇ? ಎನ್ನುವುದಕ್ಕೆ ಕಾಲವೇ ಉತ್ತರಿಸಬೇಕಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಯಾವ ಸೀಮೆಯ ನ್ಯಾಯ?

ವಿಪತ್ತು ಸಂಭವಿಸಿದಾಗಲೂ ಜಾತಿ, ಸಮುದಾಯ, ಪ್ರಾಂತ್ಯದ ಲೆಕ್ಕಾಚಾರ ಬೇಕೇ? ಯಾಕೀ ಪ್ರಶ್ನೆಯೆಂದರೆ, ಈ ಬಾರಿಯ ಮಳೆಯಿಂದಾಗಿ ಹಲವು ಕಡೆ ಭೂಕುಸಿತ, ಮನೆ-ಮಠಗಳ ನಾಶ, ಪ್ರಾಣಹಾನಿ, ವಾಹನಗಳು ನದಿಯಲ್ಲಿ ತೇಲಾಡಿದ್ದು-ಮುಳುಗಿದ್ದು, ಕುಟುಂಬ ಕುಟುಂಬವೇ ನಾಶವಾಗಿ ಹೋಗಿದ್ದು ಇತ್ಯಾದಿ ನಡೆದಾಗಲೂ, ತಮ್ಮ ರಾಜ್ಯದ, ಜಿಲ್ಲೆಯ, ಕ್ಷೇತ್ರದ ಸಂತ್ರಸ್ತ ಜನರ ಬಗ್ಗೆ ಮಾತ್ರವೇ ಕಾಳಜಿ ವಹಿಸುವುದು ತಮ್ಮ ಆದ್ಯಕರ್ತವ್ಯ ಎಂಬ ಗ್ರಹಿಕೆಯಲ್ಲಿ ಜನಪ್ರತಿನಿಧಿಗಳು ಅಂಥವರ ಪತ್ತೆಹಚ್ಚಲು ತೊಡಗಿರುವುದು ವಿಷಾದನೀಯ. ಉತ್ತರ ಕನ್ನಡದ ಶಿರೂರಿನಲ್ಲಾದ ದುರಂತದಲ್ಲಿ ಕೇರಳದ ಲಾರಿ ಚಾಲಕ ನಾಪತ್ತೆಯಾದ ವಿಷಯದ ಬಗ್ಗೆ ಕರ್ನಾಟಕದ ಯಾವೊಬ್ಬ ಮುಖಂಡರೂ ತಲೆ ಕೆಡಿಸಿಕೊಳ್ಳದಿರುವುದನ್ನು ಗಮನಿಸಿದ ಕೇರಳದ ಶಾಸಕರು ಶಿರೂರು ಬಳಿ ಠಿಕಾಣಿ ಹೂಡಿರುವ ವರದಿಗಳು ಬಂದಿವೆ. ಇನ್ನು ವಯನಾಡು ಭೂಕುಸಿತದಲ್ಲಿ ನಾಪತ್ತೆಯಾದ ಕನ್ನಡಿಗರ ಬಗ್ಗೆ ಮಾತ್ರವೇ ನಮ್ಮ ಕೆಲ ಜನಪ್ರತಿನಿಧಿಗಳು ಹೆಚ್ಚು ಕಾಳಜಿ ವಹಿಸಿದಂತಿದೆ. ಹೀಗೇಕೆ ಆಗುತ್ತಿದೆ ಅಥವಾ ಆಗಬೇಕು? ಪ್ರಾಕೃತಿಕ ವಿಪತ್ತು ಎಲ್ಲರಿಗೂ ಒಂದೇ ಅಲ್ಲವೇ? ಅದು ಜಾತಿ, ಧರ್ಮ, ಭಾಷೆ, ಪ್ರಾಂತ್ಯಗಳನ್ನು ನೋಡಿ ಅಪ್ಪಳಿಸುವಂಥದ್ದಲ್ಲ. ನಮ್ಮವರ ಬಗ್ಗೆ ಹೆಚ್ಚು ಕಾಳಜಿ ವಹಿಸುವುದು ಮಾನವಸಹಜ ಗುಣ ಎಂದರೂ, ಇತರರನ್ನು ಗೌಣವಾಗಿ ಕಾಣುವುದು ಯಾವ ಸೀಮೆಯ ನ್ಯಾಯ?

ಇದು ಕೇವಲ ಮಳೆಯಿಂದ ಆದ ಅನಾಹುತಗಳಿಗಷ್ಟೇ ಸೀಮಿತವಲ್ಲ, ಎಲ್ಲೋ, ಯಾವುದೋ ದೇಶದಲ್ಲೋ ವಿಮಾನ ಅಪಘಾತ ನಡೆದಾಗಲೂ, ಆ ಸಮಯ ನಮ್ಮವರಿಷ್ಟಿದ್ದರು, ಎಷ್ಟು ಜನ ಅಪಾಯದಲ್ಲಿ ಸಿಲುಕಿದ್ದಾರೆ ಎಂಬುದರ ಚಿಂತೆಯೇ ಜಾಸ್ತಿಯಾಗಿ ಸಮಗ್ರ ಚಿಂತನೆ ನಡೆಯುವುದೇ ಇಲ್ಲ. ಹೀಗಾಗಬಾರದು. ಸಾವು-ನೋವು-ಸಂಕಟ ಎಲ್ಲರದ್ದೂ ಒಂದೇ. ಅಲ್ಲಿ ಕರ್ನಾಟಕದವರು, ತಮಿಳುನಾಡಿನವರು, ಕೇರಳದವರು ಎಂಬ ತಾರತಮ್ಯ ಇರಕೂಡದು. ಪರಸ್ಪರ ವಿಚಾರ ವಿನಿಮಯವಾಗಿ ಎಲ್ಲರಿಗೂ ನ್ಯಾಯ ದೊರಕುವಂತಾಗಬೇಕು. ಈ ನಿಟ್ಟಿನಲ್ಲಿ ಕೇಂದ್ರ ಸರಕಾರದ ಜವಾಬ್ದಾರಿ ಹೆಚ್ಚು. ಇಲ್ಲಿ ಅವಶ್ಯವಿರುವುದು ವಿಶಾಲ ಮನೋಭಾವ, ಎಲ್ಲರನ್ನೂ ಸಮನಾಗಿ ಕಾಣುವ ಮನಸ್ಥಿತಿ.

- **ಶಂಕರನಾರಾಯಣ ಭಟ್** ಮಾಡಗೇರಿ

ಅಜ್ಜಿಗೆ ಅರಿವೆ ಚಿಂತೆ...

ರಾಜ್ಯದಲ್ಲಿ ಕೆಲವೆಡೆಗೆ ಅತಿವೃಷ್ಟಿ, ಪ್ರವಾಹ, ಭೂಕುಸಿತದಿಂದಾಗಿ ಬದುಕು ದುಸ್ತರವಾಗಿರುವಾಗ, 'ಮುಂದೇನು ಗತಿ?' ಎಂದು ಸಾವಿರಾರು ಜನರು ಚಿಂತಾಕ್ರಾಂತರಾಗಿರುವಾಗ, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ರಾಜಕೀಯ ಲಾಭಕ್ಕಾಗಿ 'ಮುಡಾ' ಪಾದಯಾತ್ರೆಯನ್ನು ನಡೆಸುತ್ತಿರುವುದು ಮತ್ತು ಅದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಪಕ್ಷವು ಜನಾಂದೋಲನ ಸಮಾವೇಶ ಹಮ್ಮಿಕೊಂಡಿರುವುದು ಖಂಡನೀಯ. ಇವರ ನಡೆಯನ್ನು ಪ್ರಜ್ಞಾವಂತ ಜನರು ಎಂದಿಗೂ ಕ್ಷಮಿಸುವುದಿಲ್ಲ. ಸರಕಾರವನ್ನು ಹೇಗಾದರೂ ಮಾಡಿ ಉರುಳಿಸುವುದು ಮತ್ತು ಶತಾಯಗತಾಯ ಉಳಿಸುವುದು ಮಾತ್ರ ಇತ್ತೀಚೆಗೆ ರಾಜಕೀಯ ಪಕ್ಷಗಳ ಅಜೆಂಡಾ ಇದ್ದಂತೆ ಕಾಣುತ್ತದೆ. ಈ ಪಕ್ಷಗಳ ಹೈಕಮಾಂಡ್‌ಗಳು/ವರಿಷ್ಠರು ಇಂಥ ಘನಂದಾರಿ ಕಾರ್ಯಕ್ಕೆ ಈ ಸಂಕಷ್ಟ ಕಾಲದಲ್ಲಿ ಅನುಮತಿ ನೀಡಿರುವುದು ದುರ್ದೈವ. 'ಅಜ್ಜಿಗೆ ಅರಿವೆಯ ಚಿಂತೆಯಾದರೆ, ಮೊಮ್ಮಗಳಿಗೆ...' ಎಂಬ ಗಾದೆಯನ್ನು ಇದು ನೆನಪಿಸುತ್ತದೆ, ಅಲ್ಲವೇ?

- **ರಮಾನಂದ ಶರ್ಮಾ** ಬೆಂಗಳೂರು

ಮನೆ ನಿರ್ಮಾಣ ಸ್ವಾಗತಾರ್ಹ

'ದೇವರು ಮುನಿದರೆ ಪ್ರಪಂಚ ಇನ್ನಿಲ್ಲ' ಎಂಬ ಮಾತೊಂದಿದೆ. 'ದೇವರ ಸ್ವಂತ ನಾಡು' ಎಂದೇ ಕರೆಯಲ್ಪಡುವ ಕೇರಳದ ವಯನಾಡ್ ಜಿಲ್ಲೆಯ ಮೆಪ್ಪಾಡಿಯಲ್ಲಿ ಜಲಪ್ರಳಯ, ಭೂಕುಸಿತವಾಗಿದೆ. ಬಡವ-ಶ್ರೀಮಂತ ಎಂಬ ಭೇದವಿಲ್ಲದೆ ಊರನ್ನೇ ಸ್ಮಶಾನವಾಗಿಸಿದ ಈ ದುರಂತದಲ್ಲಿ ಮನೆಯವರನ್ನು ಕಳೆದುಕೊಂಡು ಕಂಗಾಲಾಗಿರುವವರಿಗೆ ಸಂಘ-ಸಂಸ್ಥೆಗಳಿಂದ ನೆರವಿನ ಮಹಾಪೂರ ಹರಿದುಬರುತ್ತಿದೆ. ಈ ಜಲಪ್ರಳಯದಿಂದಾಗಿ ನಿರಾಶ್ರಿತರಾದವರಿಗೆ ನಮ್ಮ ರಾಜ್ಯ ಸರಕಾರವು ನೂರು ಮನೆಗಳನ್ನು ನಿರ್ಮಿಸಿಕೊಡಲು ತೀರ್ಮಾನಿಸಿರುವುದು ಸ್ವಾಗತಾರ್ಹ.

-**ಪಿ.ಸಿ.ಕಂಗಾಣಿಸೋಮು** ಮೈಸೂರು

ಒಲಿಂಪಿಕ್ಸ್ ನೆಪದಲ್ಲಿ ಮರುಹುಟ್ಟು ಪಡೆದ ನದಿ

ಕ್ರೀಡಾಲೋಕ

ಸುರೇಂದ್ರ ಪೈ
vveditoped@gmail.com

ಪ್ರಪಂಚದ ಪ್ರತಿಯೊಂದು ದೇಶದ ಚಿತ್ತ ಸದ್ಯ ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್‌ನತ್ತ ನೆಟ್ಟಿದೆ. 'ಇಂದು ನಮ್ಮ ದೇಶಕ್ಕೆ ಯಾವ ಪದಕ ಬರಬಹುದು, ಯಾವ ಕ್ರೀಡಾಪಟು ಹೊಸ ದಾಖಲೆ ನಿರ್ಮಿಸಬಹುದು?' ಎಂಬಿತ್ಯಾದಿ ಕುತೂಹಲಗಳು ಪ್ರತಿಯೊಬ್ಬರಲ್ಲೂ ಇವೆ. ವಿಶ್ವದ ಪ್ರತಿಷ್ಠಿತ ಕ್ರೀಡೋತ್ಸವ ಎಂದಾಗ ಇಂಥ ಕುತೂಹಲ, ತವಕ ಇರುವುದು ಸಹಜವೇ ಬಿಡಿ.

ಆದರೆ ಪ್ರಪಂಚದ ಸರಿಸುಮಾರು 800 ಕೋಟಿ ಜನರಿಗೆ ಈ ಬಾರಿಯ ಪ್ಯಾರಿಸ್ ಒಲಿಂಪಿಕ್ಸ್ ಮಾತ್ರ ಕ್ರೀಡೆಗಿಂತಲೂ ಮುಖ್ಯವಾದ ಪಾಠವೊಂದನ್ನು ಹೇಳಿಕೊಟ್ಟಿದೆ. ಯಾವ ದೇಶ ಎಷ್ಟು ಪದಕ ಗೆಲ್ಲುತ್ತದೆಯೋ ಗೊತ್ತಿಲ್ಲ; ಆದರೆ ಪ್ಯಾರಿಸ್ ಜನರು ಮಾತ್ರ 6,000 ವರ್ಷಗಳಿಗಿಂತಲೂ ಪುರಾತನವಾದ ತಮ್ಮ 'ಸೀನ್' ನದಿಯನ್ನು ಸ್ವಚ್ಛಗೊಳಿಸಿ ಜಗತ್ತಿಗೊಂದು ಸಂದೇಶ ನೀಡಿದ್ದಾರೆ. ಒಲಿಂಪಿಕ್ಸ್ ಪ್ರಾರಂಭಕ್ಕೂ ಮುನ್ನವೇ ತಮ್ಮ ಸಂಕಲ್ಪವನ್ನು ಪೂರೈಸಿದ ಅವರು, ಮನಸ್ಸು ಮಾಡಿದರೆ ಏನು ಬೇಕಾದರು ಸಾಧಿಸಬಹುದು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ.

ಕಲೆ, ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಆಕರ್ಷಣೆಗಳಿಂದಾಗಿ ಖ್ಯಾತವಾಗಿರುವ ಪ್ಯಾರಿಸ್‌ನಲ್ಲಿ ವಿಶ್ವಪ್ರಸಿದ್ಧ ಐಫೆಲ್ ಟವರ್, ಸರ್ವಶ್ರೇಷ್ಠ ಚಿತ್ರಕಲಾವಿದ ಲಿಯೊನಾರ್ಡೊ ಡಾ ವಿನ್ಸಿ ರಚಿಸಿದ ಮೊನಾಲಿಸಾ ಚಿತ್ರವಿರುವ ವಿಶ್ವದ ಅತಿದೊಡ್ಡ ಲೌವ್ರೆ ವಸ್ತುಸಂಗ್ರಹಾಲಯ ಇವೆ. ನಗರದ ಹೃದಯಭಾಗದ ಮೂಲಕ ಹಾದುಹೋಗುವ ಸೀನ್ ನದಿಯು (ಉದ್ದ 777 ಕಿ.ಮೀ.) ತನ್ನ ಸೇತುವೆಗಳು, ವಿಹಾರದೋಣಿಗಳಿಂದ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತದೆ. ಈ ನದಿ ಬಹಳ ಕಾಲದಿಂದ ಸಂಪೂರ್ಣವಾಗಿ ಮಲಿನಗೊಂಡಿತ್ತು. ಆದರೆ ಒಲಿಂಪಿಕ್ಸ್ ಉದ್ಘಾಟನೆಗೂ ಮುನ್ನವೇ ಅದು ಮಾಲಿನ್ಯ ಕಳೆದುಕೊಂಡು ಮರುಹುಟ್ಟು ಪಡೆದ ಕಥೆ ನಿಜಕ್ಕೂ ಅದ್ಭುತ.

2017ರ ಸೆಪ್ಟೆಂಬರ್ 13 ಪ್ಯಾರಿಸ್ ಪಾಲಿಗೆ ಅತ್ಯಂತ ಮಹತ್ವದ ದಿನವಾಗಿತ್ತು. ಅಂದು ಪೆರುವಿನ ಲಿಮಾದಲ್ಲಿ ನಡೆದ 131ನೇ ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ (ಐಒಸಿ) ಸಭೆಯಲ್ಲಿ 2024ರ ಬೇಸಿಗೆ ಒಲಿಂಪಿಕ್ಸ್‌ಗೆ ಪ್ಯಾರಿಸ್ ಅನ್ನು ಆತಿಥೇಯ ನಗರವನ್ನಾಗಿ ಆಯ್ಕೆಮಾಡಲಾಯಿತು. ಆ ಕ್ಷಣವೇ, ಶತಮಾನಗಳಿಂದ ಕೊಳಕಾಗಿ ಹರಿಯುತ್ತಿದ್ದ ಪ್ಯಾರಿಸ್‌ನ ಸೀನ್ ನದಿಯ ಶುದ್ಧೀಕರಣಕ್ಕೆ ಸಂಕಲ್ಪಿಸಲಾಯಿತು.

1900ರ ವರ್ಷದ ಬೇಸಿಗೆ ಒಲಿಂಪಿಕ್ಸ್‌ನ ಆತಿಥ್ಯವನ್ನು ವಹಿಸಿಕೊಂಡಾಗ ಇದೇ ನದಿಯಲ್ಲಿ ರೋಯಿಂಗ್, ಈಜು ಮತ್ತು ವಾಟರ್‌ಪೋಲೋ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ನಂತರ 1923ರವರೆಗೂ ಈ ನದಿಯಲ್ಲಿ ಸಾರ್ವಜನಿಕವಾಗಿ ಈಜಲು ಅವಕಾಶವಿತ್ತು. ಆದರೆ ನದಿಯು ಮಲಿನವಾದ ಕಾರಣದಿಂದ 1923ರ ಜುಲೈ 17ರಿಂದ ಇದಕ್ಕೆ ನಿಷೇಧ ಹೇರಲಾಯಿತು. ಹೀಗಾಗಿ, 1924ರ ಒಲಿಂಪಿಕ್ಸ್‌ನ ಆತಿಥ್ಯ ವಹಿಸಿಕೊಂಡರೂ, ಈ ನದಿಯಲ್ಲಿ ಯಾವುದೇ ಸ್ಪರ್ಧೆ ನಡೆಯಲಿಲ್ಲ. ಅದಾದ 100 ವರ್ಷಗಳ ಬಳಿಕ 3ನೇ ಬಾರಿಗೆ ಒಲಿಂಪಿಕ್ಸ್ ಆತಿಥ್ಯವನ್ನು ವಹಿಸಿಕೊಂಡ ಕ್ಷಣದಲ್ಲೇ ನದಿಯ ಶುದ್ಧೀಕರಣ ಮಾತ್ರವಲ್ಲ, ಟ್ರಯಾಥ್ಲಾನ್‌ನಂಥ ಕೆಲ ಈಜುಸ್ಪರ್ಧೆಗಳನ್ನೂ ನಡೆಸಲು ಪ್ಯಾರಿಸ್ ಸಂಕಲ್ಪಿಸಿ ನದಿಯ ಮರುಹುಟ್ಟಿಗೆ ನಾಂದಿ ಹಾಡಿತು.

ನದಿಗಳು ಮನುಕುಲದ ಜೀವನಾಡಿಗಳು. ಪ್ರಪಂಚದ ಬಹುತೇಕ ಎಲ್ಲಾ ನಾಗರಿಕತೆಗಳು ನದೀತೀರದಲ್ಲೇ ಜನಿಸಿದ್ದು. ಭಾರತದಲ್ಲಿ ಸಾಕಷ್ಟು ನದಿಗಳು ಹುಟ್ಟಿ ಹರಿದರೂ, ನಗರವೊಂದರ ಮೂಲಕ ಅವು ಹರಿದುಹೋಗುವ ನಿದರ್ಶನಗಳು ವಿರಳವೇ. ಆದರೆ ಪ್ಯಾರಿಸ್‌ನಲ್ಲಿ ಹಾಗಲ್ಲ, ಸೀನ್ ನದಿಯು ಈ ನಗರದ ಹೃದಯಭಾಗದಲ್ಲಿ ಹಾದುಹೋಗುತ್ತದೆ. ನಗರದ ತ್ಯಾಜ್ಯ ನೀರು ಮತ್ತು ಮಳೆನೀರು ಒಂದೇ ಪೈಪ್ ಮೂಲಕ ಹರಿಯುತ್ತವೆ. ಭಾರಿ ಮಳೆಯಾದಾಗ, ಸಂಸ್ಕರಿಸದ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಬದಲಾಗಿ ನದಿಗೆ ಹರಿಯುತ್ತಿತ್ತು. ಜತೆಗೆ, 19ನೇ ಶತಮಾನದಲ್ಲಿ ಕಾರ್ಖಾನೆ ಮತ್ತು ಮಾನವ ತ್ಯಾಜ್ಯದ ಒಳಚರಂಡಿ ನೀರನ್ನು ಸೀನ್ ನದಿಗೆ ಹೆಚ್ಚಾಗಿ ಬಿಡಲಾಗುತ್ತಿತ್ತು. ಸಾಲದೆಂಬಂತೆ, ಆ ಶತಮಾನದ ದ್ವಿತೀಯಾರ್ಧದಲ್ಲಿ ಅಭಿವೃದ್ಧಿಪಡಿಸಲಾದ ಹೊಸ ಒಳಚರಂಡಿ ವ್ಯವಸ್ಥೆಯು ಈ ನದಿಯ ಆರೋಗ್ಯಕ್ಕೆ ಮತ್ತಷ್ಟು ಮಾರಕವಾಗಿ ಬ್ಯಾಕ್ಟೀರಿಯಾದಂಥ ಪರಾವಲಂಬಿ ಜೀವಿಗಳು ಹೆಚ್ಚಾಗತೊಡಗಿದವು. ನದಿಯು ಪಾಚಿಗಟ್ಟಿ, ನೀರಿನ ಮೇಲೆ ಬೆಳ್ಳನೆಯ ಕಲುಷಿತ ನೊರೆ ತೇಲಾಡತೊಡಗಿತು. ನೋಡನೋಡುತ್ತಿದ್ದಂತೆ ನದಿಯ ಬಣ್ಣವೇ ಬದಲಾಗಿ ಅಸಂಖ್ಯಾತ ಜಲಚರಗಳು, ಮೀನಿನ ವಿವಿಧ ಪ್ರಭೇದಗಳು ಅಸುನೀಗಿದವು. ನದಿಯಲ್ಲಿ ಈಜುವುದಿರಲಿ, ಅದರ ಬಳಿ ಹೋಗುವುದೂ ದುಸ್ತರವಾಯಿತು. ಇದು ಸೀನ್ ನದಿಯ ಅಸಹನೀಯ ಫ್ಲ್ಯಾಷ್‌ಬ್ಯಾಕ್!

ಇಂಥ ದುರ್ವಾಸನೆಯ ನದಿಯನ್ನು ಒಲಿಂಪಿಕ್ಸ್‌ನಂಥ ಪ್ರತಿಷ್ಠಿತ ಕ್ರೀಡಾಸ್ಪರ್ಧೆಗೆಂದು ಶುದ್ಧೀಕರಿಸಿ ಕ್ರೀಡೆಗಳನ್ನು ಆಯೋಜಿಸುವುದು ಸುಲಭದ ತುತ್ತಾಗಿರಲಿಲ್ಲ. ಕಾರಣ ಪ್ಯಾರಿಸ್ ಸರಕಾರ ಮತ್ತು ಜನರ ಮುಂದಿದ್ದುದು 7 ವರ್ಷಗಳು ಮಾತ್ರ. ಆದರೆ ಸಂಕಲ್ಪ ದೃಢವಾಗಿತ್ತು. ಆಸ್ಟರ್ಲಿಟ್ಜ್ ರೈಲು ನಿಲ್ದಾಣದ ಪಕ್ಕದಲ್ಲಿ ಹೆಚ್ಚುವರಿ ಮಳೆನೀರನ್ನು ಸಂಗ್ರಹಿಸುವ ಮತ್ತು ಸೀನ್ ನದಿಗೆ ಪ್ರವೇಶಿಸುವ ತ್ಯಾಜ್ಯನೀರನ್ನು ನಿಲ್ಲಿಸುವ ಉದ್ದೇಶದಿಂದ 50,000 ಘನಮೀಟರ್‌ಗಳಷ್ಟು ದೈತ್ಯಗಾತ್ರದ ಭೂಗತ ತೊಟ್ಟಿಯನ್ನು ನಿರ್ಮಿಸಲಾಯಿತು. ಇದಕ್ಕೆ 20 ಒಲಿಂಪಿಕ್ ಈಜುಕೊಳಗಳಿಗೆ ಸಮನಾದ ಕೊಳಕುನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿತ್ತು. ಇಲ್ಲಿ ನೀರನ್ನು ಸಂಸ್ಕರಿಸಿದ ಬಳಿಕ ನದಿಗೆ ಬಿಡುವ ವ್ಯವಸ್ಥೆ ಮಾಡಲಾಯಿತು.

ಇದರೊಂದಿಗೆ ಒಳಚರಂಡಿ ಸಂಸ್ಕರಣೆಯ ಕೂಲಂಕಷ ಪರೀಕ್ಷೆಗೆ 8.8 ಕಿ.ಮೀ. ಉದ್ದದ 'ಸೂಪರ್-ಚರಂಡಿ'ಯನ್ನೂ ನಿರ್ಮಿಸಲಾಯಿತು. ಕನಿಷ್ಠ 10,000 ಗ್ರಾಮೀಣ ಕುಟುಂಬಗಳು ಮತ್ತು ಹೌಸ್‌ಬೋಟ್ ಮಾಲೀಕರು ಶೌಚಾಲಯದ ತ್ಯಾಜ್ಯವನ್ನು ನೇರವಾಗಿ ನದಿಗೆ ಬಿಡುವುದನ್ನು ನಿಲ್ಲಿಸಲು, ಅದನ್ನು ಒಳಚರಂಡಿ ವ್ಯವಸ್ಥೆಗೆ ಬಿಡುವಂತೆ ಉತ್ತೇಜಿಸಲು ಅವರಿಗೆ ಹಣಕಾಸಿನ ಪ್ರೋತ್ಸಾಹ ನೀಡಲಾಯಿತು ಮತ್ತು ಪ್ರಚಾರಾಂದೋಲನವನ್ನು ಹಮ್ಮಿಕೊಳ್ಳಲಾಯಿತು.

ಇನ್ನೇನು ಒಲಿಂಪಿಕ್ಸ್ ದಿನ ಹತ್ತಿರ ಬರುತ್ತಿದೆ ಎನ್ನುವಾಗಲೇ ಸೀನ್ ನದಿ ಸಂಪೂರ್ಣ ಮಾಲಿನ್ಯ ಮುಕ್ತವಾಗಿ ಮರುಹುಟ್ಟು ಪಡೆಯಿತು. ಜತೆಗೆ ವಿವಿಧ ಕ್ರೀಡೆಗಳ ಆಯೋಜನೆಗೂ ಸಜ್ಜಾಯಿತು. ಸ್ಥಿತಿಗತಿಯನ್ನು ಸ್ವತಃ ಪರೀಕ್ಷಿಸಲು ಇಚ್ಛಿಸಿದ ಪ್ಯಾರಿಸ್‌ನ ಮೇಯರ್, ಸೀನ್ ನದಿಯಲ್ಲಿ ಜುಲೈ 17ರಂದು 100 ಮೀ.ವರೆಗೆ ಈಜಿ, ನದಿಯು ಪರಿಶುದ್ಧವಾಗಿದೆ ಎಂದು ಸಾರಿದರು. ಮಾಲಿನ್ಯ ಮರೆಯಾಗಿದ್ದಕ್ಕೆ ನದಿಯಲ್ಲಿ ಈಗ 35ಕ್ಕೂ ಹೆಚ್ಚು ಮೀನಿನ ಪ್ರಭೇದಗಳು ಕಂಡುಬಂದಿವೆ. ಇದು ಪ್ಯಾರಿಸ್ ಸರಕಾರ ಮತ್ತು ಜನರ ಪರಿಶ್ರಮಕ್ಕೆ ಸಿಕ್ಕ ಫಲವೆಂದರೆ ಅತಿಶಯೋಕ್ತಿಯಲ್ಲ. ಈ ಯೋಜನೆಗಾಗಿ ಬರೋಬ್ಬರಿ 124 ಸಾವಿರ ಕೋಟಿ ರುಪಾಯಿಗಳನ್ನು ವಿನಿಯೋಗಿಸಲಾಯಿತು

ಎಂಬುದು ಗಮನಾರ್ಹ.

ಒಲಿಂಪಿಕ್ಸ್‌ನ ಉದ್ಘಾಟನೆಯನ್ನು ಕ್ರೀಡಾಂಗಣದಲ್ಲಿ ನಡೆಸುವುದು ವಾಡಿಕೆ. ಆದರೆ ಈ ಬಾರಿ ಸೀನ್ ನದಿಯಲ್ಲಿ ಕ್ರೀಡಾಪಟುಗಳು ವಿಹರಿಸುವುದಕ್ಕೆ ಅನುವುಮಾಡಿಕೊಡುವ ಮೂಲಕ ಒಲಿಂಪಿಕ್‌ಗೆ ಚಾಲನೆ ನೀಡಲಾಯಿತು. ಒಂದು ಶತಮಾನ ಕಾಲ ಹದಗೆಟ್ಟಿದ್ದ ಸೀನ್ ನದಿಯಲ್ಲಿ, 206 ದೇಶಗಳ ಸುಮಾರು 6,800 ಕ್ರೀಡಾಪಟುಗಳು ನೂರಾರು ದೋಣಿಗಳನ್ನೇರಿ ತಮ್ಮ ದೇಶದ ಬಾವುಟಗಳನ್ನು ಹಾರಿಸುತ್ತಾ ವಿಹರಿಸಿದ ಅಮೋಘ ದೃಶ್ಯವನ್ನು 3 ಲಕ್ಷಕ್ಕೂ ಹೆಚ್ಚು ಮಂದಿ ಸೇತುವೆಯ ಮೇಲಿನಿಂದ ಹಾಗೂ ನಗರದ ತುಂಬೆಲ್ಲಾ ನಿಂತು ಕಣ್ತುಂಬಿಕೊಂಡಿದ್ದು ಅನುಪಮ ಗಳಿಗೆಯೆನ್ನಬೇಕು.

ನದಿಯೊಂದನ್ನು ಶುಚಿಗೊಳಿಸುವುದು ಸುಲಭದ ಕೆಲಸವಲ್ಲ. ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಬರುವ ವಿವಿಧ ದೇಶಗಳ ಕ್ರೀಡಾಪಟುಗಳಿಗೆಂದೋ ಅಥವಾ ವೀಕ್ಷಣೆಗೆ ಬರುವ ಕ್ರೀಡಾಪ್ರೇಮಿಗಳಿಗೆಂದೋ ಪ್ಯಾರಿಸ್‌ನಲ್ಲಿ ಹೀಗೆ ಸೀನ್ ನದಿಯನ್ನು ಸ್ವಚ್ಛಗೊಳಿಸಲಿಲ್ಲ; ಬದಲಾಗಿ, ನದಿಗಿರುವ ಮಹತ್ವವನ್ನು ಹಾಗೂ ಅದು ಜನಜೀವನದ ಅವಿಭಾಜ್ಯ ಅಂಗ ಎಂಬ ಸತ್ಯವನ್ನು ಅರಿತು ಮರುಜೀವ ನೀಡಲಾಯಿತು. ನದಿಯ ಶುದ್ಧೀಕರಣದ ನೆಪದಲ್ಲಿ ಪ್ಯಾರಿಸ್ ಸರಕಾರವು ಯಾವುದೇ ಭಾವನಾತ್ಮಕ ರಾಜಕೀಯದ ನಾಟಕವಾಡಲಿಲ್ಲ. ಸರಕಾರದೊಂದಿಗೆ ಪ್ರತಿಯೊಬ್ಬ ಪ್ರಜೆಯೂ ಕೈಜೋಡಿಸಿ ಸಮಾನ ಮನಸ್ಸಿನಿಂದ ಪಣತೊಟ್ಟು ದುಡಿದರು ಎಂಬುದಿಲ್ಲಿ ಉಲ್ಲೇಖನೀಯ. ಸೀನ್ ನದಿಯ ಈಗಿನ ವೈಭವವನ್ನು ಕಣ್ತುಂಬಿಕೊಳ್ಳಲು ಮತ್ತು ಈ ಸಾಧನೆಯ ಹಿಂದಿರುವ ಪರಿಶ್ರಮವನ್ನು ಅರಿಯಲು ಬಹುತೇಕ ದೇಶಗಳು ಅಧ್ಯಯನ ತಂಡವನ್ನು ಪ್ಯಾರಿಸ್‌ಗೆ ಕಳಿಸುತ್ತಿರುವುದು ಈ ಮಾತಿಗೆ ಪುಷ್ಟಿನೀಡುತ್ತದೆ.

ಭಾರತವು ಸಹ ಸಾಕಷ್ಟು ಅಂತಾರಾಷ್ಟ್ರೀಯ ಸಮಾವೇಶಗಳು, ಕ್ರೀಡೆಗಳ ಆತಿಥ್ಯವನ್ನು ವಹಿಸಿದೆ. ಆದರೆ ನಮ್ಮಲ್ಲಿನ ನದಿಯಿರಲಿ, ಯಾವ ಬೀದಿ-ರಸ್ತೆಗಳೂ ಶಾಶ್ವತವಾಗಿ ಶುಚಿಯಾಗಿಲ್ಲ. ಉದಾಹರಣೆಗೆ, ಭಾರತದಲ್ಲಿ 2010ರಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ವೇಳೆ ದೆಹಲಿಯ ಸೌಂದರ್ಯವನ್ನು ಹೆಚ್ಚಿಸಲು ಬರೋಬ್ಬರಿ 70,608 ಕೋಟಿ ರುಪಾಯಿಗಳನ್ನು ಖರ್ಚುಮಾಡಲಾಯಿತು. ಇದು ಆ ಕ್ರೀಡಾಕೂಟದ ಅಂದಾಜು ಮೂಲವೆಚ್ಚಕ್ಕಿಂತ 114 ಪಟ್ಟು ಹೆಚ್ಚು ಮೊತ್ತವಾಗಿತ್ತು ಹಾಗೂ ಪ್ರತಿವರ್ಷ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್‌ಗೆ ಸರಕಾರವು ಮಾಡುವ ವೆಚ್ಚದ ನಾಲ್ಕು ಪಟ್ಟು ಹೆಚ್ಚಿನ ಮೊತ್ತವಾಗಿತ್ತು. ಆದರೆ ಕ್ರೀಡಾಕೂಟದ ಬಳಿಕ ಮತ್ತದೇ ಕೊಳಕು, ಗಲೀಜು!

ಕೇವಲ ವಿದೇಶಿ ಗಣ್ಯರು ಬರುವ ದಾರಿಯುದ್ದಕ್ಕೂ ರತ್ನಗಂಬಳಿಯನ್ನು ಹಾಸುವ, ನಮ್ಮಲ್ಲಿರುವ ಕೊಳಕು, ಬಡತನವನ್ನು ಮರೆಮಾಚಲು ಜಗಮಗಿಸುವ ವರ್ಣರಂಜಿತ ದೀಪಗಳಿಂದ, ಕಾರಂಜಿಗಳಿಂದ ರಸ್ತೆಗಳನ್ನು ಅಲಂಕರಿಸುವ, ಕೊಳೆಗೇರಿಗಳ ಸುತ್ತಲೂ ಹಸಿರು ಪರದೆಗಳನ್ನು ಕಟ್ಟುವ, ರಸ್ತೆಗಳ ಪಕ್ಕ ಬಿದ್ದಿರುವ ಘನತ್ಯಾಜ್ಯವನ್ನು ವಿಲೇವಾರಿ ಮಾಡುವ ನಾಟಕಗಳು ನಡೆಯುತ್ತವೆ. 'ನಮಾಮಿ ಗಂಗೆ' ಯೋಜನೆ ಶುರುವಾಗಿ 10 ವರ್ಷ ಕಳೆದು, ಕೋಟ್ಯಂತರ ಹಣ ಖರ್ಚಾಗಿದ್ದರೂ ಗಂಗೆಯ ಮಾಲಿನ್ಯ ನಿಂತಿಲ್ಲ, ಇದರಲ್ಲಿ ಜನರ ಪಾಲೂ ಇದೆ. ಹೀಗೆ ಮಾಡುವುದರಿಂದ ಹಣವನ್ನಷ್ಟೇ ಪೋಲುಮಾಡುತ್ತೇವೆಯೇ ಹೊರತು ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದಿಲ್ಲ.

ನಾವು ನದಿಗಳನ್ನು ದೇವತೆಗಳಿಗೆ ಹೋಲಿಸುತ್ತೇವೆ, ಧಾರ್ಮಿಕ ಭಾವನೆಯಿಂದ ಪೂಜಿಸುತ್ತೇವೆ. ಆದರೆ, ನದಿಯನ್ನು ಸ್ವಚ್ಛಮಾಡುವ ಗೋಜಿಗೆ ಹೋಗುವವರು ನಮ್ಮಲ್ಲಿ ವಿರಳ. ನದಿಯನ್ನು ಮಲಿನಗೊಳಿಸುವಲ್ಲಿ ನಾವು ಮುಂದು. ನಮ್ಮಲ್ಲಿ ನದಿಗಳ ಹೆಸರಿನಲ್ಲಿ ನಿರಂತರವಾಗಿ ರಾಜಕೀಯ ನಾಟಕಗಳು ನಡೆಯುತ್ತವೆಯೇ ಹೊರತು, ಅವನ್ನು ಸ್ವಚ್ಛಗೊಳಿಸುವ ದೃಢಸಂಕಲ್ಪ ಹೊಮ್ಮುವುದಿಲ್ಲ. ಪ್ಯಾರಿಸ್‌ನಲ್ಲಿ ಒಲಿಂಪಿಕ್ಸ್ ನೆಪದಲ್ಲಿ ಸೀನ್ ನದಿಯ ಮಾಲಿನ್ಯವನ್ನು ಕಿತ್ತೊಗೆದು ಮರುಹುಟ್ಟು ನೀಡಿದ ಘಟನೆ ನಮಗೆ ಮೇಲ್ಪಂಕ್ತಿಯಾಗಲಿ. ಜಾತ್ರೆ, ಹಬ್ಬ, ರಾಷ್ಟ್ರೀಯ ದಿನಾಚರಣೆಯ ನೆಪದಲ್ಲಿ ನಮ್ಮೂರ ಕೆರೆ, ನದಿಗಳ ಮಾಲಿನ್ಯವನ್ನು ತೊಡೆದು ಅವುಗಳಿಗೆ ಮರುಹುಟ್ಟು ನೀಡಲು ಇನ್ನಾದರೂ ಕಟಿಬದ್ಧರಾಗೋಣ.

(ಲೇಖಕರು ಶಿಕ್ಷಕರು)

ಭಟ್ಟರ್ ಸ್ಕಾಚ್

● **ವೆಂಕಣ್ಣ ಆಚಾರ್, ಚಿತ್ರಮನಿ**
ಭಟ್ರೇ, ಹಳೇ ಕಾಲದ ಮಾತೆಯರು ಮಕ್ಕಳಿಗೆ ಚಂದ್ರನನ್ನು ತೋರಿಸಿ ಬಾಯಿಗೆ ತುತ್ತು ತುರುಕುತ್ತಿದ್ದರು. ಈಗಿನವರು?
- ಮೊಬೈಲ್ ಕೈಗೆ ಕೊಟ್ಟು ಸುಮ್ಮನಿರಿಸುತ್ತಾರೆ!

● **ಮದ್ದರಾಯ, ಉಡುಪಿ ರಥಬೀದಿ**
ಈ ಲೋಕದಲ್ಲಿ ಮರೆಮಾಚೋದು ಅಂತ ಏನಾದರೂ ಇದೆಯಾ ಭಟ್ರೇ?
- ಯಾಕಿಲ್ಲ? ಹೆಣ್ಣಿನ ವಯಸ್ಸು, ರಾಜಕಾರಣಿಯ ಸಂಪತ್ತು!

● **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಭೀಮನ ಅಮಾವಾಸ್ಯೆಯಂದು ಗಂಡನ ಪೂಜೆಯನ್ನು ಮಾಡಿ ಕೃತಾರ್ಥರಾಗುವ ಹೆಂಡತಿಯರು ಉಳಿದ ದಿನಗಳಲ್ಲಿ ಏನು ಮಾಡ್ತಾರೆ?
- ತಮ್ಮ ಸೇವೆಯನ್ನು ವಿಧಿವತ್ತಾಗಿ ಮಾಡಿಸಿಕೊಳ್ತಾರೆ!

● **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ನಾನು ಕುಡುಕನಲ್ಲ, 'ಕುಡಿಯೋಣ ಬಾರಾ' ಪುಸ್ತಕವನ್ನು ಓದಬಹುದಾ?
- ಅಷ್ಟಕ್ಕೂ ಅದನ್ನ ನಿನ್ನಂಥವರಿಗಾಗಿಯೇ ಬರೆದಿರುವುದು!

● **ಶಿವಲಿಂಗಪ್ಪ ಸಿಂಗಡಿಕ್ಕೆ, ಕಲಬುರ್ಗಿ**
ಭಟ್ರೇ, 'ಕುಡಿಯೋಣ ಬಾರಾ' ಪುಸ್ತಕ ಖರೀದಿಸಿದರೆ ಗ್ಲಾಸ್ ಫ್ರೀ ಅಂತೆ ಹೌದಾ?
- ಬಾಟಲಿ ಫ್ರೀ ಕೊಡಬೇಕಿತ್ತು ಅಂತ ಕುಡುಕರ ಸಂಘದವರು ಹೇಳುತ್ತಿದ್ದಾರೆ!

● **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ನೀವು ಕುಂಟಾಬಿಲ್ಲೆ ಆಡೋಕೆ ಬರ್ತೀರಾ?
- ತೆಲ್ಲಿ ಕದ್ದರೆ ಬರೋದು ಕಷ್ಟ!

● **ಸನಾತನ ಶಂಕರ, ಬೆಂಗಳೂರು**
ಭಟ್ರೇ, ನೀವು ಭಟ್ಟರಾಗಿ 'ಕುಡಿಯೋಣ ಬಾರಾ' ಪುಸ್ತಕ ಬರೆಯಬಹುದಾ?
- ತೀರ್ಥಕ್ಕೂ, ಭಟ್ಟರಿಗೂ ಹತ್ತಿರದ ಸಂಬಂಧವಿರುವುದು ಗೊತ್ತಿದ್ದೂ ಈ ಪ್ರಶ್ನೆಯಾ?

● **ನಾಗರಾಜ್ ಪ್ರಭಾಕರ, ಬೆಂಗಳೂರು**
ಭಟ್ರೇ, ಬಾಯಿ ಅಂದ್ರೆ ಬಚ್ಚಲುಮನೆ ಅಂತಾರಲ್ಲ, ಹಾಗಂದ್ರೆ ಏನು?
- ಡಿಕೆಶಿ-ವಿಜಯೇಂದ್ರ ವಾಕ್ಸಮರ ಕೇಳಿದ ನಂತರ ಈ ಪ್ರಶ್ನೆ ಕೇಳಬಾರದಿತ್ತು!

● **ರಾಜೇಶ ಹೆಗಡೆ, ಶಿರಸಿ**
ಭಟ್ರೇ, ಈ ರೀತಿ ಮಳೆ ಹುಯ್ದರೆ ಏನಾಗಬಹುದು?
- ಮುಂದಿನ ವರ್ಷದ ಕೋಟಾ ಖಾಲಿಯಾಗಿ, ಮಳೆ ಬರದೇ ಹೋಗಬಹುದು!

● **ದಿವ್ಯಾ ಗೌಡ, ಪದ್ಮನಾಭನಗರ**
ಭಟ್ರೇ, ಹೆಣ್ಣನ್ನು ಸಂಪೂರ್ಣ ಅರ್ಥ ಮಾಡಿಕೊಳ್ಳುವುದು ಸಾಧ್ಯವಾ?
- ಅವಳ ಎಲ್ಲ ವಾಟ್ಸಾಪ್ ಮೆಸೇಜುಗಳನ್ನು ಓದಿದರೂ ಅದು ಸಾಧ್ಯವಿಲ್ಲ!

ಬದುಕಿನ ಮೌಲ್ಯ ಬಿಟ್ಟುಕೊಡದ ಯುರೋಪು

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಇತ್ತೀಚಿನ ದಿನಗಳಲ್ಲಿ ಪೋಷಕರು ಮಕ್ಕಳನ್ನ ಬಹಳವಾಗಿ ಪ್ರೀತಿಸುತ್ತಾರೆ. ಜಗತ್ತಿನ ಸಕಲ ಒಳ್ಳೆಯದು ತಮ್ಮ ಮಕ್ಕಳಿಗೆ ಸಿಕ್ಕಲಿ ಎನ್ನುವ ಹಂಬಲ ಅವರದು. ಇನ್ನು ಮಕ್ಕಳನ್ನ ಅವರು ಸಂಬೋಧಿಸುವ ರೀತಿಯೂ ಅನನ್ಯ. ಮಕ್ಕಳನ್ನ ಅಕ್ಕರೆಯಿಂದ ಆಸ್ಥೆಯಿಂದ ಬೆಳೆಸುತ್ತಾರೆ. ಕೇವಲ ಅವರಿಗೆ ಮುಂದಿನ ಹತ್ತು ಅಥವಾ ಇಪ್ಪತ್ತು ವರ್ಷದಲ್ಲಿ ಮಕ್ಕಳಿಗಾಗಬೇಕು ಎನ್ನುವ ಪ್ಲಾನಿಂಗ್ ಕೂಡ ಇರುತ್ತದೆ. ಯಾವುದು ಸರಿ? ಯಾವುದು ತಪ್ಪು? ಎನ್ನುವುದನ್ನ ವಿಶ್ಲೇಷಿಸುವುದು ಈ ಬರಹದ ಉದ್ದೇಶವಲ್ಲ; ಬದಲಿಗೆ, ಇಪ್ಪತ್ತು ಅಥವಾ ಮೂವತ್ತು ವರ್ಷದ ಹಿಂದಿನ ಭಾರತದಲ್ಲಿ ಅಂದರೆ ನನ್ನ ಬಾಲ್ಯದಲ್ಲಿದ್ದ ಪೋಷಕರ ನಡವಳಿಕೆ ಎಷ್ಟು ಭಿನ್ನವಾಗಿತ್ತು ಎನ್ನುವುದನ್ನ ಮೆಲುಕು ಹಾಕುವುದು. ಬಾರ್ಸಿಲೋನಾ ತಲುಪಿದಾಗ ಅಲ್ಲಿನ ಮಕ್ಕಳ ಲಾಲನೆ, ಪೋಷಣೆಯನ್ನ ಕಂಡಿದ್ದೇನೆ. ಅಲ್ಲಿನ ಪೋಷಕರ ನಡವಳಿಕೆ ಬಗ್ಗೆ ಒಂದಷ್ಟು ಮಾಹಿತಿಯನ್ನ ಹಂಚಿಕೊಳ್ಳುವುದು ಈ ಬರಹದ ಉದ್ದೇಶ.

ಬಾರ್ಸಿಲೋನಾ ತಲುಪಿದ ಮೊದಲ ದಿನಗಳ ಬವಣೆಯನ್ನ ಗೆದ್ದು ಆ ನಂತರ ಅಲ್ಲಿನ ಸಮಾಜಕ್ಕೆ ಹೊಂದಿಕೊಂಡಾಗ ಬಹಳಷ್ಟು ವಿಷಯಗಳು ಅಚ್ಚರಿಗೊಳಿಸಿದ್ದವು. ಅವುಗಳಲ್ಲಿ ಇಲ್ಲಿನ ಜನ ಅವರ ಮಕ್ಕಳನ್ನ ಸಾಕುವ ರೀತಿ ಕೂಡ ಒಂದು. ಇಲ್ಲಿ ಮಕ್ಕಳನ್ನ ಮನೆಯ ಇತರ ಸದಸ್ಯರಂತೆ ಕಾಣಲಾಗುತ್ತದೆ. ಅಂದರೆ ಅವರಿಗೆ ಯಾವುದೇ ರೀತಿಯ ವಿಶೇಷ ಸವಲತ್ತು ಇರುವುದಿಲ್ಲ. ಆದರೆ ಭಾರತದಲ್ಲಿ ಮಾತ್ರ ಇಂದಿಗೂ ಮಕ್ಕಳನ್ನ ಮನೆಯ ಇತರ ಸದಸ್ಯರಿಗಿಂತ ಹೆಚ್ಚಿನ ಪ್ರೀತಿ, ಗೌರವ ಮತ್ತು ಸವಲತ್ತು ನೀಡಿ ನಡೆಸಿಕೊಳ್ಳಲಾಗುತ್ತದೆ. ಸಾಲಿನಲ್ಲಿ ಒಬ್ಬ ಎಂದು ನಾವು ನಿಲ್ಲಿಸುವುದಿಲ್ಲ, ಮಗುವನ್ನ ನಾವು ಮನೆಯ ಕೇಂದ್ರಬಿಂದು ಮಾಡಿ ನಮ್ಮ ಬದುಕನ್ನ ಅದರ ಸುತ್ತಮುತ್ತ ಕಟ್ಟಿಕೊಳ್ಳುತ್ತೇವೆ. ಯುರೋಪಿಯನ್ನರು ಹಾಗಲ್ಲ, ಅವರು ಎಂದಿಗೂ ಸ್ವಸ್ಥವನ್ನ ಯಾವುದೇ ಕಾರಣಕ್ಕೂ ತ್ಯಾಗ ಮಾಡುವುದಿಲ್ಲ. ಇಲ್ಲಿ ಮಕ್ಕಳನ್ನ ಆದಷ್ಟು ಬೇಗ ಅವರ ಐದು ಅಥವಾ ಆರನೇ ವಯಸ್ಸಿನಿಂದ ಸ್ವತಂತ್ರವಾಗಿ ಬದುಕಲು ಬಿಡುತ್ತಾರೆ. ಮೂರು ಅಥವಾ ನಾಲ್ಕನೇ ವಯಸ್ಸಿಗೆ ಅವರನ್ನ ಸ್ವತಂತ್ರವಾಗಿ ಮಲಗಲು ಬಿಡುತ್ತಾರೆ. ಅವರಿಗೆ ಪ್ರತ್ಯೇಕ ಕೋಣೆ ಹೊಂದುವುದು ಅವಶ್ಯಕ, ಜತೆಗೆ ಕಡ್ಡಾಯ ಕೂಡ. ಭಾರತ ಈ ವಿಷಯದಲ್ಲಿ ಬದಲಾಗುತ್ತಿದೆ. ಅದರ ಕಾರಣವನ್ನ 'ಇದಮಿತ್ಥಂ' ಎಂದು ಹೇಳಲು ಬಾರದು. ಆದರೂ ಹೆಚ್ಚಿನ ಮನೆಗಳಲ್ಲಿ ಇಂದಿಗೂ ಮಕ್ಕಳು ಹತ್ತು, ಹನ್ನೆರಡು ವಯಸ್ಸಿನವರೆಗೆ ಪೋಷಕರ ಜತೆ ಮಲಗುವುದು ಸಾಮಾನ್ಯ. ಇತ್ತೀಚಿನ ಭಾರತೀಯ ಪೋಷಕರಲ್ಲಿ ಬಹಳಷ್ಟು ಬದಲಾವಣೆ ಕಂಡುಬರುತ್ತಿದೆ. ಆದರೆ ಹಿಂದಿನ ಕಾಲದಲ್ಲಿ ಮಕ್ಕಳಿಗೆ ಎಂದು ವಿಶೇಷ ಕೋಣೆ ಇರುತ್ತಿದ್ದುದು ಅತಿ ವಿರಳ.

ಇನ್ನು ಮಕ್ಕಳನ್ನ 'ಸ್ಲೀಪ್ ಓವರ್' ಅಂದರೆ ಸ್ನೇಹಿತರ ಮನೆಯಲ್ಲಿ ಮಲಗಲು ಕಳುಹಿಸುವುದು ಕೂಡ ಇಲ್ಲಿ ಸಾಮಾನ್ಯ. ಐದಾರು ವಯಸ್ಸಿನ ಮಕ್ಕಳು ಗೆಳೆಯರ ಮನೆಗೆ ಹೋಗುವುದು, ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡು ಬದುಕುವುದು ಸಹಜ.

ಭಾರತದ ದೊಡ್ಡ ನಗರಗಳಲ್ಲಿ ಮಕ್ಕಳನ್ನ ಕಾಂಪೌಂಡ್‌ನಿಂದ ಹೊರಗೆ ಬಿಡುವುದು ದುಸ್ತರ ಎನ್ನುವ ಸ್ಥಿತಿ ತಲುಪಿದೆ. ಹೀಗಾಗಿ ಇದರ ಬಗ್ಗೆ ಹೆಚ್ಚು ಮಾತನಾಡದಿರುವುದು ಉತ್ತಮ. ಇದಕ್ಕೆ ಪೂರಕವಾಗಿ ಇನ್ನೊಂದು ವಿಷಯವನ್ನ ಕೂಡ ಪ್ರಸ್ತಾಪಿಸಿಬಿಡುತ್ತೇನೆ. ಇಲ್ಲಿನ ಮಕ್ಕಳು ಇಂದಿಗೂ ಬುಗುರಿ, ಕುಂಟೆಬಿಲ್ಲೆಯಂಥ ಆಟವನ್ನ ಆಡುತ್ತಾರೆ. ಹೌದು, ಬಾರ್ಸಿಲೋನಾದಂಥ ನಗರದಲ್ಲಿ ಕೂಡ ಮಕ್ಕಳು ಇಂದಿಗೂ ಇಂಥ ಆಟಗಳನ್ನ ಆಡುತ್ತಾರೆ. ಆದರೆ ಭಾರತದಲ್ಲಿ ಅದರಲ್ಲೂ ನಗರ ಪ್ರದೇಶಗಳಲ್ಲಿ ಇಂಥ ಆಟಗಳ ಸಮಯವನ್ನ ಓದು ಅಥವಾ ಗ್ಯಾಜೆಟ್‌ಗಳು ಕಸಿದುಬಿಟ್ಟಿವೆ.

ಇಲ್ಲಿ ಆಹಾರ ಪದಾರ್ಥಗಳು ಅತ್ಯಂತ ದುಬಾರಿ ಇರುವ ಕಾರಣ, ಕೊಟ್ಟದ್ದನ್ನ ಬಿಸಾಡದೆ ತಿನ್ನುವ ತಿಳಿವಳಿಕೆಯನ್ನ ಮಕ್ಕಳಿಗೆ ಎಳವೆಯಿಂದಲೇ ಕಲಿಸುತ್ತಾರೆ. ನಮ್ಮಲ್ಲಿ ಮಾತ್ರ ಆಹಾರ ಪದಾರ್ಥಗಳ ವಿಷಯದಲ್ಲಿ ಅದರಲ್ಲೂ ಮಕ್ಕಳ ವಿಷಯದಲ್ಲಿ ಬಹಳಷ್ಟು ಸಲೀಸಾಗಿ ವರ್ತಿಸುತ್ತೇವೆ. ಅದರಲ್ಲೂ ಕೆಲವರು ಸಭೆ-ಸಮಾರಂಭದಲ್ಲಿ ಮಕ್ಕಳನ್ನ ಊಟಕ್ಕೆ ಕೂರಿಸುತ್ತಾರೆ. ಎಲೆಯಲ್ಲಿ ಬಡಿಸಿದ ತೊಂಬತ್ತು ಪ್ರತಿಶತ ಆಹಾರ ಪೋಲಾಗುತ್ತದೆ. ಇಂಥ ವಿಷಯದಲ್ಲಿ ಯುರೋಪಿಯನ್ನರು ಬಹಳ ನಾಜೂಕು. ಸ್ವಲ್ಪ ಆಹಾರ ಕೂಡ ಪೋಲಾಗದಂತೆ ಬಹಳ ಎಚ್ಚರ ವಹಿಸುತ್ತಾರೆ. ಇದಕ್ಕೆ ಇಲ್ಲಿನ ಕಾಸ್ಟ್ ಆಫ್ ಲಿವಿಂಗ್ ಬಹಳ ದುಬಾರಿ ಇರುವುದು ಒಂದು ಕಾರಣ. ಒಟ್ಟಿನಲ್ಲಿ ಮಕ್ಕಳಿಗೆ ಚಿಕ್ಕಂದಿನಿಂದ ಊಟದ ಬೆಲೆ ತಿಳಿದಿರುತ್ತದೆ.

ನಾವು ಮಕ್ಕಳನ್ನ ತರಹೇವಾರಿ ಹೆಸರುಗಳಿಂದ ಕರೆದು ಮುದ್ದಿಸುತ್ತೇವೆ ಅಲ್ಲವೇ? ಇದೇ ರೀತಿ ಯುರೋಪಿಯನ್ನರಲ್ಲೂ ಮಕ್ಕಳನ್ನ ಮೂಲಹೆಸರು ಬಿಟ್ಟು ಇತರೆ ಪ್ರೀತಿಯ ಹೆಸರುಗಳಿಂದ ಕರೆಯುವ ಪರಿಪಾಠವಿದೆ. 'ಮಗಳೇ' ಎಂದು ನಾವು ಪ್ರೀತಿಯಿಂದ ಕರೆಯುವಂತೆ ಇಲ್ಲಿ 'ಹಿಹಾ' ಎನ್ನುತ್ತಾರೆ. ಅಂದರೆ ಮಗಳ ಹೆಸರಿಡಿದು 'ಹೇಗಿದ್ದೀಯ?' ಎನ್ನುವುದಕ್ಕಿಂತ 'ಮಗಳೇ ಹೇಗಿದ್ದೀಯ?' ಎನ್ನುವಂತೆ ಇಲ್ಲಿಯೂ ಯಥಾವತ್ತು ಬಳಕೆಯಲ್ಲಿದೆ. ಮಗಳನ್ನ ಅಥವಾ ಮಗನನ್ನ 'ಬಂಗಾರಿ/ಬಂಗಾರ' ಎಂದು ಕರೆಯುತ್ತೇವೆ ಅಲ್ಲವೇ? ಇಲ್ಲಿಯೂ 'ಓರೋ' ಎಂದು ಕರೆಯುತ್ತಾರೆ. 'ಮಗಳೇ ನೀನು ನನ್ನ ಪ್ರಾಣ, ಜೀವ' ಎನ್ನುವ ಮಾತುಗಳನ್ನ ಕೂಡ ನಾವು ಬಹಳಷ್ಟು ಬಾರಿ ಬಳಸುತ್ತೇವೆ. ಸ್ಪೇನ್‌ನಲ್ಲಿ ಕೂಡ ಇದು ಯಥಾರೂಪದಲ್ಲಿ ಬಳಕೆಯಲ್ಲಿದೆ. ಇಲ್ಲಿ 'ಹಿಹಾ ತು ಎರೇಸ್ ಮೀ ವಿದಾ' ಎನ್ನುವ ವಾಕ್ಯವನ್ನ ಬಳಸಲಾಗುತ್ತದೆ.

ಭಾಷೆ ಬದಲಾಯಿತು, ಆದರೆ ಮಗಳ, ಮಗನ ಮೇಲಿನ ಮಮಕಾರ ಮಾತ್ರ ಇಂಚೂ ಬದಲಾಗಲಿಲ್ಲ. ನಮ್ಮ 'ಬಂಗಾರ' ಇಲ್ಲಿ 'ಓರೋ' ಆಯಿತು, 'ನನ್ನ ಪ್ರಾಣ, ಜೀವ' ಎನ್ನುವುದು 'ವಿದಾ' ಆಯಿತು. ಆದರೆ ಮೋಹ, ಪ್ರೀತಿ ಮಾತ್ರ ಸೇಮ್. ಇದೆಲ್ಲ ಇತ್ತೀಚಿನ ಪೋಷಕರ ಕಥೆಯಾಯ್ತು. ಹಿಂದಿನ ಪೋಷಕರ ಅಂದರೆ ಇಂದಿಗೆ ಮೂವತ್ತು ಅಥವಾ ನಲವತ್ತು ವರ್ಷದ ಹಿಂದಿನ ಪೋಷಕರ ಕಥೆಯೇನು? ನಿಮಗೆಲ್ಲ ತಿಳಿದಿರಲಿ, ಯುರೋಪು ಎಂದ ಮಾತ್ರಕ್ಕೆ ಅಲ್ಲಿನ ದೇಶಗಳು ಸದಾ ಇಂದಿನ ನಯ, ನಾಜೂಕು, ಸಿರಿತನವನ್ನ ಹೊಂದಿರಲಿಲ್ಲ. ಅಲ್ಲಿಯೂ ಬವಣೆಯ ಸಾವಿರ, ಲಕ್ಷಗಟ್ಟಲೆ ಕಥೆಯಿದೆ. ಹತ್ತು ಹನ್ನೆರಡು ವರ್ಷದ ಬಾಲಕರು ಹೊಟ್ಟೆಪಾಡಿಗಾಗಿ ದುಡಿತಕ್ಕೆ ಇಳಿದಿದ್ದ ನಿದರ್ಶನಗಳಿವೆ. ಆದರೆ ಅವೆಲ್ಲವನ್ನ ಮೀರಿ ಅವರು ಸಮಾಜವಾಗಿ ಒಂದು ಹಂತವನ್ನ ತಲುಪಿದ್ದಾರೆ.

ಹಿಂದಿನ ಯುರೋಪಿನ ಪೋಷಕರ ಸ್ಥಿತಿ, ಭಾರತೀಯ ಪೋಷಕರ ಸ್ಥಿತಿಗಿಂತ ಅತ್ಯಂತ ಉನ್ನತವಾಗೇನೂ ಇರಲಿಲ್ಲ. ಬೆಳಗ್ಗೆಯಿಂದ ಸಂಜೆಯವರೆಗೆ ದುಡಿತದಲ್ಲಿ ಇರುತ್ತಿದ್ದ ಪೋಷಕರಿಗೆ ಮಕ್ಕಳ ಜತೆಗೆ ಸಮಯ ಕಳೆಯುವುದು ಕಷ್ಟವಾಗುತ್ತಿತ್ತು. 'ಅಜ್ಜನಾದ ಮೇಲೆ ನಾನು ಹೆಚ್ಚಿನ ಆನಂದವನ್ನ ಪಡುತ್ತಿದ್ದೇನೆ' ಎನ್ನುವ ಮಾತನ್ನ ನಾನು ಹಲವಾರು ಸ್ಪ್ಯಾನಿಷರ ಬಾಯಲ್ಲಿ ಕೇಳಿದ್ದೇನೆ. ಸಮಾಜ ಬದಲಾಗುತ್ತಿರುತ್ತದೆ. ಸಮಾಜದ ಬದಲಾವಣೆ ಆಗುವುದು ಜನರ ಒಟ್ಟು ಮನಸ್ಥಿತಿಯಿಂದ. ಸಮಾಜದಲ್ಲಿ ಶುರುವಾಗುವ ಹುಚ್ಚು ಓಟದಲ್ಲಿ ಒಮ್ಮೆ ಸಿಕ್ಕಿಕೊಂಡರೆ ಅಲ್ಲಿಗೆ ಮುಗಿಯಿತು, ಅದರಿಂದ ಮುಕ್ತಿಯಿಲ್ಲ. ಒಂದರ ನಂತರ ಒಂದು ಬೇಕುಗಳ ಗುಡ್ಡ ಬೆಟ್ಟವಾಗುತ್ತ ಸಾಗುತ್ತದೆ. ಇವುಗಳ ಮಧ್ಯ ಬದುಕು ಮಂಕಾಗಿ ಕರಗಿಹೋಗುತ್ತದೆ.

ಬಾರ್ಸಿಲೋನಾ ನಗರದಲ್ಲಿ ಎರಡು ದಶಕದ ಹಿಂದೆಯೇ ಪೋಷಕರು ಮಕ್ಕಳನ್ನ ನಡೆಸಿಕೊಳ್ಳುತ್ತಿದ್ದ ರೀತಿ ನೋಡಿ ಬೇಡವೆಂದರೂ ನಮ್ಮ ಬಾಲ್ಯ ನೆನಪಾಗುತ್ತಿತ್ತು. ಒಮ್ಮೆ ನನ್ನ ಹಿರಿಯ ಸಹೋದರ ರಾಮು, ಅಪ್ಪನ ಬಳಿ ಹೋಗಿ 'ಬೂಟು ಕೊಳ್ಳಬೇಕು' ಎಂದು ಹಣವನ್ನ ಕೇಳಿದ್ದಾನೆ, ಅಪ್ಪ ಹಣವನ್ನ ನೀಡಿದ್ದಾರೆ. ರಾಮು ತನ್ನ ಎಲ್ಲಾ ಕೆಲಸವನ್ನ ಮುಗಿಸಿಕೊಂಡು ಸಂಜೆಯ ವೇಳೆಗೆ ಖುಷಿಯಿಂದ ಮನೆಗೆ ಬಂದವನೇ, ಬೂಟು ಹಾಕಿಕೊಂಡು ಎಲ್ಲರಿಗೂ ತೋರಿಸುತ್ತಿದ್ದ. ಅಪ್ಪ ಕೂಡ ಕೆಲಸದಿಂದ ಬಂದಿದ್ದರು, 'ಇದೇನೋ ರಾಮು, ಬೂಟು ಕೊಳ್ಳುತ್ತೇನೆ ಎಂದಿದ್ದೆ, ಇದರ ಜತೆಗೆ ಸಾಕ್ಸ್ ಕೂಡ ತಂದಿದ್ದೀಯ' ಎಂದರು. ರಾಮು ಜೇಬಿನಿಂದ ಹತ್ತು ರುಪಾಯಿ ತೆಗೆದು ಅಪ್ಪನಿಗೆ ವಾಪಸ್ಸು ನೀಡಿ, 'ನೀವು ನೂರು ರುಪಾಯಿ ನೀಡಿದ್ದಿರಿ, ಇದರಲ್ಲಿ ಬೂಟಿನ ಜತೆಗೆ ಎರಡು ಜೊತೆ ಸಾಕ್ಸ್ ಕೂಡ ತೆಗೆದುಕೊಂಡು ಹತ್ತು ರುಪಾಯಿ ಮಿಕ್ಕಿತು' ಎಂದ. ಅಪ್ಪ ಕೋಪದಿಂದ, 'ನೀನು ಬೂಟು ತೆಗೆದುಕೊಳ್ಳುತ್ತೇನೆ ಎಂದಿದ್ದೆ, ಆದರೆ ಸಾಕ್ಸ್ ಬಗ್ಗೆ ನನಗೆ ಹೇಳಿರಲಿಲ್ಲ' ಎಂದರು. ರಾಮನ ಖುಷಿಯೆಲ್ಲಾ ಕ್ಷಣದಲ್ಲಿ ಜರ್ರನೆ ಇಳಿದುಹೋಗಿತ್ತು. ಅಪ್ಪನಿಗೆ ಅಂದು ಅದ್ಯಾವ ಸೋಲಾಗಿತ್ತೋ? ಅದೇನು ಬೇಸರವಿತ್ತೋ? ಅದ್ಯಾವ ದುಃಖವಿತ್ತೋ? ಗೊತ್ತಿಲ್ಲ. ಆದರೆ ನೆನಪಲ್ಲಿ ಉಳಿದಿರುವುದು ಮಾತ್ರ ಅಪ್ಪನ ಲಾಜಿಕ್ ಇಲ್ಲದ ಪ್ರಶ್ನೆ- 'ಸಾಕ್ಸ್ ಏಕೆ ತೆಗೆದುಕೊಂಡೆ? ನೀನು ಬೂಟು ಕೊಳ್ಳಲು ಮಾತ್ರ ಒಪ್ಪಿಗೆ ಪಡೆದಿದ್ದೆಯಲ್ಲವೇ?' ಎನ್ನುವುದು. ಸಾಕ್ಸ್ ಇಲ್ಲದೆ ಬೂಟು ಹಾಕಿಕೊಳ್ಳುವುದು ಹೇಗೆ?

ಅಪ್ಪ ಎಂದರೆ ಎಂದಿಗೂ ಕಾಂತ ಮತ್ತು ರಾಮನಿಗೆ ಒಂಥರಾ ಭಯ. ಅಪ್ಪನಿಗೆ ಕೊಡಬೇಕಾದ ಗೌರವ ಕೊಟ್ಟು ಎದ್ದು ಹೋದರೆ ಸಾಕು ಎನ್ನುವ ಸಂಬಂಧ. ನನ್ನದು ಮಾತ್ರ ಅಪ್ಪನೊಂದಿಗೆ ಬೇರೆಯದೇ ಕಥೆ, ಅಪ್ಪ ಬೇಡವೆಂದರೂ ಬಿಡದೆ ಜಗ್ಗಿ ಅವರ ಕಥೆಗಳನ್ನ ಕೇಳುತ್ತಿದ್ದೆ, ಇಷ್ಟವಿಲ್ಲದಾಗ ಮುಲಾಜಿಲ್ಲದೆ ಕಿತ್ತಾಡುತ್ತಿದ್ದೆ. 'ನಾನು ಸತ್ತ ಮೇಲೆ ನನ್ನ ಹೆಸರಲ್ಲಿ ತಿಥಿ ಮಾಡಿಕೊಂಡು ವಡೆ ತಿನ್ನುತ್ತೀರಿ, ಇದ್ದಾಗ ನನಗೇಕೆ ಶುಗರ್ ಹೆಸರಿನಲ್ಲಿ ಇಷ್ಟು ಕಟ್ಟುನಿಟ್ಟು' ಎಂದಿದ್ದ ಅಪ್ಪನಿಗೆ ಸಾಯುವವರೆಗೂ ಪ್ರತಿ ವಾರಾಂತ್ಯ ವಡೆ ತಂದುಕೊಡುತ್ತಿದೆ. ಪದಗಳಲ್ಲಿ ವರ್ಣಿಸಲಾಗದ ಸಂಬಂಧವದು. ಆದರೆ ಮುಕ್ಕಾಲುಪಾಲು ಮನೆಗಳಲ್ಲಿ ಅಂದಿನ ದಿನಗಳಲ್ಲಿ ಅಪ್ಪ ಎಂದರೆ ಅವನೊಬ್ಬ ಗುಮ್ಮ. ಮಕ್ಕಳು ತನ್ನ ಮಾತಿಗೆ ಬೆದರದೆ ಇದ್ದಾಗ ಅಮ್ಮನು 'ಅಪ್ಪನಿಗೆ ಹೇಳ್ತಿನಿ ತಾಳು' ಎಂದು ಹೆದರಿಸಲು ಬೇಕಾದ ಬೆತ್ತಪ್ಪ. ಅವಶ್ಯಕತೆಗಳ ಪೂರೈಸುವ ವ್ಯಕ್ತಿ, ಹಣ ಬೇಕಾದಾಗ ಸಂಪರ್ಕಿಸಬೇಕಾದ ಕೇಂದ್ರ!! ಇವತ್ತಿಗೂ ಭಾರತದ ಹಲವು ಮನೆಗಳಲ್ಲಿ ಈ ಕಥೆ ರಿಪೀಟ್ ಆಗುತ್ತಲೇ ಇರುತ್ತದೆ.

ಮಕ್ಕಳನ್ನ ಇನ್ನಿಲ್ಲದಂತೆ ಪ್ರೀತಿಸುವ ಯುರೋಪಿಯನ್ನರು ಅವರಿಗೆ ಶಿಸ್ತು ಕೂಡ ಕಲಿಸುತ್ತಾರೆ. ಅವರನ್ನ ಕುಟುಂಬದ ಒಬ್ಬ ಸಾಮಾನ್ಯ ಸದಸ್ಯನಂತೆ ಕಾಣುತ್ತಾರೆ. ಮಕ್ಕಳು ಒಂದು ವಯಸ್ಸನ್ನ ದಾಟಿದ ನಂತರ ಅವರ ಹುಚ್ಚಾಟಗಳಿಗೆ ಹಣವನ್ನ ನೀಡುವುದಿಲ್ಲ, ಅವರ ಹಣವನ್ನ ಅವರು ಗಳಿಸಿಕೊಳ್ಳಲು ಪ್ರೋತ್ಸಾಹ ನೀಡುತ್ತಾರೆ. ಹೆಚ್ಚಿನ ವ್ಯಾಸಂಗಕ್ಕೆ ಕೂಡ ಮನೆ ಒತ್ತೆ ಇಟ್ಟು ಹಣ ಕಳಿಸುವ ಪರಿಪಾಠ ಇಲ್ಲಿಲ್ಲ. ಭಾರತದಲ್ಲಿ ಪೋಷಕರು ಕರ್ತವ್ಯದ ಹೆಸರಿನಲ್ಲಿ ಬಹಳಷ್ಟು ಹಣವನ್ನ ಮಕ್ಕಳಿಗಾಗಿ ವ್ಯಯಿಸುತ್ತಾರೆ. ಕುಟುಂಬ ವ್ಯವಸ್ಥೆಯ ಒಂದು ಕೊಂಡಿ ನಮ್ಮಲ್ಲಿ ಭದ್ರವಾಗಿ ಕಂಡರೆ ಇನ್ನೊಂದರಲ್ಲಿ ಅವರ ರೀತಿ ಸರಿಯೆನಿಸುತ್ತದೆ.

ಸರಿ ತಪ್ಪುಗಳ ಮೀರಿ ಅವಲೋಕಿಸಿ ನೋಡಿದರೆ ಬದುಕಿಗೆ ಬ್ಯಾಲೆನ್ಸ್‌ಡ್ ಅಪ್ರೋಚ್ ಬಹಳ ಮುಖ್ಯ ಎನಿಸುತ್ತದೆ. ಆದರೆ ಇದೇ ಸಮತೋಲಿತ ರೀತಿ ಎಂದು ಗುರುತಿಸುವ ಬಗೆ ಹೇಗೆ? ಎನ್ನುವ ಪ್ರಶ್ನೆಗೆ ಉತ್ತರವನ್ನ ಪ್ರತಿ ಕುಟುಂಬವೂ ತಾನೇ ಕಂಡುಕೊಳ್ಳಬೇಕಾದ ಅವಶ್ಯಕತೆ ಇದೆ. ಇಷ್ಟೇ ಸರಿ ಎಂದು ಜಗತ್ತಿನ ಎಲ್ಲಾ ಕುಟುಂಬಗಳಿಗೆ ಒಂದು ರೀತಿ ಸೃಷ್ಟಿಸುವುದು ಸಾಧ್ಯವಿಲ್ಲ, ಅದು ಸಾಧುವೂ ಅಲ್ಲ.

ಅಭಿಮತ

ಉತ್ಕರ್ಷ ಕೆ.ಎಸ್.

ಪಾದಯಾತ್ರೆ ರಾಜಕೀಯ

ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಹಗರಣವು ರಾಜ್ಯ ರಾಜಕೀಯದಲ್ಲಿ ಸಾಕಷ್ಟು ಸಂಚಲನ ಸೃಷ್ಟಿಸಿದೆ. ಈ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬಿಕರು ಭಾಗಿಯಾಗಿದ್ದಾರೆ ಎಂದು ಆರೋಪಿಸಿರುವ ವಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್, ಸಿದ್ದರಾಮಯ್ಯರ ರಾಜೀನಾಮೆಗೆ ಆಗ್ರಹಿಸಿ ಬೆಂಗಳೂರಿನಿಂದ ಮೈಸೂರಿನವರೆಗೆ ಪಾದಯಾತ್ರೆಗೆ ಮುಂದಾಗಿವೆ.

ಆಡಳಿತಾರೂಢ ಸರಕಾರವನ್ನು ಕಟ್ಟಿಹಾಕಲು ಪ್ರತಿಪಕ್ಷಗಳು ಮಾಡುವ ಇಂಥ ಪಾದಯಾತ್ರೆಗಳು ಸಹಜವಾಗಿಯೇ ಆಳುಗರಿಗೆ ತಲೆನೋವು ತರಿಸುತ್ತವೆ. ನಮ್ಮ ನೆಲ, ಜಲ, ಭಾಷೆ ಹೀಗೆ ಅನೇಕ ವಿಚಾರಗಳಿಗಾಗಿ ಕರ್ನಾಟಕದಲ್ಲಿ ಪಾದಯಾತ್ರೆಗಳು ನಡೆದಿವೆ, ಆ ಪೈಕಿ ಕೆಲವು ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿದಿವೆ. ಅಂಥ ಕೆಲವದರ ಪಕ್ಷಿನೋಟ ಇಲ್ಲಿದೆ.

- ಮಲಪ್ರಭಾ ನೀರಾವರಿ ಪ್ರದೇಶದ ರೈತರು ಸಮನ್ವಯ ಸಮಿತಿಯೊಂದನ್ನು ರಚಿಸಿಕೊಂಡು, ನೀರಾವರಿ ಕಾಲುವೆಗಳ ದುರಸ್ತಿ, ಬೆಳೆವಿಮೆ ಜಾರಿ, ರಸಗೊಬ್ಬರ-ಕ್ರಿಮಿನಾಶಕಗಳಿಗೆ ರಿಯಾಯಿತಿ/ಸಬ್ಸಿಡಿ ನೀಡಿಕೆ, ಅಭಿವೃದ್ಧಿಕರ ರದ್ದತಿ ಮುಂತಾದ ಬೇಡಿಕೆಗಳನ್ನು ಈಡೇರಿಸುವಂತೆ 1980ರಲ್ಲಿ ನರಗುಂದದಿಂದ ಬೆಂಗಳೂರಿನವರೆಗೆ ಪಾದಯಾತ್ರೆ ನಡೆಸಿದರು.
- 1981ರ ದಶಕದಲ್ಲಿ, ಜೀತವಿಮುಕ್ತಿಗೆಂದು ಮತ್ತು ಹರಿಜನ-ಗಿರಿಜನರಿಗೆ ಭೂಮಿ ನೀಡಬೇಕೆಂದು ಆಗ್ರಹಿಸಿ ಬಿಜೆಪಿಯ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪನವರು ಪಾದಯಾತ್ರೆ ನಡೆಸಿದರು ಮತ್ತು 1,700 ಮಂದಿಯನ್ನು ಜೀತಪದ್ಧತಿಯಿಂದ ವಿಮುಕ್ತಿಗೊಳಿಸುವಲ್ಲಿ ಸಫಲರಾದರು.
- ಎಸ್.ಎಂ. ಕೃಷ್ಣ ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದ ಕಾಲದಲ್ಲಿ ಅವರ ನೇತೃತ್ವದಲ್ಲಿ 1999ರಲ್ಲಿ ರಾಜ್ಯಾದ್ಯಂತ 'ಪಾಂಚಜನ್ಯ ಯಾತ್ರೆ'ಯನ್ನು ನಡೆಸಲಾಗಿತ್ತು. ಇದರ ಫಲವಾಗಿಯೇ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ಅಧಿಕಾರದ ಗದ್ದುಗೆಯನ್ನು ಏರಿತ್ತು.
- ಅದು 1999ರ ಲೋಕಸಭಾ ಚುನಾವಣೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಾಸನ ಕ್ಷೇತ್ರದಲ್ಲಿ ಸೋತು ಮನೆ ಸೇರಿದ್ದರು. ಅವರ ರಾಜಕೀಯ ಜೀವನ ಇನ್ನು ಮುಗಿದೇಹೋಯಿತು ಎಂಬ ಮಾತುಗಳು ರಾಜಕಾರಣದ ಪಡಸಾಲೆಗಳಲ್ಲಿ ಕೇಳಿಬಂದಿದ್ದವು. ಆದರೆ 2002ರಲ್ಲಿ ಅಂದಿನ ಕನಕಪುರ ಕ್ಷೇತ್ರದ ಕಾಂಗ್ರೆಸ್ ಸಂಸದ ಚಂದ್ರಶೇಖರ ಮೂರ್ತಿಯವರು ಮೃತಪಟ್ಟಿದ್ದರಿಂದ ಉಪಚುನಾವಣೆ ಆಯೋಜನೆಗೊಂಡಿತ್ತು ಮತ್ತು ಅದರ ಆಸುಪಾಸಿನಲ್ಲೇ ಚನ್ನಪಟ್ಟಣದಲ್ಲಿ 'ನೀರಾ ಹೋರಾಟ' ಸಂಬಂಧಿತ ಪಾದಯಾತ್ರೆ ನಡೆದಿತ್ತು. ಹೋರಾಟ ತೀವ್ರಗೊಂಡು ಇಬ್ಬರು ರೈತರು ಗೋಲಿಬಾರ್‌ನಲ್ಲಿ ಅಸುನೀಗಿದರು.
- 2010ರ ಜುಲೈನಲ್ಲಿ ವಿಧಾನಸಭೆಯ ಮುಂಗಾರು ಅಧಿವೇಶನದ ಸಂದರ್ಭದಲ್ಲಿ ಕಾಂಗ್ರೆಸ್‌ನ ದಿನೇಶ್ ಗುಂಡೂರಾವ್ ಅವರು ರೆಡ್ಡಿ ಸಹೋದರರ ವಿರುದ್ಧ ಸದನದಲ್ಲಿ ಅಕ್ರಮ ಗಣಿಗಾರಿಕೆಯ ಆರೋಪ ಮಾಡಿದ್ದರು. ಇದರಿಂದ ಸದನದಲ್ಲಿ ಮಾತಿನ ಚಕಮಕಿ ಶುರುವಾಗಿ, ಅಂದಿನ ಬಿಜೆಪಿ ಶಾಸಕ ಟಿ.ಎಸ್. ಸುರೇಶ್ ಬಾಬು ಅವರು ದಿನೇಶ್ ಗುಂಡೂರಾವ್ ವಿರುದ್ಧ ಹರಿಹಾಯ್ದರು, 'ಬಳ್ಳಾರಿಗೆ ಬನ್ನಿ, ನೋಡಿಕೊಳ್ಳುತ್ತೇವೆ' ಎಂದು ಸವಾಲು ಹಾಕಿದರು. ಇದರಿಂದ ಕಲಾಪ ಮತ್ತಷ್ಟು ಗದ್ದಲಮಯವಾಯಿತು. ಬಳ್ಳಾರಿ ಶಾಸಕರು ತೋಳೇರಿಸಿಕೊಂಡು ವಿಪಕ್ಷ ನಾಯಕರ ಬಳಿಗೆ ಧಾವಿಸಿದರು, ಅವರಲ್ಲಿ ಮೂವರು ರೆಡ್ಡಿ ಸೋದರರೂ ಇದ್ದರು. ಆಗ ಸಿಟ್ಟಿಗೆದ್ದ ಸಿದ್ದರಾಮಯ್ಯನವರು ತೋಳು ತಟ್ಟಿ, 'ಬಳ್ಳಾರಿಗೆ ಬರ್ತೇವೆ, ರೆಡ್ಡಿ ಮನೆ ಮುಂದೆಯೇ ಮೆರವಣಿಗೆ ಮಾಡ್ತೇವೆ' ಎಂದು ಅಬ್ಬರಿಸಿ ಸವಾಲೆಸೆದರು. ಅಂತೆಯೇ ಸಿದ್ದರಾಮಯ್ಯರ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕರು ಬೆಂಗಳೂರಿನಿಂದ ಬಳ್ಳಾರಿಯವರೆಗೆ ಪಾದಯಾತ್ರೆ ಮಾಡಿದರು. ನಂತರ ನಡೆದಿದ್ದೆಲ್ಲ ಇತಿಹಾಸ.
- ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ 2022ರಲ್ಲಿ ಕಾಂಗ್ರೆಸ್‌ನ ನಾಯಕರಾದ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಕನಕಪುರದ ಸಂಗಮ ಕ್ಷೇತ್ರದಿಂದ ಬೆಂಗಳೂರಿನವರೆಗೂ ಪಾದಯಾತ್ರೆ ನಡೆಯಿತು. ಇದರಿಂದ ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಕಾಂಗ್ರೆಸ್‌ನ ವರ್ಚಸ್ಸು ಹೆಚ್ಚಿತು.

ಹೀಗೆ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಪಾದಯಾತ್ರೆಯು ತನ್ನದೇ ಆದಂಥ ಮಹತ್ವವನ್ನು ಪಡೆದುಕೊಂಡಿದೆ. ನಾಯಕರೆನಿಸಿಕೊಂಡವರು ತಮ್ಮ ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಮತ್ತು ಶಕ್ತಿಯನ್ನು ವೃದ್ಧಿಸಿಕೊಳ್ಳುವುದಕ್ಕೆ ಪಾದಯಾತ್ರೆಯೂ ಪ್ರಮುಖ ಅಸ್ತ್ರವಾಗಿದೆ. ಆದರೆ ಯಾರೇ ಪಾದಯಾತ್ರೆ ಮಾಡಿದರೂ ಸರಿ, ಅದು ತಾರ್ಕಿಕ ಅಂತ್ಯವನ್ನು ಕಾಣುವಂತಾಗಬೇಕು.

(ಲೇಖಕರು ಹವ್ಯಾಸಿ ಬರಹಗಾರರು)

ಉದ್ಯೋಗಾವಕಾಶಗಳ ಸೃಷ್ಟಿ: ಒಂದಿಷ್ಟು ಚಿಂತನೆಗಳು

ಜೀವನೋಪಾಯ

ಪ್ರೊ. ಆರ್.ಜಿ.ಹೆಗಡೆ
vveditoped@gmail.com

ಇತ್ತೀಚೆಗೆ ಮಂಡಿಸಲಾದ ಕೇಂದ್ರ ಬಜೆಟ್‌ನ ಒಂದು ಪ್ರಮುಖ ಅಂಶ- ಉದ್ಯೋಗ ಸೃಷ್ಟಿಗಾಗಿ ಇಂಟರ್ನ್‌ಶಿಪ್ ಯೋಜನೆ. ಈ ಕಾರ್ಯಕ್ರಮದ ಭಾಗವಾಗಿ ಕೇಂದ್ರ ಸರಕಾರ ಬಯಸಿರುವುದೇಂದರೆ, ದೇಶದ 500 ಪ್ರಮುಖ ಕಂಪನಿಗಳು ತಮ್ಮ 'ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನಿಧಿ' (ಸಿಎಸ್‌ಆರ್ ಫಂಡ್) ಬಳಸಿಕೊಂಡು ಅರ್ಹ ಯುವಕ-ಯುವತಿಯರಿಗಾಗಿ ಒಂದು ವರ್ಷದ ಇಂಟರ್ನ್‌ಶಿಪ್ (ಕಂಪನಿಯೊಳಗೆ ಪ್ರಾಯೋಗಿಕ ತರಬೇತಿ) ಹಮ್ಮಿಕೊಳ್ಳಬೇಕು. 'ಹ್ಯಾಂಡ್ಸ್-ಆನ್ ಎಕ್ಸ್‌ಪೀರಿಯನ್ಸ್' (ಪ್ರಾಯೋಗಿಕ ಕಲಿಕಾ ಅನುಭವ) ಒದಗಿಸಬೇಕು. ಇಂಥ ಕಲಿಕಾರ್ಥಿಗೆ ಕೇಂದ್ರ ಸರಕಾರ ಪ್ರತಿ ತಿಂಗಳು 5,000 ರು. ಸ್ಟೈಪೆಂಡ್ ನೀಡುತ್ತದೆ ಹಾಗೂ ಇತರೆ ಖರ್ಚುಗಳಿಗೆಂದು ವಾರ್ಷಿಕವಾಗಿ ಇನ್ನೂ 6,500 ರು. ನೀಡುತ್ತದೆ. ಇಂಟರ್ನ್‌ಶಿಪ್ ಮುಗಿದ ಬಳಿಕ ಅರ್ಹರೆನಿಸಿದವರನ್ನು ಕಂಪನಿಗಳು ತಮ್ಮಲ್ಲಿ ಬಳಸಿಕೊಳ್ಳಬಹುದು.

ಇದರಿಂದ ಕಂಪನಿಗಳಿಗೆ ಮಾನವ ಸಂಪನ್ಮೂಲಕ್ಕಾಗಿ ಹುಡುಕಾಡುವ ಶ್ರಮ ತಪ್ಪುತ್ತದೆ. ತರಬೇತಿ ಪಡೆದವರಿಗೆ ಕೌಶಲ, ಉದ್ಯೋಗ (ಬಹುತೇಕ) ಸಿಗುತ್ತದೆ. ಆದರೆ ಅವರು ತರಬೇತಿಯನ್ನು ಗಂಭೀರವಾಗಿ ಪರಿಗಣಿಸಿ ನೌಕರಿ ಗಿಟ್ಟಿಸಿಕೊಳ್ಳಬೇಕು. ಹೀಗೆ ಉದ್ಯೋಗದ ಹುಡುಕಾಟದಲ್ಲಿದ್ದವರನ್ನು ಉತ್ತೇಜಿಸಿ, ಅವರಿಗೆ ಕೌಶಲ ಕೊಡಿಸಿ ಉದ್ಯೋಗ ದೊರಕಿಸುವ 'ಫೆಸಿಲಿಟೇಟರ್' ಪಾತ್ರವನ್ನು ಕೇಂದ್ರ ಸರಕಾರ ನಿರ್ವಹಿಸುತ್ತದೆ. ಈ ಮೂಲಕ ಸುಮಾರು 1 ಕೋಟಿ ಗುಣಮಟ್ಟದ ನೌಕರಿಗಳನ್ನು ಮುಂದಿನ 5 ವರ್ಷಗಳಲ್ಲಿ ಸೃಷ್ಟಿಸುವ ಗುರಿ ಕೇಂದ್ರ ಸರಕಾರದ್ದು. ಈ ಯೋಜನೆಗೆ ಕೇಂದ್ರ ಸುಮಾರು 2.5 ಲಕ್ಷ ಕೋಟಿ ರುಪಾಯಿಗಳನ್ನು ಬಜೆಟ್‌ನಲ್ಲಿ ಕಾದಿರಿಸಿದೆ. ಗಂಭೀರವಾಗಿ ಕಾರ್ಯರೂಪಕ್ಕೆ ಬಂದರೆ ಮಹತ್ತರವಾಗಿ ಹೊಮ್ಮುವ ಸಮಾಜ ಕಲ್ಯಾಣ ಯೋಜನೆಯಿದು.

ಯೋಜನೆಯ ಹಿಂದೆ ಸರಿಯಾದ ಹಲವು ಗ್ರಹಿಕೆಗಳಿವೆ. ಮೊದಲನೆಯದಾಗಿ, ಕಂಪನಿಗಳಿಗೆ ಬೇಕಿರುವ ತಾಂತ್ರಿಕ ಗುಣಮಟ್ಟ ಮತ್ತು ನಮ್ಮ ವಿದ್ಯಾರ್ಥಿಗಳ ಗುಣಮಟ್ಟದ ನಡುವೆ ಅಗಾಧವಾದ ಕಂದರವಿದೆ. ಕೌಶಲದಲ್ಲಿನ ಈ ಅಂತರವನ್ನು (ಸ್ಕಿಲ್ ಗ್ಯಾಪ್) ಮುಚ್ಚಲು ಹೆಚ್ಚಿನ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸದ್ಯದ ಸ್ಥಿತಿಯಲ್ಲಂತೂ ಸಾಧ್ಯವಿಲ್ಲ. ಸೂಕ್ತ ಕೌಶಲ ಹೊಂದಿದವರಿಗೆ ಮಾತ್ರ ಒಳ್ಳೆಯ ಕಂಪನಿಗಳಲ್ಲಿ ಉದ್ಯೋಗ ಸಿಗುತ್ತದೆ. ಸದ್ಯ ಅಂಥ ಕೌಶಲವನ್ನು ಗುರುತಿಸಿ ತರಬೇತಿ ನೀಡಬಲ್ಲವರು ಕಂಪನಿಗಳವರು ಮಾತ್ರ. ಹೀಗಾಗಿ ಈ ಪ್ರಕ್ರಿಯೆಯಲ್ಲಿ ಸರಕಾರದ ಮಧ್ಯಪ್ರವೇಶದ ಅಗತ್ಯವಿದೆ. ಇಲ್ಲವಾದರೆ ಅರ್ಹ ಕಲಿಕಾರ್ಥಿಗಳು ಮತ್ತು ಕಂಪನಿಗಳು ಒಂದೆಡೆ ಸೇರುವುದಿಲ್ಲ. ಇವೆಲ್ಲವನ್ನೂ ಅರ್ಥಮಾಡಿಕೊಂಡೇ ಈ ಎರಡು ವಲಯಗಳನ್ನು ಎಳೆತಂದು ಸೇರಿಸಬಲ್ಲ ಮಹತ್ವದ ಯೋಜನೆಯನ್ನು ಕೇಂದ್ರ ಸರಕಾರ ಹಮ್ಮಿಕೊಂಡಿರುವುದು ಮತ್ತು ಕೋಟ್ಯಂತರ ರುಪಾಯಿಗಳನ್ನು ಅದರಲ್ಲಿ ತೊಡಗಿಸಿರುವುದು. ಇದು ಸ್ವಾಗತಾರ್ಹ ಕ್ರಮವೇ ಸರಿ.

ಆದರೆ ಬಹುಶಃ ಇಂಥ ಇಂಟರ್ನ್‌ಶಿಪ್ ನೀಡುವಿಕೆ ಒಂದು ತುರ್ತುಕ್ರಮ ಮಾತ್ರ. ಮೂಲಭೂತವಾಗಿ ಬೇಕಿರುವುದು ಉನ್ನತ ಶಿಕ್ಷಣಕ್ಕೊಂದು ಕಾಯಕಲ್ಪ ನೀಡುವಿಕೆ. ಅಂದರೆ, ಸಮಕಾಲೀನ ಜಾಗತಿಕ ಅವಶ್ಯಕತೆಗಳನ್ನು ಪೂರೈಸಬಲ್ಲ ರೀತಿಯಲ್ಲಿ ಉನ್ನತ ಶಿಕ್ಷಣವನ್ನು ಮರುರೂಪಿಸುವ, ಆಧುನಿಕಗೊಳಿಸುವ ಅವಶ್ಯಕತೆ ಇದೆ. ಉನ್ನತ ಶಿಕ್ಷಣ ಯಾವಾಗಲೂ ಸಮಾಜ ಮತ್ತು ಕೈಗಾರಿಕೆಗಳಿಗಿಂತ ಮುಂದೆ ಹೋಗಿ ಯೋಚಿಸಬೇಕು. ವಿಷಾದವೆಂದರೆ ಅದು ಯೋಚನೆ ಮಾಡುವುದನ್ನೇ ನಿಲ್ಲಿಸಿದಂತಿದೆ. ಕೆಲವು ಸಂಸ್ಥೆಗಳನ್ನು ಹೊರತುಪಡಿಸಿದರೆ ಉನ್ನತ ಶಿಕ್ಷಣ ಸಂಸ್ಥೆಗಳು ಕೌಶಲಾಭಿವೃದ್ಧಿ ಎಂದರೆ ಏನು ಎಂದು ಇನ್ನೂ ಯೋಚಿಸುತ್ತಲೇ, ಕೇಳುತ್ತಲೇ ಇವೆ. ಹೆಚ್ಚಿನ ಸಂಸ್ಥೆಗಳು 'ಆ ಕೆಲಸ ನಮ್ಮದಲ್ಲ' ಎಂಬ ಭಾವನೆಯಲ್ಲೇ ಇವೆ. ಜೀವನವನ್ನು ರೂಪಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಶಕ್ತಿ ಅವಕ್ಕೆ ಕಡಿಮೆ.

ಪದವಿ ಶಿಕ್ಷಣವಂತೂ ಕುಸಿದುಹೋಗಿದೆ. ಒಂದು ರೀತಿಯಲ್ಲಿ ಅದು ಪ್ರಾಥಮಿಕ ಶಿಕ್ಷಣದ ವಿಸ್ತರಣೆಯೇ ಆಗಿಹೋಗಿದೆ. ಅದಕ್ಕೆ ಯಾವುದೇ ಕೌಶಲ ಅಥವಾ ವ್ಯಾವಹಾರಿಕ ತಂತ್ರಗಳನ್ನು ಕಲಿಸುವ ಶಕ್ತಿಯಿಲ್ಲ. ಫೋಕಸ್ ಕೂಡ ಇಲ್ಲ. ಅದನ್ನು ಕಲೆ, ವಿಜ್ಞಾನ ಮತ್ತು ವಾಣಿಜ್ಯಶಾಸ್ತ್ರ ಎಂದು ಯಾರು ಯಾವಾಗ ಒಡೆದರೋ, ವಿಷಯಗಳನ್ನು ಹಾಗೇಕೆ ಹಂಚಿದರೋ ದೇವರಿಗೇ ಗೊತ್ತು. ಅಷ್ಟೇ ಅಲ್ಲ, ಹೆಚ್ಚಿನ ತಾಂತ್ರಿಕ ಶಿಕ್ಷಣವೂ ಕಾರ್ಪೊರೇಟ್ ಜಗತ್ತಿನ ವೇಗಕ್ಕೆ ಹೋಲಿಸಿದರೆ ಹಿಂದುಳಿದಿದೆ. ಕನಿಷ್ಠ 50 ವರ್ಷಗಳಿಂದ ಎಲ್ಲವೂ ಹಾಗೆಯೇ ಯಾಂತ್ರಿಕವಾಗಿ ನಡೆದಿದೆ.

ಇಂಥ ಸ್ಥಿತಿಗೆ ಹಲವು ಕಾರಣಗಳಿವೆ. ಇವುಗಳಲ್ಲಿ ಮುಖ್ಯವಾದದ್ದು ಉನ್ನತ ಶಿಕ್ಷಣ/ತಾಂತ್ರಿಕ ಶಿಕ್ಷಣ ಎದುರಿಸುತ್ತಿರುವ ಸೂಕ್ತ ಸಂಪನ್ಮೂಲಗಳ ಕೊರತೆ. ಹಾಗೆಯೇ ಈಗಿರುವ ಕಾನೂನುಗಳು ಹಳೆಯ ಕಾಲದವು. ಶಿಕ್ಷಣ ಸಂಸ್ಥೆಗಳಿಗೆ 'ಹೊಸದಾಗಿ ಯೋಚಿಸುವ', ತಮ್ಮ ಸುತ್ತಮುತ್ತಲ ಜಗತ್ತಿಗೆ ಪ್ರಸ್ತುತವಾಗುವಂಥ ಕೋರ್ಸ್/ಸಿಲಬಸ್‌ಗಳನ್ನು ಸೃಷ್ಟಿಸುವ ಕಾನೂನಾತ್ಮಕ ಅಧಿಕಾರವಿಲ್ಲ. ವಿದ್ಯಾರ್ಥಿಗಳಿಗಂತೂ ತಮಗೆ ಏನು ಬೇಕು ಎಂದು ಗುರುತಿಸಿ, ಅದನ್ನು ಬೇಕಾದ ರೀತಿಯಲ್ಲಿ ಕಲಿಯುವ ಅವಕಾಶವೇ ಇಲ್ಲ. ವರ್ಷಗಳಿಂದ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಬಜೆಟ್ ಅನುದಾನ ಸಿಕ್ಕಿದ್ದರೆ, ಗುಣಮಟ್ಟದ ಸಂಸ್ಥೆಗಳು ನಮ್ಮಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗಿದ್ದರೆ, ಹೊಸ ಚಿಂತನೆಗಳು ಕಾಲಕಾಲಕ್ಕೆ ಬರುತ್ತಿದ್ದಿದ್ದರೆ, ಬಹುಶಃ ಸರಕಾರ ಈಗ ತಂದಿರುವ ರೀತಿಯ ಇಂಟರ್ನ್‌ಶಿಪ್ ಯೋಜನೆಯ ಅಗತ್ಯ ಅಷ್ಟೊಂದು ಇರುತ್ತಿರಲಿಲ್ಲವೇನೋ! ಇನ್ನಾದರೂ ನಾವಿದನ್ನು ಅರಿತು ಉನ್ನತ ಶಿಕ್ಷಣ ಸಂಸ್ಥೆಗಳ ಕೌಶಲಾಭಿವೃದ್ಧಿಯ ಮಟ್ಟವನ್ನು ಸಾಮಾಜಿಕವಾಗಿ ಪ್ರಸ್ತುತಗೊಳಿಸಲೇಬೇಕು. ಬಜೆಟ್‌ನಲ್ಲಿ ಘೋಷಿಸಲಾಗಿರುವ ಇಂಟರ್ನ್ ಶಿಪ್ ಒಂದು ಸ್ವಾಗತಾರ್ಹ ಕ್ರಮ ಹೌದು. ಆದರೆ ನಿಜವಾದ, ದೀರ್ಘಕಾಲೀನ ಪರಿಹಾರ ಸಿಗುವುದು ಉನ್ನತ ಶಿಕ್ಷಣಕ್ಕೆ ಸೂಕ್ತ ಹಣಕಾಸು ಮತ್ತು ಕಾನೂನಾತ್ಮಕ ಸ್ವಾತಂತ್ರ್ಯ ದೊರೆತಾಗ ಮಾತ್ರ. ಸರಕಾರಗಳು ಉನ್ನತ ಶಿಕ್ಷಣದ ಮೇಲೆ ಹಣ ತೊಡಗಿಸಲೇಬೇಕು. ನಿರುದ್ಯೋಗ ಸಮಸ್ಯೆಗೆ ಶಾಶ್ವತ ಪರಿಹಾರ ಇರುವುದು ಅಲ್ಲಿಯೇ! ಶಿಕ್ಷಣ ಯಶಸ್ವಿಯಾದರೆ ನಿರುದ್ಯೋಗ ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ.

ಬಹುಶಃ ನಾವು ಒಂದು ಚಿಕ್ಕ ಸಾಂವಿಧಾನಿಕ ಮರುಹೊಂದಾಣಿಕೆಯನ್ನು ಮಾಡಿಕೊಳ್ಳಬೇಕು, ಅಂದರೆ, ಉನ್ನತ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ವ್ಯವಸ್ಥೆಗಳನ್ನು ಕೇಂದ್ರ ಸರಕಾರವೇ ನೋಡಿಕೊಳ್ಳಬೇಕು. ರಾಜ್ಯ ಸರಕಾರವು ಪ್ರಾಥಮಿಕ ಶಿಕ್ಷಣದತ್ತ ಗಮನ ಹರಿಸಬೇಕು. ಆಗ ಉನ್ನತ/ತಾಂತ್ರಿಕ ಶಿಕ್ಷಣದಲ್ಲಿ ರಾಷ್ಟ್ರೀಯ ಮಟ್ಟದ ನೀತಿ ನಿರೂಪಣೆ ಸುಲಭ. ಉನ್ನತ ಶಿಕ್ಷಣದ ಅಂತಾರಾಷ್ಟ್ರೀಯೀಕರಣ ಸುಲಭ. ಈಗ ಶಿಕ್ಷಣವು 'ಕನ್‌ಕರೆಂಟ್ ಲಿಸ್ಟ್'ನಲ್ಲಿರುವುದರಿಂದ ಹಲವು ಸಮಸ್ಯೆಗಳು ಹುಟ್ಟಿಕೊಂಡಿವೆ. ಕೆಲವು ರಾಜ್ಯಗಳು ಕೇಂದ್ರದ ನೀತಿಗಳನ್ನು ಮಾನ್ಯ ಮಾಡುವುದೇ ಇಲ್ಲ. ಹೀಗಾಗಿಯೂ ಸಮಸ್ಯೆಗಳಿವೆ.

ಇನ್ನೊಂದು ಮಾತು. ಉದ್ಯೋಗ ಸೃಷ್ಟಿ ಕೇವಲ ಕಾರ್ಪೊರೇಟ್ ಜಗತ್ತಿಗೆ ಸಂಬಂಧಿಸಿದ್ದಲ್ಲ. ಆದ್ದರಿಂದ ಎಲ್ಲ ಸ್ತರಗಳ ವಿದ್ಯಾರ್ಥಿಗಳಿಗೂ ಲಾಭವಾಗುವ ರೀತಿಯಲ್ಲಿ ಕೂಡ ನಾವು ಯೋಜನೆಗಳನ್ನು ರೂಪಿಸಬೇಕು. ಉದ್ಯೋಗ ತರಬೇತಿ ನೀಡಬೇಕು. ಈ ನಿಟ್ಟಿನಲ್ಲಿ ನಾವೀಗ ಮಾಡಬೇಕಿರುವುದು, ಇರುವ ಉನ್ನತ ಶಿಕ್ಷಣ ವ್ಯವಸ್ಥೆಯನ್ನೇ ಸಾಧ್ಯವಿರುವೆಡೆಯೆಲ್ಲಾ ದುರಸ್ತಿ ಮಾಡಿ, ಬೇರೆ ಬೇರೆ ರೀತಿಯ, ಬೇರೆ ಬೇರೆ ಸಾಮಾಜಿಕ ಸ್ತರಗಳ ಯುವಜನರಿಗೆ ಸೂಕ್ತವಾಗಬಲ್ಲ, ಹಳ್ಳಿಗರ ಕೌಶಲಗಳನ್ನು ಕೂಡ ಮಾನ್ಯಮಾಡಬಹುದಾದ ಉದ್ಯೋಗಗಳನ್ನು ಸೃಷ್ಟಿಸಬಲ್ಲ ಸಾಧ್ಯತೆಗಳನ್ನು ಗಮನಿಸಬೇಕು. ಅಂಥ ಸಾಧ್ಯತೆಗಳಲ್ಲೊಂದು 'ನ್ಯಾಷನಲ್ ಕೆಡೆಟ್ ಕೋರ್'ನ (ಎನ್‌ಸಿಸಿ) ಮರುನಿರ್ಮಾಣ ಮತ್ತು ಆಧುನೀಕರಣ. ಎನ್‌ಸಿಸಿಗೆ ಭದ್ರತೆ ಮತ್ತು ರಕ್ಷಣಾ ವಲಯಗಳಲ್ಲಿ ಲಕ್ಷಗಟ್ಟಲೆ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವಿದೆ. ಇಂದು ಪ್ರತಿಯೊಂದು ಸಂಸ್ಥೆ, ಕಂಪನಿ, ಖಾಸಗಿ ಎಸ್ಟೇಟ್, ಬ್ಯಾಂಕುಗಳು ತಮ್ಮದೇ ಆದ ಖಾಸಗಿ ಭದ್ರತಾ ವ್ಯವಸ್ಥೆಗಳನ್ನು ಹೊಂದುತ್ತಿವೆ. ವ್ಯಕ್ತಿಗಳು ಕೂಡ ಇದಕ್ಕೆ ಹೊರತಲ್ಲ. ಭಾರತೀಯ ಸೇನೆ ಮತ್ತು ಎಲ್ಲ ರೀತಿಯ ಮೀಸಲು ಪಡೆ, ಪೊಲೀಸ್ ಪಡೆಗಳಲ್ಲಿಯೂ ಎನ್‌ಸಿಸಿ ಮುಗಿಸಿದವರಿಗೆ ಉದ್ಯೋಗವಿದೆ. ಎನ್‌ಸಿಸಿ ಇಂಥ ಅಗತ್ಯಗಳಿಗೆ ಹೇಳಿ ಮಾಡಿಸಿದಂಥ ಕೋರ್ಸ್. ಆದರೆ ಅದನ್ನು ಆಧುನಿಕಗೊಳಿಸಬೇಕು, ವಿದ್ಯಾರ್ಥಿಗಳ ಮತ್ತು ತರಬೇತಿಯ ಮೇಲೆ ಸೂಕ್ತವಾಗಿ ಹಣ ತೊಡಗಿಸಬೇಕು. ಪರಿಕರಗಳನ್ನು ಒದಗಿಸಬೇಕು.

ಈಗಲೂ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಎನ್‌ಸಿಸಿ ತೆಗೆದುಕೊಳ್ಳುತ್ತಿಲ್ಲ ಎಂದೇನಿಲ್ಲ, ಆದರೆ ಅಲ್ಲಿಯ ಒಟ್ಟಾರೆ ವಾತಾವರಣ ಎನ್‌ಸಿಸಿಗೆ ಉತ್ತೇಜಕವಾಗಿಲ್ಲ. ವಿದ್ಯಾರ್ಥಿಗಳನ್ನು ಡಿಗ್ನಿಫೈ ಮಾಡುತ್ತಿಲ್ಲ. ಅವರ ಆತ್ಮವಿಶ್ವಾಸ ಹೆಚ್ಚಿಸುವ ರೀತಿಯಲ್ಲಿ ಕೋರ್ಸ್ ಇಲ್ಲ. ಬೂಟುಗಳು, ಸಮವಸ್ತ್ರಗಳಂಥ ಕನಿಷ್ಠ ಅಗತ್ಯಗಳೂ ಅವರಿಗೆ ಸರಿಯಾಗಿ ಸಿಗುತ್ತಿಲ್ಲ. ಕಾಲೇಜುಗಳ ಬಿಟ್ಟಿ ಕೆಲಸ, ಊರಿಗೆ ಬಂದೇ ಬರುವ 'ಗೌರವಾನ್ವಿತ' ಅತಿಥಿಗಳ ಸ್ವಾಗತ ಇತ್ಯಾದಿ ಬೇಡದ ಕೆಲಸಗಳಿಗೆ ಅವರನ್ನು ಸಾಮಾನ್ಯವಾಗಿ ಬಳಸಿಕೊಳ್ಳಲಾಗುತ್ತದೆ. ಕೆಲ ಕಾಲೇಜುಗಳಲ್ಲಿ ಅವರನ್ನು ಕೆಲಸದಾಳುಗಳಂತೆ ಹೀನಾಯವಾಗಿ ನೋಡಲಾಗುತ್ತದೆ. ಇವನ್ನೆಲ್ಲ ಬದಲಾಯಿಸಿ ನಾವು ಅವರನ್ನು ಕಾಲೇಜಿನಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಹೀರೋಗಳಂತೆ ನೋಡುವ ಅಗತ್ಯವಿದೆ. ಅವರಿಗೆ ವಿಶೇಷ ಸ್ಕಾಲರ್‌ಶಿಪ್ ನೀಡಬೇಕಿದೆ. ಅವರ 'ಬಾಡಿ ಬಿಲ್ಡಿಂಗ್'ಗಾಗಿ ಆಹಾರಭತ್ಯೆ, ಹಾಗೂ ಕಾಲೇಜಿನ ಕೆಲವು ವಿಷಯಗಳಿಗೆ ವಿನಾಯಿತಿ ನೀಡಬಹುದು. ಅಂದರೆ ಅವರಲ್ಲಿ ಆತ್ಮವಿಶ್ವಾಸ ತುಂಬಿ ಹುರಿದುಂಬಿಸಬೇಕು, ನಂತರ ಪೊಲೀಸ್, ಸೇನೆ, ರೈಲ್ವೆ, ವಿಮಾನ ನಿಲ್ದಾಣ ಭದ್ರತೆ ಇತ್ಯಾದಿ ವಲಯಗಳಲ್ಲಿ ಅವರಿಗೆ ಆದ್ಯತೆ ನೀಡಬೇಕು. ಈಗಾಗಲೇ ಇರುವ ಮೀಸಲಾತಿಯನ್ನು ಹೆಚ್ಚಿಸಬೇಕು. ಒಟ್ಟಾರೆಯಾಗಿ ಎನ್‌ಸಿಸಿಯ ಇಮೇಜ್ ಬದಲಿಸಬೇಕು. ಅದನ್ನೇ ಪ್ರತ್ಯೇಕವಾದ ಒಂದು 'ಪದವಿ' ಎಂದೂ ಪರಿಗಣಿಸಬಹುದು. ಇದರಿಂದಾಗುವ ಲಾಭವೆಂದರೆ, ತರಬೇತಿ, ಕೌಶಲ ಹೊಂದಿದ ಶಿಸ್ತಿನ ಯುವಕ-ಯುವತಿಯರು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಭದ್ರತಾ ಅವಶ್ಯಕತೆಗಳಿಗಾಗಿ ದೊರೆತುಬಿಡುತ್ತಾರೆ. ಅವರಿಗೆ ಉದ್ಯೋಗಗಳು ಸಿಗುತ್ತವೆ. ವಿಶೇಷವೆಂದರೆ, ಇದು ಹೆಚ್ಚಾಗಿ ಉದ್ಯೋಗದ ತೀವ್ರ ಅಗತ್ಯವಿರುವವರಿಗೆ, ಹಳ್ಳಿಗರಿಗೆ ಒಂದು ದಾರಿಯನ್ನು ತೆರೆದುಬಿಡುತ್ತದೆ. ಈ ಯೋಜನೆಗೆ ಭಾರಿ ವೆಚ್ಚವೇನೂ ಆಗುವುದಿಲ್ಲ.

ಎರಡನೆಯದಾಗಿ, ಕಂಪನಿಗಳಿಗೆ ತಮ್ಮ ಆಯ್ಕೆಯ ಕಾಲೇಜೊಂದರಲ್ಲಿ ತಮಗೆ ಬೇಕಾದ ರೀತಿಯ ಮಾನವ ಸಂಪನ್ಮೂಲವನ್ನು ಸೃಷ್ಟಿಸುವ ಪದವಿ/ಡಿಪ್ಲೊಮಾ ಕೋರ್ಸ್ ಆರಂಭಿಸಿಕೊಳ್ಳಲು ಅನುಮತಿ ನೀಡಬೇಕು. ಅದರ ಅವಧಿ, ಪಠ್ಯಕ್ರಮ, ಕಲಿಕಾ ವಿಧಾನ, ಯಾರು ಕಲಿಸಬೇಕು, ಎಷ್ಟು ಸೀಟ್ ಇರಬೇಕು ಇತ್ಯಾದಿ ಎಲ್ಲ ವಿಷಯಗಳನ್ನೂ ಕಂಪನಿಗಳಿಗೇ ಬಿಟ್ಟುಬಿಡಬೇಕು. ಇದಕ್ಕೊಂದು ಉದಾಹರಣೆ ನೀಡುವುದಾದರೆ, ಕರ್ನಾಟಕದ ದಾಂಡೇಲಿಯ ಬಂಗೂರ ನಗರ ಪದವಿ ಕಾಲೇಜಿನಲ್ಲಿ 4 ವರ್ಷ ಅವಧಿಯ 'ಕಾಗದ ಮತ್ತು ತಿರುಳು ವಿಜ್ಞಾನ ಪದವಿ' ಬಹಳ ವರ್ಷಗಳಿಂದ ಇದೆ. ಅದನ್ನು ಕಾಗದ ಕಾರ್ಖಾನೆಯೊಂದು ನಡೆಸುತ್ತದೆ. ಸ್ವಾರಸ್ಯಕರ ಸಂಗತಿಯೆಂದರೆ, ಭಾರತದ ಕಾಗದ ಉದ್ಯಮಕ್ಕೆ ಬೇಕಾಗುವ ತಾಂತ್ರಿಕ ಮಾನವ ಸಂಪನ್ಮೂಲವನ್ನು ಈ ಕೋರ್ಸ್ ಒದಗಿಸುತ್ತಿದೆ. ಈ ನಿಟ್ಟಿನಲ್ಲಿ ಸರಕಾರಗಳು, ಕಂಪನಿಗಳು ಆಲೋಚಿಸಬಹುದು.

ಇನ್ನೂ ಒಂದು ಮಾತು. ದಟ್ಟಡವಿಯ ನಡುವಿನ ಹಳ್ಳಿಗಳಿಂದ ಬರುವ ವಿದ್ಯಾರ್ಥಿಗಳಿಗೆ, ಪ್ರಕೃತಿ, ಅರಣ್ಯಗಳು, ಪ್ರಾಣಿಗಳು, ಹಾವುಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿಶೇಷ ಜ್ಞಾನವಿರುತ್ತದೆ. ಹಾಗೆ ನೋಡಿದರೆ, ಪಕ್ಕಾ ಹಳ್ಳಿಗಳಿಂದ ಬರುವ ಹೆಚ್ಚಿನ ವಿದ್ಯಾರ್ಥಿಗಳಿಗೆ ತಮ್ಮ ಹಳ್ಳಿಯ ಕುರಿತು ಒಳನೋಟಗಳಿರುತ್ತವೆ. ಅವರಿಗೆ ಜೇನು ಕೊಯ್ಯುವಿಕೆ, 'ಮಾಡಿ' ಇಳಿಸುವಿಕೆ ಬರುತ್ತದೆ, ಪ್ರಾಣಿಗಳ ಹೆಜ್ಜೆಗುರುತು ತಿಳಿಯುತ್ತದೆ, ಬಡಗಿತನ ತಿಳಿದಿರುತ್ತದೆ, ಹಳ್ಳಿಯ ಸಾಮಗ್ರಿ ಬಳಸಿ ಮನೆಕಟ್ಟಲು ಬರುತ್ತದೆ. ಆದರೆ ಅವರ ಈ ಜ್ಞಾನ ಕಾಲೇಜುಗಳ ವಾತಾವರಣದಲ್ಲಿ ಅಪ್ರಸ್ತುತವಾಗಿರುತ್ತದೆ ಎಂಬುದು ವಿಷಾದನೀಯ. ಹಾಗಾಗಿ ಅವರು ಆತ್ಮವಿಶ್ವಾಸ ಕಳೆದುಕೊಂಡು 'ಬೇರೆಯವರಂತೆ' ಆಗಲು ಯತ್ನಿಸುತ್ತಾರೆ ಮತ್ತು ತಮ್ಮ ಕೌಶಲಗಳನ್ನು ಬಿಟ್ಟುಬಿಡುತ್ತಾರೆ. ಪರಿಣಾಮ, ಅಲ್ಲಿಯೂ ಸಲ್ಲದೆ ಇಲ್ಲಿಯೂ ಸಲ್ಲದೆ ತ್ರಿಶಂಕುಗಳಾಗುತ್ತಾರೆ. ಉದ್ಯೋಗಾವಕಾಶಗಳ ಅಭಿವೃದ್ಧಿಯ ಸಂದರ್ಭದಲ್ಲಿ ನಾವು ಇವರನ್ನೂ ಗಮನಿಸಬೇಕು ಮತ್ತು ಇವರ ವಿಶೇಷ ಕೌಶಲಗಳನ್ನು ಪ್ರೋತ್ಸಾಹಿಸಬೇಕು. ಇವರಿಗೆ ಸಾಮಾನ್ಯವಾಗಿ ಇಂಗ್ಲಿಷ್ 'ಕಬ್ಬಿಣದ ಕಡಲೆ'. ಹಾಗಾಗಿ ಇವರಿಗೆ ಇಂಗ್ಲಿಷ್ ವಿಷಯದಿಂದ ವಿಮುಕ್ತಿ ಕೊಡಬೇಕು.

(ಲೇಖಕರು ಮಾಜಿ ಪ್ರಾಂಶುಪಾಲರು ಮತ್ತು ಸಂವಹನ ಸಮಾಲೋಚಕರು)

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಎಲ್ಲೆಲ್ಲೋ ಓಡುವ ಮನಸೇ...

ನಮ್ಮ ಸುತ್ತಮುತ್ತಲ ಹವಾಮಾನಕ್ಕಿಂತ ಹೆಚ್ಚು ಅಸ್ಥಿರತೆ ಕಾಣುವುದು ನಮ್ಮ ತಥಾಕಥಿತ ಜನನಾಯಕರಲ್ಲಿ ಎನ್ನಬೇಕು. ಈ ಮಾತಿಗೆ ತಾಜಾ ಉದಾಹರಣೆ ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಪಕ್ಷದ ನಾಯಕ ತೇಜಸ್ವಿ ಯಾದವ್. ಇತ್ತೀಚೆಗೆ ಬಿಹಾರ ವಿಧಾನಸಭೆಯ ಮಳೆಗಾಲದ ಅಧಿವೇಶನಕ್ಕೆ ಒಂದು ದಿನದ 'ಚಕ್ಕರ್' ಹಾಕಿದ ತೇಜಸ್ವಿ ಮಹಾಶಯರು 'ಎಕ್ಸ್' (ಟ್ವಿಟರ್) ಸಾಮಾಜಿಕ ಮಾಧ್ಯಮದಲ್ಲಿನ ತಮ್ಮ ವ್ಯಕ್ತಿಗತ ಪರಿಚಯವನ್ನು ಕೊಂಚ ಬದಲಿಸಿ ಹಲವರ ಹುಬ್ಬೇರುವಂತೆ ಮಾಡಿದ್ದು ಈ ಮಾತಿಗೆ ಪುಷ್ಟಿ ನೀಡುತ್ತದೆ. ತೇಜಸ್ವಿ ಅವರು ಪ್ರಸ್ತುತ ಬಿಹಾರ ವಿಧಾನಸಭೆಯ ವಿಪಕ್ಷ ನಾಯಕರು; ಆದರೆ ಆ ಪದನಾಮವನ್ನು 'ಬಿಹಾರದ ಮಾಜಿ ಉಪಮುಖ್ಯಮಂತ್ರಿ' ಎಂಬುದಾಗಿ ಸದರಿ 'ಎಕ್ಸ್' ಮಾಧ್ಯಮದಲ್ಲಿ ಬದಲಿಸುವ ಮೂಲಕ ಅವರು ತಮ್ಮ ಪಕ್ಷದ ಹಾಗೂ ಮಿತ್ರಪಕ್ಷಗಳ ಸದಸ್ಯರನ್ನು ಅಚ್ಚರಿಗೆ ಕೆಡವಿದ್ದಾರೆ. 'ಯಾಕಿಂಗಾಯ್ತಪ್ಪಾ ಮಗನೇ... ಮನ್ಸಿಗೆ ಬ್ಯಾಸ್ರ ಆಯ್ತಾ ಸಿವನೇ...?' ಎಂದು ಅವರೆಲ್ಲಾ ಫಿಲ್ಮಿಸಾಂಗ್ ಸ್ಟೈಲ್‌ನಲ್ಲಿ ಗುನುಗುತ್ತಾ, ಈ ಬದಲಾವಣೆಯ ಹಿಂದಿರುವ ಕಾರಣವನ್ನು ಹುಡುಕತೊಡಗಿದರೆ, ಮತ್ತೊಂದೆಡೆ 'ಸಿಕ್ಕಿದ ಚಾನ್ಸು ಬಿಡಬಾರದು' ಎಂಬ ಧೋರಣೆಯಲ್ಲಿ ಬಿಜೆಪಿಯ ಎದುರಾಳಿಗಳು ತೇಜಸ್ವಿಯವರ ಕಾಲೆಳೆಯಲು ಶುರುಮಾಡಿದರಂತೆ! 'ಎಷ್ಟೇ ಆದ್ರೂ, ನೀವು ಆರ್‌ಜೆಡಿ ಮುಖ್ಯಸ್ಥ ಲಾಲು ಯಾದವ್ ಅವರ ಮಗನಲ್ಲವೇ? ನೀವು ಅಧಿಕಾರವಿಲ್ಲದೆ ಅರೆಕ್ಷಣವೂ ಇರಲಾರಿರಿ ಮತ್ತು ವಿಪಕ್ಷದ ಸ್ಥಾನದಲ್ಲಿ ಕೂರುವುದು ನಿಮಗೆ ಅಪಥ್ಯ ಎಂಬುದಕ್ಕೆ ನಿಮ್ಮ ಈ ನಡೆಯೇ ಸಾಕ್ಷಿ. ವಿಪಕ್ಷ ನಾಯಕನಿಗೆ ಇರುವ ಪ್ರಾಮುಖ್ಯವನ್ನು ಅರಿಯದೇ ಆ ಹೊಣೆಗಾರಿಕೆಯ ನೊಗವನ್ನು ಕಳಚಿಕೊಳ್ಳಲು ಯತ್ನಿಸುತ್ತಿರುವಿರಲ್ಲಾ, ಇದು ತರವೇ?' ಎಂದು ಬಿಜೆಪಿ ನಾಯಕರು ಕೂರಂಬುಗಳನ್ನು ಬಿಟ್ಟಿದ್ದೂ ಆಯ್ತಂತೆ!

ಈ ಟೀಕಾಪ್ರಹಾರವನ್ನು ಸಹಿಸಿಕೊಳ್ಳಲಾಗದ ಆರ್‌ಜೆಡಿಯ ಒಂದಷ್ಟು ನಾಯಕರು ಕೂಡ ಪ್ರತಿದಾಳಿಗೆ ಇಳಿದು, 'ಮಾಜಿ ಮಂತ್ರಿ ಅಥವಾ ಉಪಮುಖ್ಯಮಂತ್ರಿ ಎಂಬ ಸ್ಥಿತಿಗತಿಗಳು ಬಿಹಾರದಲ್ಲಿ ಯಾವಾಗ ಬದಲಾಗುತ್ತವೆ ಎಂಬುದು ನಿಮಗಿನ್ನೂ ಗೊತ್ತಾದಂತಿಲ್ಲ. ಭೂತ-ವರ್ತಮಾನ-ಭವಿಷ್ಯತ್ ಕಾಲಗಳು ಒಂದೊಕ್ಕೊಂದು ಹೆಣೆದುಕೊಂಡಿರ್ತವೆ ಸ್ವಾಮೀ... ಪಿಕ್ಚರ್ ಅಭೀ ಬಾಕಿ ಹೈ, ಕಾದುನೋಡಿ' ಎಂದು ಬಿಜೆಪಿಯವರ ಕಾಲೆಳೆದರಂತೆ!

ರಾಜಕಾರಣ ಮತ್ತು ರಾಜಕಾರಣಿಗಳು ಅಂದ್ರೆ, ತಮಾಷಿನಾ?!

ಮೋಹನ್‌ಲಾಲ್ ಮಾನವೀಯತೆ

ಕೇರಳದ ವಯನಾಡಿನಲ್ಲಿ ಪ್ರಕೃತಿ ಮುನಿಸಿಕೊಂಡಿದ್ದು, ಅದರಿಂದಾಗಿ ಮನೆ-ಮಠಗಳು, ಶಾಲೆಗಳು, ಪೂಜಾಸ್ಥಳಗಳು ಸೇರಿದಂತೆ ಹಳ್ಳಿಗೆ ಹಳ್ಳಿಯೇ ಕೊಚ್ಚಿಕೊಂಡು ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದ್ದು ಈಗಾಗಲೇ ನಿಮಗೆ ಗೊತ್ತಿರುವ ಸಂಗತಿ. ಈ ದುರಂತದಿಂದಾಗಿ ಕನಲಿಹೋಗಿರುವ ಜನರಿಗೆ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಮಲಯಾಳಂ ಮತ್ತು ತಮಿಳು ಚಿತ್ರರಂಗಗಳ ಅನೇಕ ತಾರೆಯರು ಹಣಕಾಸಿನ ಸಹಾಯಹಸ್ತ ಚಾಚಿದ್ದಾರೆ. ಈ ಪೈಕಿ ಮಲಯಾಳಿ ತಾರೆ ಮೋಹನ್‌ಲಾಲ್ ಆರ್ಥಿಕ ನೆರವು ನೀಡಿದ್ದರ ಜತೆಗೆ, ಪ್ರವಾಹಪೀಡಿತ ಪ್ರದೇಶಗಳಿಗೂ ಮುದ್ದಾಂ ಭೇಟಿ ನೀಡಿದರಂತೆ. ಪ್ರಾದೇಶಿಕ ಸೈನ್ಯದ ಓರ್ವ ಗೌರವ ಲೆಫ್ಟಿನೆಂಟ್ ಕರ್ನಲ್ ಕೂಡ ಆಗಿರುವ ಅವರು ಈ ವೇಳೆ ಸೇನೆಯ ಸಮವಸ್ತ್ರದಲ್ಲೇ ಕಾಣಿಸಿಕೊಂಡರೂ, ತಮ್ಮ 'ಟ್ರೇಡ್‌ಮಾರ್ಕ್' ಆಗಿರುವ ಗಡ್ಡವನ್ನು ಶೇವ್ ಮಾಡುವ ಗೋಜಿಗೆ ಹೋಗಿರಲಿಲ್ಲ ಎಂಬುದು ಗಮನಾರ್ಹ!

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 90

ಸಮಾಚಾರ ಸಣ್ಣದಲ್ಲ

ಮಣಿಪುರ 11,133 ಮನೆಗೆ ಬೆಂಕಿ: ಸಿಎಂ

ಇಂಫಾಲ: ಜನಾಂಗೀಯ ಸಂಘರ್ಷಕ್ಕೆ ಒಳಗಾಗಿರುವ ಮಣಿಪುರದಲ್ಲಿ ಈವರೆಗೆ ಗಲಭೆಯಿಂದ 11,133 ಮನೆಗಳು ಬೆಂಕಿಗೆ ಆಹುತಿಯಾಗಿವೆ. 59,564 ಜನರನ್ನು ಸ್ಥಳಾಂತರಗೊಳಿಸಲಾಗಿದೆ ಎಂದು ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ವಿಧಾನಸಭೆಗೆ ಮಾಹಿತಿ ನೀಡಿದ್ದಾರೆ. ಮನೆ ಕಳೆದುಕೊಂಡು ಸಂತ್ರಸ್ತರಾದವರ ಬ್ಯಾಂಕ್ ಖಾತೆಗೆ 'ಒಂದು ಕುಟುಂಬಕ್ಕೆ ಒಂದು ಲಕ್ಷ ರು.' ಯೋಜನೆಯಡಿ ಮೊದಲ ಹಂತದಲ್ಲಿ 25 ಸಾವಿರ ರು. ಆರ್ಥಿಕ ನೆರವು ನೀಡಲಾಗಿದೆ. ಒಟ್ಟು 2700 ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಹಿಸಲಾಗಿದೆ. ಗಲಭೆ ಪೀಡಿತ ಕಾಂಗ್ಪೋಕಿಯಲ್ಲಿ 2156 ಖಾತೆ ಹಾಗೂ ಬಿಷ್ಣುಪುರದಲ್ಲಿ 512 ಖಾತೆಗಳಿಗೆ ಯೋಜನೆಯ ಹಣ ವರ್ಗಾಯಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಅಕ್ರಮ ವಲಸಿಗರ ಬಗ್ಗೆ ಮಾಹಿತಿ ನೀಡಿ, ಮ್ಯಾನ್ಮಾರ್, ಬಾಂಗ್ಲಾದೇಶ, ಚೀನಾ, ನೇಪಾಳದಿಂದ ಬಂದ 10,675 ಅಕ್ರಮ ವಲಸಿಗರು ಮಣಿಪುರ ರಾಜ್ಯದಲ್ಲಿದ್ದಾರೆ ಎಂದು ಸಿಎಂ ಅಂಕಿ ಅಂಶ ನೀಡಿದ್ದಾರೆ.

ಕಾಶ್ಮೀರ: ಶಸ್ತ್ರಸಜ್ಜಿತ ನುಸುಳುಕೋರರು

ಶ್ರೀನಗರ: ವಿಧಿ 370 ರದ್ದತಿಗೆ 5 ವರ್ಷ ಸಂದ ಹಿನ್ನೆಲೆ ಸೋಮವಾರ ಜಮ್ಮು-ಕಾಶ್ಮೀರದಾದ್ಯಂತ ಭದ್ರತೆ ಹೆಚ್ಚಿಸಲಾಗಿತ್ತು. ಈ ಮಧ್ಯೆ, ಜಮ್ಮು ಭಾಗದ ಗಡಿ ನಿಯಂತ್ರಣ ರೇಖೆ ಬಳಿ ಶಸ್ತ್ರಸಜ್ಜಿತ ನುಸುಳುಕೋರರ ಚಲನವಲನ ಕಂಡು ಬಂದಿದೆ. ಭಾರತೀಯ ಸೇನೆಯ ಯೋಧರು ನುಸುಳುಕೋರರ ಕಡೆಗೆ ಸೋಮವಾರ ಗುಂಡು ಹಾರಿಸಿ ಹಿಮ್ಮೆಟ್ಟಿಸಿದ್ದಾರೆ. ದೇಶದೊಳಕ್ಕೆ ನುಸುಳಿರುವವರಿಗಾಗಿ ದೊಡ್ಡ ಮಟ್ಟದ ಶೋಧ ಕಾರ್ಯ ಕೈಗೊಳ್ಳಲಾಗಿದೆ. ಅಖ್ನೂರ್, ಸುಂದರ್‌ಬನ್ ಸೆಕ್ಟರ್‌ನ ಗಡಿ ನಿಯಂತ್ರಣ ರೇಖೆ(ಎಲ್‌ಒಸಿ) ಬಳಿ ನುಸುಳುಕೋರರ ಎರಡು ತಂಡ ಶಸ್ತ್ರಸಜ್ಜಿತರಾಗಿ ಒಳನುಸುಳಲು ಯತ್ನಿಸುತ್ತಿರುವುದನ್ನು ಗಮನಿಸಿದ ಸೇನಾ ಸಿಬ್ಬಂದಿ ಸೋಮವಾರ ಶೋಧ ಕಾರ್ಯ ಆರಂಭಿಸಿದರು. ಗಡಿಯಲ್ಲಿ ನಸುಕಿನ 1.30ರಲ್ಲಿ ಅನುಮಾನಾಸ್ಪದ ಓಡಾಟ ಕಂಡು ಬಂದಿದೆ. ಗಡಿ ರೇಖೆ ಉದ್ದಕ್ಕೂ ಸೇನಾ ಸಿಬ್ಬಂದಿ ಶೋಧ ಕಾರ್ಯ ನಡೆಸಯತ್ತಿದ್ದು ಸದ್ಯ ಯಾವುದೇ ನುಸುಳುಕೋರ ಪತ್ತೆಯಾಗಿಲ್ಲ.

ಕೇಜ್ರಿ ಜಾಮೀನು ಅರ್ಜಿ ಮತ್ತೆ ವಜಾ

ದೆಹಲಿ: ವಿವಾದಿತ ಅಬಕಾರಿ ನೀತಿಯಲ್ಲಿನ ಭ್ರಷ್ಟಾಚಾರ ಆರೋಪದಡಿ ಕೇಂದ್ರ ತನಿಖಾ ದಳ(ಸಿಬಿಐ)ನಿಂದ ಬಂಧನಕ್ಕೆ ಒಳಗಾಗಿರುವ ದೆಹಲಿ

ಮುಖ್ಯಮಂತ್ರಿ, ಎಎಪಿ ಮುಖಂಡ ಅರವಿಂದ ಕೇಜ್ರಿವಾಲ್, ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ದೆಹಲಿ ಹೈಕೋರ್ಟ್ ಸೋಮ ವಾರ ವಜಾಗೊಳಿಸಿದೆ. ಸಿಬಿಐ ಬಂಧನ ನ್ಯಾಯಸಮ್ಮತವಲ್ಲ ಎಂದು ಹೇಳಲು ಸಾಧ್ಯವೇ ಇಲ್ಲ ಎಂದು ಕೋರ್ಟ್ ಅಭಿಪ್ರಾಯಟ್ಟಿದೆ. ಹೀಗಾಗಿ ಕೇಜ್ರಿವಾಲ್‌ಗೆ ಬಿಡುಗಡೆ ವಿಚಾರದಲ್ಲಿ ಮತ್ತೆ ಹಿನ್ನಡೆಯಾಗಿದೆ. ಕೇಜ್ರಿವಾಲ್ ಪರ ವಾದಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಇದೊಂದು ಸಿಬಿಐ 'ಮುಂಜಾಗ್ರತಾ ಬಂಧನ' ಎಂದು ಕೋರ್ಟ್ ಗಮನ ಸೆಳೆಯಲೆತ್ನಿಸಿದ್ದರು. ಅಬಕಾರಿ ನೀತಿಗೆ ಕೇಜ್ರಿವಾಲ್ ಅವರಷ್ಟೇ ಅಲ್ಲ, ಅಂದಿನ ಲೆ.ಗವರ್ನರ್ ಅನಿಲ್ ಬೈಜಲ್ ಕೂಡ ಸಹಿ ಹಾಕಿದ್ದರು. ಹೀಗಾಗಿ ಈ ಪ್ರಕ್ರಿಯೆಯಲ್ಲಿ ಭಾಗಿಯಾದ ಗವ ರ್ನರ್ ಹಾಗೂ ಎಲ್ಲಾ ಅಧಿಕಾರಿಗಳನ್ನೂ ಪ್ರಕರಣದ ಆರೋಪಿಗಳನ್ನಾಗಿ ಮಾಡಬೇಕು ಎಂದು ವಾದಿಸಿದ್ದರು.

ಇಸ್ರೇಲ್ ಶಿಕ್ಷಿಸುವುದು ನಮ್ಮ ಹಕ್ಕು: ಇರಾನ್

ಟೆಹರಾನ್: ಹಮಾಸ್ ಮುಖ್ಯಸ್ಥ ಇಸ್ಮಾಯಿಲ್ ಹನಿಯೆಹ್ ಹತ್ಯೆಗೆ ಪ್ರತಿಕಾರವಾಗಿ ಇಸ್ರೇಲ್‌ಗೆ ಶಿಕ್ಷೆ ನೀಡುವುದು ನಮ್ಮ ಕಾನೂನಾತ್ಮಕ ಹಕ್ಕು ಎಂದು ಇರಾನ್ ಪ್ರತಿಪಾದಿಸಿದೆ. ಆ ಮೂಲಕ ಯಾವ ರಾಷ್ಟ್ರದ ಸಂಧಾನದ ಮಾತನ್ನೂ ಒಪ್ಪುವುದಿಲ್ಲ ಎಂದಿದೆ. ಯಹೂದಿ ಆಡಳಿತವನ್ನು ಶಿಕ್ಷಿಸುವ ಇರಾನ್ ಹಕ್ಕನ್ನು ಯಾರೂ ಪ್ರಶ್ನೆ ಮಾಡ ಲಾಗದು. ಅಮೆರಿಕ ಇಸ್ರೇಲ್‌ಗೆ ಬೆಂಬಲ ನೀಡುವುದನ್ನು ನಿಲ್ಲಿಸಲಿ ಎಂದು ಇರಾನ್ ವಿದೇ ಶಾಂಗ ಇಲಾಖೆ ವಕ್ತಾರ ನಾಸೀರ್ ಕನಾನಿ ಹೇಳಿ ದ್ದಾರೆ. ಅಂತಾರಾಷ್ಟ್ರೀಯ ಸಂಸ್ಥೆಗಳು ಮಧ್ಯ ಪ್ರಾಚ್ಯ ದಲ್ಲಿ ಸ್ಥಿರತೆ ರಕ್ಷಿಸುವಲ್ಲಿ ಸೋತಿವೆ. ಆಕ್ರಮಣಕಾರಿ ಇಸ್ರೇಲನ್ನು ಶಿಕ್ಷಿಸಬೇಕಾದ್ದು ಅಗತ್ಯ. ಭವಿಷ್ಯದಲ್ಲಿ ಇಂಥ ದಾಳಿ ನಡೆಸುವ ಮನಸ್ಥಿತಿ ನಾಶ ಪಡಿಸಲೇ ಬೇಕು ಎಂದು ಕಿಡಿಕಾರಿದ್ದಾರೆ. ಇರಾನ್, ಹಮಾಸ್ ಬೆಂಬಲಿಸುವ ಸಂಘಟನೆಗಳು ಇಸ್ರೇಲ್ ವಿರುದ್ಧ ಪ್ರತಿಕಾರಕ್ಕೆ ಶಪಥ ಮಾಡಿವೆ. ಮತ್ತೊಂದೆಡೆ ಅಮೆರಿಕ, ಬ್ರಿಟನ್, ಇಸ್ರೇಲ್ ಬೆಂಬಲಿಸಿ ಸೇನೆ ಸಜ್ಜುಗೊಳಿಸಿವೆ. ಇಸ್ರೇಲ್ ತನ್ನ ಗಡಿಯಲ್ಲಿ ಹೆಜ್ಬುಲ್ಲಾ, ಹಮಾಸ್ ಸಶಸ್ತ್ರ ಪಡೆಗಳ ಮೇಲೆ ಕ್ಷಿಪಣಿ ದಾಳಿ ಮುಂದುವರೆಸಿದೆ.



ಪ್ರಧಾನಿ ನಿವಾಸಕ್ಕೆ ನುಗ್ಗಿ ದಾಂಧಲೆ | ಕೈಗೆ ಸಿಕ್ಕಿದ್ದನ್ನೆಲ್ಲಾ ಹೊತ್ತೊಯ್ದ ಉದ್ರಿಕ್ತರು | ರಾಜೀನಾಮೆ ಬಳಿಕವೂ ನಿಲ್ಲದ ಪ್ರತಿಭಟನೆ

ಅರಾಜಕ ಬಾಂಗ್ಲಾದಲ್ಲೀಗ ಸೇನೆಯ ಆಡಳಿತ ಶುರು

ಢಾಕಾ: ಶೇಖ್ ಹಸೀನಾ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ ಭಾರತಕ್ಕೆ ಆಗಮಿಸಿದ್ದಾರೆ. ಬಾಂಗ್ಲಾ ದೇಶದಲ್ಲೀಗ ರಾಜಕೀಯ ಅತಂತ್ರ ಪರಿಸ್ಥಿತಿ ಉಂಟಾಗಿದ್ದು, ಮುಸ್ಲಿಂ ರಾಷ್ಟ್ರ ಮತ್ತೊಮ್ಮೆ ಸೇನೆಯ ವಶಕ್ಕೆ ಹೋಗಿದೆ. ನೆರೆಯ ದೇಶದಲ್ಲೀಗ ಅರಾಜಕ ಪರಿಸ್ಥಿತಿ ನಿರ್ಮಾಣವಾಗಿದೆ.

ಪ್ರಧಾನಿ ರಾಜೀನಾಮೆಗೆ ಆಗ್ರಹಿಸಿ ರಸ್ತೆಗಿಳಿದು ಹಿಂಸಾತ್ಮಕ ಪ್ರತಿಭಟನೆ ನಡೆಸುತ್ತಿದ್ದ ಲಕ್ಷಾಂತರ ಮಂದಿ ಪ್ರತಿಪಕ್ಷ ಬೆಂಬಲಿತ ಪ್ರತಿಭಟನಾಕಾರರು, ಪ್ರಧಾನಿ ಅಧಿಕೃತ ನಿವಾಸಕ್ಕೆ ಬಲಪ್ರಯೋಗಿಸಿ ನುಗ್ಗಿ ದಾಂಧಲೆ ನಡೆಸಿದ್ದಾರೆ. ಅಡುಗೆ ಮನೆಯಲ್ಲಿ ಕೈಗೆ ಸಿಕ್ಕಿದ್ದನ್ನೆಲ್ಲಾ ತಿಂದು ಚೆಲ್ಲಿ ಹಾಳುಗೆಡವಿದ್ದಾರೆ. ಸಿದ್ಧವಾಗಿದ್ದ ಬಿರಿಯಾನಿಯನ್ನು ಕೆಲವರು ತಿಂದು ತೇಗಿದ್ದಾರೆ. ಪ್ರಧಾನಿಯ ಕೊಠಡಿಗೆ ತೆರಳಿ ಮಂಚದ ಮೇಲೆ ಮಲಗಿದ್ದಾರೆ. ಕೈಗೆ ಸಿಕ್ಕ ವಸ್ತುಗಳನ್ನೆಲ್ಲಾ ಹೊತ್ತುಕೊಂಡು ಹೋಗಿದ್ದಾರೆ. ಪ್ರಧಾನಿ ರಾಜೀನಾಮೆ ಬಳಿಕ ಅವರ ಭವ್ಯ ನಿವಾಸಕ್ಕೆ ಲಗ್ಗೆ ಇಟ್ಟ ಪ್ರತಿಭಟನಾಕಾರರು, ಬಿರಿ ಯಾನಿ ತಿಂದು, ಕೈಗೆ ಸಿಕ್ಕ ವಸ್ತುಗಳನ್ನು ದೋಚಿದರು. ಶೇಖ್ ಹಸೀನಾ ಮನೆಯ ಸ್ವಿಮ್ಮಿಂಗ್ ಪೂಲ್‌ನಲ್ಲಿ ಈಜಾಡಿದರು. ಕೊಠಡಿಗಳಲ್ಲಿ ಮಂಚದ ಮೇಲೆ ಮಲಗಿ ನಿದ್ರಿಸಿದರು. ಐಷಾರಾಮಿ ವಸ್ತುಗ ಳನ್ನು ಒಂದನ್ನೂ ಬಿಡದಂತೆ ಹೊತ್ತೊಯ್ದುರು. ಈ ಸಂದರ್ಭದ ವಿಡಿಯೊಗಳ ವೈರಲ್ ಆಗಿವೆ.

ಪ್ರಧಾನಿ ನಿವಾಸಕ್ಕೆ ನುಗ್ಗಿ ಕೊಠಡಿಗಳಲ್ಲಿ ಮಂಚದ ಮೇಲೆ ಮಲಗಿ ನಿದ್ರಿಸಿದರು.

ಹಿಂದೂ ಕೌನ್ಸಿಲರ್‌ಗಳಿಬ್ಬರ ಹತ್ಯೆ

ಢಾಕಾ: ಪ್ರಧಾನಿ ಶೇಖ್ ಹಸೀನಾ ದಿಢೀರ್ ರಾಜೀನಾಮೆ ನೀಡಿ ಭಾರತಕ್ಕೆ ಬಂದಿಳಿದಿದ್ದಾರೆ. ಇದೇ ಸಂದರ್ಭ ಬಾಂಗ್ಲಾದಲ್ಲಿ ಅರಾಜಕತೆ ಸೃಷ್ಟಿಯಾಗಿದ್ದು, ಹಿಂಸಾಚಾರ ಮುಂದುವರಿದಿದೆ. ಪ್ರಧಾನಿ ಹಸೀನಾ ರಾಜೀನಾಮೆಗೆ ಆಗ್ರಹಿಸುತ್ತಿದ್ದ ಪ್ರತಿಭಟನಾಕಾರರ ವಕ್ರದೃಷ್ಟಿ ಈಗ ಬಾಂಗ್ಲಾದಲ್ಲಿ ಅಲ್ಪಸಂಖ್ಯೆಯಲ್ಲಿರುವ ಹಿಂದೂ ಸಮುದಾಯದ ಮೇಲೆ ಬಿದ್ದಿದೆ. ಇಬ್ಬರು ಹಿಂದೂ ಕೌನ್ಸಿಲರ್‌ಗಳನ್ನು ಪ್ರತಿಭಟನೆ ನೆಪದಲ್ಲಿ ಕೊಂದಿದ್ದಾರೆ.

ಪ್ರತಿಭಟನಾಕಾರರು ಭಾನುವಾರ ಬಾಂಗ್ಲಾದ ವಿವಿಧೆಡೆ ಹಿಂಸಾಚಾರ ನಡೆಸಿದಾಗ ರಂಗಪುರದ ವಾರ್ಡ್ 4 ಕೌನ್ಸಿಲರ್, ಪರಶುರಾಮ್ ಥಾಣಾ ಅವಾಮಿ ಲೀಗ್ ಪಕ್ಷದ ಹರಧನ್ ರಾಯ್ ಹಾಗೂ ರಂಗಪುರದ ಮತ್ತೊಬ್ಬ ಹಿಂದೂ ಕೌನ್ಸಿಲರ್ ರಾಜಲ್ ರಾಯ್ ಅವರನ್ನು ಕೊಲೆ ಮಾಡಿದ್ದಾರೆ. ಅಲ್ಲದೇ, ಇಸ್ಕಾನ್ ಮಂದಿರ, ಕಾಳಿ ದೇಗುಲ ಹಾಗೂ ಕೆಲವೆಡೆ ಹಿಂದೂಗಳ ಮನೆಗಳ ಮೇಲೆ ದಾಳಿ ನಡೆಸಿ ಹಾನಿಗೊಳಿಸಿದ್ದಾರೆ.

ಢಾಕಾದ ಧನ್ಮಂಡಿ ಪ್ರದೇಶದಲ್ಲಿದ್ದ ಇಂದಿರಾಗಾಂಧಿ ಸಾಂಸ್ಕೃತಿಕ ಕೇಂದ್ರವನ್ನು ಉದ್ರಿಕ್ತ ಪ್ರತಿಭಟನಾಕಾರರ ಗುಂಪು ಸೋಮವಾರ ಧ್ವಂಸಗೊಳಿಸಲಾಗಿದೆ ಎಂದು ಪ್ರತ್ಯಕ್ಷದರ್ಶಿ ತಿಳಿಸಿದ್ದಾರೆ. ಬಂಗಬಂಧು ಸ್ಮಾರಕ ಮ್ಯೂಸಿಯಂ ಸೇರಿದಂತೆ ಹಿಂದೂ, ಬೌದ್ಧ ನಿರ್ಮಾಣಗಳ ಮೇಲೆ ಪ್ರತಿಭಟನಾಕಾರರು ಬೆಂಕಿ ಹಚ್ಚಿದ್ದಾರೆ. 1975 ರಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವಾಗ ಹತ್ಯೆಗೀಡಾದ ಹಸೀನಾ ಅವರ ತಂದೆ ಶೇಖ್ ಮುಜಿಬುರ್ ರೆಹಮಾನ್ ಅವರ ಸ್ಮರಣಾರ್ಥ ಈ ಮ್ಯೂಸಿಯಂ ಸ್ಥಾಪಿಸಲಾಗಿತ್ತು. ಭಾರತೀಯ ಕಲೆ, ಸಂಸ್ಕೃತಿ, ರಾಜಕೀಯ, ಅರ್ಥಶಾಸ್ತ್ರ ಮತ್ತು ಕಾದಂಬರಿ ಕ್ಷೇತ್ರಗಳಲ್ಲಿ 21,000 ಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿರುವ ಗ್ರಂಥಾಲಯ ಈ ಕೇಂದ್ರದಲ್ಲಿತ್ತು.

ಹಿಂದೂಗಳಿಗೆ ಪ್ರಾಣಭೀತಿ

4 ಹಿಂದೂ ದೇವಾಲಯಗಳಿಗೆ ನುಗ್ಗಿ ಹಾನಿಗೊಳಿಸಿದೆ ಎಂದು ಹಿಂದೂ ಬೌದ್ಧ ಕ್ರಿಶ್ಚಿಯನ್ ಯೂನಿಟಿ ಕೌನ್ಸಿಲ್ ನಾಯಕಿ ಕಾಜೋಲ್ ದೇಬನಾಥ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆ ಹಿಂದೂ ಸಮುದಾಯದ ಮುಖಂಡರು ಭೀತರಾಗಿದ್ದಾರೆ. ಬಾಂಗ್ಲಾದಲ್ಲಿನ ಅಲ್ಪಸಂಖ್ಯೆಯ ಹಿಂದೂಗಳಿಗೆ ಪ್ರಾಣಭೀತಿ ಶುರುವಾಗಿದೆ.

ದೆಹಲಿಗೆ ಬಂದಿಳಿದ ಶೇಖ್ ಹಸೀನಾ

ದೆಹಲಿ: ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ಶೇಖ್ ಹಸೀನಾ ಅವರು ಭಾರತದ ದೆಹಲಿಗೆ ವಿಮಾನದಲ್ಲಿ ಬಂದಿಳಿದಿದ್ದಾರೆ. ಹಿಂಡನ್ ಏರ್‌ಫೋರ್ಸ್ ವಾಯುನೆಲೆಗೆ ಬಂದಿಳಿದ ಶೇಖ್ ಹಸೀನಾ ಅವರನ್ನು ವಾಯುಪಡೆ ಅಧಿಕಾರಿಗಳು ಸ್ವಾಗತಿಸಿದ್ದಾರೆ.

ಬಿಗಿ ಭದ್ರತೆಯಲ್ಲಿ ಶೇಖ್ ಹಸೀನಾ ಅವರನ್ನು ಕರೆದೊಯ್ಯಲಾಗಿದೆ. ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ ಬಳಿಕ ಸೇನೆಯ ಹೆಲಿಕಾಪ್ಟರ್‌ನಲ್ಲಿ ಶೇಖ್ ಹಸೀನಾ ಮೊದಲು ಭಾರತದ ಅಗರ್ತಲಾಗೆ ಆಗಮಿಸಿದ್ದಾರೆ. ಹೆಲಿಕಾಪ್ಟರ್‌ನಲ್ಲಿ ಹಸೀನಾ ಪ್ರಯಾಣಿಸಿದ ವಿಡಿಯೊ ವೈರಲ್ ಆಗಿದೆ. ಬಾಂಗ್ಲಾದೇಶಕ್ಕೆ ಭಾರತ ಪರಮಾಪ್ತ ರಾಷ್ಟ್ರ. ನರೇಂದ್ರ ಮೋದಿ ಅವರಿಗೆ ಶೇಖ್ ಹಸೀನಾ ಬಹಳ ಆಪ್ತರು. ಹಾಗಾಗಿಯೇ ಅವರು ಮೊದಲಿಗೆ ಭಾರತಕ್ಕೆ ಬಂದು ಆಶ್ರಯ ಪಡೆದಿದ್ದಾರೆ ಎನ್ನಲಾಗಿದೆ. ಪ್ರಾಣಭಯದಲ್ಲಿ ಭಾರತಕ್ಕೆ ಬಂದಿಳಿದ ಹಸೀನಾ, ಸದ್ಯದಲ್ಲೇ ಲಂಡನ್‌ಗೆ ತೆರಳಲಿದ್ದಾರೆ. ಅಲ್ಲಿಯೇ ಕೆಲ ಕಾಲ ನೆಲೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಪಾಕ್, ಲಂಕಾದಲ್ಲಿ ದಂಗೆ ನಡೆದಾಗ, ಆ ದೇಶಗಳ ನಾಯಕರು ವಿದೇಶದಲ್ಲಿ ಆಶ್ರಯ ಪಡೆದಿದ್ದರು. ಈಗಲೂ ಕೆಲ ನಾಯಕರು ವಿದೇಶಗಳಲ್ಲೇ ನೆಲೆಸಿದ್ದಾರೆ.

ಬಾಂಗ್ಲಾ ಬೆಳವಣಿಗೆ; ಭಾರತದ ಮೇಲೇನು ಪರಿಣಾಮ?

ದೆಹಲಿ: ಬಾಂಗ್ಲಾದೇಶದಲ್ಲಿ ಈಗ ಪ್ರತಿಭಟನೆ, ನಿಯಂತ್ರಣಕ್ಕೆ ಬಾರದ ಹಿಂಸಾಚಾರ, ಪ್ರಧಾನಿ ದಿಢೀರ್ ರಾಜೀನಾಮೆ, ಪ್ರಧಾನಿ ಅರಮನೆಗೇ ನುಗ್ಗಿ ದಾಂಧಲೆ ನಡೆಸಿದ ಪ್ರತಿಭ ಟನಾಕಾರರು, ಕುಸಿದುಬಿದ್ದಿರುವ ಕಾನೂನು-ಸುವ್ಯವಸ್ಥೆ... ಇದೆಲ್ಲದರ ಪರಿ ಣಾಮ ಭಾರತದ ಮೇಲಾಗಲಿದೆ. ಬಾಂಗ್ಲಾದೇಶ ಶಾಂತಿಯಿಂದ ಇದ್ದಾಗಲೇ ಪ್ರತಿನಿತ್ಯವೂ ನುಸುಳು ಕೋರರು ನೂರಾರು ಸಂಖ್ಯೆಯಲ್ಲಿ ಭಾರತ ಪ್ರವೇಶಿಸುತ್ತಿದ್ದರು. ಈಗ 4 ಲಕ್ಷ ಜನ ದಂಗೆಯೆದ್ದಿದ್ದಾರೆ. ಪರಿಸ್ಥಿತಿ ಸೂಕ್ಷ್ಮವಾಗಿದೆ. ಅರಾಜಕತೆ, ಜೀವಭಯದಲ್ಲಿ ಸಾವಿರಾರು ಜನರು ಭಾರತವನ್ನು ಅಕ್ರಮವಾಗಿ ಪ್ರವೇಶಿಸಿ ತಲೆನೋವಾಗುವ ಅಪಾಯ ಎದುರಾಗಿದೆ. ಬಾಂಗ್ಲಾದಲ್ಲೀಗ ಆಡಳಿತ ಯಂತ್ರ ಕುಸಿದುಬಿದ್ದಿದೆ. ಸೇನೆ ತಾತ್ಕಾಲಿಕ ಸರಕಾರ ರಚಿಸಿದೆ. ಹಾಗಾಗಿ ಎರಡೂ ದೇಶಗಳ ನಡುವಿನ ವ್ಯಾಪಾರ, ಒಪ್ಪಂದದ ಮೇಲೆ ಪರಿಣಾಮವಾಗಲಿದೆ. ಭಾರತಕ್ಕೆ ಸಂಕಷ್ಟ ತಪ್ಪಿದ್ದಲ್ಲ ಎಂದೇ ವಿಶ್ಲೇಷಿಸಲಾಗುತ್ತಿದೆ. ಹಸೀನಾ ಭಾರತ ಪರ ನಿಲುವು ಹೊಂದಿದ್ದರಿಂದ ಪ್ರತಿಭಟನೆಕಾ ರರ ಕೋಪ ಭಾರತದ ಮೇಲೆ ತಿರುಗಬಹುದು. ಬಾಂಗ್ಲಾದಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ದಾಳಿ ನಡೆಯಬಹುದು ಎನ್ನಲಾಗಿದೆ. 2009ರಿಂದ 2022ರ ಅವಧಿಯಲ್ಲಿ ಬಾಂಗ್ಲಾದೇಶದಲ್ಲಿ ನಡೆದ ಹಿಂಸಾಚಾರ ಘಟನೆಗಳಲ್ಲಿ 2,500 ಜನ ಬಲಿಯಾಗಿದ್ದಾರೆ ಎಂಬುದು ಉಲ್ಲೇಖಾರ್ಹ.

ಬಾಂಗ್ಲಾಗೆ ಪ್ರಯಾಣಿಸದಿರಿ

ದೆಹಲಿ: ಬಾಂಗ್ಲಾದೇಶದಲ್ಲಿ ಹಿಂಸಾಚಾರ ಭುಗಿಲೆದ್ದಿದೆ. ಪ್ರಧಾನಿ ರಾಜೀನಾಮೆಯಿಂದ ಅರಾಜಕತೆ ನೆಲೆಸಿ ಸೇನಾ ಡಳಿತ ಜಾರಿಯಾಗಿದೆ. ಹಾಗಾಗಿ ಸದ್ಯಕ್ಕೆ ಯಾರೊಬ್ಬರೂ ಬಾಂಗ್ಲಾದೇಶಕ್ಕೆ ಸದ್ಯಕ್ಕೆ ಪ್ರಯಾಣಿಸಬಾರದು. ಬಾಂಗ್ಲಾ ದೇಶದಲ್ಲಿರುವ ಭಾರತೀಯರು, ವಿದ್ಯಾರ್ಥಿಗಳು ಎಚ್ಚರಿಕೆ ಯಿಂದ ಇರಬೇಕು ಎಂದು ಸೂಚಿಸಲಾಗಿದೆ. ಬಾಂಗ್ಲಾಗೆ ಸಂಚರಿಸುತ್ತಿದ್ದ ಎಲ್ಲಾ ರೈಲುಗಳನ್ನು ರದ್ದುಗೊಳಿಸಲಾಗಿದೆ.

ಹಿಂಸಾಚಾರ ಹಿಂದೆ ಪಾಕ್ ಕೈವಾಡ

ಢಾಕಾ: ಉಗ್ರರನ್ನು ಕಾಶ್ಮೀರಕ್ಕೆ ನುಸುಳಿಸಿ ಉಗ್ರಗಾಮಿ ಚಟುವಟಿಕೆ ನಡೆಸುವ ಪಾಕಿಸ್ತಾನ, ಈಗ ಭಾರತದ ಮಿತ್ರ ರಾಷ್ಟ್ರ ಬಾಂಗ್ಲಾದೇಶದಲ್ಲಿಯೂ ಅಶಾಂತಿ ಸೃಷ್ಟಿಸಲು ಕುತಂತ್ರ ಮಾಡಿರುವುದು ಬಯಲಾಗಿದೆ. ಇದೇ ವರ್ಷದ ಜನವರಿಯಲ್ಲಷ್ಟೇ ಚುನಾವಣೆ ನಡೆದು ಮರು ಆಯ್ಕೆಯಾಗಿದ್ದ ಷೇಕ್ ಹಸೀನಾ ಅವರ ಪಕ್ಷದ ಅಧಿಕಾರ ಮೊಟಕುಗೊಳ್ಳುವಂತೆ ಮಾಡುವಲ್ಲಿಯೂ ಪಾಕ್ ಕೈವಾಡವಿದೆ ಎನ್ನಲಾಗಿದೆ. ತನ್ನಿಂದ ಪೂರ್ವ ಪಾಕಿಸ್ತಾನವನ್ನು ಭಾರತ ಬೇರ್ಪಡಿಸಿತು ಎಂದೇ ಭಾರತದ ವಿರುದ್ಧ ದ್ವೇಷ ಕಾರುತ್ತಿರುವ ಪಾಕಿಸ್ತಾನ, ಬಾಂಗ್ಲಾದಲ್ಲಿ ಭಾರತ ವಿರೋಧಿ ಸರಕಾರ ರಚನೆಗೆ ಕುತಂತ್ರ ಹೂಡಿಕೆ ಎಂದೇ ಹೇಳಲಾಗುತ್ತಿದೆ.

ಕಳೆದ ತಿಂಗಳು ಬಾಂಗ್ಲಾದೇಶದಲ್ಲಿ ಮೀಸಲು ವಿರೋಧಿ ಪ್ರತಿಭಟನೆ ಶುರುವಾಗಿದ್ದು, ಸುಪ್ರೀಂಕೋರ್ಟ್ ತೀರ್ಪಿನ ಬಳಿಕ ತಣ್ಣಗಾಯಿತು. ಆ ಬಳಿಕ ದಿಢೀರ್ ಎಂಬಂತೆ ಪ್ರಧಾನಿ ಶೇಕ್ ಹಸೀನಾ ರಾಜೀನಾಮೆಗೆ ಒತ್ತಾಯಿಸಿ ಹಿಂಸಾತ್ಮಕ ಪ್ರತಿಭಟನೆ ಆರಂಭಗೊಂಡಿತು. ಪ್ರತಿಭಟನಾಕಾರರು ಮತ್ತು ಪ್ರಧಾನಿ ಷೇಕ್ ಹಸೀನಾ ಬೆಂಬಲಿಗರ ನಡುವಿನ ಘರ್ಷಣೆಯಲ್ಲಿ 300ಕ್ಕೂ ಅಧಿಕ ಜನರು ಸಾವಿಗೀಡಾದರು. ಬಾಂಗ್ಲಾದಲ್ಲಿ ಈ ಅರಾಜಕತೆ ಉಂಟಾಗಲು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಕುತಂತ್ರವೇ ಕಾರಣ ಎನ್ನಲಾಗಿದೆ.

ಪಾಕ್ ಸಂಚು: ಬಾಂಗ್ಲಾದಲ್ಲಿ ಜಮಾತ್-ಎ-ಇಸ್ಲಾಮಿ ಸಂಘಟನೆಯ ವಿದ್ಯಾರ್ಥಿ ಘಟಕವಾದ 'ಛತ್ರಾ ಶಿಬಿರ್'ಗೆ ಪಾಕಿಸ್ತಾನದ ಐಎಸ್‌ಐ ಬೆಂಬಲ ನೀಡುತ್ತಿದೆ. ಬಾಂಗ್ಲಾ ವಿಮೋಚನೆ ಹೋರಾಟದಲ್ಲಿ ಭಾಗಿಯಾಗಿ ಹುತಾತ್ಮರಾದವರ ಕುಟುಂಬದವರಿಗೆ ಶಿಕ್ಷಣ-ನೌಕರಿಯಲ್ಲಿ ಶೇ.30ರಷ್ಟು ಮೀಸಲು ಸೌಲಭ್ಯವನ್ನು ಸುಪ್ರೀಂ ಕೋರ್ಟ್

ಶೇ.5ಕ್ಕೆ ಇಳಿಸಿದ್ದರೂ ಪ್ರತಿಭಟನೆ ಮುಂದುವರಿಸಲಾಗಿದೆ. ಈ ಪ್ರತಿಭಟನೆ ಹಿಂದೆ ಛತ್ರಾ ಶಿಬಿರ್ ಪ್ರಮುಖ ಪಾತ್ರವಿದೆ. ಪಾಕ್ ಹಣಕಾಸು ನೆರವು ಕೂಡ ನೀಡುತ್ತಿದೆ ಎಂದು ತಿಳಿದುಬಂದಿದೆ.

ಶೇಖ್ ಹಸೀನಾ ನೇತೃತ್ವದ ಸರಕಾರವೇ 15 ವರ್ಷಗಳಿಂದ ಬಾಂಗ್ಲಾದಲ್ಲಿ ಆಡಳಿತ ನಡೆಸುತ್ತಿದೆ. ಹಸೀನಾ ರಾಷ್ಟ್ರೀಯವಾದಿ. ಜತೆಗೆ ಜನಬೆಂಬಲ ಗಳಿಸಿದ್ದಾರೆ. ಸಿದ್ಧ ಉಡುಪು ರಫ್ತು ಚಟುವಟಿಕೆ ಮೂಲಕ ಬಡತನ ಪ್ರಮಾಣ ಶೇ.5ಕ್ಕೆ ಇಳಿಯುವಂತೆ ಮತ್ತು ಜನರ ತಲಾದಾಯ ಹೆಚ್ಚುವಂತೆ ಮಾಡಿದ್ದಾರೆ. ಇದೆಲ್ಲಕ್ಕಿಂತ ಮುಖ್ಯವಾಗಿ ಭಾರತದ ಪರಮಾಪ್ತ ರಾಷ್ಟ್ರವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಹಸೀನಾ ಉತ್ತಮ ಸ್ನೇಹಸಂಬಂಧ ಹೊಂದಿದ್ದಾರೆ. ಇದನ್ನೆಲ್ಲಾ ಸಹಿಸಲಾಗದ ಪಾಕಿಸ್ತಾನ, ಬಾಂಗ್ಲಾದಲ್ಲಿ ಅರಾಜಕತೆ ಉಂಟಾಗುವಂತೆ ಮಾಡುತ್ತಿದೆ. ಭಾರತ ವಿರೋಧಿಯಾದ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ ಅಧಿಕಾರಕ್ಕೆ ಬರಬೇಕು ಎಂಬುದು ಪಾಕಿಸ್ತಾನದ ಕುತಂತ್ರವಾಗಿದೆ. ಇದಕ್ಕಾಗಿ ಹಿಂಸೆಗೆ ಪ್ರಚೋದನೆ ನೀಡುತ್ತಿದೆ ಎಂದು ಹೇಳಲಾಗುತ್ತಿದೆ.

ಹಿಮಾಚಲದಲ್ಲಿ ಪ್ರವಾಹ; 55 ಮಂದಿ ನಾಪತ್ತೆ-87 ರಸ್ತೆ ಬಂದ್

ಹಿ.ಪ್ರದೇಶ: ಮೇಘಸ್ಫೋಟಕ್ಕೆ 13 ಸಾವು

ಶಿಮ್ಲಾ: ಹಿಮಾಚಲ ಪ್ರದೇಶದ ಕುಲು ಜಿಲ್ಲೆಯ ನಿರ್ಮಂಡ್, ಸೈಂಜ್ ಮತ್ತು ಮಲಾನಾ ಪ್ರದೇಶಗಳಲ್ಲಿ ಸರಣಿ ಮೇಘಸ್ಫೋಟವಾಗಿದ್ದು, ವರುಣನ ಆರ್ಭಟ ಜೋರಾಗಿದೆ. ಪರಿಣಾಮ ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗಿದೆ. ಪ್ರವಾಹಕ್ಕೆ ಸಿಲುಕಿ ಹಾಗೂ ಮಳೆ ಸಂಬಂಧಿತ ಅವಘಡಗಳಲ್ಲಿ 13 ಮಂದಿ ಸಾವಿಗೀಡಾಗಿದ್ದಾರೆ. 55 ಮಂದಿ ಕಣ್ಮರೆಯಾಗಿದ್ದಾರೆ.

ಮಳೆ-ಪ್ರವಾಹದಿಂದಾಗಿ ರಾಜ್ಯದ ಕುಲು, ಮಂಡಿ ಹಾಗೂ ಶಿಮ್ಲಾ ಜಿಲ್ಲೆಯ ಬಹಳಷ್ಟು ಪ್ರದೇಶಗಳು ಮಳೆ ಆರ್ಭಟಕ್ಕೆ ತತ್ತರಿಸಿವೆ. ರಸ್ತೆಗಳು ಕೊಚ್ಚಿ ಹೋಗಿವೆ. ಗುಡ್ಡ ಕುಸಿತ, ಪ್ರವಾಹದ ಕಾರಣ 87 ಪ್ರಮುಖ ರಸ್ತೆಗಳು ಹಾನಿ ಗೀಡಾಗಿದ್ದು, ವಾಹನ ಸಂಚಾರ ಅಸಾಧ್ಯವಾಗಿದೆ. ಹಾಗಾಗಿ 87 ರಸ್ತೆಗಳನ್ನು ಸಂಪೂರ್ಣ ಬಂದ್ ಮಾಡಲಾಗಿದೆ. ಒಟ್ಟಾರೆ 700 ಕೋಟಿ ರು.ಗಳಷ್ಟು ಹಾನಿ ಅಂದಾಜು ಮಾಡಲಾಗಿದೆ. ಸನ್ಸಾರಿ-ಕಿಲ್ಲರ್-ತಿರೋಟ್-ಥಂಡಿ ರಸ್ತೆ ಸಂಚಾರ ಪ್ರಹಾಹ ಹಿನ್ನೆಲೆ ಬಂದ್ ಮಾಡಲಾಗಿದೆ. ಚಂದ್ರ ಭಾಗ, ಬಿಯಾಸಿ ನದಿ ನೀರಿನ ಮಟ್ಟ ಕೂಡ ಏರಿಕೆಯಾಗಿದೆ. ನದಿ ಪಾತ್ರದ ಜನರ ಸ್ಥಳಾಂತರಕ್ಕೆ ಸೂಚನೆ ನೀಡಲಾಗಿದೆ. ಗುರುವಾರ ದವರೆಗೆ ರಾಜ್ಯದ ವಿವಿಧೆಡೆ ಯೆಲ್ಲೊ ಅಲರ್ಟ್ ಘೋಷಣೆ ಮಾಡಲಾಗಿದೆ. ಧಾರಾಕಾರ ಮಳೆ ಜೂ.27ರಿಂದ ಶುರುವಾಗಿದ್ದು, ರಾಜ್ಯದ ಹಲವು ಭಾಗ ಜಲಪ್ರಳಯಕ್ಕೆ ಸಿಲುಕಿದಂತಾಗಿದೆ. ಪರಿಣಾಮ, ಈವರೆಗೆ ಮಳೆ ಅವಘಡಗಳಲ್ಲಿ 70ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದಾರೆ.

ಬಾಣಂತಿ-3 ತಿಂಗಳ ಹಸುಗೂಸು ಶವ ಪತ್ತೆ

ಮಂಡಿ ಜಿಲ್ಲೆಯ ಪಧಾರ್ ಪ್ರದೇಶದ ರಾಜಭನ್ ಗ್ರಾಮದಲ್ಲಿ ಪ್ರವಾಹದಲ್ಲಿ ಸಿಲುಕಿ ಸಾವಿಗೀಡಾಗಿದ್ದ ಮೂರು ತಿಂಗಳ ಹಿಂದಷ್ಟೇ ಪ್ರಸವಿಸಿದ್ದ ಹಸಿಬಾ ಣಂತಿ, 23 ವರ್ಷದ ಮಾನವಿ ಮತ್ತು ಆಕೆಯ 3 ತಿಂಗಳ ಹಸುಗೂಸಿನ ಮೃತದೇಹ ನದಿ ದಂಡೆಯಲ್ಲಿ ಭಾನುವಾರ ಪತ್ತೆಯಾಗಿವೆ. ರಾಮಪುರ ಸಮೀಪದ ಧಕೋಲಿ ಪ್ರದೇಶದಲ್ಲಿ ಸಟ್ಲೆಜ್ ನದಿ ದಂಡೆಯಲ್ಲಿ ಮತ್ತೆರಡು ಮೃತದೇಹ ಪತ್ತೆಯಾಗಿದ್ದು, ಗುರುತು ಪತ್ತೆ ಕಾ ರ್ಯ ನಡೆದಿದೆ. ನಾಪತ್ತೆಯಾದವರ ಪತ್ತೆ ಹಾಗೂ ರಕ್ಷಣೆಗಾಗಿ 410 ಸಿಬ್ಬಂದಿಗಳ ರಕ್ಷಣಾ ತಂಡ ಕಾರ್ಯಾಚರಣೆ ನಡೆಸುತ್ತಿದೆ. ಸೇನಾಪಡೆ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಐಟಿಬಿಪಿ, ಸಿಐಎಸ್‌ಎಫ್, ರಾಜ್ಯ ಪೊಲೀಸ್, ಹೋಂ ಗಾರ್ಡ್ಸ್ ರಕ್ಷಣಾ ಕಾರ್ಯಾಚರಣೆ ತಂಡದಲ್ಲಿದ್ದಾರೆ.

ಬಿಜೆಪಿ ಸಂಭ್ರಮಾಚರಣೆ; ಶ್ರೀನಗರದ ದಾಲ್ ಸರೋವರ ಬಳಿ ತಿರಂಗ ಪ್ರದರ್ಶನ

ಜಮ್ಮು-ಕಾಶ್ಮೀರ ಹೈಅಲರ್ಟ್ | ಹೆಚ್ಚುವರಿ ಭದ್ರತೆ-ಅಮರನಾಥ ಯಾತ್ರೆಗೆ ತಡೆ

ಕಾಶ್ಮೀರ: 370 ವಿಧಿ ರದ್ದಾಗಿ 5 ವರ್ಷ ಪೂರ್ಣ

ಶ್ರೀನಗರ: ಭೂಮಿಯ ಮೇಲಿನ ಸ್ವರ್ಗ ಎಂದೇ ಕರೆಸಿಕೊಳ್ಳುತ್ತಿದ್ದ 'ಜಮ್ಮು ಮತ್ತು ಕಾಶ್ಮೀರ' ದಶಕಗಳ ಕಾಲ ಅಭಿವೃದ್ಧಿಯಿಂದ ದೂರವಿರಲು ಕಾರಣವಾಗಿದ್ದ 'ವಿಧಿ 370 ಮತ್ತು ವಿಧಿ 35ಎ' ಎರಡೂ ರದ್ದುಗೊಂಡು ಇದೇ ಆ.5ಕ್ಕೆ 5 ವರ್ಷ ಸಂದಿವೆ.

ಈ ಸಂದರ್ಭವನ್ನು ಬಿಜೆಪಿಯ ಜಮ್ಮು-ಕಾಶ್ಮೀರ ಘಟಕ ಸಂಭ್ರಮಿಸಿದೆ. 'ಏಕಾತ್ಮ ಮಹೋತ್ಸವ್' ರ‍್ಯಾಲಿ ನಡೆಸಿದೆ. ಆದರೆ, ಕಾಂಗ್ರೆಸ್ ಪಕ್ಷ 'ಇತಿಹಾಸದ ಕಪ್ಪುದಿನ' ಎಂದು ಕರೆದು ಸಂಭ್ರಮಾಚರಣೆಯನ್ನು ಖಂಡಿಸಿದೆ. ಕಣಿವೆ ರಾಜ್ಯದಲ್ಲಿನ ಸಂಭ್ರಮಕ್ಕೆ ಅಡ್ಡಿಯಾ ಗಲು ಪಾಕ್ ಬೆಂಬಲಿತ ಭಯೋತ್ಪಾದಕರ ಚಟುವಟಿಕೆ ಹೆಚ್ಚುವ ಸಾಧ್ಯತೆ ಇರುವುದರಿಂದ ಜಮ್ಮು-ಕಾಶ್ಮೀರಕ್ಕೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ. ಕಳೆದೆರಡು ತಿಂಗಳಿಂದ ಕಣಿವೆ ಭಾಗದಲ್ಲಿ ಭಯೋತ್ಪಾದಕ ದಾಳಿ ಹೆಚ್ಚಾಗಿದೆ. ಉಗ್ರ ಚಟುವಟಿಕೆ ತಡೆಯಲು ಮುಂಜಾಗ್ರತಾ ಕ್ರಮವಾಗಿ ಶ್ರೀನಗರ ಸೇರಿದಂತೆ ಕೇಂದ್ರಾ ಡಳಿತ ಪ್ರದೇಶದ ವಿವಿಧೆಡೆ ಭದ್ರತೆ ಹೆಚ್ಚಿಸಲಾ ಗಿದೆ. ದಿನದ ಮಟ್ಟಿಗೆ ಅಮರನಾಥ ಯಾತ್ರೆಯನ್ನೂ ಸೋಮವಾರ ಸ್ಥಗಿತಗೊಳಿಸಲಾಗಿತ್ತು. ಸೋಮವಾರ ಯಾತ್ರಿಕರ ತಂಡ ಭಾಗ್ವತಿ ನಗರ ಬೇಸ್ ಕ್ಯಾಂಪ್‌ನಿಂದ ಅಮರನಾಥ ಯಾತ್ರೆಗೆ ತೆರಳದಂತೆ ತಡೆಯಲಾಗಿದೆ.

ಕಳೆದ 5 ವರ್ಷಗಳಲ್ಲಿ ಕಾಶ್ಮೀರದಲ್ಲಿ ಕೇಂದ್ರ ಸರಕಾರ ಏನೇನು ಸಾಧಿಸಿದೆ ಎಂಬ ಬಗ್ಗೆ ಇಲ್ಲಿನ ಜನರಿಗೆ ಉತ್ತರ ನೀಡಬೇಕು ಎಂದು ಕಾಂಗ್ರೆಸ್ ಕಿಡಿಕಾರಿದೆ. ಬಿಜೆಪಿ ಕಾಶ್ಮೀರ ಜನರ ಗಾಯದ ಮೇಲೆ ಉಪ್ಪು ಸುರಿಯುವ ಕೆಲಸವನ್ನಷ್ಟೇ ಮಾಡಿದೆ. ಜಮ್ಮು-ಕಾಶ್ಮೀರ ಜನರ ಹಕ್ಕು, ಅಸ್ಮಿತೆ ಕಿತ್ತುಕೊಳ್ಳಲಾಗಿದೆ. ಈ ದಿನವನ್ನು ಸಂಭ್ರಮಿಸುವುದರಲ್ಲಿ ಅರ್ಥವೇ ಇಲ್ಲ ಎಂದು ಕಾಂಗ್ರೆಸ್‌ನ ಕಾಶ್ಮೀರ ಘಟಕ ಮುಖ್ಯಸ್ಥ ರವೀಂದ್ರ ಶರ್ಮಾ ಕಿಡಿಕಾರಿದ್ದಾರೆ.

ಮಾಜಿ ಸಿಎಂಗಳಾದ ಮೆಹಬೂಬಾ ಮುಫ್ತಿ ನೇತೃತ್ವದ ಪಿಡಿಪಿ ಹಾಗೂ ಗುಲಾಮ್ ನಭಿ ಆಜಾದ್ ನೇತೃತ್ವದ ಡಿಪಿಎಪಿ ಕೇಂದ್ರದ ವಿರುದ್ಧ ಪ್ರತಿಭಟನೆ ನಡೆಸಿವೆ. ವಿಶೇಷ ಸ್ಥಾನಮಾನ ರದ್ದತಿ ಬಳಿಕ ರಾಜ್ಯವನ್ನು ಭೀತಿಯಲ್ಲೇ ಇಡಲಾಗಿದೆ. ಹೊರ ಜಗತ್ತಿಗೆ ಮಾತ್ರ 'ಕಾಶ್ಮೀರ ಶಾಂತಿಯುತವಾಗಿದೆ' ಎಂದು ತೋರಿಸಲಾಗಿದೆ. 5 ವರ್ಷದ ಬಂಧನ ಜತೆ ಪ್ರತಿರೋಧವೂ ಮುಂದುವರೆದಿದೆ. ಕಾಶ್ಮೀರಿಗಳನ್ನು ಅಳಿಸಿ ಹಾಕಲು ಬಿಡುವುದಿಲ್ಲ' ಎಂದು ಮೆಹಬೂಬಾ ಮುಫ್ತಿ ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ.

ಆ.5ರ ವಿಶೇಷ

ಜಮ್ಮು-ಕಾಶ್ಮೀರಕ್ಕೆ ದಶಕಗಳಿಂದ ವಿಶೇಷ ಸ್ಥಾನಮಾನ ಕಲ್ಪಿಸಿದ್ದ ವಿಧಿ 370 ಅನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ 2019ರ ಆ.5ರಂದು ರದ್ದು ಮಾಡಿತ್ತು. ಅಷ್ಟೇ ಅಲ್ಲದೇ, ಸುವಿಶಾಲವಾಗಿದ್ದ ಜಮ್ಮು-ಕಾಶ್ಮೀರ ರಾಜ್ಯವನ್ನು ಜಮ್ಮು-ಕಾಶ್ಮೀರ ಮತ್ತು ಲಡಾಕ್ ಎಂಬ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಗಿತ್ತು. ಎರಡೂ ಭಾಗಗಳಲ್ಲಿ ಚುನಾಯಿತ ಸರಕಾರದ ಬದಲು ಲೆಫ್ಟಿನೆಂಟ್ ಗವರ್ನರ್ ಮೂಲಕ ಕೇಂದ್ರ ಸರಕಾರದ ಆಡಳಿತಕ್ಕೆ ಆದೇಶಿಸಲಾಗಿತ್ತು.

ಬಿಹಾರ ವಿದ್ಯುದಾಘಾತ: 9 ಕನ್ವರ್ ಭಕ್ತರ ದುರ್ಮರಣ

ಹಾಜಿಪುರ: ಬಿಹಾರದ ವೈಶಾಲಿ ಜಿಲ್ಲೆಯಲ್ಲಿ ಕನ್ವರ್ ಭಕ್ತರು ಯಾತ್ರೆ ತೆರಳುತ್ತಿದ್ದಾಗ ವಾಹನದ ಮುಂಭಾಗದಲ್ಲಿ ಬಲು ಎತ್ತರಕ್ಕೆ ಅಳವಡಿಸಿದ್ದ ಧ್ವನಿವರ್ಧಕಗಳಿಗೆ ಹೈಟೆನ್ಷನ್ ವಿದ್ಯುತ್ ತಂತಿ

ತಗುಲಿ ವಾಹನಕ್ಕೆ ವಿದ್ಯುತ್ ಪ್ರವಹಿಸಿದ್ದರಿಂದ 9 ಭಕ್ತರು ಸಾವನ್ನಪ್ಪಿದ್ದಾರೆ. ಅವಘಡದಲ್ಲಿ ಮೂವರು ಭಕ್ತರಿಗೆ ಸುಟ್ಟ ಗಾಯಗಳಾಗಿವೆ.

8 ಭಕ್ತರು ಸ್ಥಳದಲ್ಲೇ ಅಸುನೀಗಿದರೆ, ಒಬ್ಬ ಭಕ್ತ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಕೊನೆಯುಸಿರೆಳೆದ. ಹಾಜಿಪುರ-ಜಂದಾಹಾ ರಸ್ತೆಯಲ್ಲಿ ಹಾಜಿಪುರ ಸಮೀಪದ ಸುಲ್ತಾನ್‌ಪುರ ಗ್ರಾಮದ ಕೈಗಾರಿಕಾ ಪ್ರದೇಶದಲ್ಲಿ ಭಾನುವಾರ ತಡರಾತ್ರಿ ಸಾಗು ತ್ತಿದ್ದಾಗ ಅವಘಡ ಸಂಭವಿಸಿದೆ. ಕನ್ವರ್ ಯಾತ್ರಿಕರಿಗೆ ಸೂಚಿಸಿದ್ದ ರಸ್ತೆ ಬಿಟ್ಟು ಬೇರೆ ಮಾರ್ಗದಲ್ಲಿ ತೆರಳಿದ್ದೇ ಈ ಅವಘಡಕ್ಕೆ ಕಾರಣ ಎನ್ನಲಾಗಿದೆ. ಸೋನೆಪುರದ ಬಾಬಾ ಹರಿಹರನಾಥ ದೇವಾಲಯಕ್ಕೆ ಜಲಾಭಿಷೇಕ ಮಾಡಲು ಪವಿತ್ರ ಜಲವನ್ನು ಗಂಗಾ ನದಿಯ ಪಹ್ಲೇಜಾ ಘಾಟ್‌ನಿಂದ ಸಂಗ್ರಹಿಸಿ ತರಲು ಕನ್ವಾರಿಯಾ ಭಕ್ತರ ಗುಂಪು ತೆರಳುತ್ತಿತ್ತು ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. 9 ಯಾತ್ರಿಕರ ದುರ್ಮರಣಕ್ಕೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಸಂತಾಪ ಸೂಚಿಸಿದ್ದು, ಮೃತರ ಕುಟುಂಬ ದವರಿಗೆ ತಲಾ 4 ಲಕ್ಷ ರು ಪರಿಹಾರ ಘೋಷಿಸಿದ್ದಾರೆ.

ಸರ್ವಧರ್ಮ ಪ್ರಾರ್ಥನೆ ಮೂಲಕ ಅಂತಿಮ ವಿಧಿವಿಧಾನ | ಗೋರಿಗಳ ಮೇಲೆ ಡಿಎನ್‌ಎ ಗುರುತು

ಗುರುತು ಸಿಗದ ಶವಗಳಿಗೆ ಸಾಮೂಹಿಕ ಅಂತ್ಯಕ್ರಿಯೆ

ವಯನಾಡು: ಭೂಕುಸಿತ ದುರಂತ ಸ್ಥಳದಲ್ಲಿ ಒಂದೆಡೆ ಮೃತದೇಹ ಪತ್ತೆಗೆ ಕಾರ್ಯಾಚರಣೆ ನಡೆದಿದ್ದರೆ ಇನ್ನೊಂದೆಡೆ ಗುರುತು ಪತ್ತೆಯಾಗದ ಶವಗಳ ಸಾಮೂಹಿಕ ಅಂತ್ಯಸಂಸ್ಕಾರ ನಡೆದಿದೆ. ಜಿಲ್ಲಾಡಳಿತ ಪುದುಮಲ ಪ್ರದೇಶದ ಸಾರ್ವಜನಿಕ ಸ್ಮಶಾನದಲ್ಲಿ ಜೆಸಿಬಿ ಮೂಲಕ ಪ್ರತ್ಯೇಕವಾಗಿ ಹತ್ತಾರು ಗುಂಡಿಗಳು ಅಗೆದು ಒಂದೊಂದೇ ಶವಗಳನ್ನು ಹೂಳಲಾಗಿದೆ. ಈ ಅನಾಥ ಶವಗಳಿಗೆ ಡಿಎನ್‌ಎ ಮಾದರಿಯೆ ಗುರುತಾಗಿದೆ.

ಗುಡ್ಡ ಕುಸಿತದಿಂದ ಕೆಲವು ಕುಟುಂಬಗಳು ಪೂರ್ಣ ಅಳಿದುಹೋಗಿವೆ. ಶವಗಳನ್ನು ಗುರುತಿಸಲೂ ಒಬ್ಬರೂ ಇಲ್ಲದಂತಾಗಿದೆ. ಹಲವು ದೇಹಗಳ ಭಾಗಗಳು ಬೇರ್ಪಟ್ಟಿರುವ ಹಿನ್ನೆಲೆ ಗುರುತಿಸುವುದೇ ಅಸಾಧ್ಯವಾಗಿದೆ. ಹೀಗಾಗಿ ಜಿಲ್ಲಾಡಳಿತ ಪ್ರತ್ಯೇಕ ಮಾರ್ಗಸೂಚಿ ಪ್ರಕಟಿಸಿ ಸಾಮೂಹಿಕ ಅಂತ್ಯಕ್ರಿಯೆ ನಡೆಸಿದೆ. ಮೊದಲ ಹಂತದಲ್ಲಿ 31 ಅನಾಥ ಶವಗಳ ಅಂತ್ಯಕ್ರಿಯೆ ಪುದುಮಲದಲ್ಲಿ ನಡೆಸಲಾಗಿದೆ. ಇದೇ ಜಾಗದಲ್ಲಿ 2019ರಲ್ಲಿ ಭೂಕುಸಿತದಲ್ಲಿ 5 ಮಂದಿ ಕಣ್ಮರೆಯಾಗಿದ್ದರು ಎಂದು ವರದಿ ಯಾಗಿದೆ. ಭಾನುವಾರ 8 ಮೃತದೇಹಗಳನ್ನು ಹೂಳಲಾಗಿದ್ದು ಸೋಮವಾರ 16 ಮೃತದೇಹಗಳನ್ನು ಹೂಳಲಾಗಿದೆ.

ಮಾರ್ಗಸೂಚಿ: ಗುರುತು ಪತ್ತೆಯಾಗದ ಮೃತದೇಹಗಳನ್ನು 72 ಗಂಟೆ ಅವಧಿಯೊಳಗೆ, ಶವಗಳ ಡಿಎನ್‌ಎ ಮಾದರಿ ಸಂಗ್ರಹಿಸಿ , ಅವುಗಳಿಗೆ ಗುರುತಿನ ಸಂಖ್ಯೆ ನಿಡಿ, ಶವಗಳ ಮೇಲೆ ಯಾವುದಾದರೂ ಆಭರಣವಿದ್ದರೆ ಅವುಗಳನ್ನು ಸಂಗ್ರಹಿಸಿ ಬಳಿಕ ಹೂಳುವಂತೆ ಮಾರ್ಗಸೂಚಿ ನೀಡಲಾಗಿದೆ. ಅದರಂತೆ ಪುದುಮಲ ಸಾರ್ವಜನಿಕ ಸ್ಮಶಾನದಲ್ಲಿ ಪ್ರತ್ಯೇಕವಾಗಿ ಶವಗಳನ್ನು ಹೂಳಲಾಗಿದೆ. ಡಿಎನ್‌ಎ ಕೋಡ್‌ಗಳನ್ನು ಗೋರಿಯ ಮೇಲೆ ನಮೂದಿಸಲಾಗಿದೆ. ಜತೆಗೆ ಗುರುತು ಪತ್ತೆ ಸಿಗದ ದೇಹದ ಭಾಗಗಳಿಗೂ ಇಲ್ಲಿಯೇ ಅಂತ್ಯಕ್ರಿಯೆ ಮಾಡಲಾಗಿದೆ. ಯಾರಾದರೂ ಶವದ ಹುಡುಕಾಟದಲ್ಲಿ ಬಂದರೆ ಅವರಿಗೆ ಮಾಹಿತಿ ನೀಡಲು ಅನುಕೂಲವಾಗುವ ಕಾರಣಕ್ಕೆ ಶವಗಳನ್ನು ದಹಿಸದೇ ಹೂಳಲು ಸೂಚನೆ ನೀಡಲಾಗಿದೆ.

ಮುಖ್ಯಾಂಶಗಳು

- ಮೃತರ ಸಂಖ್ಯೆ 386ಕ್ಕೆ ಏರಿಕೆ; ಸಂತ್ರಸ್ತರ ಸಂಖ್ಯೆ 4,833
- 180 ಜನರಿಗಾಗಿ 1500 ರಕ್ಷಣಾ ಸಿಬ್ಬಂದಿ ಹುಡುಕಾಟ
- ಕೇರಳದಲ್ಲಿ ಮತ್ತೆ ಮಳೆ ಭೀತಿ; ಕಣ್ಣೂರು, ಕಾಸರಗೋಡು, ಇಡುಕ್ಕಿ, ಕೊಟ್ಟಾಯಂ, ಪಟ್ಟನಂತಿಟ್ಟಕ್ಕೆ ಹವಾಮಾನ ಇಲಾಖೆಯಿಂದ ಯೆಲ್ಲೋ ಅಲರ್ಟ್

ವಿದ್ಯಾರ್ಥಿಗಳ ಮೃತದೇಹ ಗುರುತಿಸಿದ ಶಿಕ್ಷಕರು

ಮುಂಡಕ್ಕೈ. ಚೂರಲ್‌ಮಲಾ ಗ್ರಾಮದಲ್ಲಿ ಭೂಕುಸಿತದಲ್ಲಿ ಹಲವಾರು ಮಕ್ಕಳು ಬಲಿಯಾಗಿದ್ದಾರೆ. 49 ಮಕ್ಕಳು ನಾಪತ್ತೆಯಾಗಿದ್ದಾರೆ. ಕೆಲವರ ಮೃತದೇಹ ಸಿಕ್ಕಿದರೂ ಗುರುತು ಪತ್ತೆಗೆ ಪೋಷಕರೇ ಇಲ್ಲ. ಹೀಗಾಗಿ ಮೆಪ್ಪಾಡಿ ಆರೋಗ್ಯ ಕೇಂದ್ರ ಶವಾಗಾರದಲ್ಲಿದ್ದ ಮೃತದೇಹಗಳಲ್ಲಿ ತಮ್ಮ ವಿದ್ಯಾರ್ಥಿಗಳನ್ನು ಶಾಲೆಯ ಶಿಕ್ಷಕರೇ ಗುರುತಿಸಿ ಮಾಹಿತಿ ನೀಡಿದರು. ಪ್ರೀತಿಯ ಶಿಷ್ಯಂದಿರ ಶವ ಗುರುತಿಸುವ ಸ್ಥಿತಿ ಬಂದಿತಲ್ಲಾ ಎಂದು ಶಿಕ್ಷಕರು ಕಣ್ಣೀರಿಟ್ಟದ್ದಾರೆ. ಇದೇ ವೇಳೆ, ಭೂಕುಸಿತ ಸ್ಥಳದಲ್ಲಿ ಇನ್ಯಾರೂ ಬದುಕುಳಿದಂತೆ ಕಾಣುತ್ತಿಲ್ಲ ಎಂದು ಸಿಎಂ ಪಿಣರಾಯಿ ವಿಜಯನ್ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

ವಿವಿಧ ಬೇಡಿಕೆಗೆ ಆಗ್ರಹಿಸಿ ಕಿಸಾನ್ ಸಂಘದಿಂದ ಮನವಿ

ಆಲಮಟ್ಟಿ ಆಣೆಕಟ್ಟಿನ ಎತ್ತರ ವಿಸ್ತರಣೆ । 22 ಕೆರೆಗಳ ಭರ್ತಿಗೆ ಕ್ರಮ

ವಿಜಯಪುರ: ಜಿಲ್ಲೆಯ ಎಲ್ಲ ಕೆರೆ, ಹಳ್ಳಕೊಳ್ಳಗಳು, ಬಾಂದಾರ, ಚೆಕ್ ಡ್ಯಾಮಗಳಿಗೆ ನೀರು ಹರಿಸುವುದು, ಹೊಲಗಳಿಗೆ ಹೋಗುವ ರಸ್ತೆ ಸಮಸ್ಯೆಗಳ ಇತ್ಯರ್ಥ ಸೇರಿದಂತೆ ಮುಂತಾದ ವಿಷಯಗಳ ಕುರಿತು ಭಾರತೀಯ ಕಿಸಾನ್ ಸಂಘ ಕರ್ನಾಟಕ ಪ್ರದೇಶ ವತಿಯಿಂದ ಅಪರ ಜಿಲ್ಲಾಧಿಕಾರಿ ಸೋಮನಿಂಗ ಗೆಣ್ಣೂರಗೆ ಮನವಿ ಸಲ್ಲಿಸಲಾಯಿತು.

ಭಾರತೀಯ ಕಿಸಾನ್ ಸಂಘ ಕರ್ನಾಟಕ ಪ್ರದೇಶ ರಾಜ್ಯಾಧ್ಯಕ್ಷ ಭೀಮಸೇನ ಕೊಕರೆ ಮಾತನಾಡಿ, ಜಿಲ್ಲೆಯ ಸಮಗ್ರ ನೀರಾವರಿಗಾಗಿ ಜಿಲ್ಲಾಡಳಿತದ ಮೂಲಕ ಸರಕಾರಕ್ಕೆ ಅನೇಕ ಸಲ ಮನವಿ ಮಾಡಿದರೂ ಅದು ಪೂರ್ಣ ತೃಪ್ತಿಕರವಾಗಿಲ್ಲ. ಇನ್ನು ನೀರಾವರಿ ವಂಚಿತ ಪ್ರದೇಶಗಳಿಗೆ ನೀರು ಸಿಗಬೇಕಾದರೆ ಆಲಮಟ್ಟಿ ಆಣೆಕಟ್ಟಿನ ಎತ್ತರವನ್ನು 524.256 ಮೀ.ಗೆ ಎತ್ತರಿಸಿ ಸಂತ್ರಸ್ತರಿಗೆ ಪುನರ್ವಸತಿ ಹಾಗೂ ಪರಿಹಾರ ಕಲ್ಪಿಸುವುದು. ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ 3 ರ ಅಡಿಯಲ್ಲಿ ಬರುವ ಎಲ್ಲ ಯೋಜನೆಗಳನ್ನು ಸಮರೋಪಾದಿಯಲ್ಲಿ ಪೂರ್ಣಗೊಳಿಸಿ, ಇಂಡಿ ಶಾಖಾ ಕಾಲುವೆ, ಇಂಡಿ ಏತ ನೀರಾವರಿ ಗುತ್ತಿ ಬಸವಣ್ಣ ಕಾಲುವೆ ಕೊನೆ ಅಂಚಿನವರೆಗೂ ನೀರು ಹರಿಸಬೇಕು. ತಿಡಗುಂದಿ ಶಾಖಾ ಕಾಲವೆಯಿಂದ 22 ಕೆರೆಗಳು ನಾಗಠಾಣ, ಇಂಡಿ ಮತಕ್ಷೇತ್ರ ಕೆರೆಗಳಾಗಿದ್ದು ಬೇಗ ಕೆರೆ ತುಂಬಲು ಕ್ರಮಕೈಕೊಳ್ಳಬೇಕು ಎಂದು ಒತ್ತಾಯಿಸಿದರು.

ಈ ವೇಳೆ ರಾಜ್ಯ ಉಪಾಧ್ಯಕ್ಷ ಗುರುನಾಥ ಬಗಲಿ, ಮುಖಂಡರಾದ ಶಾಂತಪ್ಪಗೌಡ ಬಿರಾದಾರ, ಗೊಲ್ಲಾಳ ಉಪ್ಪಿನ, ಭೀಮಶಂಕರ ಕುಂಬಾರ, ಈರಣ್ಣ ಸಾಹುಕಾರ ಗೊಟ್ಯಾಳ, ಅಶೋಕ ಪೂಜಾರಿ, ಬಸವಾನಂದ ಕುಂಬಾರ, ಮನೋಹರ ಜಂಗಮಶೆಟ್ಟಿ, ಅಶೋಕಗೌಡ ಪಾಟೀಲ, ಅಣ್ಣಾಸಾಬ ಸಾವಳಗಿ, ಪರಗೌಡ ಪಾಟೀಲ, ದೇವರಾಯ ನಿವರಗಿ, ಬಸಣ್ಣ ಪಟ್ಟಣಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ದಿನನಿತ್ಯದ ಸಮಸ್ಯೆಯಾದ ರೈತರ ಹೊಲಗಳಿಗೆ ಹೋಗುವ ವಹಿವಾಟು ರಸ್ತೆ, ಬಂಡಿದಾರಿ, ಕಾಲುದಾರಿ ತೆರವುಗೊಳಿಸಲು ತಹಸೀಲ್ದಾರಿಗೆ ಕ್ರಮ ಕೈಕೊಳ್ಳಲು ಆದೇಶಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಡೋಣಿ ನದಿ ಹೂಳೆತ್ತಿ ಅದಕ್ಕೆ ಕೃಷ್ಣಾ ನದಿ ನೀರು ಹರಿಸಬೇಕು. ಸೋಲಾಪೂರ ವಿಜಯಪುರ ರಾಷ್ಟ್ರೀಯ ಹೆದ್ದಾರಿ 52ರ ಮೇಲೆ ಹಳಗುಣಕಿಯಿಂದ ಕಪನಿಂಬರಗಿ ನಡುವೆ ಬರುವ ಕುಂಬಾರ ವಸ್ತಿಗಳಿಗೆ ರೈತರಿಗೆ ಹೋಗಲು ರಸ್ತೆ ಪೂರ್ವ, ಪಶ್ಚಿಮ ರೈತರ ಎರಡು ಕಡೆ ಜಮೀನುಗಳಿದ್ದು ರೈತರಿಗೆ ತೊಂದರೆ ಇದೆ. ರಸ್ತೆ ಮುಚ್ಚಿದ್ದಾರೆ. ಅದನ್ನು ತೆರವುಗೊಳಿಸಲು ಕ್ರಮ ಜರುಗಿಸುವುದು.

– ಮಲ್ಲನಗೌಡ ಪಾಟೀಲ
ಕಿಸಾನ್ ಸಂಘದ ಜಿಲ್ಲಾಧ್ಯಕ್ಷ



ಜಿಲ್ಲೆಯ ರೈತರ ಸಮಸ್ಯೆಗಳ ಕುರಿತು ಅಪರ ಜಿಲ್ಲಾಧಿಕಾರಿ ಸೋಮನಿಂಗ ಗೆಣ್ಣೂರಗೆ ಭಾರತೀಯ ಕಿಸಾನ್ ಸಂಘ ಕರ್ನಾಟಕ ಪ್ರದೇಶ ವತಿಯಿಂದ ಮನವಿ ಸಲ್ಲಿಸಲಾಯಿತು.

ಕೊಲ್ಹಾರ ತಾಲೂಕಿನ ಕೂಡಗಿ ಗ್ರಾಮದ ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿ ವರ್ಗಾವಣೆಗೊಂಡ ತಾನಾಜಿ ಯಾದವ ಅವರ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ನೆಚ್ಚಿನ ಶಿಕ್ಷಕರ ವರ್ಗಾವಣೆ ಕಣ್ಣೀರಿಟ್ಟ ಸಹಶಿಕ್ಷಕರು ಹಾಗೂ ಶಾಲಾ ವಿದ್ಯಾರ್ಥಿಗಳು.

ವಿಜಯಪುರ ನಗರ ಹೊರವಲಯದ ಜುಮನಾಳ ಗ್ರಾಮದಲ್ಲಿನ ಶ್ರೀಹರಿ ಮಂದಿರ, ರುಕ್ಮಿಣಿ ದೇವಾಲಯದಲ್ಲಿ ಮಹಾನಂದ ಪಾಟೀಲ ಹಾಗೂ ಸತೀಶ ಪಾಟೀಲರ ಪ್ರಯೋಜಕತ್ವದಲ್ಲಿ ಶ್ರಾವಣ ಮಾಸದ ಪ್ರಥಮ ಸೋಮವಾರದಂದು 108 ಶ್ರೀ ಸತ್ಯನಾರಾಯಣ ಪೂಜೆ ಜರುಗಿತು. ದೇವಾಲಯದ ಧರ್ಮದರ್ಶಿ ಕಿರಣಭಟ್ಟ, ರಮೇಶಭಟ್ಟ ಜೋಶಿ (ಜುಮನಾಳಕರ), ಶ್ರೀಧರ ಭಟ್ಟ ಜೋಶಿ ಹಾಗೂ ಶಾಮಭಟ್ಟ ಜೋಶಿ ಮೊದಲಾದವರು ನೇತೃತ್ವ ವಹಿಸಿದ್ದರು.

ಸ್ವಾತಂತ್ರ್ಯೋತ್ಸವ ಅದ್ದೂರಿ ಆಚರಣೆಗೆ ಸಭೆ

ದೇವರಹಿಪ್ಪರಗಿ: ಸ್ವಾತಂತ್ರ್ಯೋತ್ಸವವನ್ನು ಅದ್ದೂರಿಯಾಗಿ ಸಡಗರ ಸಂಭ್ರಮದಿಂದ ಆಚರಿಸೋಣ, ಸರಕಾರಿ ನಿಯಮಾವಳಿ ಪ್ರಕಾರ ಕಾರ್ಯಕ್ರಮ ಜರುಗಿಸಲಾಗುತ್ತಿದ್ದು, ಯಾವುದೇ ಹಾರ, ತುರಾಯಿ, ಸನ್ಮಾನ, ಪ್ರಶಸ್ತಿ ವಿತರಣೆ ಇರುವುದಿಲ್ಲ ಎಂದು ತಹಸೀಲ್ದಾರ್ ಪ್ರಕಾಶ ಸಿಂದಗಿ ಹೇಳಿದರು. ಸೋಮವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಸಲ ಸರಕಾರಿ ನಿಯಮಾವಳಿ ಪ್ರಕಾರವೇ ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತಿದ್ದು, ಸಾಧಕರಿಗೆ ಸನ್ಮಾನ, ಪ್ರಶಸ್ತಿ ಯಾವುದು ಇರುವುದಿಲ್ಲ. ಸೈನಿಕರಿಗೆ ಮಾತ್ರ ಗೌರವಿಸಲಾಗುತ್ತದೆ. ಎಂದರು. ಕೃಷಿ ಇಲಾಖೆಯ ಸಿಂಗೆಗೋಳ, ಡಾ.ಸಂದೀಪ ಕಡ್ಲೆವಾಡ, ಪಿಎಸ್ಐ ಬಸವರಾಜ ತಿಪ್ಪಾರೆಡ್ಡಿ, ಪಪಂಮುಖ್ಯಾಧಿಕಾರಿ ಸುರೇಖಾ ಎನ್ ಆರ್ ಚವ್ಹಾಣ, ಬಿ ಬಿ ಪಾಟೀಲ ಇದ್ದರು.

ಸಮಾಚಾರ ಸಣ್ಣದಲ್ಲ

ಶಿಕಕ ಅನಿಲ್‌ಗೆ ಶಿಕ್ಷಕ ರತ್ನ ರಾಜ್ಯ ಪ್ರಶಸ್ತಿ

ಆಲಮೇಲ: ಕನಕ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಹಾಗೂ ಚೇತನ ಪೌಂಡೇಶನ್ ಧಾರವಾಡ, ಇವರ ಸಂಯುಕ್ತಾಶ್ರಯದಲ್ಲಿ ಜು. 26, 27 ಮತ್ತು 28ರ ಧಾರವಾಡ ನುಡಿ ಸಡಗರ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಕನಕ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು. ಆಲಮೇಲ ತಾಲೂಕಿನ ಮದನಹಳ್ಳಿ ಗ್ರಾಮದ ಶಿಕ್ಷಕ ಅನಿಲ್ ಹೆಚ್. ಎಂ. ಇವ ರಿಗೆ ಶೈಕ್ಷಣಿಕ ಸೇವೆಗಾಗಿ ಶಿಕ್ಷಕ ರತ್ನ ರಾಜ್ಯ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಡಾ. ಹನುಮಗೌಡ ಸಿ. ಸಂಯೋಜಕರು, ಕನಕ ಅಧ್ಯಯನ ಪೀಠ, ಕರ್ನಾ ಟಕ ವಿಶ್ವವಿದ್ಯಾಲಯ ಧಾರವಾಡ ಹಾಗೂ ಚೇತನ ಪೌಂಡೇಶನ್ ಅಧ್ಯಕ್ಷ ಚಂದ್ರಶೇಖರ್ ಮಾಡಲಗೇರಿ ಇವರ ಸಹಯೋಗದಲ್ಲಿ ಧಾರವಾಡದ ನುಡಿ ಸಡಗರ ಕಾರ್ಯಕ್ರಮ, ಕನಕ ಭವನ, ಕನಕ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹಳ ಸಂಭ್ರಮದಿಂದ ಜರುಗಿತು.

ಕಾಂಗ್ರೆಸ್ ಬೃಹತ್ ಪ್ರತಿಭಟನೆ ಇಂದು

ಇಂಡಿ: ವಿಜಯಪುರ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಇಂದು ವಿಜಯಪುರ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ; ಡಾ. ಬಾಬಾಸಾಹೇಬ ಅಂಬೇಡ್ಕರವರ ವೃತ್ತದ ಮೂಲಕ ಜಿಲ್ಲಾಧಿಕಾರಿಗಳ ಕಾರ್ಯಾಲಯದವರೆಗೆ ಬಿಜೆಪಿ ಹಾಗೂ ಜೆಡಿಎಸ್ ವಿರುದ್ಧ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಇಂಡಿ ಮತಕ್ಷೇತ್ರದ ಕಾಂಗ್ರೆಸ್ ಪಕ್ಷದ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ಇಂಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಾವೀದ ಮೋಮಿನ್ ಪ್ರಕಟಣೆಗೆ ತಿಳಿಸಿದ್ದಾರೆ.

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಸಿಂದಗಿ: 110/11ಕೆವಿ ದೇವರ ಹಿಪ್ಪರಗಿಯಿಂದ 110/11ಕೆವ್ವಿ ಸಿಂದಗಿಯವರೆಗೆ ಟವರ್ ಲೈನ್‌ಗಳ ಬದಲಾವಣೆಗೆ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳಲಾಗಿದೆ. ವಿಜಯಪುರ ಕೆಪಿಟಿಸಿಎಲ್ ಬೃಹತ್ ಕಾಮಗಾರಿ ಸಹಾಯಕ ಅಭಿಯಂತರರು ಉಪವಿಭಾಗ ವಿಜಯಪುರ ಅವರ ಆದೇಶದ ಮೇರೆಗೆ ಆ. 6ರಂದು ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲ 6 ಗಂಟೆಯ ವರೆಗೆ ಸಿಂದಗಿ ಫೀಡರ್ 1ರ ಮನಗೂಳಿ ಪೆಟ್ರೋಲ್ ಪಂಪ್‌ನಿಂದ ಎಪಿಎಂಸಿ, ಬಂದಾಳ ಕ್ರಾಸ್, ಸಂಗಮ ಬಾರ್, ಬಸವ ನಗರ, ಅಂಬೇಡ್ಕರ್ ವೃತ್ತ, ಸರಕಾರಿ ಆಸ್ಪತ್ರೆ, ತಾಲೂಕು ಪಂಚಾಯತ್, ಜೈ ಭೀಮ ನಗರ, ಬಸ್ ಸ್ಟ್ಯಾಂಡ್ ಏರಿಯಾ, ವಿವೇಕಾನಂದ ವೃತ್ತ, ಹಳೆಯ ಬಜಾರ್ ರೋಡ್, ಗೋಲಗೇರಿ ನಾಕಾ, ಮೋರಟಗಿ ನಾಕಾ, ಇಂಡಸ್ಟ್ರಿಯಲ್, ಟಿಪ್ಪು ಸುಲ್ತಾನ್ ವೃತ್ತ, ಸುಂಗಠಾಣ ಐಪಿ, ಮಾಡಬಾಳ, ಯಂಕಂಚಿ ಐಪು ಮನ್ನಾಪೂರ, ಅಂತರಗಂಗಿ, ಯಂಕಂಚಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾ ಗಲಿದೆ. ಆದ್ದರಿಂದ ಸದರಿ ಗ್ರಾಹಕರು ಸಹಕರಿಸಬೇಕು ಎಂದು ಸಿಂದಗಿ ಹೆಸ್ಕಾಂ ಉಪವಿಭಾಗದ ಸಹಾಯಕ ನಿರ್ವಾಹಕ ಅಭಿಯಂತರರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಜುಮನ್ ಕಮಿಟಿ ಪದಾಧಿಕಾರಿಗಳ ಆಯ್ಕೆ

ಹೂವಿನ ಹಿಪ್ಪರಗಿ: ಸಮೀಪದ ಕುದರಿ ಸಾಲವಾಡಗಿ ಗ್ರಾಮದ ಅಂಜುಮನ್ ಇಸ್ಲಾಂ ಕಮಿಟಿಯ ಸಭೆಯಲ್ಲಿ ಆಯ್ಕೆ ಪ್ರಕ್ರಿಯೆ ಅವಿರೋಧವಾಗಿ ನಡೆಯಿತು. ಸರ್ವ ಸದಸ್ಯರು ಒಮ್ಮತದಿಂದ ಅಧ್ಯಕ್ಷರಾಗಿ ಉಸ್ಮಾನಗನಿ ಅಬ್ದುಲಸಾಬ ಮುಲ್ಲಾ ಹಾಗೂ ಉಪಾಧ್ಯಕ್ಷರಾಗಿ ರಹಿಮಾನಷಾ ಮಾಬುಷಾ ಮಕಾನದಾರ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಂಜುಮನ್ ಇಸ್ಲಾಂ ಕಮಿಟಿಯ ಸದಸ್ಯರಾಗಿ ಮೊಹಮ್ಮದ ರಫೀಕ ಫಕಿರಸಾಬ ರಂಜಣಗಿ , ಅಬ್ದುಲಗಣಿ ಕಾಚಾಪುರ, ಯಾಸಿನ ಕಾಮನಕೇರಿ, ಹುಸೇನಬಾಷಾ ನದಾಫ್, ಅಲ್ಲಾಬಕ್ಷ ಕಾಚಾಪುರ, ಇಸ್ಮಾಯಿಲ ನಾಯ್ಕೋಡಿ, ಜೈನುಲಾಬಿದುನ ಮುಲ್ಲಾ, ಮುರ್ತುಜಾ ನದಾಫ ಇವರೆಲ್ಲರನ್ನು ಸಮಾಜದ ಮುಖಂಡರು ಒಮ್ಮತದಿಂದ ಅವಿರೋಧವಾಗಿ ಆಯ್ಕೆ ಮಾಡಿದರು. ಈ ವೇಳೆ ಅಂಜುಮನ್ ಇಸ್ಲಾಂ ಕಮಿಟಿಯ ಮಾಜಿ ಅಧ್ಯಕ್ಷ ಮಹಮ್ಮದ ರಫೀಕ ಬಾವೂರ, ಅಕ್ಸ ಮಸ್ಜಿದ್ ಕಮಿಟಿಯ ಅಧ್ಯಕ್ಷ ನಜಿರ ಅಹ್ಮದ ಗುಡ್ನಾಳ, ಡಾ. ಕಾಶಿಮಸಾಬ ಢವಳಗಿ, ಡಾ. ಇಬ್ರಾಹಿಂ ಮನಿಯಾರ, ಮಹಿಬೂಬ ನದಾಫ, ಉಸ್ಮಾನಗನಿ, ನಾಯ್ಕೋಡಿ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

{ಬಸನಗೌಡ ಯತ್ನಾಳ } ಶಾಸಕ

ವಕ್ಫ್ ಬೋರ್ಡ್ ಒಂದು ಕರಾಳ ಶಾಸನ. ಇದನ್ನು ತೆಗೆಯಲು ಪ್ರಧಾನಿ ಮೋದಿ ಮುಂದಾಗಿದ್ದು ಒಳ್ಳೆಯದು. ಅದನ್ನು ಸ್ವಾಗತಿಸುತ್ತೇನೆ. ಕಾಶ್ಮೀರದಲ್ಲಿ 370 ವಿಧಿ ತೆಗೆದಂತೆ ದೇಶದಲ್ಲಿ ವಕ್ಫ್ ಕಾಯ್ದೆ ತೆಗೆಯಬೇಕು. ವಕ್ಫ್ ಮಂಡಳಿ ಹೆಸರಿನಲ್ಲಿ ದೇಶಾದ್ಯಂತ ಲಕ್ಷಾಂತರ ಆಸ್ತಿ ಇದೆ. ಈ ಕರಾಳ ಶಾಸನ ತೆಗೆಯುವುದರಿಂದ ದಲಿತರಿಗೆ, ಹಿಂದುಳಿದವರಿಗೆ ಒಳ್ಳೆಯದಾಗಲಿದೆ.

ನಕಲಿ ಪೈಪ್ ಮಾರಾಟದ ಅಂಗಡಿ ಮೇಲೆ ಪೊಲೀಸರ ದಾಳಿ: ದಾಖಲು

ಮುದ್ದೇಬಿಹಾಳ: ಪಟ್ಟಣದ ಆಲಮಟ್ಟಿ ರಸ್ತೆ ಪಕ್ಕದ ಸಂತ ಸೇವಾಲಾಲ ವೃತ್ತದ ಬಳಿ ರುದ್ರಭೂಮಿ ಕಂಪೌಂಡ್‌ಗೆ ಹೊಂದಿಕೊಂಡಿರುವ ಕಾಂಪ್ಲೆಕ್ಸ್‌ನಲ್ಲಿನ ಓ ಸ್ಯಾನಿಟರಿ ಮತ್ತು ವಾಟರ್ ಫಿಟ್ಟಿಂಗ್ಸ್ ಅಂಗಡಿ ಮೇಲೆ ಪೊಲೀಸರ ದಾಳಿ. ನಕಲಿ ಪೈಪುಗಳ ಮಾರಾಟ ಪತ್ತೇ ಹಚ್ಚಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆಶೀರ್ವಾದ ಕಂಪನಿಯ ಹೆಸರಿನಲ್ಲಿ ನಕಲಿ ಪೈಪು ಸೇರಿ ಪ್ಲಂಬಿಂಗ್‌ಗೆ ಬಳಸುವ ಸರಂಜಾಮುಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ಕಂಪನಿಯ ಅಧಿಕಾರಿ ತೆಲಂಗಾಣ ರಾಜ್ಯದ ಹೈದರಾಬಾದ್‌ನ ಶೇಖ್ ಖಾಸಿಮ್ ಅವರು ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ನಕಲಿ ಸರಂಜಾಮು ಮಾರಾಟ ಪತ್ತೇ ಹಚ್ಚಲು ತಮ್ಮ ಜತೆ ಅಂಗಡಿ ಮೇಲೆ ದಾಳಿ ನಡೆಸುವಂತೆ ಕೋರಿದ್ದ ಹಿನ್ನೆಲೆ ಪಿಎಸ್ಐ ಸಂಜಯ್ ತಿಪ್ಪರಡ್ಡಿ ಅವರು ಕಂಪನಿಯ ಸಿಬ್ಬಂದಿ ಮತ್ತು ತಮ್ಮ ಸಿಬ್ಬಂದಿ ಜತೆ ದಾಳಿ ನಡೆಸಿದಾಗ ಕಂಪನಿಯ ಸಿಪಿವಿಸಿ ನಕಲಿ ಪೈಪುಗಳು, ಇನ್ನಿತರ ಸರಂಜಾಮುಗಳ ಪತ್ತೇ ಆದವು. ಆಶಿರ್ವಾದ ಕಂಪನಿಯ ಹೆಸರಿನಲ್ಲಿ ನಕಲಿ ಪೈಪುಗಳನ್ನು ಇಟ್ಟುಕೊಂಡು ಮಾರಾಟ ಮಾಡಿ ಗ್ರಾಹಕರಿಗೆ ಮೋಸ ಮಾಡಿದ್ದೂ ಅಲ್ಲದೆ 1957ರ ಕಾಪಿರೈಟ್ ಕಾಯ್ದೆ ಉಲ್ಲಂಘಿಸಿದ ಅಪರಾಧದ ಹಿನ್ನೆಲೆ ಅಂಗಡಿ ಮಾಲಿಕ ಗಣೇಶರಾಂ ದಮರಾಂ ಚೌಧರಿ ಮತ್ತು ಇನ್ನಿಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಕೈಕೊಂಡಿದ್ದಾರೆ. ನಕಲಿ ಮಾಲು ಪತ್ತೇಯಾದ ಹಿನ್ನೆಲೆ ಕಾಂಗ್ರೆಸ್ ಸ್ಥಳೀಯ ಮುಖಂಡರೊಬ್ಬರು ಪ್ರಭಾವ ಬಳಸಿ ಅಂಗಡಿಕಾರರನ್ನು ಬಚಾವ್ ಮಾಡಲು ಸಾಕಷ್ಟು ಪ್ರಯತ್ನ ನಡೆಸಿದ್ದರೂ ಪಿಎಸ್ಐ ಅವರ ಕಠಿಣ ನಿಲುವಿನಿಂದಾಗಿ ಪ್ರಕರಣ ದಾಖಲಾಗುವಂತಾಗಿದ್ದು ಗ್ರಾಹಕರ ಮೆಚ್ಚುಗೆಗೆ ಕಾರಣವಾಗಿದೆ.

ಮಕ್ಕಳ ಪ್ರಗತಿಗೆ ಬಾಲ ವಿಕಾಸ ಅಕಾಡೆಮಿ ಸಿದ್ಧ : ಸಂಗಮೇಶ

ಬಸವನಬಾಗೇವಾಡಿ: ಮಕ್ಕಳ ಮತ್ತು ಮಹಿಳಾ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ಕರ್ನಾಟಕ ಬಾಲ ವಿಕಾಸ ಅಕಾಡೆಮಿಯು ಮಕ್ಕಳ ಮನೋವಿಕಾಸ, ವ್ಯಕ್ತಿತ್ವ ನಿರ್ಮಾಣ, ಪ್ರತಿಭೆ ಗುರುತಿಸುವುದು ಸೇರಿದಂತೆ ಮಕ್ಕಳ ಸರ್ವಾಂಗೀಣ ಪ್ರಗತಿಗೆ ಕಾರ್ಯನಿರ್ವಹಿಸುತ್ತಿದೆ. ನನಗೆ ಸರಕಾರದಿಂದ ಬೇರೆ ಸ್ಥಾನಮಾನಕ್ಕೆ ಅವಕಾಶವಿದ್ದರೂ ಮಕ್ಕಳ ಸೇವೆ ಮಾಡುವ ಉದ್ದೇಶದಿಂದ ನಾನು ಈ ಅಕಾಡೆಮಿಯ ಅಧ್ಯಕ್ಷ ಹುದ್ದೆಯನ್ನು ಕೇಳಿ ಪಡೆದುಕೊಂಡಿದ್ದು. ಮಕ್ಕಳ ಪ್ರಗತಿಗೆ ಬೇಕಾದ ವಿವಿಧ ಯೋಜನೆಗಳನ್ನು ಹಾಕಿಕೊಂಡು ಕಾರ್ಯನ್ಮೋಖನಾಗಿದ್ದೇನೆ ಎಂದು ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಹೇಳಿದರು.

ಇತ್ತೀಚಿನ ದಿನಗಳಲ್ಲಿ ಅಪ್ರಾಪ್ತ ಬಾಲಕರಿಂದ ಅಪ್ರಾಪ್ತ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ, ಚುಡಾಯಿಸುವುದು, ಹಲ್ಲೆ ಮಾಡುವುದು, ದರೋಡೆ ಮಾಡುವುದು, ತೊಡಗುವುದು, ಪರಾರಿಯಾಗುವುದು ಇಂತಹ ಕೃತ್ಯಗಳು ನಡೆಯುತ್ತಿರುವ ಕುರಿತು ವರದಿಯಾಗುತ್ತಿರುವದು ಸಾಮಾನ್ಯವಾಗಿ ಕಂಡುಬರುತ್ತಿದೆ. ಇಂತಹ ಕೃತ್ಯದಿಂದ ಮಗುವಿನ ವ್ಯಕ್ತಿತ್ವದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಬಾಲಕರ ಈ ದುರ್ವರ್ತನೆ, ದುರ್ನಡತೆ ಹಾಗೂ ಕಾನೂನು ಉಲ್ಲಂಸಿ ಸಾಮಾಜಿಕ ಸಂಘರ್ಷಗಳನ್ನು ಉಂಟು ಮಾಡಲು ಕಾರಣ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ನಮ್ಮ ಅಕಾಡೆಮಿಯಿಂದ ಹದಿಹರೆಯದ ಗಂಡುಮಕ್ಕಳಿಗೆ ಉತ್ತಮ ಕೌಶಲ ಅಭಿವೃದ್ಧಿಯ ಮಾರ್ಗದರ್ಶನ, ವಿಶೇಷ ಕಾಳಜಿ, ಆರೋಗ್ಯಕರ ಶಿಕ್ಷಣ, ಉತ್ತಮ ಸಂಸ್ಕಾರ ನೀಡಿದರೆ ಅವರು ಉತ್ತಮ ಜೀವನ ಕಳೆಯಲು ಸಾಧ್ಯ. ಅದಕ್ಕಾಗಿ ಇಂತಹ ಮಕ್ಕಳಿಗೆ ಹದಿಹರೆಯದ ಗಂಡುಮಕ್ಕಳ ಸಶಕ್ತೀಕರಣ ಯೋಜನೆಯಾದ ಆರ್ಯನ್ ಎಂಬ ಯೋಜನೆಯನ್ನು ವಿಶ್ವಸಂಸ್ಥೆಯ ಯುನಿಸೆಫ್ ಸಹಯೋಗದಲ್ಲಿ ವಿಜಯಪುರ, ಹಾವೇರಿ, ಬಾಗಲಕೋಟ ಜಿಲ್ಲೆ ಸೇರಿದಂತೆ ಆರು ಜಿಲ್ಲೆಯಲ್ಲಿ ಆರಂಭಿಸಲಾಗುವುದು. ನಂತರ ರಾಜ್ಯದ ವಿವಿಧ ಜಿಲ್ಲೆಗಳಲ್ಲಿಯೂ ಇದನ್ನು ವಿಸ್ತರಿಸುವ ಯೋಜನೆಯಿದೆ. ಈ ಯೋಜನೆಗೆ ಬೆಂಗಳೂರಿನಲ್ಲಿ ಶೀಘ್ರವೇ ಸಿಎಂ ಸಿದ್ದರಾಮಯ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಚಾಲನೆ ನೀಡಲಿದ್ದಾರೆ ಎಂದರು.

ಬಸವನಬಾಗೇವಾಡಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಬಾಲ ವಿಕಾಸ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಮಾತನಾಡಿದರು.

ದೇಶದಲ್ಲಿ ಮಕ್ಕಳ ಕಾಳಜಿ ಹೊಂದಿರುವ ಎರಡು ಸಂಸ್ಥೆಗಳು ಮಾತ್ರ ಇದ್ದವು. ಈಗ ಗುಜರಾತಿನಲ್ಲಿದ್ದ ಸಂಸ್ಥೆ ಅಸ್ತಿತ್ವ ಇಲ್ಲ. ಇವಾಗ ಕರ್ನಾಟಕ ಬಾಲ ವಿಕಾಸ ಅಕಾಡೆಮಿಯು ಮಾತ್ರ ಮಕ್ಕಳ ಬಗ್ಗೆ ಕಾಳಜಿ ಹೊಂದಿರುವ ಏಕೈಕ ಸಂಸ್ಥೆ. ಎಲ್ಲ ಇಲಾಖೆಗಳ ಸಮನ್ವಯದೊಂದಿಗೆ ಕಾರ್ಯನಿರ್ವಹಿಸುವ ಜತೆಗೆ ಮಕ್ಕಳ ಮನೋವಿಕಾಸ ವ್ಯಕ್ತಿತ್ವ ನಿರ್ಮಾಣ, ಅಪೌಷ್ಟಿಕ ಆಹಾರದಿಂದ ಬಳಲುವ ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಕೆ, ಪ್ರತಿಭಾವಂತಹ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕಾರ್ಯವನ್ನು ನಾನು ಪ್ರಾಮಾಣಿಕವಾಗಿ ಕೆಲಸ ಮಾಡುವೆ.

– ಸಂಗಮೇಶ ಬಬಲೇಶ್ವರ ಅಕಾಡೆಮಿಯ ಅಧ್ಯಕ್ಷ

ಸಿಎಂ ಮೇಲಿನ ಸುಳ್ಳು ಆರೋಪಗಳಿಗೆ ಹೆದರುವುದಿಲ್ಲ

ಮೂಡಾ ಪ್ರಕರಣದ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರಾಮಾಣಿಕ ಆಡಳಿತ ನೀಡುತ್ತಿರುವ ಆರ್ಥಿಕ ತಜ್ಞರಾಗಿರುವ ಸಿಎಂ ಸಿದ್ದರಾಮಯ್ಯನವರ ಮೇಲೆ ಸುಳ್ಳು ಆರೋಪ ಹೊರಿಸಲು ವಿರೋಧ ಪಕ್ಷದವರು ರಾಜಭವನ ಬಳಕೆ ಮಾಡಿಕೊಂಡಿರುವುದು ಸರಿಯಲ್ಲ. ಸಿಎಂ ಸಿದ್ದರಾಮಯ್ಯನವರು ಎಂದಿಗೂ ಸುಳ್ಳು ಆರೋಪಗಳಿಗೆ ಹೆದುರುವದಿಲ್ಲ. ಗೌರವಯುತವಾದ ರಾಜ್ಯಪಾಲ ಹುದ್ದೆಯನ್ನು ರಾಜಕಾರಣಕ್ಕೆ ಬಳಸಿಕೊಂಡಿರುವುದು ಪ್ರಜಾಪ್ರಭುತ್ವದ ವ್ಯವಸ್ಥೆಯ ದುರುಪಯೋಗ ಪಡಿಸಿಕೊಂಡಂತೆ. ಆಡಳಿತ ಪಕ್ಷದ ಪರ ವಿರೋಧ ಪಕ್ಷದವರು ಮಾಡುವ ಆರೋಪಗಳಿಗೆ ಸದಾ ಸ್ವಾಗತವಿದೆ ಎಂದರು.

ಶಿಕ್ಷಕರ ಬೇಡಿಕೆ ಈಡೇರಿಕೆಗೆ ಸಂಘದ ಮನವಿ

ತಾಳಿಕೋಟಿ : 2016ರಕ್ಕಿಂತ ಪೂರ್ವ ನೇಮಕಾತಿ ಹೊಂದಿದ ಪ್ರಾಥಮಿಕ ಶಿಕ್ಷಕರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವುದರ ಜತೆಗೆ ಶಿಕ್ಷಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯ. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ) ಬೆಂಗಳೂರು ತಾಲೂಕ ಘಟಕ ತಾಳಿಕೋಟಿ ವತಿಯಿಂದ ಸೋಮವಾರ ತಹಸೀಲ್ದಾರ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು. ಮನವಿ ಪತ್ರದಲ್ಲಿ 2016ಕ್ಕಿಂತ ಪೂರ್ವ ನೇಮಕಾತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಜಿಪಿಟಿ ಶಿಕ್ಷಕರಲ್ಲಿ ವಿಲೀನಗೊಳಿಸುವುದು ಹಾಗೂ ಸ್ಥಗಿತಕೊಂಡಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಭರ್ತಿ ಪ್ರಕ್ರಿಯೆಯನ್ನು ಆರಂಭಿಸಬೇಕು ಮತ್ತು 2016ರ ಪೂರ್ವದಂತೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮುಖ್ಯ ಗುರುಗಳು ಹಾಗೂ ಹಿರಿಯ ಮುಖ್ಯ ಗುರುಗಳ ಹುದ್ದೆಗೆ ಸೇವಾ ಜೇಷ್ಠತೆಯ ಆಧಾರದ ಮೇಲೆ ಭರ್ತಿ ಪ್ರಕ್ರಿಯೆಯನ್ನು ಶೀಘ್ರದಲ್ಲಿಯೇ ಆರಂಭಿಸಬೇಕು. ಸಾಮಾಜಿಕ ನ್ಯಾಯದ ಪರ ದನಿಯಾಗಿರುವ ತಾವುಗಳು ಲಕ್ಷಾಂತರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆಗುತ್ತಿರುವ ಬಹುದೊಡ್ಡ ಅನ್ಯಾಯವನ್ನು ಗಂಭೀರವಾಗಿ ಪರಿಗಣಿಸಿ ತುರ್ತಾಗಿ ಒಂದು ಕಾರ್ಯಕಾರಿ ಆದೇಶವನ್ನು ಹೊರಡಿಸಲು ಸರ್ಕಾರಕ್ಕೆ ಒತ್ತಾಯಿಸಬೇಕು. ಈ ಮೂಲಕ ಉಲ್ಲಂಘನೆಯಾಗಿರುವ ನಿಯಮಗಳನ್ನು ಸರಿಪಡಿಸುವುದರ ಜೊತೆಗೆ ನಿರಂತರ ಸೇವಾನುಭವ ಮತ್ತು ಉನ್ನತ ವಿದ್ಯಾರ್ಹತೆ ಹೊಂದಿರುವ ಸೇವಾನಿರತ ನಿರ್ದೇಶಕರಿಗೆ ಯಾವುದೇ ರೀತಿಯ ತಾರತಮ್ಯ ಹಾಗೂ ಅನ್ಯಾಯವಾಗದಂತೆ ನಿಯಮ ರೂಪಿಸಬೇಕು ಂದು ಒತ್ತಾಯಿಸಲಾಗಿದೆ. ಪ್ರಾ. ಶಾ.ಶಿ. ಸಂಘದ ತಾಲೂಕ ಅಧ್ಯಕ್ಷ ಬಿ.ಟಿ. ವಜ್ಜಲ. ಉಪಾಧ್ಯಕ್ಷ ಟಿ.ಎಸ್.ಲಮಾಣಿ. ಪ್ರಧಾನ ಕಾರ್ಯದರ್ಶಿ ಎಸ್.ಬಿ.ಬೀರಗೊಂಡ. ಪದಾಧಿಕಾರಿಗಳಾದ ಎಮ್.ಎಲ್.ಎಲ್ ಚೌಧ್ರಿ. ಶ್ರೀಮತಿ ಆರ್.ಬಿ.ಆಲೂರ. ಅಂಬಿಕಾ ಗೋಗಿ. ಶ್ರೀಮತಿ ಎ. ಆರ್.ಹಜೇರಿ.ಎ.ಡಿ.ಗೋನಾಳ. ಎಸ್.ಎಸ್. ಇದ್ದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ) ಬೆಂಗಳೂರು ತಾಲೂಕ ಘಟಕ ತಾಳಿಕೋಟಿ ವತಿಯಿಂದ ಸೋಮವಾರ ತಹಸೀಲ್ದಾರ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು.

ಕನಕ ಸಾಹಿತ್ಯದಲ್ಲಿ ಸೃಜನಶೀಲತೆಯಿದೆ

ಪಟ್ಟಣದ ಶ್ರೀ ಕನಕದಾಸರ ಸಾಹಿತ್ಯ ಪ್ರಚಾರ ಸಮಿತಿ ಬೆಂಗಳೂರು ಮತ್ತು ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಕೃತಿ ಬಿಡುಗಡೆ ಸಮಾರಂಭ ನಡೆಯಿತು.

ಸಿಂದಗಿ: ಕನಕದಾಸರ ಸಾಹಿತ್ಯ ಶ್ರೇಷ್ಠವಾದುದ್ದು ಮತ್ತು ಅದರಲ್ಲಿ ಸೃಜನಶೀಲತೆಯಿದೆ. ಆದರೆ ಇಂದಿನ ಸಮಾಜದಲ್ಲಿ ಅದರ ಬಗ್ಗೆ ಅಧ್ಯಯನವಾಗಲಿ, ಚರ್ಚೆಯಾಗಲಿ, ಚಿಂತನೆಯಾಗಲಿ ಮಾಡುತ್ತಿಲ್ಲ ಇದರಿಂದ ಆ ಸಾಹಿತ್ಯ ಸೊರಗುತಿದೆ ಎಂದು ಉಕ್ಕುಂಡಿ ಸರಕಾರಿ ಪಪೂ ಕಾಲೇಜಿನ ಪ್ರಾಚಾರ್ಯ ಡಾ. ವೈ. ಎಂ.ಯಾಕೊಳ್ಳಿ ವಿಷಾದವ್ಯಕ್ತಪಡಿಸಿದರು.

ಪಟ್ಟಣದ ಬಂದಾಳ ರಸ್ತೆಯಲ್ಲಿನ ವಿವೇಕ ಇಂಟರ್ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಭಾನುವಾರ ಶ್ರೀ ಕನಕದಾಸರ ಸಾಹಿತ್ಯ ಪ್ರಚಾರ ಸಮಿತಿ ಬೆಂಗಳೂರು ಮತ್ತು ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಂಡ ಶ್ರೀಕನಕ ಸಾಹಿತ್ಯ ಸಂವತ್ಸರ ರಜತ ಉಪನ್ಯಾಸ ಹಾಗೂ ರಕ್ಷಿಸು ನಮ್ಮನ್ನು ಅನವರತ ಕೃತಿ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಮಾಜದಲ್ಲಿ ನಾನು ಎಂಬ ಅಹಂ ತೊಲಗಿ ಆ ಜಾಗದಲ್ಲಿ ನಾವು ಎಂಬ ಭಾವನೆ ಬೆಳೆದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯ. ಆ ಆದರ್ಶ ಅನುಷ್ಠಾನವಾಗಬೇಕಾದರೆ ಕನಕದಾಸರ ಸಾಹಿತ್ಯ ಅತ್ಯಂತ ಪ್ರಸ್ತುತ ಎಂದರು. ತಾಳಿಕೋಟೆಯ ಮುಖ್ಯಶಿಕ್ಷಕ ದೇವರಾಜ ಬಾಗೇವಾಡಿ 'ರಕ್ಷಿಸು ನಮ್ಮನ್ನು ಅನವರತ' ಕೃತಿ ಬಿಡುಗಡೆಗೊಳಿಸಿದರು. ಸಿಂದಗಿ ಎಚ್.ಜಿ.ಪಪೂ ಕಾಲೇಜಿನ ಪ್ರಾಚಾರ್ಯ ಎ.ಆರ್. ಹೆಗ್ಗನದೊಡ್ಡಿ , ಶಿವರಾಯ ನಾಗೂರ, ಆರ್, ಸಂಸ್ಥೆಯ ಅಧ್ಯಕ್ಷೆ ನೀಲಮ್ಮ ಹೆಗ್ಗನದೊಡ್ಡಿ ಇದ್ದರು.

ಒಕ್ಕಲಿಗ ನಿಗಮದಿಂದ ಅರ್ಜಿಗಳ ಆಹ್ವಾನ

ವಿಜಯಪುರ: ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳಡಿ ಸಾಲ–ಸೌಲಭ್ಯ ಪಡೆಯಲು ಆಸಕ್ತ ಅರ್ಹರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ. ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಸ್ವಯಂ ಉದ್ಯೋಗ, ನೇರ ಸಾಲ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಅರಿವು ಶೈಕ್ಷಣಿಕ ನೇರ ಸಾಲ ಯೋಜನೆ (ಹೊಸದು), ವಿದೇಶ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ನೇರಸಾಲ (ಬ್ಯಾಂಕುಗಳ ಸಹಯೋಗದೊಂದಿಗೆ), ಸ್ವಾತಂತ್ರ್ಯ ಮಹೋತ್ಸವದ ಅಮೃತ ಮುನ್ನಡೆ ಯೋಜನೆಯಡಿ ಸಾಲ–ಸೌಲಭ್ಯ ಪಡೆಯಲಿಚ್ಛಿಸುವವರು ಸೇವಾ ಸಿಂಧು ಪೋರ್ಟಲ್ https://www.sevasindhu. karnataka.gov.in ಮೂಲಕ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಆ. 31 ಕೊನೆಯ ದಿನಾಂಕ. ಸ್ವಾತಂತ್ರ್ಯ ಮಹೋತವದ ಅಮೃತ ಯೋಜನೆಯಡಿ https://www. kaushalkar.gov.in ಮೂಲಕ ಅರ್ಜಿ ಸಲ್ಲಿಸಬೇಕು. ಈ ಕುರಿತಂತೆ ಹೆಚ್ಚಿನ ಮಾಹಿತಿಗೆ ನಿಗಮದ ವೆಬ್‌ಸೈಟ್ https:// www.kvcdc.karnataka.gov.in ಅಥವಾ ದೂರವಾಣಿ ಸಂಖ್ಯೆ 080–29904350 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ಗಂಡನ ಹೆಸರು ಅಡ್ಡಿ

ಸರಕಾರದ ಮಟ್ಟದಲ್ಲಿ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಗಂಭೀರ ಚರ್ಚೆಯಾಗಲಿ

ಸಂಗಮೇಶ ಹೂಗಾರ ಚಡಚಣ

ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಗಂಡನ ಹೆಸರು ಅಡ್ಡಿಯಾಗಿದೆ, ಎಂಬ ಮಾತುಗಳು ಆಗಾಗ ಕೇಳಿ ಬರುತ್ತಲೇ ಇವೆ, ಆದರೆ ಇದುವರೇಗೂ ಉನ್ನತ ಶಿಕ್ಷಣ ಇಲಾಖೆಯ ತಂತ್ರಾಂಶದಲ್ಲಿ ಇದಕ್ಕೆ ಪರಿಹಾರವೆ ಸಿಕ್ಕಿಲ್ಲ ಎಂದು ಹೇಳಬಹುದು. ಸಾಕಷ್ಟು ಜನ ಗ್ರಾಮೀಣ ಪ್ರದೇಶದ ಮಹಿಳೆಯರು ಎಸ್‌ಎಸ್‌ಎಲ್‌ಸಿ, ಪಿ.ಯು.ಸಿ ವರೆಗೆ ಮಾತ್ರ ಶಿಕ್ಷಣ ಮುಗಿಸುತ್ತಾರೆ, ಇನ್ನೇನು 18 ವರ್ಷ ಮುಗಿತ್ತಲ್ಲಾ ಅಂತ ಅನ್ನುವಾಗಲೇ ಅವರಿಗೆ ಪೋಷಕರು ಮದುವೆ ಮಾಡಿಕೊಡುತ್ತಾರೆ, ಉನ್ನತ ಶಿಕ್ಷಣ ಪಡೆದು ತನ್ನ ಸ್ವಂತ ಕಾಲಮೇಲೆ ನಿಂತು ಏನಾದರೂ ಸಾಧನೆ ಮಾಡಬೇಕೆನ್ನುವ ಆಸೆ ಇದ್ದರು ಕೂಡಾ, ಅನಿವಾರ್ಯವಾಗಿ ಗಂಡನ ಮನೆಗೆ ಹೋಗಿ ಅಲ್ಲಿ ಜೀವನ ನಡೆಸಬೇಕಾಗುತ್ತದೆ. ಗಂಡನ ಮನೆಯಲ್ಲಿ ಎಲ್ಲವೂ ಚನ್ನಾಗಿದ್ದು ತಮ್ಮ ಸೊಸೆ ಅಥವಾ ತನ್ನ ಹೆಂಡತಿ ಇನ್ನಷ್ಟು ಉನ್ನತ ಶಿಕ್ಷಣ ಪಡೆಯಲಿ ಎಂದು ಯಾವುದಾರೂ ಶಿಕ್ಷಣ ಸಂಸ್ಥೆಯಲ್ಲಿ ಪದವಿ ಶಿಕ್ಷಣಕ್ಕೆ ಹೆಸರು ನೋಂದಾಯಿಸಲು ಹೋದಾಗ ಅಲ್ಲಿ ಅಡ್ಡ ಬರುವುದೇ ಈ ಗಂಡನ ಹೆಸರು, ಏಕೆಂದರೆ ಒಂದನೇ ತರಗತಿಯಿಂದ 12ನೇ ತರಗತಿ ವರೆಗೆ ಆ ಮಹಿಳೆ ಅಥವಾ ಹೆಣ್ಣು ಮಗಳು ತನ್ನ ತಂದೆ ತಾಯಿ ಮನೆಯಲ್ಲಿ ಇರುತ್ತಾಳೆ, ಆಕೆ ಶಿಕ್ಷಣವನ್ನು ಪಡೆಯುವ ಪ್ರತಿ ಹಂತದಲ್ಲಿಯೂ ಶಾಲಾ ದಾಖಾಲಾತಿಗಳಲ್ಲಿ ತಂದೆಯ ಹೆಸರು ಅವರ ಅಡ್ಡ ಹೆಸರು ಬಂದಿರುತ್ತದೆ, ಅಲ್ಲಿ ಯಾವುದೇ ಸಮಸ್ಯೆಗಳು ಬಂದಿರುವುದಿಲ್ಲ, ನಿಜವಾದ ಸಮಸ್ಯೆ ಬರುವುದೇ ಮದುವೆ ಆದ ನಂತರ ನೋಡಿ.

ಕಾರಣ ಮದುವೆಯಾದ ಹೆಣ್ಣು ಮಕ್ಕಳು ತವರು ಮನೆಯಿಂದ ಗಂಡನ ಮನೆಗೆ ಹೋದ ಮೇಲೆ ಅವರಲ್ಲಿರುವಂತ ಆಧಾರ ಕಾರ್ಡ್, ಪ್ಯಾನ್ ಕಾರ್ಡ್, ಬ್ಯಾಂಕ ಪಾಸ್ ಬುಕ್, ವೋಟರ್ ಐಡಿ ಸೇರಿದಂತೆ ಅನೇಕ ದಾಖಲೆಗಳಲ್ಲಿ ತಂದೆಯ ಹೆಸರು ಇರುತ್ತದೆ. ವಿವಿಧ ದಾಖಲೆಗಳಲ್ಲಿ ಇದ್ದಂತ ತಂದೆ ಹೆಸರನ್ನು ತಗೆದು ಗಂಡನ ಹೆಸರನ್ನು ಸೇರಿಸುತ್ತಾರೆ, ಅದು ಅವರ ಮಕ್ಕಳ ಹಾಗೂ ಕುಟುಂಬಕ್ಕೆ ಅನುಕೂಲವಾಗಲೆಂಬ ಉದ್ದೇಶದಿಂದ, ಮತ್ತೆ ಆ ಮಹಿಳೆ ಉನ್ನತ ಶಿಕ್ಷಣ ಪಡೆಯಬೇಕೆಂದು ಯಾವೂದಾದರೂ ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಶಿಕ್ಷಣ ಪಡೆಯಲು ಹೆಸರು ನೋಂದಾಯಿಸಲು ಹೋದರೆ ಅಲ್ಲಿ ಹೇಳುವ ಮಾತೆ ಶಾಲಾ ದಾಖಲೆಗಳಲ್ಲಿ ಇರುವಂತೆ ಇತರೆ (ಆಧಾರ ಕಾರ್ಡ್, ಪ್ಯಾನ್ ಕಾರ್ಡ್, ಬ್ಯಾಂಕ ಪಾಸ ಬುಕ್, ವೋಟರ್)ಗಳಲ್ಲಿ ಹೆಸರು ಒಂದೆ ತರನಾಗಿರಬೇಕು, ಆಕಸ್ಮಿಕವಾಗಿ ಗಂಡನ ಹೆಸರನ್ನು ಸೇರಿಸಿದ್ದರೆ ಅದನ್ನು ತಿದ್ದುಪಡಿ ಮಾಡಿಸಿ, ಪುನ: ತಂದೆಯ ಹೆಸರು ಸೇರಿಸಿ, ಇಲ್ಲವಾದರೆ ನಿಮಗೆ ಶಿಷ್ಯವೇತನ ಬರುವುದಿಲ್ಲ, ಹೆಸರಿನಲ್ಲಿ ಬದಲಾವಣೆ ಆದರೆ ಡಿಜಿಲಾಕರ್ ಒಪನ್ ಆಗುವುದಿಲ್ಲ, ಅಂಕಪಟ್ಟಿ ಬರುವುದಿಲ್ಲ, ವಿಶ್ವವಿದ್ಯಾನಿಲಯಗಳಿಗೆ ಅಲೇದಾಡಬೇಕಾಗುತ್ತದೆ ಅಂತೇಲ್ಲಾ ಹೇಳುತ್ತಾರೆ, ಇತ್ತ ಉನ್ನತ ಶಿಕ್ಷಣಕ್ಕಾಗಿ ಗಂಡನ ಹೆಸರನ್ನು ತಗೆದು ತಂದೆಯ ಹೆಸರನ್ನು ಸೇರಿಸಿದರೆ ಅತ್ತ ಅವರ ಮಕ್ಕಳ ಶಿಕ್ಷಣಕ್ಕೆ ಹಾಗೂ ಕುಟುಂಬದ ವಿವಿಧ ಸರಕಾರಿ ಸೌಲಭ್ಯಗಳಿಗೆ ತೊಂದರೆಯಾಗುತ್ತದೆ, ಅಲ್ಲದೆ ಮುಂದೆ ಸರಕಾರಿ ನೌಕರಿಗೆ ಆಯ್ಕೆಯಾಗಿ ದಾಖಲೆಗಳ ಪರಿಶೀಲನೆಯಲ್ಲಿ ಕೂಡಾ ತೊಂದರೆಯಾಗಿತ್ತದೆ, ಆದ ಕಾರಣ ಸರಕಾರವಾಗಲಿ, ಉನ್ನತ ಶಿಕ್ಷಣ ಇಲಾಖೆಯಾಗಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಶಿಕ್ಷಣ ಇಲಾಖೆಯ ಸಂತ್ರಾಂಶದಲ್ಲಿ ತಿದ್ದಪಡಿ ತಂದು, ಮೂಲ ದಾಖಲೆಗಳಲ್ಲಿ ತಂದೆಯ ಹೆಸರು ಇದ್ದರೂ, ಇತರೆ ದಾಖಲೆಗಳಲ್ಲಿ ಗಂಡನ ಹೆಸರು ಇದ್ದರೂ ಅವರ ಉನ್ನತ ಶಿಕ್ಷಣಕ್ಕೆ ಯಾವುದೇ ರಿತಿಯಲ್ಲಿ ತೋಂದರೆ ಆಗದಂತೆ ಮಾಡಬೇಕುನ್ನುವುದೇ ಉನ್ನತ ಶಿಕ್ಷಣದ ತೋಂದರೆ ಅನುಭವಿಸುತ್ತಿರುವ ಮಹಿಳೆಯರ ಆಗ್ರಹವಾಗಿದೆ.

ಸಿಎಂ ವಿರುದ್ಧ ದ್ವೇಷದ ರಾಜಕಾರಣ

ಕಾಂಗ್ರೆಸ್ ಮುಖಂಡರ ವಾಗ್ದಾಳಿ | ಮೈತ್ರಿ ಪಕ್ಷಗಳ ಪಾದಯಾತ್ರೆಗೆ ಖಂಡನೆ

ಬಾಗಲಕೋಟೆ: ಸಿಎಂ ಸಿದ್ದರಾಮಯ್ಯ ಅವರ ವ್ಯಕ್ತಿತ್ವಕ್ಕೆ ಕಳಂಕ ತರುವ ಉದ್ದೇಶದಿಂದ ಕೇಂದ್ರ ಸರಕಾರ ದ್ವೇಷದ ರಾಜಕಾರಣ ಮಾಡುತ್ತಿರುವುದನ್ನು ಖಂಡಿಸಿ ಕಾಂಗ್ರೆಸ್ ವತಿಯಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ಜರುಗಿತು.

ಇಲ್ಲಿನ ಅಂಬೇಡ್ಕರ್ ವೃತ್ತದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ, ಕೃಷ್ಣಾ ಟಾಕೀಜ್, ವಲ್ಲಭ ಭಾಯ್ ಚೌಕ್, ಎಂ.ಜಿ ರಸ್ತೆ ಮೂಲಕ ಬಸವೇಶ್ವರ ವೃತ್ತ ತಲುಪಿತು. ಬಿಜೆಪಿ ಹಾಗೂ ಜೆಡಿಎಸ್ ಮುಖಂಡರುಗಳ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಕಾರ್ಯಕರ್ತರು ಆಕ್ರೋಶ ಹೊರಹಾಕಿದರು.

ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿ, 40 ವರ್ಷದ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದ ಸಿಎಂ ಸಿದ್ದರಾಮಯ್ಯ ಅವರನ್ನು ತೇಜೋವಧೆ ಮಾಡುವ ಉದ್ದೇಶದಿಂದಲೇ ಬಿಜೆಪಿ ಹಾಗೂ ಜೆಡಿಎಸ್‌ನ ಭ್ರಷ್ಟರು ಪಾದಯಾತ್ರೆ ಮಾಡುತ್ತಿದ್ದಾರೆ. ಬಿಜೆಪಿ ಅಧಿಕಾರದಲ್ಲಿದ್ದಾಗ ಅನೇಕ ಹಗರಣಗಳು ಕೇಳಿ ಬಂದರೂ ಅವುಗಳ ವಿರುದ್ಧ ಕ್ರಮ ತೆಗೆದುಕೊಳ್ಳದ ನಾಯಕರುಗಳು ಇಂದು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಮ್ಮ ಕಾಂಗ್ರೆಸ್ ಸರಕಾರ ಯಶಸ್ವಿಯಾಗಿ ಜಾರಿಗೆ ತಂದಿರುವ ಪಂಚ ಗ್ಯಾರಂಟಿಗಳನ್ನು ಸಹಿಸಿಕೊಳ್ಳಲಾಗದವರು ಸುಖಾ ಸುಮ್ಮನೆ ಸಿದ್ದರಾಮಯ್ಯ ಕುಟುಂಬದವರ ಮೇಲೆ ಆರೋಪ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ತಾಯಿಯಿದ್ದಂತೆ. ಇಲ್ಲಿಯವರೆಗೆ ಒಂದು ದಿನ ಯಾವ ವೇದಿಕೆಯಲ್ಲೂ ಕಾಣಿಸಿಕೊಂಡಿಲ್ಲ. ಅನೇಕರು ಅವರನ್ನು ನೋಡಿಲ್ಲ. ಅಂತಹ ತಾಯಿ ಖರೀದಿಸಿದ ಜಮೀನನ್ನು ಮುಡಾ ಅಕ್ರಮವಾಗಿ ಒತ್ತುವರಿ ಮಾಡಿರುವುದಕ್ಕೆ ನಿವೇಶನಗಳನ್ನು ನೀಡಿದೆ. ಆದರೆ, ಇದರ ವಿರುದ್ಧ ಪಾದಯಾತ್ರೆ ನಡೆಸುತ್ತಿರುವುದು ಎಷ್ಟು ಸರಿ? ಪಾರ್ವತಿ ಅವರಿಗೆ ನಿವೇಶನ ಮಂಜೂರು ಆಗಿರುವುದು ಬಿಜೆಪಿ ಮುಡಾದ ಅಧಿಕಾರ ವಹಿಸಿಕೊಂಡಾಗ. ಆಗ ನಿವೇಶನ ನೀಡಿದವರು ಈಗ ಏಕೆ ವಿರೋಧಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, ಬಿಜೆಪಿ ಹಾಗೂ ಜೆಡಿಎಸ್‌ನವರು ತಿಪ್ಪರಲಾಗ ಹೊಡೆದರೂ ಸಿದ್ದರಾಮಯ್ಯ ಅವರನ್ನು ಅಲುಗಾಡಿಸಲು ಸಾಧ್ಯವಿಲ್ಲ. ಪೂರ್ತಿ ದೇಶದಲ್ಲಿ ಆರೋಪ ರಹಿತ ಮುಖ್ಯಮಂತ್ರಿ ಇದ್ದರೆ ಅದು ಸಿದ್ದರಾಮಯ್ಯ ಮಾತ್ರ. ಸಿದ್ದರಾಮಯ್ಯ ಅವರ ಜೀವನ ಕನ್ನಡಿ ಇದ್ದಂತೆ. ನುಡಿದಂತೆ ನಡೆದಿರುವ ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ ನಡೆಸುವುದು ಮುಂದುವರೆದರೆ ನಾವು ದೆಹಲಿವರೆಗೂ ಪಾದಯಾತ್ರೆ ಮಾಡಲು ಸಿದ್ಧರಿದ್ದೇವೆ ಎಂದರು.

ಅಬ್ ಕೀ ಬಾರ್ ಚಾರ್ ಸೋ ಪಾರ್ ಎಂದವರಿಗೆ ದೇಶದ ಜನ ಎಷ್ಟು ಸ್ಥಾನ ಗೆಲ್ಲಿಸಿದ್ದಾರೆ? ಮುಂದಿನ ದಿನಗಳಲ್ಲಿ ಚಾರ್ ಸೋ ಪಾರ್ ಎಂದವರು ಗಡಿ ಪಾರ್ ಆಗಲಿದ್ದಾರೆ. ಗುಜರಾತಿನಿಂದ ಗಡಿ ಪಾರ್ ಆಗಿದ್ದ ಶಾ ಗೃಹ ಸಚಿವ, ಸಾವಿರಾರೂ ಅಲ್ಪಸಂಖ್ಯಾತರ ಸಾವಿಗೆ ಕಾರಣರಾದ ಮೋದಿ ನಮ್ಮ ಪ್ರಧಾನಿ. ಕೇಂದ್ರ ಸರಕಾರ ಸಿಬಿಐ, ಇಡಿ ದುರ್ಬಳಕೆ ಮಾಡಿಕೊಂಡರು ಸಿದ್ದರಾಮಯ್ಯ ಅವರನ್ನು ಅಲುಗಾಡಿಸಲು ಸಾಧ್ಯವಿಲ್ಲ ಎಂದರು.

ಶಾಸಕ ಬಿ.ಬಿ.ಚಿಮ್ಮನಕಟ್ಟಿ ಮಾತನಾಡಿ, ಸಂವಿಧಾನದಲ್ಲಿ ಉಲ್ಲೇಖಿಸಲಾದ ರಾಜ್ಯಪಾಲರ ಕರ್ತವ್ಯ ಬಿಟ್ಟು ನಮ್ಮ ರಾಜ್ಯಪಾಲರು ವರ್ತಿಸುತ್ತಿದ್ದಾರೆ. ರಾತ್ರಿ 11ಕ್ಕೆ ಮುಖ್ಯಮಂತ್ರಿಗಳಿಗೆ ಶೋಕಾಸ್ ನೀಡಲಾಗಿದೆ. ಇದರ ಅರ್ಥ ಬಿಜೆಪಿ ದ್ವೇಷದ ರಾಜಕೀಯಕ್ಕೆ ಮುಂದಾಗಿದ್ದು, ಇದು ದೇಶವೇ ಎಚ್ಚರಗೊಳ್ಳುವ ಸಂದರ್ಭ ಎಂದರು.

ಮಾಜಿ ಶಾಸಕ ಆನಂದ ನ್ಯಾಮಗೌಡ ಮಾತನಾಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಮುಖಂಡರಾದ ನಾಗರಾಜ ಹದ್ಲಿ, ಬಾಯಕ್ಕ ಮೇಟಿ, ರವೀಂದ್ರ ಕಲಬುರ್ಗಿ, ಸಿದ್ದು ಕೊಣ್ಣೂರ, ಶ್ರೀನಿವಾಸ ಬಳ್ಳಾರಿ, ಮುತ್ತು ಜೋಳದ, ಚಂದ್ರಶೇಖರ ರಾಠೋಡ, ಗೋವಿಂದ ಬಳ್ಳಾರಿ, ರಾಜು ಮನ್ನಿಕೇರಿ ಸೇರಿದಂತೆ ಅನೇಕರಿದ್ದರು.

ಸಿಎಂ ಸಿದ್ದರಾಮಯ್ಯ ಅವರ ತೇಜೋವಧೆಗೆ ಪ್ರಯತ್ನಿಸುತ್ತಿರುವುದನ್ನು ವಿರೋಧಿಸಿ ಬಾಗಲಕೋಟೆಯಲ್ಲಿ ಕಾಂಗ್ರೆಸ್ ವತಿಯಿಂದ ಬೃಹತ್ ಪ್ರತಿಭಟನಾ ರ್ಯಾಲಿ ಜರುಗಿತು.

ಹಿಂಬಾಗಿಲಿನಿಂದ ಸರಕಾರ ರಚಿಸುವ ಹುನ್ನಾರದಿಂದ ಬಿಜೆಪಿ ಪಾದಯಾತ್ರೆ ನಡೆಸುತ್ತಿದೆ. ಆದರೆ, ನುಡಿದಂತೆ ನಡೆದಿರುವ ಸಿದ್ದರಾಮಯ್ಯ ಅವರನ್ನು ತೇಜೋವಧೆ ಮಾಡಲು ಮುಂದಾದರೆ ಅವರ ವಿರುದ್ಧ ರಾಜ್ಯದ ಮಹಿಳೆಯರು ಸಿಡಿದೇಳುವುದು ಖಚಿತ.
-ವೀಣಾ ಕಾಶಪ್ಪನವರ
ಜಿಪಂ ಮಾಜಿ ಅಧ್ಯಕ್ಷೆ

ಅಹಿಂದ ನಾಯಕರಾಗಿರುವ ಸಿಎಂ ಸಿದ್ದರಾಮಯ್ಯ ಅವರ ಹೆಸರು ಹಾಳು ಮಾಡುವ ದುರುದ್ದೇಶದಿಂದ ಬಿಜೆಪಿ ಹಾಗೂ ಜೆಡಿಎಸ್ ಪಾದಯಾತ್ರೆ ಮಾಡುತ್ತಿವೆ. ರಾಜ್ಯದ ಜನರು ಎಲ್ಲವನ್ನು ಗಮನಿಸುತ್ತಿದ್ದು, ಇದೇ ವರ್ತನೆ ಮುಂದುವರೆದರೆ ರಾಜ್ಯದಲ್ಲಿ ರಕ್ತಪಾತ ಆಗುತ್ತದೆ.
-ರಕ್ಷಿತಾ ಭರತಕುಮಾರ ಈಟಿ
ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ

ನೂತನ ಸಾರಿಗೆ ಬಸ್ ಸೇವೆಗೆ ಶಾಸಕ ಚಾಲನೆ

ಬಾದಾಮಿಯ ಕೆ.ಎಸ್.ಆರ್.ಟಿ.ಸಿಯಲ್ಲಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ನೂತನ ಬಸ್ ಸೇವೆಗೆ ಪೂಜೆ ಸಲ್ಲಿಸುತ್ತಿರುವುದು.

ಬಾದಾಮಿ: ನಮ್ಮ ಬಾದಾಮಿ ಘಟಕಕ್ಕೆ ನಾಲ್ಕು ಹೊಸದಾಗಿ ಬಸ್‌ಗಳು ಬಂದಿದ್ದು, ಪ್ರಯಾಣಿಕರು, ಶಾಲಾ ಮಕ್ಕಳು, ವೃದ್ಧರು ಸುರಕ್ಷಿತೆಯೊಂದಿಗೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಮನವಿ ಮಾಡಿದರು.

ಅವರು ಸೋಮವಾರ ನಗರದ ಬಸ್ ನಿಲ್ದಾಣದಲ್ಲಿ ನಾಲ್ಕು ಬಸ್‌ಗಳಿಗೆ ಪೂಜೆ ನೆರವೇರಿಸಿ ಚಾಲನೆ ನೀಡಿ ಮಾತನಾಡಿದರು. ಸರಕಾರ ಸಾರಿಗೆ ಇಲಾಖೆಯು ಮಹಿಳೆಯರು, ಶಾಲಾ ಮಕ್ಕಳು ಮತ್ತು ಪ್ರಯಾಣಿಕರ ಹಿತದೃಷ್ಟಿಯಿಂದ ಬಸ್‌ಗಳನ್ನು ನೀಡಿದ್ದು, ಇದಕ್ಕೆ ಸಿಎಂ ಸಿದ್ದರಾಮಯ್ಯ, ಸಾರಿಗೆ ಸಚಿವ ರಾಮಲಿಂಗರಡ್ಡಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಘಟಕ ವ್ಯವಸ್ಥಾಪಕ ಎ.ಎ.ಕೋರಿ, ಪುರಸಭೆ ಸದಸ್ಯ ಶಂಕರ ಕನಕಗಿರಿ, ಮುಖಂಡರಾದ ಈರಣ್ಣ ಕರಿಗೌಡರ, ಮುತ್ತು ಬಾಗಲೆ, ಶ್ರೀಕಾಂತ ಗೌಡರ, ಅಶೋಕ ಕೋಟನಕರ, ಶಶಿಗೌಡರ ಸೇರಿದಂತೆ ಘಟಕದ ಚಾಲಕರು, ನಿರ್ವಾಹಕರು, ಸಿಬ್ಬಂದಿಗಳು ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಹೊಸ ಜವಳಿ ನೀತಿ ಸಿದ್ಧಪಡಿಸಲು ಸಭೆ ಇಂದು

ಬಾಗಲಕೋಟೆ: ಹೊಸ ಜವಳಿ ನೀತಿ ಸಿದ್ಧಪಡಿಸಲು ಉದ್ದಿಮೆದಾರರ ಹಾಗೂ ಅಧಿಕಾರಿಗಳ ಅಭಿಪ್ರಾಯ, ಸಲಹೆಗಳನ್ನು ನೀಡಲು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕ ಎಚ್.ಬಿ.ಪಾಟೀಲ ಅಧ್ಯಕ್ಷತೆಯಲ್ಲಿ ಆ.6 ರಂದು ಬೆಳಿಗ್ಗೆ 10.30ಕ್ಕೆ ಜಮಖಂಡಿ ಅರ್ಬನ್ ಬ್ಯಾಂಕ್ ಲಿ, ಶಾಖೆ, ಬನಹಟ್ಟಿಯಲ್ಲಿ ಸಭೆ ಕರೆಯಲಾಗಿದೆ. ಜವಳಿ ಮೌಲ್ಯ ಸರಣಿಯ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರಿಕೆ, ಟೆಕ್ನಿಕಲ್ ಟೆಕ್ಸ್‌ಟೈಲ್, ಪ್ರೋಸೆಸ್ಸಿಂಗ್, ಸಿದ್ಧ ಉಡುಪು ತಯಾರಿಕೆ, ರೇಷ್ಮೆ ವಿಭಾಗ, ಉಣ್ಣೆ ವಿಭಾಗ ಇತರೆ ಜವಳಿ ಕ್ಷೇತ್ರದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹೊಸ ಜವಳಿ ನೀತಿಯಲ್ಲಿ ಅಳವಡಿಸಿಕೊಳ್ಳಬಹುದಾದ ಸಲಹೆ, ಸೂಚನೆಗಳ ಕುರಿತು ಸಲಹೆ, ಸೂಚನೆಗಳನ್ನು ಉಪನಿರ್ದೇಶಕ ಕಚೇರಿ, ಜವಳಿ ಮತ್ತು ಕೈಮಗ್ಗ ಇಲಾಖೆ, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ ಇವರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ಸಮಾಜಮುಖಿ ಕಾರ್ಯದಿಂದ ವಕೀಲರು ವಿಮುಖ

ಹುನಗುಂದ: ಪಟ್ಟಣದ ನ್ಯಾಯಾಲಯದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಹಾಗೂ ಹುನಗುಂದ- ಇಳಕಲ್ ವಕೀಲರ ಸಂಘದ ಸಹಯೋಗದಲ್ಲಿ ಶನಿವಾರ ನಡೆದ ಕಾನೂನು ಕಾರ್ಯಾಗಾರವನ್ನು ಉದ್ಘಾಟಿಸಿ ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ವಕೀಲರು ಸಮಾಜಮುಖಿ ಕಾರ್ಯಗಳಿಂದ ವಿಮುಖರಾಗುತ್ತಿದ್ದಾರೆ ಎಂದು ಅನಿಸುತ್ತಿದೆ. ಆದರೆ ಎಲ್ಲದ್ದಕ್ಕೂ ದುಡ್ಡು ಮುಖ್ಯ ಅಲ್ಲ. ಸಮಾಜ ಪರಿವರ್ತನೆಯಲ್ಲಿ ನಮ್ಮ ಪಾಲ್ಗೊಳ್ಳುವಿಕೆ ಇರಬೇಕು. ನೊಂದವರ ಧ್ವನಿಯಾದಾಗ ಮಾತ್ರ ನಮ್ಮ ಕರಿ ಕೋಟ್ ಗೆ ಹಿರಿಮೆ, ಗೌರವ ಬರುತ್ತದೆ ಎಂದು ಹೇಳಿದರು. ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಸದಸ್ಯ ಬಸವರಾಜ, ಜಿಲ್ಲಾ ನ್ಯಾಯಾಲಯದ ಪ್ರಧಾನ ದಿವಾಣಿ ನ್ಯಾಯಾದೀಶ ಎನ್.ವಿ. ವಿಜಯ್ ಹುನಗುಂದ ಮತ್ತು ಇಳಕಲ್ ವಕೀಲರ ಸಂಘದ ಅಧ್ಯಕ್ಷರಾದ ಪಿ.ಎಸ್. ಕಠಾಣಿ, ಬಿ.ಎ.ಆವಟಿ ಇತರರಿದ್ದರು.

ಎಟಿಎಂ ಮಷಿನ್ ಮುರಿದು ಕಳ್ಳತನ: ಆರೋಪಿ ಬಂಧನ

ಹುನಗುಂದ: ಆಂಧ್ರಪ್ರದೇಶದ ಅನಂತಪುರ ನಗರದಲ್ಲಿ ಎಟಿಎಂ ಮಸಿನ್ ಮುರಿದು ಕಳ್ಳತನ ಮಾಡಿ ಹಣ ದೋಚಿದ ಕದೀಮರು ನಗರದ ಧನ್ನೂರ ರಸ್ತೆಯಲ್ಲಿ ಸೆರೆಯಾಗಿದ್ದಾರೆಂದು ಸಿಪಿಐ ಸುನೀಲ್ ಸವದಿ ತಿಳಿಸಿದರು. ರವಿವಾರ ನಗರದ ಪೊಲೀಸ್ ಇಲಾಖೆಗೆ ತನಿಖಾ ದಳ ನೀಡಿದ ಎಟಿಎಂ ಕಳ್ಳತನದ ಮತ್ತು ಕಳ್ಳ ಕದೀಮರು ನಮ್ಮ ತಾಲೂಕಿಗೆ ಪ್ರವೇಶಿಸುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ತಾಲೂಕಿನ ಎಲ್ಲ ಚಕ್ ಪೋಷ್ಟಗಳಲ್ಲಿ ಮತ್ತು ಹೈವೆ ಮೊಬೈಲ್ ಮೂಲಕವು ಸಹಿತ ಕಟ್ಟೆಚ್ಚರ ವಹಿಸಲಾಗಿತ್ತು. ಕಳ್ಳ ಕದೀಮರು ಪೊಲಿಸರನ್ನು ತಪ್ಪಿಸಿ ಮುಂದೆ ಸಾಗಲು ಹಲವಾರು ಮರ್ಗಗಳ ಮೂಲಕ ಹೋಗಲು ಪ್ರಯತ್ನಿಸಿದರು. ಆದರೆ ಹುನಗುಂದ ಪೊಲಿಸರು ಸಿನಿಮಿ ದೃಶ್ಯದಲ್ಲಿ ಕಳ್ಳರನ್ನು ಬಂಧಿಸುವಲ್ಲಿ ಯಸಶ್ವಿಯಾಗಿದ್ದಾರೆ. ಪಿಎಸ್‌ಐ ಗಳಾದ ಚನ್ನಯ್ಯ ದೇವೂ, ಎಸ್.ಆರ್. ನಾಯಕ, ಎಸ್.ಎ. ಸತ್ತಿಗೌಡರ, ಸಿದ್ದು ಕೌಲಗಿ, ಬಸೀರ್ ಕಲಬುರ್ಗಿ ಇತರ ಪೊಲಿಸ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಬಾಗಲಕೋಟೆ ವಿವಿ ಪರೀಕ್ಷೆ ಮುಂದೂಡಿ

ರಬಕವಿ-ಬನಹಟ್ಟಿ: ಇದೇ 12 ರಿಂದ ಬಾಗಲಕೋಟೆ ವಿಶ್ವವಿದ್ಯಾಲಯದ ದ್ವಿತೀಯ ಸೆಮಿಸ್ಟರ್ ಪರೀಕ್ಷೆಗಳು ನಡೆಯಲಿದ್ದು, ಈ ಪ್ರರೀಕ್ಷೆಗಳನ್ನು ಒಂದು ವಾರಗಳ ಕಾಲ ಮುಂದೂಡಬೇಕು ಎಂದು ಆಗ್ರಹಿಸಿ ಇಲ್ಲಿನ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜು ಉಪನ್ಯಾಸಕರು ಪ್ರಾಚಾರ್ಯ ಜಿ.ಆರ್.ಜುನ್ನಾಯ್ಕರ್ ಅವರಿಗೆ ಮನವಿ ಸಲ್ಲಿಸಿದರು. ಇದೇ 17 ರವರೆಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 4 ಮತ್ತು 6 ಸೆಮಿಸ್ಟರ್ ತರಗತಿಗಳನ್ನು ನಡೆಸಬೇಕಾಗಿದೆ. ಇನ್ನೂ ಪಠ್ಯ ಕ್ರಮ ಕೂಡಾ ಇದೆ. ಬಾಗಲಕೋಟೆ ವಿಶ್ವವಿದ್ಯಾಲಯದ ಪರೀಕ್ಷೆಗಳು ನಡೆದರೆ, ಪರೀಕ್ಷಾ ಕಾರ್ಯ, ನಂತರ ತರಗತಿಗಳನ್ನು ನಡೆಸುವುದು ಹಾಗೂ ಬಾಗಲಕೋಟೆ ವಿಶ್ವವಿದ್ಯಾಲಯದ ಪ್ರಥಮ ಸೆಮಿಸ್ಟರ್ ವರ್ಗಗಳು ನಡೆಯಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಆಂತರಿಕ ಪರೀಕ್ಷೆಗಳನ್ನು ನಡೆಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳ ಅಳವಡಿಸುವ ಕಾರ್ಯವಾಗಬೇಕಾಗಿದೆ. ಇನ್ನೂ ಎಲ್ಲಕ್ಕಿಂತ ಮುಖ್ಯವಾಗಿ ಈ ಎಲ್ಲವುಗಳನ್ನು ನಡೆಸಲು ವರ್ಗ ಕೋಣೆಗಳ ಕೊರತೆ, ಉಪನ್ಯಾಸಕರ ಕೊರತೆ ಉಂಟಾಗುತ್ತದೆ ಎಂದು ಮನವಿಯಲ್ಲಿ ತಿಳಿಸಿದರು.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

ಮಲಪ್ರಭಾ ಪ್ರವಾಹ: ಸುರಕ್ಷಿತ ಸ್ಥಳಗಳಿಗೆ ಸಂತ್ರಸ್ತರ ಸ್ಥಳಾಂತರ

ಮಲಪ್ರಭಾ ನದಿಯ ದಡದಲ್ಲಿರುವ ನಿಂಬಲಗುಂದಿ ಗ್ರಾಮದ ಜನರನ್ನು ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಾಂತರಿಸಿದರು.

ಕೆರೂರ: ಮಲಪ್ರಭಾ ನವಿಲುತೀರ್ಥ ಜಲಾಶಯದ ಮೇಲ್ಭಾಗದಲ್ಲಿ ಮಳೆಯ ಆರ್ಭಟ ಜೋರಾಗಿದ್ದು ಮಲಪ್ರಭಾ ನದಿಯ ದಡದಲ್ಲಿನ ತಳಕವಾಡ, ಆಲೂರ ಎಸ್‌ಕೆ, ಕಳಸ, ಕಿತ್ತಲಿ ಗ್ರಾಮಗಳಿಗೆ ನೀರು ನುಗ್ಗಿದ್ದು ಗೋವನಕೊಪ್ಪ, ಬೀರನೂರ, ಹಾಗನೂರ, ಕರ್ಲಕೊಪ್ಪ ಸೇರಿದಂತೆ ಸುಮಾರು ಗ್ರಾಮಗಳಿಗೆ ಪ್ರವಾಹದ ನೀರು ಬರುವ ಸಾಧ್ಯತೆ ಇದೆ.

ಪ್ರವಾಹದ ನೀರು ಹೆಚ್ಚುತ್ತಿರುವ ಕಾರಣ ಬಾದಾಮಿ ತಹಸೀಲ್ದಾರ ಜೆ ಬಿ ಮಜ್ಜಗಿ ಅವರ ಸೂಚನೆ ಮೇರೆಗೆ ಕಳಸ ಗ್ರಾಮದ ಹತ್ತಿರ ಮಲಪ್ರಭಾ ದಡದಲ್ಲಿರುವ ನಿಂಬಲಗುಂದಿ ಗ್ರಾಮದ ಹರಣಶಿಕಾರಿ ಜನಾಂಗದ 10 ಕುಟುಂಬಗಳ 50ಕ್ಕೂ ಹೆಚ್ಚು ಜನರನ್ನು ಮನವಲಿಸುವ ಮೂಲಕ ಕಂದಾಯ ನಿರೀಕ್ಷಕ ವಿ ಎ ವಿಶ್ವಕರ್ಮ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದರು.

ಪ್ರವಾಹದ ನೀರು ಹೆಚ್ಚುತ್ತಿರುವ ಕಾರಣ ಮುಂಜಾಗೃತ ಕ್ರಮವಾಗಿ ಸುಮಾರು ಗ್ರಾಮಗಳಲ್ಲಿನ ಜನ ಜಾನುವಾರುಗಳ ಸಮೇತ ಸುರಕ್ಷಿತ ಸ್ಥಳಕ್ಕೆ ಧಾವಿಸುತ್ತಿದ್ದಾರೆ.

ಮಕ್ಕಳ ರಕ್ಷಣಾ ಕಾಯಿದೆ ಅನುಷ್ಠಾನಕ್ಕೆ ಕ್ರಮ ವಹಿಸಿ

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಸೂಚನೆ

ಬಾಗಲಕೋಟೆ: ಜಿಲ್ಲೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಕಾಯ್ದೆಯನ್ನು ಸಮರ್ಪಕ ಅನುಷ್ಠಾನಗೊಳಿಸಲು ಕ್ರಮ ವಹಿಸುವಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿನ ಜಿಲ್ಲಾಡಳಿತ ಭವನದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ರಕ್ಷಣಾ ಕಾಯ್ದೆ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಜರುಗಿದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ, ಅವರು ಮಕ್ಕಳ ರಕ್ಷಣಾ ನೀತಿ ಜಾರಿಗೆ ಬಂದು 8 ವರ್ಷ ಕಳೆದರು ಕಾಯ್ದೆ ಮಾತ್ರ ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ. ಸರಕಾರ ಮಕ್ಕಳ ರಕ್ಷಣೆಗಾಗಿ ಸಾಕಷ್ಟು ಹಣ ಖರ್ಚು ಮಾಡುತ್ತಿದೆ. ಮಕ್ಕಳ ಮೇಳೆ ಬಿರುವ ಪರಿಣಾಮ ಅರಿಯಬೇಕಿದೆ. ಅಂದಾಗ ಮಾತ್ರಕಾಯ್ದೆ ಅನುಷ್ಠಾನವಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸರಕಾರದ ಪ್ರತಿಯೊಂದು ಕಟ್ಟಡಗಳ ಗೋಡೆಯ ಮೇಲೆ ಮಕ್ಕಳ ಸಹಾಯವಾಣಿ 1098 ಕಡ್ಡಾಯವಾಗಿ ಬರಹವಿರಬೇಕು. ಶಾಲಾ-ಕಾಲೇಜು, ವಸತಿ ನಿಲಯಗಳಲ್ಲಿ ಸಲಹಾ ಪೆಟ್ಟಿಗೆ ಇಡಬೇಕು. ಖಾಸಗಿ ಶಾಲಾ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕಾಲಕಾಲಕ್ಕೆ ಪರಿಶೀಲನೆ ನಡೆಸಿ, ನಿಯಮಾನುಸಾರ ಇರುವ ಬಗ್ಗೆ ವರದಿ ಸಲ್ಲಿಸಬೇಕು

ಅನಧಿಕೃತ ಕೋಚಿಂಕ್ ಸೆಂಟರಗಳು ಇದ್ದಲ್ಲಿ, ಅವರ ಮೇಲೆ ಕಾನೂನು ಕ್ರಮವಹಿಸಬೇಕು. ಎಲ್ಲಿ ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲವೋ ಅಂತಹ ಕಡೆಗಳಲ್ಲಿ ಬಾಲಕಿಯರ ಮೇಲೆ ದೌರ್ಜನ್ಯ ಪ್ರಕರಣಗಳು ಕಂಡುಬರುತ್ತವೆ. ಹಾಗಾಗದಂತೆ ನೋಡಿಕೊಳ್ಳಬೇಕಿದೆ. ಅವರ ಹಕ್ಕುಗಳ ಬಗ್ಗೆ ಅವರಿಗೆ ಅರಿವು ಮೂಡಿಸುವ ಕಾರ್ಯವಾಗಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿಪಂ ಉಪಕಾರ್ಯದರ್ಶಿ ಎನ್.ವೈ.ಬಸರಿಗಿಡದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಪ್ರಭಾಕರ.ಕೆ, ಜಿಲ್ಲಾ ನಿರೂಪಣಾಧಿಕಾರಿ ಅಮರೇಶ.ಎಚ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಾ.ವೀಣಾ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮಕ್ಕಳ ರಕ್ಷಣಾ ನೀತಿ-2016, ಮಕ್ಕಳ ಸಹಾಯವಾಣಿ ಅಳವಡಿಕೆ, ಬಾಲ್ಯವಿವಾಹ ನಿಷೇಧ ಹಾಗೂ ಪೋಕ್ಸೋ ಕಾಯ್ದೆ ಕುರಿತು ಗೋಡೆ ಬರಹ, ಗ್ರಾಮ ಪಂಚಾಯತಿ ಮಟ್ಟದಲ್ಲಿ ನಡೆಯುವ ಮಕ್ಕಳ ಗ್ರಾಮಸಭೆ, ಮಹಿಳೆ ಮತ್ತು ಮಕ್ಕಳ ಕಾವಲು ಸಮಿತಿ ಸಭೆಗಳ ಕುರಿತು ಸಂಬಂಧಪಟ್ಟವರಿಂದ ಮಾಹಿತಿ ಪಡೆದು 15 ದಿನಗಳಲ್ಲಿ ಸರಿಪಡಿಸಿ.
-ಶೇಖರಗೌಡ ರಾಮತ್ನಾಳ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ

ಬಾಗಲಕೋಟೆಯ ಜಿಲ್ಲಾಡಳಿತ ಭವನದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಅಧ್ಯಕ್ಷತೆಯಲ್ಲಿ ಮಕ್ಕಳ ರಕ್ಷಣಾ ಕಾಯ್ದೆ ಕುರಿತು ಜಿಲ್ಲಾ ಮಟ್ಟದ ಸಭೆ ಜರುಗಿತು.

ಮೀಸಲು ತೀರ್ಪಿಗೆ ದಲಿತ ಮುಖಂಡರ ಸ್ವಾಗತ

ಮುಧೋಳ: ಆ.1.ರಂದು ಸುಪ್ರೀಂ ಕೋರ್ಟ್ ಒಳ ಮೀಸಲು ವರ್ಗೀಕರಣಕ್ಕೆ ಸಂಬಂಧಿಸಿದಂತೆ ಸಪ್ತ ನ್ಯಾಯಾಧೀಶರ ಪೀಠದಲ್ಲಿ ಐತಿಹಾಸಿಕ ತೀರ್ಪು ನೀಡಿದ್ದು, ಈ ವರ್ಗೀಕರಣದ ಅಧಿಕಾರ ರಾಜ್ಯಗಳಿಗೆ ಇದೆ ಎಂದು ಆದೇಶ ನೀಡಿದೆ. ಇದನ್ನು ಸಿಎಂ ಸಿದ್ದರಾಮಯ್ಯ ಸಹ ಸ್ವಾಗತಿಸಿ ನ್ಯಾ.ಸದಾಶಿವ ಆಯೋಗದ ಶಿಫಾರಸ್ಸು ಅಧ್ಯಯನ ಮಾಡಿ ಜಾರಿಗೊಳಿಸಿದ್ದು, ಒಳ್ಳೆಯ ಬೆಳವಣಿಗೆಯಾಗಿದೆ ಎಂದು ದಲಿತ ಮುಖಂಡರು ತಿಳಿಸಿದ್ದಾರೆ.

ಅವರು ಕಾನಿಪ ಕಚೇರಿಯಲ್ಲಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ಒಳಮೀಸಲಾತಿ ಕಲ್ಪಿಸುವ ಜವಾಬ್ದಾರಿ ರಾಜ್ಯ ಸರಕಾರದ ಮೇಲಿದ್ದು, ಅಗಷ್ಟ 15 ರೊಳಗೆ ಇದನ್ನು ಕಾರ್ಯರೂಪದಕ್ಕೆ ತಂದರೆ ಅಸ್ಪೃಶ್ಯರಿಗೆ ನಿಜವಾದ ಸ್ವಾತಂತ್ರ್ಯವನ್ನು ನೀಡಿದಂತಾಗುತ್ತದೆ ಎಂದು ಮುಧೋಳ ತಾಲೂಕಾ ಕಾಂಗ್ರೆಸ್ (ಎಸ್.ಸಿ.) ಘಟಕದ ಅಧ್ಯಕ್ಷ ಪ್ರಕಾಶ ತಳಗೇರಿ ಎಂದು ಹೇಳಿದರು.

2004 ರಲ್ಲಿ ಎಸ್.ಎಮ್. ಕೃಷ್ಣಾ ನೇತೃತ್ವದ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಮಾದಿಗರಿಂದ ಒಳಮೀಸಲಾತಿ ವರ್ಗೀಕರಣಕ್ಕಾಗಿ ನಡೆಯುತ್ತಿದ್ದ ಹೋರಾಟ ಏರುಗತಿಯಲ್ಲಿದ್ದಾಗ, ಆ ವರ್ಷ ಹುನಗುಂದ ವಿಧಾನಸಭಾ ಉಪಚುನಾವಣೆಯ ಪ್ರಚಾರಕ್ಕೆ ಆಗಮಿಸಿದ್ದ ಮಾಜಿ ಸಿಂ. ಎಸ್.ಎಮ್. ಕೃಷ್ಣಾರ ಎದುರು ಇದರ ಬಗ್ಗೆ ಆಗುತ್ತಿರುವ ಅನ್ಯಾಯವನ್ನು ಆಗೀನ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಮೂಲಕ ಮನವರಿಕೆ ಮಾಡಿದಾಗ, ಅಲ್ಲಿಯೇ ಹೋರಾಟಗಾರರನ್ನು ಕರೆದು ಸಭೆ ನಡೆಸಿದ ಅವರು ಬೆಂಗಳೂರಿಗೆ ಹೋದ ತಕ್ಷಣವೇ ಆಯೋಗ ರಚಿಸುವುದಾಗಿ ಮಾತು ಕೊಟ್ಟರು.

ನುಡಿದಂತೆ ನಡೆದ ಕೃಷ್ಣಾರವರು ಸರ್ಕಾರವು ಒಳಮೀಸಲಾತಿ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು ನ್ಯಾ. ಎನ್. ವೈ. ಹನಮಂತಪ್ಪ ಅವರ ನೇತೃತ್ವದಲ್ಲಿ ಆಯೋಗವನ್ನು ರಚಿಸಿತು. ಇದರ ಹಿಂದೆ ಈ ಆಯೋಗದ ರಚನೆಯ ಹಿಂದೆ ಸಚಿವ ತಿಮ್ಮಾಪೂರವರ ಶ್ರಮ ಕಾರಣವಾಗಿದೆ ಎಂಬುದನ್ನು ಯಾರೂ ಮರೆತಿಲ್ಲ. ಅಂದಿನ ಶ್ರಮ ಇಂದು ಸುಪ್ರೀಂ ಕೋರ್ಟ ಆದೇಶದೊಂದಿಗೆ ಸಾರ್ಥಕವಾಗಿದೆ ಎಂದು ಮುಖಂಡ ಮಹಾದೇವ ಮಾದರ ವಿವರಿಸಿದರು. ರವಿ ಕಾಂಬಳೆ ಮಾತನಾಡಿದರು.

ಪತ್ರಿಕಾಗೋಷ್ಠಿಯಲ್ಲಿ ವೆಂಕಪ್ಪ ಪೋಳ, ಸದಾಶಿವ ಮೇತ್ರಿ, ಯಮನಪ್ಪ ದೊಡಮನಿ, ಕುಮಾರ ಕಾಳಮ್ಮನವರ, ರಾಮಣ್ಣ ಕುಳಲಿ, ಅಶೋಕ ಮುಂಡಗನೂರ, ಸಂಜು ಗಸ್ತಿ, ಕಲ್ಲಪ್ಪ ಮಾದರ, ಕೃಷ್ಣಾ ತಳಗೇರಿ, ದುರ್ಗಪ್ಪ ದಡ್ಡಿಮನಿ, ಲಕ್ಷ್ಮಣ ಮರಡಿ ಇತರರಿದ್ದರು.

ತಾಲೂಕು ಕಾನಿಪ ಕಚೇರಿಯ ದಲಿತ ಸಮುದಾಯದ ಮುಖಂಡರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕಲುಷಿತ ನೀರು ಪೂರೈಕೆ: ಕರವೇ ಆರೋಪ

ರವಿವಾರ ಪಟ್ಟಣದಲ್ಲಿ ಪತ್ರಿಕಾಗೊಷ್ಠಿಯಲ್ಲಿ ಕರವೇ ತಾಲೂಕು ಅಧ್ಯಕ್ಷ ರವಿ ಅಂಗಡಿ ಅವರು ಮಾತನಾಡಿದರು.

ಗುಳೇದಗುಡ್ಡ: ಪಟ್ಟಣಕ್ಕೆ ಆಲಮಟ್ಟಿ ಜಲಾಶಯದಿಂದ ಕುಡಿಯುವ ನೀರು ಶುದ್ಧೀಕರಣ ಘಟಕದ ಫಿಲ್ಟರ್ ಕೆಟ್ಟು ತಿಂಗಳುಗಳೇ ಆಗಿದ್ದು, ಇದರಿಂದ ಕುಡಿಯುವ ನೀರು ಶುದ್ಧೀಕರಣಗೊಳ್ಳದೇ ಪಟ್ಟಣಕ್ಕೆ ಸರಬರಾಜಾಗುತ್ತಿದೆ. ಇಂತಹ ನೀರನ್ನು ಕುಡಿಯುವುದರಿಂದ ವಾಂತಿ ಬೇಧಿ, ಹೊಟ್ಟೆನೋವು ಮುಂತಾದ ಕಾಯಿಲೆಗಳು ಬರುತ್ತಿವೆ ಎಂದು ಕರವೇ ತಾಲೂಕು ಅಧ್ಯಕ್ಷ ರವಿ ಅಂಗಡಿ ಆರೋಪಿಸಿದರು.

ಅವರು ರವಿವಾರ ಪಟ್ಟಣದಲ್ಲಿ ಪತ್ರಿಕಾಗೊಷ್ಠಿಯಲ್ಲಿ ಮಾತನಾಡಿ, ಈಗ ಪೂರೈಕೆಯಾಗುತ್ತಿರುವ ನೀರು ಕುಡಿಯಲು ಯೋಗ್ಯವಾಗಿಲ್ಲ ಎಂದು ತಜ್ಞರು ತಿಳಿಸಿದ್ದಾರೆ. ಇಂತಹ ಅಯೋಗ್ಯ ನೀರನ್ನು ಪುರಸಭೆಯವರು ಸಾರ್ವಜನಿಕರಿಗೆ ಸರಬರಾಜು ಮಾಡುತ್ತಿದೆ. ಕೂಡಲೇ ಪಟ್ಟಣದ ಜನತೆಗೆ ಶುದ್ಧಕುಡಿಯುವ ನೀರು ಪೂರೈಸಬೇಕು. ಇಲ್ಲವಾದಲ್ಲಿ ಕರವೇ ವತಿಯಿಂದ ಸಾರ್ವಜನಿಕರೊಂದಿಗೆ ಉಗ್ರ ಪತ್ರಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.

ಪಟ್ಟಣದಲ್ಲಿ ಕುಡಿಯುವ ನೀರು ಸಾಕಷ್ಟು ಪೋಲಾಗಿ ರಸ್ತೆಗೆ ಜನರು ಹರಿದುಬಿಡುತ್ತಿದ್ದಾರೆ. ಇದರಿಂದ ಮಲೀನ ನೀರಿನಲ್ಲೇ ಜನರು ಸಂಚರಿಸುತ್ತಿದ್ದಾರೆ. ರಸ್ತೆಗಳು ಹಾಳಾಗಿದ್ದು, ಅಲ್ಲಲ್ಲಿ ನೀರು ನಿಂತು ಸೊಳ್ಳೆಗಳು ಉತ್ಪತ್ತಿಗೊಂಡು ಸಾಂಕ್ರಾಮಿಕ ರೋಗಗಳು ಹರಡುತ್ತಿವೆ. ಇನ್ನು ಹಂದಿ ಹಾಗೂ ಬೀಡಾಡಿ ದನಗಳು ಹಾವಳಿ ಹೆಚ್ಚಾಗಿವೆ. ಆದರೂ ಪುರಸಭೆ ಅಧಿಕಾರಿಗಳು ಕ್ರಮಕ್ಕೆಗೊಳ್ಳುತ್ತಿಲ್ಲ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಕರವೇಯ ಶ್ರೀಕಾಂತ ಹುನಗುಂದ ನಿಂಗಪ್ಪ ಯಣ್ಣಿ, ಸೋಮಶೇಖರ ಕಲ್ಬುರ್ಗಿ, ವಿಜಯ ಕವಿಶೆಟ್ಟಿ, ಮಹಾಂತೇಶ ತಿಪ್ಪಾ, ಆನಂದ ತಿಪ್ಪಾಗೌಡ್ರ, ಮಲ್ಲಿಕಾರ್ಜುನ ಮೆಂತೆದ ಇದ್ದರು.

ಅಕ್ರಮ ಹಣ ವರ್ಗಾವಣೆ ಇಲಾಖೆಗಳಿಂದ ದೂರು ದಾಖಲು

ಬಾಗಲಕೋಟೆ: ಇಲ್ಲಿನ ಐಡಿಬಿಐ ಬ್ಯಾಂಕ್‌ನಲ್ಲಿ ಇರಿಸಿದ್ದ ಕೈಮಗ್ಗ ಮತ್ತು ಜವಳಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಹಣವನ್ನು ಬ್ಯಾಂಕ್ ವ್ಯವಸ್ಥಾಪಕ ಹಾಗೂ ಸಿಬ್ಬಂದಿ ಅಕ್ರಮವಾಗಿ ವರ್ಗಾವಣೆ ಮಾಡಲಾಗಿದೆ ಎಂದು ಎರಡು ಇಲಾಖೆಯ ಅಧಿಕಾರಿಗಳು ಇಲ್ಲಿನ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಕೈಮಗ್ಗ ಹಾಗೂ ಜವಳಿ ಇಲಾಖೆಗೆ ಸಂಬಂಧಿಸಿ 12 ಖಾತೆಗಳು ಐಡಿಬಿಐ ಬ್ಯಾಂಕ್‌ನಲ್ಲಿದ್ದವು. ಇದರಲ್ಲಿ 2018 ಫೆ. 15 ರಿಂದ 2024ರ ಜನವರಿ 19ರ ವರೆಗೆ 10 ಖಾತೆಗಳಿಂದ 18.15 ಲಕ್ಷ ರು. ಹಾಗೂ ಇನ್ನೂಳಿದ 2 ಖಾತೆಗಳಿಂದ ಕೋಟ್ಯಾಂತರ ರು. ಹಣವನ್ನು ಖೊಟ್ಟಿ ದಾಖಲೆ ಸೃಷ್ಟಿಸಿ ವರ್ಗಾವಣೆ ಮಾಡಲಾಗಿದೆ ಎಂದು ಇಲಾಖೆ ಪರವಾಗಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಚರಖಾನಿ ದೂರು ದಾಖಲಿಸಿದ್ದಾರೆ.ಇನ್ನೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 2019ರ ಡಿಸೆಂಬರ್ 4 ರಿಂದ 2023ರ ಡಿಸೆಂಬರ್‌ವರೆಗೆ ಬ್ಯಾಂಕ್‌ನವರು ಅಧಿಕಾರ ದುರುಪಯೋಗ ಪಡಿಸಿಕೊಂಡು ಇಲಾಖೆಯ ಬ್ಯಾಂಕ್ ಖಾತೆಯಲ್ಲಿದ್ದ 1.76 ಕೋಟಿ ರು. ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ್ದಾಗಿ ಇಲಾಖೆಯ ಮೆಹಬೂಬ್ ತುಂಬರಮಟ್ಟಿ ದೂರು ದಾಖಲಿಸಿದ್ದಾರೆ. ಅಕ್ರಮ ಹಣ ವರ್ಗಾವಣೆ ಸಂಬಂಧಿಸಿದಂತೆ ಈಗಾಗಲೇ ಪ್ರವಾಸೋದ್ಯಮ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಪಿಆರ್‌ಇಡಿಯ ಬ್ಯಾಂಕ್ ಖಾತೆಯಿಂದ ಹಣ ವರ್ಗಾವಣೆಯಾದ ಬಗ್ಗೆ ದೂರು ದಾಖಲಾಗಿದ್ದು, ಸದ್ಯ ಮತ್ತೆರಡು ಇಲಾಖೆಗಳಲ್ಲು ಅಕ್ರಮ ನಡೆದಿದೆ ಎಂದು ದೂರು ಸಲ್ಲಿಕೆಯಾಗಿವೆ.

ಇಮ್ಮಡಿ ಪುಲಿಕೇಶಿ ಮೂರ್ತಿ ಪ್ರತಿಷ್ಠಾಪನೆ

ಬಾದಾಮಿ: ಬಾದಾಮಿಯ ಕೀರ್ತಿಯನ್ನು ವಿಶ್ವಕ್ಕೆ ಪರಿಚಯಿಸಿ ಹರ್ಷವರ್ಧನನ್ನು ಸೋಲಿಸಿ ದಕ್ಷಿಣಾ ಪಥೇಶ್ವರ ಬಿರುದು ಪಡೆದ ಇಮ್ಮಡಿ ಪುಲಿಕೇಶಿಯ ಮೂರ್ತಿ ಪ್ರತಿಷ್ಠಾಪಿಸಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹರ್ಷ ವ್ಯಕ್ತಪಡಿಸಿದರು

ಅವರು ನಗರದ ಶ್ರೀವೀರಪುಲಿಕೇಶಿ ಸಂಸ್ಥೆಯ ಎಸ್.ಬಿ.ಮಮದಾಪೂರ ಪದವಿ ಮಹಾವಿದ್ಯಾಲಯದ ಆವರಣದಲ್ಲಿ ಆ.5 ರಂದು ಸೋಮವಾರ ಇಮ್ಮಡಿ ಪುಲಿಕೇಶಿಯ ಮೂರ್ತಿ ಪ್ರತಿಷ್ಟಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪುತ್ಥಳಿ ಮೆರವಣಿಗೆ: ಬೆಳಗ್ಗೆ 9 ಗಂಟೆಗೆ ಬಸವೇಶ್ವರ ವೃತ್ತದಲ್ಲಿ ಉಪಚೇರಮನ್ ಸುನೀಲ ಕಾರುಡಗಿಮಠ ಉತ್ಸವಕ್ಕೆ ಚಾಲನೆ ನೀಡುವರು. ಸಕಲ ವಾದ್ಯಗಳೊಂದಿಗೆ ಮೆರವಣಿಗೆಯು ಹೊರಟು ಎಸ್.ವಿ.ಪಿ.ಸಂಸ್ಥೆಯ ಪದವಿ ಮಹಾವಿದ್ಯಾಲಯಕ್ಕೆ ತಲುಪಿತು ಮಧ್ಯಾಹ್ನ 12 ಗಂಟೆಗೆ ಚಾಲುಕ್ಯ ವೇದಿಕೆಯಲ್ಲಿ ಮೂರ್ತಿ ಪ್ರತಿಷ್ಟಾಪನೆಯನ್ನು ಕಮತಗಿಯ ಶ್ರೀಹೊಳೆಹುಚ್ಚೇಶ್ವರ ಶ್ರೀಗಳು ಮಾಜಿ ಸಚಿವ ಅರವಿಂದ ಲಿಂಬಾವಳಿ, ಸಂಸ್ಥೆಯ ಚೇರಮನ್ ಎ.ಸಿ.ಪಟ್ಟಣದ, ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಮಮದಾಪೂರ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಹೊನ್ನಯ್ಯ ಹಿರೇಮಠ, ನಿವೃತ್ತ ಪ್ರಾಧ್ಯಾಪಕ ಡಾ.ಈರಣ್ಣ ಪತ್ತಾರ, ನಾಗಪೂರ ಪುರಾತತ್ವ ಇಲಾಖೆಯ ಅಧೀಕ್ಷಕ ರಮೇಶ ಮೂಲಿಮನಿ ಉಪನ್ಯಾಸ ನೀಡಿದರು, ಎಸ್.ಡಿ.ಫತ್ತೇಪೂರ ಇದ್ದರು.

ಕಾಲೇಜು ಆವರಣದಲ್ಲಿ ಒಂದನೇ ಗುಹಾಲಯ ಮಾದರಿ ವೇದಿಕೆಯನ್ನು ಮೌನೇಶ ಕಮ್ಮಾರ ನಿರ್ಮಾಣ ಮಾಡಿದ್ದು, ಶಿಲ್ಪಿ ಶಿವಾನಂದ ಬಡಿಗೇರ ಇವರು ನಿರ್ಮಿಸಿದ ಇಮ್ಮಡಿ ಪುಲಿಕೇಶಿಯ ಮೂರ್ತಿಯು 6 ಫೀಟ್ ಎತ್ತರ, 4.5 ಅಡಿ ಫೀಟ್ ಮತ್ತು 5 ಫೀಟ್ ಉದ್ದ ಇದ್ದು, ಇದನ್ನು ಅಂದಾಜು ರೂ.4.50 ಲಕ್ಷ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಸುಮಾರು 75 ಕೆಜಿ ತೂಕವಿದೆ.
-ರವೀಂದ್ರ ಮೂಲಿಮನಿ,ಪ್ರಾಚಾರ್ಯ
ಎಸ್‌ಬಿಎಂ ಪದವಿ ಕಾಲೇಜು

ಶ್ರೀಎಸ್.ಬಿ.ಮಮದಾಪೂರ ಪದವಿ ಮಹಾವಿದ್ಯಾಲಯದ ಆವರಣದಲ್ಲಿ ಇಮ್ಮಡಿ ಪುಲಿಕೇಶಿಯ ಮೂರ್ತಿ ಪ್ರತಿಷ್ಠಾಪನೆ ಮಾಡಿದ ಗಣ್ಯರು.

ಬಿಟಿಡಿಎ ನಿವೇಶನ ಹಂಚಿಕೆ ರದ್ದು

ಬಾಗಲಕೋಟೆ: ಇಲ್ಲಿನ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿಯಮ ಮೀರಿ ನಿವೇಶನ ಹಂಚಿಕೆ ಮಾಡಿದ್ದು, ಒಟ್ಟು 347 ನಿವೇಶನ ಹಂಚಿಕೆಯನ್ನು ರಾಜ್ಯ ಸರಕಾರ ರದ್ದುಗೊಳಿಸಿ ಆದೇಶ ಹೊರಡಿಸಿದೆ. 2021, 2022ರಲ್ಲಿ ಬಿಟಿಡಿಎದಿಂದ ನಿವೇಶನ ಹಂಚಿಕೆಯಲ್ಲಿ ನಿಯಮ ಮೀರಿದ್ದು, ಸಮಗ್ರ ತನಿಖೆ ಕೈಗೊಂಡು, ನಿವೇಶನ ಹಂಚಿಕೆ ರದ್ದುಗೊಳಿಸುವಂತೆ ಸಚಿವ ಆರ್.ಬಿ.ತಿಮ್ಮಾಪುರ ಅವರು ಸರಕಾರಕ್ಕೆ ದೂರು ನೀಡಿದ್ದರು. ಹೀಗಾಗಿ, ಬೆಳಗಾವಿ ಪ್ರಾದೇಶಿಕ ಆಯುಕ್ತರು ತನಿಖೆ ಕೈಗೊಂಡಿದ್ದು, ನಿವೇಶನ ಹಂಚಿಕೆಯಲ್ಲಿ ನಿಯಮ ಮೀರಿರುವುದು ಪತ್ತೆಯಾಗಿದೆ. ಹೀಗಾಗಿ ಬಾಗಲಕೋಟೆಯ ಬಿವಿವಿ ಸಂಘಕ್ಕೆ ಹಂಚಿಕೆಯಾಗಿದ್ದ ಸೆಕ್ಟರ್ ನಂ.59ರ 320 ನಿವೇಶನಗಳೂ ಸೇರಿದಂತೆ ಒಟ್ಟು 347 ನಿವೇಶನ ಹಂಚಿಕೆ ರದ್ದು ಮಾಡಲಾಗಿದೆ. ಪ್ರೊ.ಡೈಮಂಡ್ ಹಾಗೂ ಪ್ರಕಾಶ ಮಲ್ಲಿ ಗೇಸುಲಾಲ ಜೈನ್ ಎಂಬವರ ನಾಲ್ಕು, ನಾಶಿ ಎಂಬುವರ ಕುಟುಂಬಕ್ಕೆ ಹಂಚಿಕೆಯಾಗಿದ್ದ ನಾಲ್ಕು ಇ ಮಾದರಿ ನಿವೇಶನ, ಅಮರನಾಥ ಆರ್. ಶೆಟ್ಟಿ ಎಂಬುವವರಿಗೆ ವಾಣಿಜ್ಯ ನಿವೇಶನ ಹಂಚಿಕೆ ಜತೆಗೆ 19 ವಾಣಿಜ್ಯ ನಿವೇಶನಗಳನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡಲಾಗಿತ್ತು. ಬಿವಿವಿ ಸಂಘಕ್ಕೆ ಸೆಕ್ಟರ್ ನಂ.59ರಲ್ಲಿ ಇರುವ ಒಟ್ಟು 320 ಹಂಚಿಕೆಯಾದ ನಿವೇಶನ ಕಾನೂನು ಬಾಹಿರ ಎಂದು ತೀರ್ಮಾನಿಸಿ, ನಿವೇಶನ ಹಂಚಿಕೆ ರದ್ದುಪಡಿಸಲು ಪ್ರಾದೇಶಿಕ ಆಯುಕ್ತರು ನೀಡಿದ ವರದಿ ಅನ್ವಯ ಜಲ ಸಂಪನ್ಮೂಲ ಇಲಾಖೆಯ ಅಧೀನ ಕಾರ್ಯದರ್ಶಿ ಹರ್ಷ ಆದೇಶ ಹೊರಡಿಸಿದ್ದಾರೆ.

{ ವಿ.ಸೋಮಣ್ಣ } ಸಚಿವ
ರಾಯಚೂರು, ಯಾದಗಿರಿ, ಕೊಪ್ಪಳ, ಕಲಬುರಗಿಯಲ್ಲೂ ರೈಲ್ವೆ ಸಂಪರ್ಕ ವೃದ್ಧಿಸಿ ಜನರಿಗೆ ಅನುಕೂಲ ಮಾಡಲಾಗುತ್ತದೆ. ಗದಗ - ವಾಡಿ ಹೊಸ ರೈಲು ಯೋಜನೆಗೆ ರಾಜ್ಯ ಸರಕಾರ ಭೂಮಿಯನ್ನು ಮಂಜೂರು ಮಾಡಿ ಇಲಾಖೆಗೆ ಹಸ್ತಾಂತರ ಮಾಡಬೇಕು. 7.5 ಕೋಟಿ ವೆಚ್ಚದಲ್ಲಿ ಯಾದಗಿರಿ ರೈಲ್ವೆ ನಿಲ್ದಾಣ ಮೇಲ್ದರ್ಜೆಗೇರಿಸುವ ಕೆಲಸ ಈಗಾಗಲೇ ಆರಂಭಿಸಲಾಗಿದೆ.

@vishwavaninews

ಈ ಕೀಟಾಹಾರಿ ಸಸ್ಯದಲ್ಲಿದೆ ಸಯನೈಡ್!

● ಶಶಿಧರಸ್ವಾಮಿ ಆರ್. ಹಿರೇಮಠ

ಬೇಲಿ ಬದಿಯಲ್ಲಿ ಬೆಳೆದು ಸುಂದರ ಹೂವುಗಳನ್ನು ಬಿಡುವ ಈ ಸಸ್ಯದ ಎಳೆಯ ಎಲೆಗಳಲ್ಲಿ ಸಯನೈಡ್ ಅಂಶವಿದೆ!

ನೈಋತ್ಯ ಅಮೆರಿಕಾ, ಮೆಕ್ಸಿಕೋ, ಮಧ್ಯ ಮತ್ತು ದಕ್ಷಿಣ ಅಮೆರಿಕಾ ಹಾಗೂ ವೆಸ್ಟ್‌ಇಂಡೀಸ್ ಮೂಲದಿಂದ ಆಗ್ನೇಯ ಏಷ್ಯಾ ಮೂಲಕ ಭಾರತಕ್ಕೆ ಬಂದಿರುವ ಈ ಸಸ್ಯದ ವಿಚಾರ ಬಹಳ ಕುತೂಹಲಕಾರಿಯಾಗಿದೆ. ವಿಯಟ್ನಾಂನಲ್ಲಿ ಇದರ ಒಣ ಎಲೆಗಳನ್ನು ಜನಪದ ವೈದ್ಯದಲ್ಲಿ ಬಳಸಲಾಗುತ್ತಿದೆ; ನಿದ್ರಾಹೀನತೆಗೆ ಮದ್ದು ಎಂಬ ನಂಬಿಕೆ. ಪುಟ್ಟ ಚೆಂಡಿನಾಕೃತಿಯ ಇದರ ಹಣ್ಣುಗಳನ್ನು ಫಿಲಿಪೀನ್ಸ್ ದೇಶದಲ್ಲಿ ಮಾರ್ಯ ಮಾರ್ಯ ಎಂದು ಕರೆಯುವರು! ಇದರ ಹಣ್ಣಿನ ತಿರುಳು ಸ್ವಲ್ಪ ಸಿಹಿಯ ರುಚಿಯನ್ನು ಹೊಂದಿದೆ.

ಆದರೆ ಬ್ರೆಸಿಲ್ ದೇಶದಲ್ಲಿ ಈ ಸಸ್ಯವನ್ನು ಕಂಡರೆ ಕೃಷಿಕರಿಗೆ ಕೋಪ; ಏಕೆಂದರೆ ಅವರ ಪ್ರಕಾರ ಇದು ವಿಷಕಾರಿ. ಬೇಸಗೆ ಸಮಯದಲ್ಲಿ ಇದರ ಎಲೆಗಳನ್ನು, ಕುಡಿಯನ್ನು ತಿಂದ ಮೇಕೆಗಳು ಫುಡ್ ಪಾಯ್ಸನಿಂಗ್‌ಗೆ ಒಳಗಾಗುತ್ತವಂತೆ! (ನಮ್ಮ ದೇಶದಲ್ಲಿ ಜೋಳದ ಕುಡಿಯಲ್ಲೂ ಇಂತಹ ಗುಣವಿದೆ.) ಇದರ ಎಳೆ ಎಲೆಗಳಲ್ಲಿ ಸಯನೈಡ್ ಅಂಶವಿದ್ದು, ಇದನ್ನು ತಿಂದ ಮೇಕೆಗಳು ವಿಷಾಹಾರ ಸೇವನೆಗೆ ತುತ್ತಾದವರಂತೆ ವರ್ತಿಸುತ್ತವಂತೆ.

ನಮ್ಮ ದೇಶದಲ್ಲಿ ಈ ಸಸ್ಯ, ಹೂವು, ಕಾಯಿಗಳ ಕುರಿತು ವಿಶೇಷ ಎನಿಸುವಂತಹದ್ದೇನೂ ಇಲ್ಲ. ಬೇಲಿ ಬದಿಯಲ್ಲಿ ಅಲಂಕಾರಿಕ ಸಸ್ಯವಾಗಿಯೂ ಉಪಯೋಗ. ತಂಪು ಪ್ರದೇಶದಲ್ಲಿ ಬೆಳೆಯುವ ಇದು ಕಳೆ ಸಸ್ಯದ ಗುಣ ಹೊಂದಿದ್ದು, ಹುಲುಸಾಗಿ ಬೆಳೆಯಬಲ್ಲದು.

ಇದು ಹುಲುಸಾಗಿ ಹಬ್ಬುವ ಬಹು ವಾರ್ಷಿಕ ಬಳ್ಳಿ ಸಸ್ಯವಾಗಿದೆ. ತೆಳ್ಳನೆಯ ಮೃದುವಾಗಿರುವ ಕಾಂಡವು ಸೂಕ್ಷ್ಮ ಜಿಗುಟಾದ ಹಳದಿ ತೊಟ್ಟುರೋಮಗಳಿಂದ ಕೂಡಿದೆ. ಹಳೆಯ ಕಾಂಡವು ಗಟ್ಟಿಯಾಗಿರುತ್ತದೆ. ಎಲೆಗಳು ಮೂರರಿಂದ ಐದು

ಹಾಳೆಗಳಿಂದ ಕೂಡಿ ಸಣ್ಣ ರೋಮಗಳಿವೆ, ಈ ಎಲೆಗಳು ಪರ್ಯಾಯವಾಗಿ ಜೋಡಿಸಲ್ಪಟ್ಟಿವೆ. ಬಳ್ಳಿಯಲ್ಲಿ ಕವಲುಗಳಿಲ್ಲದ ಅಡರು ಬಳ್ಳಿಗಳಿದ್ದು ಇವು ಹಬ್ಬಿ ಬೆಳೆಯಲು ಸಹಾಯಕವಾಗಿವೆ. ಹೂವುಗಳು ಕೆನೆ ವರ್ಣ ಮಿಶ್ರಿತ ಕೆನ್ನೀಲಿ ಬಣ್ಣದಿಂದ ಕೂಡಿವೆ. ನಮ್ಮ ರಾಜ್ಯದ ಹೊಲಗಳಲ್ಲಿ ಕೃಷಿಕಾರ್ಯ ನಿರ್ವಹಿಸುವಾಗ ಪೈರನ್ನು ಎತ್ತುಗಳು ತಿನ್ನದಿರಲಿ ಎಂದು ಕಟ್ಟುವ ಕುಕ್ಕೆ ಬುಟ್ಟಿಯಂತೆ ಕಾಣುವುದರಿಂದ ಈ ಬಳ್ಳಿಗೆ ''ಕುಕ್ಕೆ ಬಳ್ಳಿ'' ಎಂದು ಹೆಸರು ಬಂದಿದೆ.

ಗೋಳಾಕೃತಿಯ, ಕಿತ್ತಳೆ ಬಣ್ಣದ ಹಣ್ಣುಗಳು ಮಾಗಿದಂತೆ ಕೆಂಪಾಗುತ್ತವೆ. ತಿರುಳಿನಲ್ಲಿ ಕಪ್ಪು ಬಣ್ಣದ ಬೀಜಗಳಿದ್ದು ಹಣ್ಣನ್ನು ತಿಂದ ಪಕ್ಷಿಗಳಿಂದ ಬೀಜ ಪ್ರಸಾರಣೆಯಾಗುತ್ತದೆ.

ಕುಕ್ಕೆ ಬಳ್ಳಿಯನ್ನು ಕುಕ್ಕಿ ಬಳ್ಳಿ, ಕಾಡುಕುಕ್ಕೆ, ಕಲ್ಲು ಕುಕ್ಕೆ ಬಳ್ಳಿ ಎಂದೆಲ್ಲಾ ಕರೆಯುವ ಇದನ್ನು ಸಂಸ್ಕೃತದಲ್ಲಿ ಮುಕ್ಕೊಪೀರ ಎಂದು ಕರೆದರೆ, ಹಿಂದಿಯಲ್ಲಿ ಜುಮ್ಕಾ ಲತಾ ಎಂದು ಹೆಸರಿದೆ. ಇಂಗ್ಲೀಷಿನಲ್ಲಿ ಲವ್-ಇನ್-ಎ-ಮಿಸ್ಟ್, ಸ್ಟಿಂಕಿಂಗ್ ಪ್ಯಾಶನ್ ಫ್ಲವರ್ ಎಂದು ಕರೆದಿದ್ದಾರೆ

ಹೂವು ಹಾಗೂ ಕಾಯಿಗಳಿಗೆ ಅಂಡಿರುವ ಕುಕ್ಕೆ ರೋಮಗಳ ತೊಟ್ಟುಗಳಲ್ಲಿರುವ ಜಿಗುಟಾದ ವಸ್ತುವು ಕೀಟಗಳನ್ನು ಪತ್ತೆ ಮಾಡುವುದಲ್ಲದೆ ಜೀರ್ಣಕಾರಿ ಕಿಣ್ವಗಳನ್ನು ಹೊರಹಾಕುತ್ತವೆ. ಸಿಕ್ಕಿಕೊಂಡ ಕೀಟಗಳನ್ನು ಜೀರ್ಣಿಸಿಕೊಂಡು, ಭಕ್ಷಿಸುವುದರಿಂದ ಕೀಟಹಾರ ಸಸ್ಯವೆಂದು ಕೆಲವರು ಹೇಳಿದ್ದಾರೆ. ಆದರೆ ಈ ಕುರಿತು ಸಸ್ಯ ವಿಜ್ಞಾನಿಗಳಲ್ಲಿ ಅನಿಶ್ಚಿತತೆಯ ವಾದವಿದ್ದು, ಈ ಬಗ್ಗೆ ಅಧ್ಯಯನ ಮುಂದುವರೆದಿದೆ. ಪ್ರಸ್ತುತ ಈ ಬಳ್ಳಿಯನ್ನು ''ಪ್ರೋಟೋಕಾರ್ನಿವೋರಸ್'' ಸಸ್ಯವೆಂದು ಪರಿಗಣಿಸಲಾಗಿದೆ.

ಈ ಬಳ್ಳಿಯು ಕಪಿಲ ಚಿಟ್ಟೆಯ ಕಂಬಳಿಹುಳುವಿನ ಆಹಾರ ಸಸ್ಯವಾಗಿದೆ. ಕಪಿಲ ಚಿಟ್ಟೆಯು ಈ ಬಳ್ಳಿಯ ಎಲೆಯ ಮೇಲೆ ಮೊಟ್ಟೆ ಇಡುತ್ತದೆ. ಮೊಟ್ಟೆಯಿಂದ ಹೊರ ಬಂದ ಕಂಬಳಿಹುಳುಗಳು ಇದರ ಎಲೆಗಳನ್ನು ತಿಂದು ಬೆಳವಣಿಗೆ ಹೊಂದಿ, ಕೋಶಾವಸ್ಥೆಗೆ ತಲುಪುತ್ತವೆ. ನಂತರ ಪ್ರೌಢ ಚಿಟ್ಟೆಗಳಾಗಿ ನಿಸರ್ಗ ಸೇರುತ್ತವೆ. ಕೀಟಹಾರಿ ಸಸ್ಯವಾದರೂ, ಕಪಿಲ ಚಿಟ್ಟೆಗಳ ಕಂಬಳಿಹುಳುಗಳಿಗೆ ಆಹಾರ ಸಸ್ಯವಾಗಿರುವುದು ಸೋಜಿಗದ ಸಂಗತಿ.

(ಚಿತ್ರಗಳು ಲೇಖಕರವು)

ಚಿತ್ತ ವಿಹಾರ

ಕನಸುಗಳು

ನಾವು ಕನಸುಗಳನ್ನು ಕಾಣುವುದು ಸಹಜ. ಕನಸುಗಳೆಂದರೆ ಕೇವಲ ನಿದ್ರೆಯಲ್ಲಿ ಒಂದಷ್ಟು ಬದುಕನ್ನು ರಂಗು ರಂಗಾಗಿಸಿ ಮರೆಯಾಗಿ ಹೋಗುವುದಲ್ಲ. ಇದಕ್ಕೆ ಭಿನ್ನವಾಗಿ ವಾಸ್ತವದಲ್ಲಿ ಕಾಣುವ ಕನಸುಗಳು. ಅವುಗಳು ನಮ್ಮ ಬದುಕನ್ನು ನಿರ್ದೇಶಿಸುತ್ತವೆ. ಬದುಕನ್ನು ಚಲನಶೀಲಗೊಳಿಸುತ್ತವೆ. ಕನಸುಗಳನ್ನು ಜೊತೆಯಾಗಿಸಿಕೊಂಡ ಮನುಷ್ಯ ಮಾತ್ರವೇ ಮುನ್ನಡೆಯಲು ಸಾಧ್ಯ. ಕನಸುಗಳಿಲ್ಲದ ಬದುಕಿಗೆ ಯಾವುದೇ ಅರ್ಥವಿಲ್ಲ.

ಕನಸುಗಳನ್ನು ಕಟ್ಟಿಕೊಂಡು ನಾವು ಒಂದಷ್ಟು ಕಾಲ ಅವುಗಳನ್ನು ನನಸಾಗಿಸುವ ಪ್ರಯತ್ನವನ್ನು ಉತ್ಸಾಹದಿಂದಲೇ ಜಾರಿಯಲ್ಲಿಡುತ್ತೇವೆ. ನಂತರದ ಕಾಲಾವಧಿಯಲ್ಲಿ ಉತ್ಸಾಹವನ್ನು ಕಳೆದುಕೊಳ್ಳುತ್ತೇವೆ. ಅವುಗಳು ಕೈಗೆಟುಕುವುದಿಲ್ಲ ಎನ್ನುವ ನಿರ್ಧಾರಕ್ಕೆ ಬಂದು ಬಿಡುತ್ತೇವೆ. ಇಂತಹ ನಮ್ಮ ಸ್ವಭಾವದಿಂದಾಗಿ ಕನಸುಗಳು ರಂಗು ಕ್ರಮೇಣ ಮಸುಕಾಗುತ್ತ ಹೋಗುತ್ತದೆ. ಮತ್ತೆ ಬೇರೆ ಕನಸುಗಳನ್ನು ಕಾಣುತ್ತೇವೆ. ಅವುಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಯೇನೂ ಇರುವದಿಲ್ಲ. ನಾವು ನಮ್ಮ ಕನಸುಗಳನ್ನು ನನಸಾಗಿಸುವ ದಿಸೆಯಲ್ಲಿ ನಾವು ಅವುಗಳನ್ನು ನಮ್ಮ ನೆರಳು ನಮ್ಮನ್ನು ಹಿಂಬಾಲಿಸುವಂತೆ ಹಿಂಬಾಲಿಸಬೇಕು. ನೆರಳಿನ ದಿಟ್ಟತನವಿರಬೇಕು, ಅದೆಷ್ಟೇ ಪ್ರಖರವಾದ ಬೆಳಕಿದ್ದರೂ ಅದಕ್ಕೆ ವಿರುದ್ಧವಾಗಿ ನೆರಳು ತನ್ನ ಧಾರ್ಷ್ಟ್ಯವನ್ನು ತೋರುವಂತೆ. ಸೂರ್ಯನ ಬೆಳಕು ಇಳೆಯನ್ನು ಪ್ರವೇಶಿಸುತ್ತಿದ್ದಂತೆ ಅಂಧಕಾರ ಮೆಲ್ಲನೆ ಪಲಾಯನ ಮಾಡಿದರೂ ನಮ್ಮ ನೆರಳು ಮಾತ್ರ ನಮ್ಮನ್ನು ಬೆಂಬಿಡದೆ ಬೆನ್ನು ಹತ್ತುತ್ತಲೇ ಇರುವಂತೆ. ಕೆಲವೊಮ್ಮೆ ಉದ್ದವಾಗುತ್ತ, ಅಡ್ಡವಾಗುತ್ತ, ಕುಬ್ಜವಾಗುತ್ತ ಬದಲಾಗುತ್ತ ತನ್ನ ರೂಪ ಬದಲಾಯಿಸಿಕೊಂಡರೂ ಎಂದಿಗೂ ಅದು ನಮ್ಮ ಸಹಚರ್ಯವನ್ನು ಬಿಡದು. ಅದೇ ರೀತಿ ನಮ್ಮ ಕನಸುಗಳನ್ನು ಬೇತಾಳನಂತೆ ಬೆನ್ನು ಹತ್ತಬೇಕು. ನಕಾರಾತ್ಮಕ ಯೋಚನೆಗಳಿಗೆ ಅವಕಾಶ ಕೊಡದೆ ನಮ್ಮ ಪ್ರಯತ್ನಗಳನ್ನು ಜಾರಿಯಲ್ಲಿರಿಸಬೇಕು. ಇಂತಹ ನಮ್ಮ ನಡೆಯು ಕನಸುಗಳನ್ನು ನನಸಾಗಿಸುತ್ತದೆ. ಒಂದೊಮ್ಮೆ ನನಸಾಗದಿದ್ದರೂ ಸರಿ, ಬದುಕಿಗೆ ಘನತೆಯನ್ನಾದರೂ ತಂದುಕೊಡುತ್ತದೆ.

● ಮಹಾದೇವ ಬಸರಕೋಡ

ಇತಿಹಾಸಕ್ಕೊಂದು ಕಿಂಡಿ

ಒಂದೇ ಒಂದು ಒಲಿಂಪಿಕ್ಸ್ ಸ್ಪರ್ಧೆ!

ಪುರಾತನ ಒಲಿಂಪಿಕ್ಸ್ ಕ್ರೀಡೆಗಳು ಕ್ರಿಪೂ 776ರಿಂದ ಆರಂಭಿಸಿ ಕ್ರಿ ಶ 393 ತನಕ ಮುಂದುವರಿದವು. ಗ್ರೀಕರು ನಡೆಸುತ್ತಿದ್ದ ಈ ಕ್ರೀಡೋತ್ಸವವನ್ನು, ಗ್ರೀಕರನ್ನು ಸೋಲಿಸಿದ ರೋಮನ್‌ರೂ ಮುಂದುವರಿಸಿದರು. ಕ್ರಿಪೂ 86ರಲ್ಲಿ ರೋಮನ್ ಅಧಿಕಾರಿ 'ಸುಳ್ಳ' ಎಂಬಾತನು ಒಲಿಂಪಿಯಾ ಪಟ್ಟಣವನ್ನು ದರೋಡೆ ಮಾಡಿ, ಗ್ರೀಕರ ಸಂಪತ್ತನ್ನು ವಶಪಡಿಸಿಕೊಂಡ. ಇದರ ನೆನಪಿಗಾಗಿ, ಕ್ರಿಪೂ 70ರಲ್ಲಿ, 175 ಒಲಿಂಪಿಕ್ಸ್‌ನ್ನು ಆಡಲಾಯಿತು. ಆಗ ನಡೆದದ್ದು ಒಂದೇ ಸ್ಪರ್ಧೆ: ಅದೇ 'ಸ್ಟೇಡನ್ ರೇಸ್'. ಅಂದರೆ, ಅದು ತುರುಸಿನ ಓಟದ ಸ್ಪರ್ಧೆ. ಬೇರಾವ ಸ್ಪರ್ಧೆಗೂ ಕ್ರೀಡಾಪಟುಗಳು ದೊರಕಿಲಿಲ್ಲ, ಏಕೆಂದರೆ ಅವರೆಲ್ಲರನ್ನೂ ರೋಮ್‌ಗೆ ಬರಹೇಳಲಾಗಿತ್ತು. 200 ಗಜ (180 ಮೀಟರ್) ಉದ್ದದ 'ಸ್ಟೇಡನ್' ನಲ್ಲಿ 20 ಸ್ಪರ್ಧಿಗಳು ಓಡುವ ಆ ಸ್ಪರ್ಧೆಯು, ಮುಂದೆ 'ಸ್ಟೇಡಿಯಂ' ಹೆಸರಿಗೂ ಸ್ಫೂರ್ತಿ ನೀಡಿತು.

ಯುವ ಕಾವ್ಯ

ಅವಳೆಂದರೆ...

ಚಳಿಗಾಲದ ಕುಳಿರ್ಗಾಳಿಗೆ
ಮೈ ನಡುಗಿದಾಗ
ಮಲೆನಾಡಿನ ಕಾಫಿ ಕುಡಿದ ಹಾಗೆ
ಕುಡಿದದ್ದು ಒಂದೇ ಗುಟುಕಾದರೂ
ಮೈಯೆಲ್ಲಾ ಬೆಚ್ಚಗೆ
ಬಾಯಿತುಂಬಾ ಕಾಫಿಯ ಘಮ॥
ಮೊದಲ ಮಳೆಗೆ ಎದ್ದ
ಒಣಮಣ್ಣಿನ ಪರಿಮಳದ ಹಾಗೆ
ಮಳೆ ನಿಂತರೂ
ಮಣ್ಣಿನ ಸುಗಂಧ
ಮರೆಯಾಗುವುದೇ ಇಲ್ಲ॥
ಇರುವೆ ಗೂಡಿನಲ್ಲಿ ಬಚ್ಚಿಟ್ಟ
ಸಿಹಿ ಸಕ್ಕರೆಯ ಹಾಗೆ
ಬಚ್ಚಿಟ್ಟಷ್ಟೂ ನಿಗೂಢ
ತೆರೆದುಕೊಂಡಷ್ಟೂ ಸಿಹಿಯ ಹೂರಣ॥
ಬೆಳ್ಳಂಬೆಳಗ್ಗೆ ಬೀಳುವ
ಸಿಹಿಗನಸಿನ ಹಾಗೆ
ಮರೆಯುತ್ತೇನೆ ಎಂದುಕೊಂಡರೂ
ಮರೆತುಹೋಗುವುದೇ ಇಲ್ಲ॥
ಮಣ್ಣಿನೊಳಗೆ ಬಚ್ಚಿಟ್ಟ
ರಹಸ್ಯ ನಿಧಿಯ ಹಾಗೆ
ಅರ್ಧ ಕುತೂಹಲ
ಅರ್ಧ ಸಂತಸ
ಇರುತ್ತದೆ ಅನವರತ

● ಡಾ. ವಿಶ್ವನಾಥ ಎನ್ ನೇರಳಕಟ್ಟೆ

ಹನಿಮಳೆ

ಕತ್ತಲ ರಾತ್ರಿಯಲಿ ಮೌನವಾಗಿ
ನಿಂತ ಮರಗಳು

ಗಾಳಿಯೂ ಇಲ್ಲದ ಬಿಸಿಯೂ
ಇಲ್ಲದ ಇರುಳು



ನಡುರಾತ್ರಿ ಕಳೆದಾಗ ಒಂದು
ಎಲೆ ಬರೆಯಿತು ಕವನ

ತಟ್ ಎಂದು ನೆಲಕ್ಕೆ ಉದುರಿದ
ಇಬ್ಬನಿಯಿಂದ!

● ಶಶಿ

ಸಹೋದರರನ್ನು ಕರೆಯುವ ಹಬ್ಬ

● ಪುಷ್ಪಾ ಮೋಹನ ಮುದಕವಿ

ಉತ್ತರ ಕರ್ನಾಟಕದೆಡೆ ನಾಗರ ಪಂಚಮಿ ಹಬ್ಬದ ಸಂಭ್ರಮ ಬಲು ಜೋರು ಮದುವೆಯಾದ ಹೊಸತರಲ್ಲಿ ಹಬ್ಬಕ್ಕೆ ಅಕ್ಕ ತಂಗಿಯರನ್ನು ತವರಿಗೆ ಕರೆತರುವ ಸಹೋದರರ ಸಂಭ್ರಮ ಸಡಗರ ಹಾಗೂ ಆಕೆ ಅವರ ಒಳಿತಿಗಾಗಿ ನಾಗನನ್ನು ಪೂಜಿಸಿ ಪ್ರಾರ್ಥಿಸುವ ಆ ಪ್ರೀತಿ ಕಂಡು ಮನ ಮುದಗೊಳ್ಳುತ್ತದೆ. ಹಬ್ಬಕ್ಕೆ ಒಂದು ವಾರ ಮೊದಲೇ ತರ ತರದ ಉಂಡಿಗಳ ತಯಾರಿ. ಹೀಗಾಗಿ ಈ ಹಬ್ಬಕ್ಕೆ ಉಂಡಿ ಹಬ್ಬವೆಂದೇ ಹೆಸರು. ಜೋಳದ ಅರಳು, ತಂಬಿಟ್ಟು, ನವಣೆ ಉಂಡಿ, ಅಕ್ಕಿ ತಂಬಿಟ್ಟು ಅರಳುಂಡೆ. ಎಳ್ಳು ಉಂಡಿ, ಮಂಡಕ್ಕಿ ಉಂಡಿ, ಸೇಂಗಾ ಉಂಡಿ, ಡಾಣಿ ಉಂಡಿ, ಪುಠಾಣಿ ಉಂಡಿ, ರವೆ ಉಂಡಿ, ಅಂಟಿನ ಉಂಡಿ, ಗುಳ್ಳಡಕಿ ಉಂಡಿ, ಬೇಸನ್ ಉಂಡಿ, ಚಿಗಳಿ ಹೀಗೆ ತರತರದ ಉಂಡಿಗಳ ತಯಾರಿ. ಅಲ್ಲದೇ ಬಂಧುಬಳಗ, ಬೀಗರಿಗೆ ತಂಬಿಟ್ಟಿನ ರವಾನೆ ಬೇರೆ. ಅವರೇ

ಬರಲಿ, ನಾವೇ ಹೋಗಲಿ ಇಲ್ಲವೇ ಅಲ್ಲಿಗೆ ಹೋಗುವವರ ಸಂಗಡವಾದರೂ ಅರಿಷಿಣ, ಕುಂಕುಮ, ಕುಬಸದ ಖಣ, ಕೊಬ್ಬರಿ ಬಟ್ಟಲು, ಅರಳು, ಅವಲಕ್ಕಿ ಕಳಿಸುವುದು ಆತ್ಮೀಯತೆಯ ಸಂಕೇತವಾಗಿತ್ತು. ಈಗ ಅದೆಲ್ಲ ನೆನಪು ಮಾತ್ರ.

ಶ್ರಾವಣ ಮಾಸದ ಶುಕ್ಲ ಚತುರ್ಥಿ, ಹಾಗೂ ಪಂಚಮಿ ನಾಗನಿಗೆ ಪೂಜೆ. (ಆಗಸ್ಟ್ 9 ರಂದು). ಮುಂಬಾಗಿಲಿಗೆ ತರತರದ ನಾಗರಂಗೋಲಿಗಳ ವಿಶೇಷ ಅಲಂಕಾರ. ಮಣ್ಣಿನ, ಕಲ್ಲಿನ ಅಥವಾ ಬೆಳ್ಳಿಯ ನಾಗನನ್ನು ಗರಿಕೆ, ಪತ್ರಿ ಹೂವುಗಳಿಂದ ಪೂಜಿಸಿ ಹಾಲೆರೆದು ಎಳೆಯ ಹುಣಸೆ ಕಾಯಿ ಜೋಳದ ಅರಳನ್ನು ಏರಿಸಿ ತಂಬಿಟ್ಟನ್ನು ನಿವೇದಿಸುವದು ಈ ಹಬ್ಬದ ವೈಶಿಷ್ಟ್ಯ.

ಬೆನ್ನಿಗೆ ಸವರುವ ಹಾಲು

ದಕ್ಷಿಣ ಕರ್ನಾಟಕದ ಜನತೆ ನಾಗನಿಗೆ ಹಾಲೆರೆದು ಎಳ್ಳುಚಿಗಳಿ, ತಂಬಿಟ್ಟು ನೈವೇದ್ಯಕ್ಕಿರಿಸುವರು. ಅಕ್ಕತಂಗಿಯರು ಅಣ್ಣತಮ್ಮಂದಿರನ್ನು ಮನೆಗೆ ಆಹ್ವಾನಿಸಿ ಹಾಲನ್ನು ಹೊಟ್ಟೆಗೆ ,ಬೆನ್ನಿಗೆ ಸವರಿ ತಂಪಾಗಿರಲೆಂದು ಹಾರೈಸುವರು. ಹೊಟ್ಟೆ ಎಂದರೆ ಮುಂಬರುವ ಪೀಳಿಗೆ, ಬೆನ್ನಿಗೆ ಸವರುವದು ಹಿಂದಿನ ಪೀಳಿಗೆ ಎಂಬುದನ್ನು ಸಂಕೇತಿಸುತ್ತವೆ. ಕುಟುಂಬದ ಒಳಿತಿಗಾಗಿ ಹಾರೈಕೆ ಇದರ ವಿಶೇಷತೆ. ಪರಸ್ಪರ ಪ್ರೀತಿ ವಿಶ್ವಾಸದ ಸಂಕೇತ. ಕಾರಣ ಇದನ್ನು ಭ್ರಾತೃಪಂಚಮಿ ಎಂತಲೂ ಹೇಳುವರು.

ನಾಗಪಂಚಮಿ ಶ್ರಾವಣ ಮಾಸದ ಸಾಲು ಹಬ್ಬಗಳಿಗೆ ಮುನ್ನುಡಿ. ಶ್ರಾವಣದ ಪಂಚಮಿ ನಾಗನನ್ನು ಪೂಜಿಸುವ ಹಿನ್ನೆಲೆಯಲ್ಲಿ ಹಲವಾರು ದಂತಕಥೆಗಳಿವೆ. ಅದರಲ್ಲಿ ಒಂದು ಕಥೆ ಹೀಗಿದೆ : ರೈತನೊಬ್ಬ ಹೊಲವನ್ನು ಉಳುತ್ತಿರುವಾಗ, ನೇಗಿಲಿನ ತುದಿಗೆ ಸಿಕ್ಕು ಹಾವಿನ ಮರಿಗಳು ನಾಶವಾಗಲು ಅವುಗಳ ತಾಯಿ ರೊಚ್ಚಿಗೆದ್ದು ಸೇಡು ತೀರಿಸಿಕೊಳ್ಳಲು ಆತನ ಮನೆಯವರನ್ನೆಲ್ಲ ಕಚ್ಚಿ ಕೊಂದುದಲ್ಲದೇ ನೆರೆಹಳ್ಳಿಯಲ್ಲಿದ್ದ ಆ ರೈತನ ಇನ್ನೊರ್ವ ಮಗಳನ್ನು ಕೊಲ್ಲಬೇಕೆಂದು ಹೋಯಿತು. ಅಲ್ಲಿ ಆತನ ಮಗಳು ಮಣ್ಣಿನಿಂದ ಸರ್ಪಾಕೃತಿಯನ್ನು ಮಾಡಿ ಹಾಲೆರೆದು ಪೂಜಿಸುತ್ತಿರುವದನ್ನು ಕಂಡು ಅದರ ಕೋಪವು ಇಳಿದು ಆಕೆಯ ಅಪೇಕ್ಷೆಯಂತೆ ರೈತನ ಮನೆಯವರನ್ನು ಬದುಕಿಸಿತು. ಈ ಉಪಕಾರದ ದ್ಯೋತಕವಾಗಿಯೇ ಇಂದಿಗೂ ತವರಿನವರು ಮಗಳನ್ನು ಪಂಚಮಿ ಹಬ್ಬಕ್ಕೆ ಕರೆತರುವದು, ಜನಪದರಿಂದ ನಡೆದು ಬಂದ ಸಂಪ್ರದಾಯ. ಹಾಗೂ ಪಂಚಮಿಯ ದಿನ ಹೊಲ ಉಳುವದನ್ನು ನಿಷೇಧಿಸಲಾಗಿದೆ. ನಾಗರ ಪಂಚಮಿ ನಾಡಿಗೆ ದೊಡ್ಡದು, ನಾರಿಯರೆಲ್ಲರೂ ನಲಿದಾಡಿ, ಪಂಚಮಿ ಹಬ್ಬವನ್ನು ಸಂಭ್ರಮದಿ ಆಚರಿಸೋಣ.

ನಿಲ್ಲೋ ನಿಲ್ಲೋ ಮಳೆರಾಯ!

ಮಳೆ ಎಂದರೆ ಮಧುರ ನೆನಪುಗಳನ್ನು ತರುವ ಕಾಲ ಎಂದು ಕವಿಗಳು, ಸಾಹಿತಿಗಳು ವರ್ಣಿಸಿದ್ದಾರೆ. ಆದರೆ ಮಳೆಯೇ ಅತಿಯಾದರೆ? ಕೇರಳದಲ್ಲಿ ಭೂ ಜರಿತದಿಂದ ನೂರಾರು ಮಂದಿ ಮೃತಪಟ್ಟಿದ್ದಾರೆ. ಇತ್ತ ಶಿರಾಡಿಯಲ್ಲೂ ಗುಡ್ಡ ಕುಸಿತದಿಂದ ಹಾನಿಯಾಗಿದೆ. ಈಗ ಮಳೆರಾಯನನ್ನು ಪ್ರಾರ್ಥಿಸುವ ಸಮಯ - ಸಾಕಪ್ಪ ಸಾಕು ನಿನ್ನ ಪ್ರತಾಪ ಎಂದು!

● ಡಾ. ಕೆ.ಎಸ್.ಪವಿತ್ರ

ಜಡಿ ಮಳೆ! ಜಿಟಿ ಜಿಟಿ ಮಳೆ! ಧೋ ಧೋ ಎಂದು ಸುರಿಯುತ್ತಿರುವ ಮಳೆ! ವೈನಾಡಿನಲ್ಲಿ, ಇತರ ಎಲ್ಲೆಡೆ ಸಾವು-ನೋವು-ನೀರು. ಇಂತಹ ಮಳೆಯನ್ನು ನೋಡುವಾಗ ಪ್ರಕೃತಿಗೂ ಮನಸ್ಸಿಗೂ ಇರುವ ಹತ್ತಿರದ ಸಂಬಂಧದೆಡೆಗೆ ಮನಸ್ಸು ಓಡುತ್ತದೆ. ಆಕಾಶದಲ್ಲಿ ಮೋಡ ಕವಿದಂತೆ ಮನಸ್ಸು ಮುದುಡುತ್ತದೆ. ಸೂರ್ಯ ಉದಯಿಸಿದ ತಕ್ಷಣ ಹುರುಪು ಏರುತ್ತದೆ. ಚಳಿ ಬಿದ್ದ ತಕ್ಷಣ ಮನಸ್ಸು ಹೆಪ್ಪುಗಟ್ಟುತ್ತದೆ. ನಮ್ಮ ನಿದ್ರೆಯ ರೀತಿಯೂ ಅಷ್ಟೆ. ಬೇಸಿಗೆಯಲ್ಲಿ ಬರುವ ಅಂಟು ನಿದ್ರೆ-ಚಳಿಯ ಬೆಚ್ಚಗಿನ ನಿದ್ರೆ-ಮಳೆಯಲ್ಲಿ ಕಾಡುವ ಒದ್ದೆ ಛಳಿಯ ಅರೆಬರೆ ನಿದ್ರೆ : ಹೀಗೆ ಮಿದುಳು-ಮನಸ್ಸು -ಪ್ರಕೃತಿಯ ಬದಲಾಗುವಿಕೆ ಎಲ್ಲಕ್ಕೂ ಸಂಬಂಧವಿದೆ ಎಂಬುದನ್ನು ಸ್ವಾನುಭವದಿಂದ ಹೇಳಿಬಿಡಬಹುದು.

ಮಳೆ ಎಂದರೆ ಮೊದಲಿನಿಂದಲೂ ತುಸು ಬೇಸರವೇ. ಮಳೆ ಬಂದ ತಕ್ಷಣ ಆಟ ನಿಲ್ಲುತ್ತಿತ್ತು. ರೇನ್‌ಕೋಟ್ -ಜರ್ಕಿನ್ -ಛತ್ರಿ ಇವುಗಳ ರಗಳೆ. ಅದರೊಂದಿಗೆ ಮಳೆ ಬಂದಾಗ ಅದರೊಂದಿಗೇ ಬರುತ್ತಿದ್ದ ನೆಗಡಿ-ಜ್ವರ ಇತ್ಯಾದಿ ಆದರೂ ನಾವು ಮಕ್ಕಳು 'ಅಯ್ಯೋ ಮಳೆ!' ಎಂದಾಗ ನನ್ನಪ್ಪ ಬಯ್ಯುತ್ತಿದ್ದರು. 'ನಿಮಗೆ ಕಷ್ಟವಾದೀತೆಂದು ಮಳೆಗೆ ಬರಬೇಡ ಎನ್ನುತ್ತೀರಾ? ಮಳೆ ಬರದಿದ್ದರೆ ನಮಗೆ ಊಟವುಂಟೆ?' ವೈದ್ಯರಾದರೂ ಕೃಷಿಕ ಕುಟುಂಬದಿಂದ ಬಂದಿದ್ದ ಅಪ್ಪನಿಗೆ ಮಳೆಯ ಮಹತ್ವ ನಮಗಿಂತ ಹೆಚ್ಚು ಗೊತ್ತಿತ್ತು.

ನಾನು ಬಾಲ್ಯದಲ್ಲಿ ಓದುತ್ತಿದ್ದ ಕಾದಂಬರಿಗಳಲ್ಲಿ ಮಳೆಗಾಲದ ವರ್ಣನೆಗಳು ಬರುತ್ತಿದ್ದವು. ಅದರಲ್ಲಿಯೂ ಕರಾವಳಿಯ ಮಳೆಗಾಲದ ಹಳ್ಳಿಯ ಜೀವನದ ಚಿತ್ರಣಗಳು ಮತ್ತೆ ಮತ್ತೆ ಕಾರಂತರ ಕಾದಂಬರಿಗಳಲ್ಲಿ ಬರುತ್ತಿದ್ದವು. ತೋಟದ ಮಧ್ಯೆ, ಒಂಟಿ ಮನೆಗಳು, ಬಿಡದೆ ಸುರಿವ ಮಳೆ, ಮಳೆಯೊಂದಿಗೇ ಬರುವ ಮಲೇರಿಯಾ, ಮಲೇರಿಯಾಕ್ಕೆ ಗುರಿಯಾಗಿ ಕಾಯಿಲೆ ಬೀಳುವ ನಾಯಕ ಇಂತಹ ಚಿತ್ರಣಗಳು, ಜೊತೆಗೇ ಮಳೆಗಾಲಕ್ಕೆ ಮೊದಲೇ ಆಹಾರ-ಸೌದೆ ಕೂಡಿಟ್ಟು ಸಿದ್ಧವಾಗುವ ಕುಟುಂಬಗಳು ಇವೆಲ್ಲದರ ಬಗ್ಗೆ ಓದಿ ಓದಿ, ಮಳೆಯ ಇಂತಹ

ಜೀವನವೂ ಇದೆ ಎಂದು ಬಾಲ್ಯದಲ್ಲಿ ಗಾಬರಿಯಾಗಿತ್ತು. ಹೆಚ್ಚಿನ ಕನ್ನಡ ಕವಿಗಳಿಗೆ ಮಳೆಯೆಂದರೆ ಬಲು ಹರುಷದ ಸ್ಥಿತಿ. ಪು.ತಿ.ನ. ಅವರ ವರ್ಷ-ಹರ್ಷವಂತೂ ಮಳೆಯ ಬಗೆಗಿದ್ದ ಬೇಸರವನ್ನು ದೂರ ಸರಿಸಿ, ಅರೆರೆ ಮಳೆಯೆಂದರೆ ಇಷ್ಟು ಸುಂದರವಾಗಿರಲು ಸಾಧ್ಯವೆ ಎಂಬ ಬೆರಗು ಮೂಡಿಸಿತ್ತು.

ಮಳೆಗಾಲ ಸಾಕಾಗಿದೆ; ಪ್ರಕೃತಿ ಮಾತೆಗೆ ನಾವು ಮಾಡಿದ ಅಪಚಾರಗಳಿಗೆ ನಮಗೆ ಶಿಕ್ಷೆ ಒಂದಾದ ಮೇಲೊಂದರಂತೆ ಸರಣಿಯಾಗಿ ಜರುಗುತ್ತಿದೆ. ವೈನಾಡಿನಲ್ಲಿ ಮಳೆನೀರಿನ ಪ್ರವಾಹವು ರುದ್ರ ತಾಂಡವ ನಡೆಸಿದೆ; ನೂರಾರು ಜೀವಗಳು ಚಡಪಡಸಿವೆ, ಅಗಲಿವೆ. ಕುವೆಂಪು ಕವಿವಾಣಿಯ 'ವರ್ಷಭೈರವ'ವನ್ನು ನೆನೆದು ಮನಸ್ಸು ಮೂಕವಾಗಿದೆ! ಶೋಕದ ಮಧ್ಯೆಯೇ ನೃತ್ಯ ಸಾಗುತ್ತಿದೆ!

ಮಳೆ ಎಂಬುದು ಬರಿ ಸುಳ್ಳಿದು!
ಮಳೆಯಲ್ಲಿದು! ಮಳೆಯಲ್ಲಿದು!
ಪ್ರಲಯದ ಆವೇಶ!

ಶಿವಾಜಿಗೆ ಖಡ್ಗ ನೀಡಿದ ಹೊಳಲಮ್ಮ!

● ಮೈಲಾರಪ್ಪ ಬೂದಿಹಾಳ

ಶಿವಾಜಿ ಮಹಾರಾಜರಿಗೆ ಇಲ್ಲಿನ ಹೊಳಲಮ್ಮ ದೇವಿಯು ಖಡ್ಗವನ್ನು ನೀಡಿದ್ದಳು ಎಂಬ ನಂಬಿಕೆ ಇದ್ದು, ಆ ಕಾರಣದಿಂದಾಗಿಯೇ ಈ ಕೋಟೆ ಪ್ರಸಿದ್ಧಿಯನ್ನು ಪಡೆದಿದೆ. ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ದೇವಿಹಾಳ ಗ್ರಾಮದಲ್ಲಿರುವ ಈ ಕೋಟೆ, (ಶ್ರೀಮಂತಗಡ) ತಾಲೂಕು ಕೇಂದ್ರದಿಂದ 18 ಕಿ ಮಿ ಹಾಗೂ ಜಿಲ್ಲಾ ಕೇಂದ್ರ ಗದಗ ದಿಂದ 53 ಕಿ ಮೀ ಅಂತರದಲ್ಲಿರುವ ಧಾರ್ಮಿಕ ಮತ್ತು ಐತಿಹಾಸಿಕ ಕೇಂದ್ರ. ಗುಡ್ಡದ ತುದಿಯಲ್ಲಿ ಸುಮಾರು 25 ಎಕೆರೆ ಪ್ರದೇಶದಲ್ಲಿರುವ ಈ ಕೋಟೆಗೆ ಶ್ರೀಮಂತಗಡ ಎಂಬ ಹೆಸರಿರುವುದು ಇನ್ನಷ್ಟು ವಿಶೇಷ.

ಈಗ ಈ ಕೋಟೆ ಶಿಥಿಲವಾಗಿದೆ; ಆದರೆ, ಇದರ ರಚನೆ ಕಂಡಾಗ ಅಭಿಮಾನ ಉಕ್ಕುತ್ತದೆ. ಪೂರ್ವಾಭಿಮುಖವಾಗಿ ಬಲಭಾಗದಲ್ಲಿ ದ್ವಾರವಿದ್ದು,ಪೂರ್ವದಲ್ಲಿ ಎರಡು ಎತ್ತರದ ವೀಕ್ಷಣಾ ಗೋಪುರಗಳಿವೆ ನಂತರ ಹಂತ ಹಂತವಾಗಿ ಕೋಟೆ ಹತ್ತಲು ಇಳಿಯಲು ಮೆಟ್ಟಿಲು ಹಾಗೂ ೋಟೆಯ ಎಡ ಮತ್ತು ಬಲಭಾಗದಲ್ಲಿ ಗುಡ್ಡದ ಕೆಳಗಿನಿಂದ ಬರಲು ಕಮಾನಿನಾಕಾರದ ಸಣ್ಣ ಸಣ್ಣ ಬಾಗಿಲಗಳಿವೆ. ಕೋಟೆ ಸುತ್ತಲೂ ಮುಂಭಾಗದಲ್ಲಿ ಇದ್ದಂತೆ ಸುಮಾರು 10 ರಿಂದ 15 ಸಣ್ಣ ಸಣ್ಣ ವೀಕ್ಷಣಾ ಗೋಪುರಗಳಿವೆ ಕೋಟೆಯ ಮೇಲೆ ರಹಸ್ಯವಾಗಿ ವೀಕ್ಷಿಸಲು ಚೌಕಾಕಾರದ ಕಲ್ಲಿನ ಕಿಟಕಿಗಳನ್ನು ನಿರ್ಮಿಸಿದ್ದಾರೆ. ಕೋಟೆಯ ಸುತ್ತಳತೆ ಅಂದಾಜು ಮೂರು ಕಿ ಮೀ ವ್ಯಾಪ್ತಿಯಿದ್ದು, ಇದರ ವಿನ್ಯಾಸವು ಅಮೀಬಾ ವನ್ನು ಅಥವಾ

ಆಂಗ್ಲಭಾಷೆಯ 8 ಅಂಕಿಯನ್ನು ಹೋಲುತ್ತದೆ.

ಕೋಟೆಯ ಒಳಗಿನ ಮೇಲ್ಭಾಗದಲ್ಲಿ ಆನೆ ಹೊಂಡ, ಮದ್ದಿನ ಹೊಂಡ, ಮುಸರೆ ಹೊಂಡ, ಬಟ್ಟಲ ಬಾವಿ ಎಂಬ ನಾಲ್ಕು ಹೊಂಡಗಳಿವೆ. ಭಕ್ತರ ಹಲವಾರು ದೈಹಿಕ ಹಾಗೂ ಚರ್ಮಕ್ಕೆ ಸಂಬಂಧಿಸಿದ ರೋಗಗಳನ್ನು ಹೋಗಲಾಡಿಸಲು, ಮದ್ದಿನ ಹೊಂಡದಲ್ಲಿ ಸ್ನಾನ ಮಾಡಬೇಕೆಂಬ ಸ್ಥಳೀಯ ನಂಬಿಕೆಯಿದೆ. ಹಾಗಾಗಿ ಇದಕ್ಕೆ ಮದ್ದಿನ (ಔಷಧ) ಹೊಂಡ ಎಂದು ಕರೆಯುತ್ತಾರೆ. ಎಷ್ಟೇ ಬರಗಾಲ ಮತ್ತು ಬೇಸಿಗೆ ಇದ್ದರು ಮೇಲ್ಭಾಗದಲ್ಲಿರುವ ಹೊಂಡದ ನೀರು ಮಾತ್ರ ಬತ್ತದೇ ಇರುವುದು ಇಲ್ಲಿನ ವಿಶೇಷ.

ಈ ಸುತ್ತಲಿನ ಗ್ರಾಮಗಳನ್ನು ದರೋಡೆ ಮಾಡಿದ ರಣದುಲ್ಲಾಖಾನ್, ತಾನು ದೋಚಿದ ಅಪಾರ ಸಂಪತ್ತನ್ನು ರಕ್ಷಿಸಿಕೊಳ್ಳಲು ಹೊಳಲಮ್ಮ ದೇವಿಯ ದೇವಸ್ಥಾನದ ಕೆಳಮಹಡಿಯಲ್ಲಿ ಅದನ್ನು ಬಚ್ಚಿಟ್ಟಿದ್ದನಂತೆ.

ನಂತರ, ಶಿವಾಜಿಯವರು ಇಲ್ಲಿಗೆ ಬಂದು, ದೇವಿಯಿಂದ ಖಡ್ಗ ಪಡೆದು, ತನ್ನ ಸೈನ್ಯದೊಂಣದಿಗೆ ದಂಡೆತ್ತಿ ಹೋಗಿ ರಣದುಲ್ಲಾ ಖಾನ್‌ನನ್ನು ಸಂಹರಿಸಿದರು ಎಂಬ ಪ್ರತೀತಿಯಿದೆ.

ಅಪಾರ ಸಂಪತ್ತು: ನೆಲಮಾಳಿಗೆಯಲ್ಲಿದ್ದ ಅಪಾರ ಸಂಪತ್ತಿನ ಸಹಾಯದಿಂದ ಹೊಳಲಮ್ಮ ದೇವಿಯ (ತುಳಜಾ ಭವಾನಿ) ದೇವಸ್ಥಾನ ಕಟ್ಟಿಸಿದ ಎನ್ನಲಾಗಿದೆ. ಸುಮಾರು ಆರು ಅಡಿ ಎತ್ತರದ ಕಪ್ಪು ಶಿಲೆಯ ಹೊಳಲಮ್ಮ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ. ಚಾಮುಂಡಿ ಅವತಾರದಲ್ಲಿ ಮಹಿಷಾಸುರನನ್ನು ಸಂಹಾರ ಮಾಡುತ್ತಿರುವ ಭಂಗಿಯಲ್ಲಿರುವ ಈ ಮೂರ್ತಿ ಸ್ಥಳೀಯರಲ್ಲಿ ಭಕ್ತಿ ಮೂಡಿಸಿದೆ. ಉತ್ತರ ಕರ್ನಾಟಕದಿಂದಭಕ್ತರು ಆಗಮಿಸುತ್ತಾರೆ, ಭರತ ಹುಣ್ಣಿಮೆಯಲ್ಲಿ ವೈಭವದಿಂದ ತಾಯಿಯ ಜಾತ್ರೆ ಜರುಗುತ್ತದೆ, ನವರಾತ್ರಿಯಲ್ಲಿ ದೇವಿ ಪುರಾಣ ಕಾರ್ಯಕರ್ಮವು ನೆರವೇರುತ್ತದೆ.

ಈ ಕೋಟೆಯು ಈಗ ಚಾರಣಿಗರ ನೆಚ್ಚಿನ ಸ್ಥಳ. ಕೋಟೆ ಗೋಡೆ ಅಲ್ಲಲ್ಲಿ ಕುಸಿದಿದ್ದು ಸರಕಾರ ಸೂಕ್ತ ಕ್ರಮ ಕೈಗೊಂಡು ಐತಿಹಾಸಿಕ ಕೋಟೆ ಸಂರಕ್ಷಿಸಿದರೆ ಚೆನ್ನಾಗಿರುತ್ತದೆ. ಅಷ್ಟಕ್ಕೂ ಇಂತಹ ಕೋಟೆಗಳು ಅದೇಕೆ ಹಾಳುಸುರಿಯಬೇಕು? ಅವುಗಳನ್ನು ಸೂಕ್ತವಾಗಿ ರಕ್ಷಿಸಿ, ಚೊಕ್ಕಟವಾಗಿಡುವುದು ರಾಜ್ಯ ಸರಕಾರದ ಸಂಬಂಧ ಪಟ್ಟ ಇಲಾಖೆಯ ಕರ್ತವ್ಯವಲ್ಲವೆ? ನಮ್ಮ ಪರಂಪರೆಯ ಹೆಮ್ಮೆಯಾದ ಈ ಕೋಟೆಯನ್ನು ರಕ್ಷಿಸಿ, ಇನ್ನಷ್ಟು ಹಾಳಾಗದಂತೆ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ ಮಾಡುತ್ತೇನೆ.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ಧ್ವಜಧಾರಿಯಾಗಲು ಎಲ್ಲರೂ ಅರ್ಹರಾಗಿದ್ದಾರೆ. ದೇಶವನ್ನು ಪ್ರತಿನಿಧಿಸುವುದು ನಿಜವಾದ ಗೌರವವಾಗಿದೆ. ತ್ರಿವರ್ಣ ಧ್ವಜ ಹಿಡಿಯಲು ನನ್ನನ್ನು ಆಯ್ಕೆ ಮಾಡಿದ್ದಕ್ಕಾಗಿ ಐಒಸಿಗೆ ಧನ್ಯವಾದ.
-ಮನು ಭಾಕರ್, ಶೂಟರ್

ವಿಶ್ವವಾಣಿ vishwavani.news 06.08.2024 ಮಂಗಳವಾರ

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	0	0	3	3
ಚೀನಾ	21	17	14	52
ಅಮೆರಿಕ	19	29	27	75
ಆಸ್ಟ್ರೇಲಿಯಾ	13	11	8	32
ಫ್ರಾನ್ಸ್	12	15	18	45
ದಕ್ಷಿಣ ಕೊರಿಯಾ	11	8	7	26
ಗ್ರೇಟ್ ಬ್ರಿಟನ್	10	13	17	40
ಜಪಾನ್	10	5	11	26
ಇಟಲಿ	10	6		25
ನೆದರ್ಲೆಂಡ್ಸ್	6	5	4	15

ಮೈಕ್ರೋ ಮಾಹಿತಿ

ಬ್ಯಾಡ್ಮಿಂಟನ್ ರ್‍ಯಾಕೆಟ್ ವಿಭಿನ್ನ ಆಕಾರ

ರ್‍ಯಾಕೆಟ್‌ಗಳಲ್ಲಿ ಎರಡು ಆಕಾರಗಳು

1 ಐಸೋಮೆಟ್ರಿಕ್ ಆಕಾರದ ರ್‍ಯಾಕೆಟ್
ಈ ಆಕಾರದ ರ್‍ಯಾಕೆಟ್ ಹೆಚ್ಚು ಚೌಕ ಆಕಾರಿತವಾಗಿರುತ್ತದೆ.

2 ಓವಲ್ ಹೆಡ್ ರ್‍ಯಾಕೆಟ್

ಈ ಆಕಾರದ ರ್‍ಯಾಕೆಟ್ ಐಸೋಮೆಟ್ರಿಕ್‌ಗೆ ಹೋಲಿಸಿದರೆ, ಗುಂಡು ಆಕಾರದಲ್ಲಿ ಇರುತ್ತದೆ.



ಸಮಾಚಾರ ಸಣ್ಣದಲ್ಲ

ಮನು ಧ್ವಜಧಾರಿ



ಪ್ಯಾರಿಸ್: ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದಿರುವ ಶೂಟರ್ ಮನು ಭಾಕರ್ ಒಲಿಂಪಿಕ್ಸ್‌ನಲ್ಲಿ ಭಾರತದ ಧ್ವಜಧಾರಿಯಾಗಿರಲಿದ್ದಾರೆ. ಪ್ಯಾರಿಸ್‌ನಲ್ಲಿ ನಡೆದ ಕ್ರೀಡಾಕೂಟದ ಒಂದೇ ಆವೃತ್ತಿಯಲ್ಲಿ ಎರಡು ಒಲಿಂಪಿಕ್ ಪದಕಗಳನ್ನು ಗೆಲ್ಲುವ ಮೂಲಕ 22 ವರ್ಷದ ಆಟಗಾರ್ತಿ ಇತಿಹಾಸ ನಿರ್ಮಿಸಿದ್ದಾರೆ. ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಮನು ಕಂಚಿನ ಪದಕ ಗೆಲ್ಲುವ ಮೂಲಕ ಭಾರತದ ಪದಕಗಳ ಖಾತೆ ತೆರೆದಿದ್ದರು. ಸರಬ್ಜೋತ್ ಸಿಂಗ್ ಅವರೊಂದಿಗೆ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಅವರು ಮತ್ತೊಂದು ಕಂಚಿನ ಪದಕ ಗೆದ್ದಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್ ಇನ್ನೊಂದು ವಾರದಲ್ಲಿ ಮುಕ್ತಾಯಗಳ್ಳಲಿದೆ. ಮುಕ್ತಾಯದ ಹಂತದಲ್ಲಿ ದೊಡ್ಡ ಸಮಾರೋಪ ಸಮಾರಂಭ ನಡೆಯುತ್ತದೆ. ಅದರಲ್ಲಿ ಮನು ಭಾಕರ್ ಅವರು ಧ್ವಜ ಹಿಡಿದು ಮಿಂಚಲಿದ್ದಾರೆ. ಭಾರತದ ಒಲಿಂಪಿಕ್ ಅಸೋಸಿಯೇಷನ್ ಅಧಿಕಾರಿ ಯೊಬ್ಬರು ಮನು ಭಾಕರ್ ಭಾರತದ ಧ್ವಜಧಾರಿ ಯಾಗಿರುವ ಬಗ್ಗೆ ಬಹಿರಂಗಪಡಿಸಿದ್ದಾರೆ.

ಇಂದು ಕಣದಲ್ಲಿ

- ಟೇಬಲ್ ಟೆನಿಸ್: ಪುರುಷರ ತಂಡ 16 ನೇ ಸುತು: ಮಧ್ಯಾಹ್ನ 1:30
- ಅಥ್ಲೆಟಿಕ್ಸ್: ಪುರುಷರ ಜಾವೆಲಿನ್ ಥ್ರೋ ಅರ್ಹತೆ ಸುತು: 1:50
- ಅಥ್ಲೆಟಿಕ್ಸ್: ಮಹಿಳೆಯರ 400 ಮೀಟರ್ ರೆಪೆಚೇಜ್: ಮಧ್ಯಾಹ್ನ 2:50
- ಕುಸ್ತಿ: ಮಹಿಳೆಯರ 50 ಕೆ.ಜಿ: ಮಧ್ಯಾಹ್ನ 3:00
- ಟೇಬಲ್ ಟೆನಿಸ್: ಮಹಿಳಾ ತಂಡ ಕ್ವಾರ್ಟರ್ ಫೈನಲ್: ಸಂಜೆ 6:30
- ಹಾಕಿ: ಸೆಮಿಫೈನಲ್: ರಾತ್ರಿ 10:30

ಶೂಟಿಂಗ್, ಬ್ಯಾಡ್ಮಿಂಟನ್‌ನಲ್ಲೂ ಭಾರತಕ್ಕೆ ನಾಲ್ಕನೇ ಸ್ಥಾನ

ಪದಕ ವಂಚಿತ ಲಕ್ಷ್ಯಸೇನ್, ನರುಕಾ, ಮಹೇಶ್ವರಿ

ಕೈತಪ್ಪಿದ 2 ಕಂಚು

ಪ್ಯಾರಿಸ್: ಒಲಿಂಪಿಕ್ಸ್ ಬ್ಯಾಡ್ಮಿಂಟನ್‌ನಲ್ಲಿ ಪದಕದ ಆಸೆ ಹುಟ್ಟಿಸಿದ್ದ ಲಕ್ಷ್ಯಸೇನ್ ಪರಾಭವಗೊಳ್ಳುವ ಮೂಲಕ ಭಾರತಕ್ಕೆ ಸೋಮವಾರ ನಿರಾಸೆ ಎದುರಾಯಿತು. 22 ವರ್ಷದ ಯುವ ಶಟ್ಲರ್ ಲಕ್ಷ್ಯಸೇನ್, ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಜಯಿಸುವ ಅವಕಾಶ ಕೈಚೆಲ್ಲಿದ್ದಾರೆ. ಕಂಚಿನ ಪದಕಕ್ಕಾಗಿ ನಡೆದ ಸೆಣಸಾಟದಲ್ಲಿ ಮಲೇಷ್ಯಾದ ಲೀ ಝಿ ಜಿಯಾ ವಿರುದ್ಧ ಆಘಾತಕಾರಿ ಸೋಲು ಕಾಣುವ ಮೂಲಕ ಒಲಿಂಪಿಕ್ ಪದಕ ಗೆಲ್ಲುವ ಅವಕಾಶದಿಂದ ವಂಚಿತರಾದರು.

ಮತ್ತೊಂದೆಡೆ ಶೂಟಿಂಗ್‌ನಲ್ಲೂ ಭಾರತಕ್ಕೆ ಆಘಾತವಾಗಿದ್ದು, ಕೇವಲ ಒಂದು ಅಂಕದಲ್ಲಿ ಭಾರತದ ಗುರಿಕಾರರು ಸೋಲನುಭವಿಸಿದ್ದಾರೆ. ಬ್ಯಾಡ್ಮಿಂಟನ್‌ನಲ್ಲಿ ಮಲೇಷ್ಯಾದ ಲೀ ಝಿ ಜಿಯಾ 13-21, 21-16, 21-11 ಅಂತರದಲ್ಲಿ ಗೆಲುವು ಸಾಧಿಸಿದ್ದು, ಕಂಚು ಗೆದ್ದಿದ್ದಾರೆ.

ಮತ್ತೊಂದೆಡೆ ಶೂಟಿಂಗ್‌ನ ಮಿಶ್ರ ಸ್ಕೀಟ್ ವಿಭಾಗದಲ್ಲಿ ಕಂಚಿನ ಪದಕದ ಪಂದ್ಯವಾಡಿದ ಅನಂತ್‌ಜೀತ್ ಸಿಂಗ್ ನರುಕಾ ಹಾಗೂ ಮಹೇಶ್ವರಿ ಚೌಹಾಣ್ ಜೋಡಿ ಕೇವಲ ಒಂದು ಶಾಟ್ ತಪ್ಪಿದ ಕಾರಣ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಸೋಮವಾರ ನಡೆದ ಕಂಚಿನ ಪದಕದ ಪಂದ್ಯದಲ್ಲಿ ಭಾರತದ ಜೋಡಿ 43-44 ರಿಂದ ಚೀನಾದ ಲಿಯು ಜಿನ್ಲಿನ್ ಹಾಗೂ ಜಿಯಾನ್ ಯಿಟ್ಲಿಂಗ್ ಜೋಡಿಯ ಎದುರು ಸೋಲಿಗೆ ಶರಣಾಯಿತು.

ಲಕ್ಷ್ಯ ತಪ್ಪಿದ ಸೇನ್: ಸೋಮವಾರ ನಡೆದ ಕಂಚು ಸುತ್ತಿನಲ್ಲಿ ಭಾರತದ ಸೇನ್ ಅವರು ವಿಶ್ವ 7ನೇ ಶ್ರೇಯಾಂಕಿತ ಮಲೇಷ್ಯಾದ ಲೀ ಝಿ ಜಿಯಾ ವಿರುದ್ಧ ಆರಂಭದಿಂದಲೇ ಆಕ್ರಮಣಕಾರಿ ಆಟವಾಡುವ ಮೂಲಕ ಮೊದಲ ಪಂದ್ಯವನ್ನು 21-13 ರಿಂದ ಸೇನ್ ಗೆಲುವು ತಮ್ಮದಾಗಿಸಿಕೊಂಡರು.

ಇನ್ನು ದ್ವಿತೀಯ ಗೇಮ್‌ನಲೂ ಸೇನ್ ಆರಂಭಿಕ ಮುನ್ನಡೆ ಸಾಧಿಸಿದರಾದರೂ, ಆ ಬಳಿಕ ಮಲೇಷ್ಯಾದ ಲೀ ಝಿ ಜಿಯಾ ತಿರುಗೇಟು ನೀಡುವಲ್ಲಿ ಯಶಸ್ವಿಯಾದರು. ಎರಡನೇ ಪಂದ್ಯದಲ್ಲಿ ಒಂದು ಹಂತದಲ್ಲಿ 12-12ರ ಸಮಬಲದ ಹೋರಾಟ ಕಂಡು ಬಂದಿತು. ಆದರೆ ಆ ಬಳಿಕ ಮತ್ತಷ್ಟು ಆಕ್ರಮಣಕಾರಿ ಆಟವಾಡಿದ ಲೀ ಝಿ ಜಿಯಾ 21-16 ಅಂತರದಲ್ಲಿ ಗೆಲುವಿನ ನಗೆ ಬೀರಿದರು.

ಹೀಗಾಗಿ ಮೂರನೇ ಹಾಗೂ ನಿರ್ಣಾಯಕ ಕಾದಾಟಕ್ಕೆ ಮೊರೆ ಹೋಗಬೇಕಾಯಿತು. ಅದರಲ್ಲಿ ಲೀ ಝಿ ಜಿಯಾ ಆರಂಭದಿಂದಲೇ ಬಿರುಸಿನ ಆಟವಾಡಿದರು. ಆರಂಭದಲ್ಲಿ ಲೀ ಝಿ ಜಿಯಾ 8-2ರ ಮುನ್ನಡೆ ಸಾಧಿಸಿದ್ದರು. ಇದಾದ ಬಳಿಕ ಸೇನ್ ತಿರುಗೇಟು ನೀಡಲು ಮಲೇಷ್ಯಾ ಆಟಗಾರ ಅವಕಾಶವನ್ನೇ ನೀಡಲಿಲ್ಲ. ಅಂತಿಮವಾಗಿ ಲೀ ಝಿ ಜಿಯಾ 21-11 ಅಂತರದಲ್ಲಿ ಗೆಲುವು ತಮ್ಮದಾಗಿಸಿ ಕೊಳ್ಳುವ ಮೂಲಕ ಕಂಚಿನ ಪದಕ ಜಯಿಸುವಲ್ಲಿ ಯಶಸ್ವಿಯಾದರು.

ಗಾಯ ನಡುವೆಯೂ ಹೋರಾಡಿದ ಸೇನ್

ಒಂದು ಕಡೆ ಮೊಣಕೈ ಗಾಯದಿಂದ ರಕ್ತ ಸುರಿಯುತ್ತಿದ್ದರೂ ಲಕ್ಷ್ಯ ಛಲಬಿಡದೇ ಕಾದಾಡುವ ಮೂಲಕ ಮಲೇಷ್ಯಾ ಆಟಗಾರನಿಗೆ ತಿರುಗೇಟು ನೀಡುವಲ್ಲಿ ಯಶಸ್ವಿಯಾದರು. ಮೊದಲ ಸೆಟ್‌ನಲ್ಲಿ ಆರಾಮವಾಗಿ ಕಾಣಿಸಿಕೊಂಡ ಸೇನ್ ಎರಡನೇ ಸೆಟ್‌ನಲ್ಲಿ ಅಲ್ಪ ಗಾಯದಿಂದ ತೊಂದರೆಗಿಡಾದರು. ಎರಡನೇ ಸೆಟ್ ಮಧ್ಯೆ ಅವರಿಗೆ ಚಿಕಿತ್ಸೆ ನೀಡಲಾಗಿತ್ತು. ಆದರೂ ಬಿಟ್ಟೂಬಿಡದೆ ಆಡಿದ ಅವರು ಕೊನೆಯವರೆಗೂ ಹೋರಾಡಿದರು. ಆದರೆ ನಿರ್ಣಾಯಕ ಘಟ್ಟದಲ್ಲಿ ಮಲೇಷ್ಯಾ ಆಟಗಾರ ಗೆಲುವು ತಮ್ಮದಾಗಿಸಿಕೊಳ್ಳುವಲ್ಲಿ ಯಶಸ್ವಿಯಾದರು.

ಶೂಟಿಂಗ್‌ನಲ್ಲಿ ತಪ್ಪಿದ ಗೆಲುವು

ಇನ್ನೊಂದೆಡೆ ಸೋಮವಾರ ನಡೆದ ಸ್ಕೀಟ್ ಶೂಟಿಂಗ್ ಕಂಚು ಸುತ್ತಿನ ಪಂದ್ಯದ ಆರಂಭದಲ್ಲಿ ಭಾರತದ ಶೂಟರ್‌ಗಳು ಎಡವಿದರೂ, 2ನೇ ಹೌಸ್ ಶೂಟಿಂಗ್ ವೇಳೆ ಜಿಯಾನ್ ಯಿಟ್ಲಿಂಗ್ ಮೂರು

ಶಾಟ್ ಮಿಸ್ ಮಾಡಿದ್ದರಿಂದ ಭಾರತಕ್ಕೆ ತಿರುಗೇಟು ನೀಡುವ ಅವಕಾಶ ಸಿಕ್ಕಿತ್ತು. ಆದರೆ, ನಾಲ್ಕನೇ ಹೌಸ್ ಶೂಟಿಂಗ್ ವೇಳೆ ಮಹೇಶ್ವರಿ ಚೌಹಾಣ್ ಗುರಿ ತಪ್ಪಿದ್ದು, ಕಂಚಿನ ಪದಕದ ಅವಕಾಶವನ್ನು ಹಾಳು ಮಾಡಿತು. ಕೊನೆಯ ಎರಡು ಹೌಸ್ ಶೂಟಿಂಗ್‌ನಲ್ಲಿ ಎರಡೂ ತಂಡಗಳು ಎಲ್ಲಾ 16 ಅಂಕಗಳನ್ನು ಸಂಪಾದಿಸಿದ್ದವು. ಕೊನೆಯ ಹೌಸ್‌ನಲ್ಲಿ ಚೀನಾದ ಒಂದು ಗುರಿ ತಪ್ಪಿದ್ದರೂ ಶೂಟ್ ಆಫ್ ಅವಕಾಶವಿತ್ತು. ಆದರೆ, ಜಿನ್ಲಿನ್ ಹಾಗೂ ಯಿಟ್ಲಿಂಗ್ ಇಬ್ಬರೂ 8 ಅಂಕ ಸಂಪಾದಿಸಿದ್ದರಿಂದ ಭಾರತ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಅರ್ಹತಾ ಸುತ್ತಿನಲ್ಲಿ ಮಿಂಚಿಂಗ್

ಮಹೇಶ್ವರಿ ಚೌಹಾಣ್ ಹಾಗೂ ಅನಂತ್ ಜೀತ್ ಸಿಂಗ್ ನರುಕಾ ಜೋಡಿ ಅರ್ಹತಾ ಸುತ್ತಿನಲ್ಲಿ 146 ಅಂಕ ಸಂಪಾದಿಸಿ ನಾಲ್ಕನೇ ಸ್ಥಾನ ಪಡೆದುಕೊಳ್ಳುವ ಮೂಲಕ ಕಂಚಿನ ಪದಕದ ಪಂದ್ಯಕ್ಕೆ ಅರ್ಹತೆ ಪಡೆದುಕೊಂಡಿದ್ದರು. ಶೂಟಿಂಗ್ ಸ್ಪರ್ಧೆಯಲ್ಲಿ ಭಾರತ ಮೂರು ಇವೆಂಟ್‌ಗಳಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡಿದೆ. ಮನು ಭಾಕರ್, ಅರ್ಜುನ್ ಬಬುಟಾ ಈ ಮುನ್ನ ತಮ್ಮ ಇವೆಂಟ್‌ಗಳಲ್ಲಿ ನಾಲ್ಕನೇ ಸ್ಥಾನ ಪಡೆದುಕೊಳ್ಳುವ ಮೂಲಕ ಕಂಚಿನ ಪದಕ ಕಳೆದುಕೊಂಡಿದ್ದರು.

ಸೀನ್ ನದಿ ಕಲುಷಿತ ಸ್ಪರ್ಧಿಗೆ ಅನಾರೋಗ್ಯ

ಪ್ಯಾರಿಸ್: ಸೀನ್ ನದಿಯ ನೀರಿನ ಗುಣಮಟ್ಟದ ಬಗ್ಗೆ ಒಲಿಂಪಿಕ್ಸ್ ಆರಂಭಕ್ಕೂ ಮುನ್ನವೇ ಚರ್ಚೆಗಳು ನಡೆಯುತ್ತಿದ್ದವು. ಸ್ಪರ್ಧೆ ಶುರುವಾಗುವ ವೇಳೆಗೆ ನದಿಯ ನೀರಿನ ಗುಣಮಟ್ಟ ಸುಧಾರಿಸಲಿದೆ ಎಂದು ಸಂಘಕರು ಹೇಳಿದ್ದರು. ಆದರೆ ನಿರಂತರ ಮಳೆಯಿಂದಾಗಿ ನದಿ ಕಲುಷಿತಗೊಂಡಿದೆ. ಈ ಕಾರಣಕ್ಕಾಗಿಯೇ ಈ ಮೊದಲು ಟ್ರಯಥ್ಲಾನ್ ಅಭ್ಯಾಸ ಅವಧಿಯನ್ನು ರದ್ದುಗೊಳಿಸಲಾಗಿತ್ತು.

ಪ್ಯಾರಿಸ್ ಒಲಿಂಪಿಕ್ಸ್ ದಿನ ಕಳೆದಂತೆ ವಿವಾದಗಳ ಕೂಪವಾಗಿ ಮಾರ್ಪಡುತ್ತಿದೆ. ಅದರಲ್ಲಿ ಹೊಸ ಪ್ರಕರಣವೊಂದು ಬೆಳಕಿಗೆ ಬಂದಿದ್ದು, ಸೀನ್ ನದಿ



ಯಲ್ಲಿ ಈಜಿದ ನಂತರ ಬೆಲ್ಜಿಯಂ ಆಟಗಾರ್ತಿ ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಇದರಿಂದಾಗಿ ಬೆಲ್ಜಿಯಂ ಇಡೀ ತಂಡ ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟದ ಮಿಶ್ರ ರಿಲೇ ಟ್ರಯಥ್ಲಾನ್‌ನಿಂದ ತನ್ನ ಹೆಸರನ್ನು ಹಿಂತೆಗೆದುಕೊಂಡಿದೆ. ಮಹಿಳೆಯರ ಟ್ರಯಥ್ಲಾನ್ ಕ್ರೀಡೆಯಲ್ಲಿ ಭಾಗವಹಿಸಿದ್ದ ತನ್ನ ಆಟಗಾರ್ತಿ ಕ್ಲೇರ್ ಮೈಕೆಲ್ ಅನಾರೋಗ್ಯಕ್ಕೆ ಒಳಗಾಗಿದ್ದಾರೆ ಎಂದು ಬೆಲ್ಜಿಯಂ ಒಲಿಂಪಿಕ್ ಸಮಿತಿ ಹೇಳಿದೆ.

ಕೇಟ್ ಲೆಡೆಕಿ ವಿಶ್ವದಾಖಲೆ

ಪ್ಯಾರಿಸ್: 800 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಅಮೆರಿಕದ ಕೇಟ್ ಲೆಡೆಕಿ ಚಿನ್ನದ ಪದಕ ಗೆದ್ದುಕೊಂಡರು. ಇದರೊಂದಿಗೆ ಅವರು ಒಲಿಂಪಿಕ್ಸ್‌ನಲ್ಲಿ 9ನೇ ಸ್ವರ್ಣ ಗೆದ್ದು ದಾಖಲೆ ನಿರ್ಮಿಸಿದರು. 27 ವರ್ಷ ವಯಸ್ಸಿನ ಲೆಡೆಕಿ ಸತತ ನಾಲ್ಕನೇ ಒಲಿಂಪಿಕ್ಸ್‌ನಲ್ಲಿ 800 ಮೀ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡರು. ಈ ಮೂಲಕ ಯಾವುದೇ ಕ್ರೀಡೆಯಲ್ಲಿ ಮಹಿಳಾ ಅಥ್ಲೀಟ್ ಗಳಿಸಿದ ಗರಿಷ್ಠ ಚಿನ್ನದ (9) ಪದಕಗಳ ದಾಖಲೆಯನ್ನು ಸರಿಗಟ್ಟಿದರು. 1956-1964ರ ಅವಧಿಯಲ್ಲಿ ರಷ್ಯಾದ ಜಿಮ್ನಾಸ್ಟ್ ಲಾರಿಸಾ ಲ್ಯಾಟಿನಿನಾ ಅವರು ಒಂಬತ್ತು ಚಿನ್ನ ಗೆದ್ದು ದಾಖಲೆ ಬರೆದಿದ್ದರು. 2012ರಲ್ಲಿ ಲಂಡನ್ ಒಲಿಂಪಿಕ್ಸ್‌ನಲ್ಲಿ 800 ಮೀಟರ್ ಫ್ರೀಸ್ಟೈಲ್‌ನಲ್ಲಿ 15 ವರ್ಷದಲ್ಲೇ ಲೆಡೆಕಿ ಮೊದಲ ಚಿನ್ನ ಗೆದಿದ್ದರು. ನಂತರ ರಿಯೊ ಕೂಟದಲ್ಲಿ 4 ಚಿನ್ನ ಸೇರಿದಂತೆ ಐದು ಪದಕ ಮತ್ತು ಟೋಕಿಯೊದಲ್ಲಿ ಎರಡು ಚಿನ್ನ ಸೇರಿದಂತೆ ನಾಲ್ಕು ಪದಕ ಜಯಿಸಿದ್ದರು.

ನಾಲ್ಕನೇ ಪದಕ

ಈ ಬಾರಿ ಲೆಡೆಕಿ ಅವರಿಗೆ ಇದು ನಾಲ್ಕನೇ ಪದಕವಾಗಿದೆ. ಈ ಮೊದಲು 1500 ಮೀಟರ್ ಫ್ರೀಸ್ಟೈಲ್‌ನಲ್ಲಿ ಚಿನ್ನ, 4200 ಮೀಟರ್ ಫ್ರೀಸ್ಟೈಲ್ ರಿಲೇನಲ್ಲಿ ಬೆಳ್ಳಿ ಮತ್ತು 400 ಮೀಟರ್ ಫ್ರೀಸ್ಟೈಲ್‌ನಲ್ಲಿ ಕಂಚು ಗೆದಿದ್ದರು. ಒಲಿಂಪಿಕ್ಸ್‌ಗೆ ಅವರ ಪದಕಗಳ ಸಂಖ್ಯೆ 14ಕ್ಕೆ ಏರಿಕೆ ಯಾಗಿದೆ. ಶನಿವಾರ ನಡೆದ ಫೈನಲ್‌ನಲ್ಲಿ ಲೆಡೆಕಿ 8 ನಿಮಿಷ 11.04 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಆಸ್ಟ್ರೇಲಿಯಾದ ಅರಿಯಾನ್ ಟಿಟ್ಮಸ್ (8 ನಿ.12.29ಸೆ) ಮತ್ತು ಅಮೆರಿಕದ ಪೈಗೆ ಮ್ಯಾಡೆನ್ (8 ನಿ. 13ಸೆ) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಸಮ್ಮರ್‌ಗೆ ಮೂರನೇ ಚಿನ್ನ: ಕೆನಡಾದ ಈಜುತಾರೆ ಸಮ್ಮರ್ ಮೆಕಿಂತೋಷ್ ಅವರು ಪ್ಯಾರಿಸ್‌ನಲ್ಲಿ ಹ್ಯಾಟ್ರಿಕ್ ಚಿನ್ನದ ಪದಕಗಳನ್ನು ಗೆದ್ದರು. 17 ವರ್ಷ ವಯಸ್ಸಿನ ಸಮ್ಮರ್ ಅವರು 200 ಮೀಟರ್ ಮಿಡ್ಲೆ, 400 ಮೀಟರ್ ಮಿಡ್ಲೆ ಮತ್ತು 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಚಿನ್ನ ಗೆದ್ದುಕೊಂಡರು.

ಟಿಟಿ: ಕ್ವಾ.ಫೈನಲ್‌ಗೆ ಮಹಿಳಾ ತಂಡ

ಮಿಂಚಿದ ಬಾತ್ರಾ

ಪ್ಯಾರಿಸ್: ಅನುಭವಿ ಆಟಗಾರ್ತಿ ಮನಿಕಾ ಬಾತ್ರಾ ಅವರ ಭರ್ಜರಿ ಪ್ರದರ್ಶನದಿಂದಾಗಿ ಭಾರತದ ಮಹಿಳೆಯರ ಟೇಬಲ್ ಟೆನಿಸ್ ತಂಡ ಕ್ವಾರ್ಟರ್ ಫೈನಲ್‌ಗೇರಿದೆ. ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರೊಮೇನಿಯಾ ವಿರುದ್ಧ 3-2 ಅಂತರದಲ್ಲಿ ಜಯ ಸಾಧಿಸುವ ಮೂಲಕ ಮುನ್ನಡೆ ಸಾಧಿಸಿದೆ. ಅನುಭವಿ ಆಟಗಾರ್ತಿ ಮಣಿಕಾ ಭಾತ್ರಾ ಭಾರತದ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸಿದರು. ಶ್ರೀಜಾ ಅಕುಲಾ-ಅರ್ಚನಾ ಕಾಮತ್ ಮತ್ತು ಮಣಿಕಾ ಬಾತ್ರಾ ಅವರಿದ್ದ ತಂಡವು ಈ ಸಾಧನೆ ಮಾಡಿದೆ.

ಮೊದಲ ಹಂತದಲ್ಲಿ ಭಾರತ ತಂಡ ಎರಡು ಪಂದ್ಯಗಳನ್ನು ಗೆದ್ದು 2-0 ಮುನ್ನಡೆ ಸಾಧಿಸಿತು. ರೊಮೇನಿಯಾ ಮುಂದಿನ ಎರಡು ಪಂದ್ಯಗಳನ್ನು ಗೆದ್ದಿತು. ಐದನೇ ಪಂದ್ಯದಲ್ಲಿ ಬಾತ್ರಾ 11-5, 11-9, 11-9 ಸೆಟ್ ಗಳಿಂದ ಆದಿನಾ ಡಯಾಕೊನು ಅವರನ್ನು ಸೋಲಿಸುವ ಮೂಲಕ ಪಂದ್ಯವನ್ನು ಗೆಲ್ಲಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ಯುಎಸ್‌ಎ ಅಥವಾ ಜರ್ಮನಿಯನ್ನು ಎದುರಿಸಲಿದೆ.

ಅರ್ಚನಾ ಕಾಮತ್ ಮತ್ತು ಶ್ರೀಜಾ ಅಕುಲಾ ಜೋಡಿ 11-9, 12-10, 11-7 ಪಂದ್ಯವನ್ನು ಗೆದ್ದುಕೊಂಡಿತು. ಭಾರತ 1-0 ಮುನ್ನಡೆ ಸಾಧಿಸಿತು. ಮಣಿಕಾ ಬಾತ್ರಾ, ರೊಮೇನಿಯಾದ ಬರ್ನಡೆಟ್ ಸ್ಜೋಕ್ಸ್ ವಿರುದ್ಧ 11-5, 11-7, 11-7 ಅಂತರದಲ್ಲಿ ಗೆಲುವು ಸಾಧಿಸಿದರು. ಅವರ ಉತ್ತಮ ಪ್ರದರ್ಶನ ಮುನ್ನಡೆಯನ್ನು 2-0 ಕ್ಕೆ ವಿಸ್ತರಿಸಿತು.

ದಿಢೀರ್ ಶಾಕ್

ಭಾರತದ ಅಕುಲಾ, ಸಮರಾ ವಿರುದ್ಧದ ಪಂದ್ಯದಲ್ಲಿ 8-11, 11-4, 7-11, 11-6, 11-8 ಅಂತರದಲ್ಲಿ ಸೋಲನುಭವಿಸಿದರು. ರೊಮೇನಿಯಾದ ಈ ಗೆಲುವು ಭಾರತದ ಮುನ್ನಡೆಯನ್ನು 2-1 ಕ್ಕೆ ಇಳಿಸಿತು. ರೊಮೇನಿಯಾದ ಸ್ಜೋಕ್ಸ್ 11-5, 8-11, 11-7, 11-9ರಲ್ಲಿ ಕಾಮತ್ ಅವರನ್ನು ಮಣಿಸಿದರು.

ಈ ಫಲಿತಾಂಶವು ಸ್ಕೋರ್‌ಗಳನ್ನು 2-2 ರಲ್ಲಿ ಸಮಬಲವಾಯಿತು. ಹೀಗಾಗಿ ನಿರ್ಣಾಯಕ ಅಂತಿಮ ಪಂದ್ಯಕ್ಕೆ ವೇದಿಕೆ ಕಲ್ಪಿಸಿತು. ಹಿನ್ನಡೆ ಹೊರತಾಗಿಯೂ, ಭಾರತದ ತಂಡವು ಏಕಾಗ್ರತೆ ಮತ್ತು ದೃಢನಿಶ್ಚಯವನ್ನು ಉಳಿಸಿಕೊಂಡಿತು.

ನೋವಾ ಚಾಂಪಿಯನ್

ಪ್ಯಾರಿಸ್: ಅಮೆರಿಕದ ನೋವಾ ಲೈಲ್ಸ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನ ವೇಗದ ಓಟಗಾರ ಎನಿಸಿದ್ದಾರೆ. ಅವರು 100 ಮೀಟರ್ ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಭಾನುವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ ಲೈಲ್ಸ್, 9.784 ಸೆಕೆಂಡುಗಳಲ್ಲಿ ಗುರಿ ತಲುಪಿದರು. 9.789 ಸೆಕೆಂಡ್‌ಗಳಲ್ಲಿ ಕ್ರಮಿಸಿದ ಜೈಮಕಾದ ಕಿಶಾನೆ ಥಾಮ್ಸನ್ ಹಾಗೂ 9.81 ಸೆಕೆಂಡ್ ಗುರಿ ಮುಟ್ಟಿದ ಅಮೆರಿಕದ ಕೆರ್ಲೀ ಫ್ರೆಡ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಕಣದಲ್ಲಿದ್ದ ಎಂಟೂ ಸ್ಪರ್ಧಿಗಳು 10 ಸೆಕೆಂಡ್ ಒಳಗೆ ಗುರಿ ಮುಟ್ಟಿದ್ದು ವಿಶೇಷವಾಗಿತ್ತು. ಸೆಮಿಫೈನಲ್ ವೇಳೆ ಲೈಲ್ಸ್ 9.83 ಸೆಕೆಂಡುಗಳಲ್ಲಿ ಓಟ ಪೂರೈಸಿದ್ದರು. ಥಾಮ್ಸನ್ 9.80 ಸೆಕೆಂಡುಗಳಲ್ಲೇ ಗುರಿ ಮುಟ್ಟಿದ್ದರು. ಅಷ್ಟಲ್ಲದೆ, ಕೊನೇ 30 ಮೀಟರ್ ಓಟವನ್ನು ನಿರಾಯಾಸವಾಗಿ ಓಡಿದ್ದರು. ಹೀಗಾಗಿ ಅವರೇ ಬಂಗಾರ ಗೆಲ್ಲುವ ಫೇವರಿಟ್ ಆಗಿದ್ದರು. ಆದರೆ, ಅಂತಿಮ ಸುತ್ತಿನಲ್ಲಿ ಲೈಲ್ಸ್ ಮೇಲುಗೈ ಸಾಧಿಸಿದರು.

ಪ್ಯಾರಿಸ್: ಮೊದಲ ಪಂದ್ಯದಿಂದೂ ಅಮೋಘ ಆಟ ಪ್ರದರ್ಶಿಸುತ್ತಿರುವ ಭಾರತ ಹಾಕಿ ತಂಡ, ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದ್ದು ಸೆಮಿಸ್‌ನಲ್ಲಿ ಭಾರತ ಜರ್ಮನಿ ವಿರುದ್ಧ ಸೆಣಸಲಿದೆ.

ಒಲಿಂಪಿಕ್ಸ್‌ನಲ್ಲಿ ಭಾರತದ ತಂಡ ಯಾವಾಗಲೂ ಪ್ರಭಾವಿಯಾಗಿದೆ. ಯಾಕೆಂದರೆ ಒಲಿಂಪಿಕ್ಸ್‌ನಲ್ಲಿ ಭಾರತ ಗೆದ್ದಿರುವ 10 ಚಿನ್ನಗಳ ಪೈಕಿ 8 ಚಿನ್ನಗಳನ್ನು ಹಾಕಿ ತಂಡವೇ ಗೆದ್ದಿದೆ.

ಹಾಕಿ ಸೆಮಿಸ್‌ನಲ್ಲಿ ಜರ್ಮನಿ ಸವಾಲು

ಇದೀಗ 9ನೇ ಚಿನ್ನದ ಮೇಲೆ ಕಣ್ಣಿಟ್ಟಿರುವ ಹಾಕಿ ತಂಡವು ಮಂಗಳವಾರ ನಡೆಯಲ್ಲಿರುವ ಮಾಡು ಇಲ್ಲವೇ ಮಡಿ ಪಂದ್ಯದಲ್ಲಿ ಬಲಿಷ್ಠ ಜರ್ಮನಿಯನ್ನು ಎದುರಿಸಲಿದೆ. ಈ ಪಂದ್ಯಕ್ಕಾಗಿ ಇಡೀ ತಂಡ ಸಕಲ ತಯಾರಿಯಲ್ಲಿ ತೊಡಗಿದೆ. ಆದರೆ, ಈ ಬಿಗ್ ಮ್ಯಾಚ್‌ಗೂ ಮುನ್ನ ಭಾರತ ಹಾಕಿ ತಂಡಕ್ಕೆ ಅಂತಾರಾಷ್ಟ್ರೀಯ ಹಾಕಿ ಫೆಡರೇಶನ್ ಬಿಗ್ ಶಾಕ್ ನೀಡಿದೆ. ತಂಡದ ಅತ್ಯಂತ ಅನುಭವಿ ಡಿಫೆಂಡರ್ ಅಮಿತ್ ರೋಹಿದಾಸ್ ಅವರನ್ನು ಸೆಮಿಫೈನಲ್ ಪಂದ್ಯದಿಂದ ನಿಷೇಧಿಸಿದೆ.

ಭಾರತಕ್ಕೆ ಸವಾಲು

ಬ್ರಿಟನ್ ವಿರುದ್ಧದ ಪಂದ್ಯದಲ್ಲಿ ಭಾರತ ರಕ್ಷಣಾತ್ಮಕ ಆಟವಾಡಿತ್ತು. ಪ್ರಮುಖವಾಗಿ ಗೋಲ್‌ಕೀಪರ್ ಶ್ರೀಜೇಶ್ ಅವರು ಭರ್ಜರಿ ಪ್ರದರ್ಶನ ತೋರುವ ಮೂಲಕ ಭಾರತವನ್ನು ಸೋಲಿನಿಂದ ಪಾರು ಮಾಡಿದ್ದರು. ಉಳಿದಂತೆ ಆಕ್ರಮಣಕಾರಿ ಆಟದಲ್ಲಿ ಭಾರತ ಒಂದೆಡೆ ಎಡವಿತ್ತು. ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಭಾರತದ ರಶ್ ಆಟಗಾರರು ಮಿಂಚಬೇಕಿದೆ. ನಿವೃತ್ತಿನ ಒಲಿಂಪಿಕ್ಸ್ ಆಡುತ್ತಿರುವ ಶ್ರೀಜೇಶ್ ಮತ್ತೊಮ್ಮೆ ಮಿಂಚುವ ಅವಶ್ಯಕತೆ ಇದೆ.

ಅಮಿತ್‌ಗೆ ನಿಷೇಧ

ಗ್ರೇಟ್ ಬ್ರಿಟನ್ ವಿರುದ್ಧದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಡಿಫೆಂಡರ್ ಅಮಿತ್ ರೋಹಿದಾಸ್ ರೆಡ್ ಕಾರ್ಡ್ ಪಡೆದಿದ್ದರು. ಪಂದ್ಯದ ಸಮಯದಲ್ಲಿ, ಅವರ ಹಾಕಿ ಸ್ಟಿಕ್ ಗ್ರೇಟ್ ಬ್ರಿಟನ್ ತಂಡದ ಆಟಗಾರನ ಮುಖಕ್ಕೆ ಆಕಸ್ಮಿಕವಾಗಿ ಬಡಿದಿತ್ತು. ಇದರಿಂದಾಗಿ ಅವರಿಗೆ ಆನ್-ಫೀಲ್ಡ್ ರೆಫ್ರಿ, ರೆಡ್ ಕಾರ್ಡ್ ನೀಡಿದ್ದರು. ಹೀಗಾಗಿ ರೆಡ್ ಕಾರ್ಡ್ ಪಡೆದ ಅಮಿತ್ ರೋಹಿದಾಸ್ ಇಡೀ ಪಂದ್ಯದಿಂದ ಹೊರಗುಳಿಯಬೇಕಾಯಿತು. ಇದರಿಂದ ಭಾರತ ತಂಡ 10 ಆಟಗಾರರೊಂದಿಗೆ ಇಡೀ ಪಂದ್ಯವನ್ನು ಆಡಬೇಕಾಯಿತು. ಇದೀಗ ರೋಹಿದಾಸ್ ಅವರನ್ನು ಸೆಮಿಫೈನಲ್ ಪಂದ್ಯದಿಂದಲೂ ಹೊರಗಿಡಲು ತೀರ್ಮಾನಿಸಲಾಗಿದೆ.

ಎಫ್‌ಐಎಚ್ ನಿರ್ಧಾರ

ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಅಮಿತ್ ರೋಹಿದಾಸ್ ಅವರನ್ನು ಒಂದು ಪಂದ್ಯದಿಂದ ನಿಷೇಧಿಸಲಾಗಿದೆ ಎಂದು ಎಫ್‌ಐಎಚ್ ಹೇಳಿಕೆ ನೀಡಿದೆ. ತನ್ನ ಹೇಳಿಕೆಯಲ್ಲಿ, ಭಾರತ ಹಾಗೂ ಗ್ರೇಟ್ ಬ್ರಿಟನ್ ನಡುವಿನ ಪಂದ್ಯದ ವೇಳೆ ಅಮಿತ್ ರೋಹಿದಾಸ್ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಒಂದು ಪಂದ್ಯದಿಂದ ನಿಷೇಧಿಸಲಾಗಿದೆ.

ಹೀಗಾಗಿ ಅವರು ಪಂದ್ಯ ಸಂಖ್ಯೆ 35ರಲ್ಲಿ ಅಂದರೆ ಭಾರತ ಮತ್ತು ಜರ್ಮನಿ ನಡುವೆ ನಡೆಯಲ್ಲಿರುವ ಸೆಮಿ ಫೈನಲ್ ಪಂದ್ಯವನ್ನು ಆಡುವಂತಿಲ್ಲ ಎಂದಿದೆ. ಹೀಗಾಗಿ ಅಮಿತ್ ರೋಹಿದಾಸ್ ಅವರನ್ನು ಹೊರತುಪಡಿಸಿ ಉಳಿದ 15 ಆಟಗಾರರಿಂದ ಭಾರತ ಸೆಮಿಫೈನಲ್‌ನಲ್ಲಿ ತನ್ನ ತಂಡವನ್ನು ರಚಿಸಬೇಕಾಗಿದೆ.

ರಿಪಿಚೇಜ್ ಸುತ್ತಿಗೆ ಕಿರಣ್

ಪ್ಯಾರಿಸ್: ಮಹಿಳೆಯರ 400 ಮೀಟರ್ ಓಟದ ಸ್ಪರ್ಧೆಯ ಮೊದಲ ಸುತ್ತಿನಲ್ಲಿ ಭಾರತದ ಕಿರಣ್ ಪಹಲ್ 39ನೇ ಸ್ಥಾನ ಪಡೆದಿದ್ದಾರೆ. ಇತ್ತೀಚಿನ ಕ್ರೀಡಾಕೂಟಗಳಲ್ಲಿ ಭರ್ಜರಿ ಸಾಧನೆ ಮಾಡುವ ಮೂಲಕ ಅವರು ಒಲಿಂಪಿಕ್ಸ್ ಅರ್ಹತೆ ಪಡೆದಿದ್ದರು. ಅಲ್ಲದೆ, ಪದಕದ ಆಸೆ ಮೂಡಿಸಿದ್ದರು. ಆದರೆ ಇದೀಗ ಸೋಮವಾರ ನಡೆದ ಸ್ಪರ್ಧೆಯಲ್ಲಿ ಅವರು ನಿರೀಕ್ಷಿತ ಫಲ ನೀಡಿಲ್ಲ. ಸೋಮವಾರ ನಡೆದ 5ನೇ ಹೀಟ್‌ನಲ್ಲಿ 52.51 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಹೀಟ್‌ನಲ್ಲಿ ಏಳನೇ ಮತ್ತು ಒಟ್ಟಾರೆ 39ನೇ ಸ್ಥಾನ ಗಳಿಸಿದಳು. ಕಿರಣ್ ಪಹಲ್ ಸೆಮಿಫೈನಲ್‌ಗೆ ಪ್ರವೇಶಿಸದಿದ್ದರೂ, ಅವರಿಗೆ ರಿಪಿಚೇಜ್ ಸುತ್ತಿನಲ್ಲಿ ಮತ್ತೊಂದು ಅವಕಾಶವಿದೆ. ಮಹಿಳೆಯರ 400 ಮೀ ರಿಪೆಚೇಜ್ ಸುತ್ತನ್ನು ಮಂಗಳವಾರ ನಿಗದಿಪಡಿಸಲಾಗಿದೆ.

ಸ್ಕೋರ್: ಕಿರಣ್ ಪಹಲ್ ಮಹಿಳೆಯರ 400 ಮೀ ಸ್ಪರ್ಧೆಯಲ್ಲಿ ಒಟ್ಟಾರೆ 39 ನೇ ಸ್ಥಾನ ಪಡೆದರು. ಪಹಲ್ ರೆಪೆಚೇಜ್ ಸುತ್ತಿನಲ್ಲಿ ಕಣಕ್ಕಿಳಿಯಲಿದ್ದಾರೆ.